ಶನಿವಾರ, ಡಿಸೆಂಬರ್ 20, 2025 | ₹ 7.00
prajavani.net prajavani
www.prajavani.net

# ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

**ಅನುಮತಿ ಇಲ್ಲ**

ಪಿಟ್‌ಬುಲ್ ಮತ್ತು ರಾಟ್‌ವೀಲರ್‌ನಂತಹ ಅಪಾಯಕಾರಿ ತಳಿಯ ಶ್ವಾನಗಳನ್ನು ಸಾಕಲು ನಾಗರಿಕರಿಗೆ ಹೊಸದಾಗಿ ಅನುಮತಿ ನೀಡುವುದಿಲ್ಲ ಎಂದು ಗ್ರೇಟರ್ ಚೆನ್ನೈ ಕಾರ್ಪೊರೇಷನ್ (ಜಿಸಿಸಿ) ಹೇಳಿದೆ





**ನಾಟಕ ಪ್ರದರ್ಶನ**

ಮಂಗಳೂರಿನ ಸೇಂಟ್ ಅಲೋಶಿಯಸ್ ಕಾಲೇಜಿನ ರಂಗ ಅಧ್ಯಯನ ಕೇಂದ್ರದಲ್ಲಿ ಮಂಗಳೂರಿನ ಜರ್ನಿ ಥಿಯೇಟರ್ ಗ್ರೂಪ್‌ನವರು 'ಸಾಹೇಬರು ಬರುತ್ತಾರೆ' ಎಂಬ ಕನ್ನಡ ನಾಟಕವನ್ನು ಶುಕ್ರವಾರ ಪ್ರಸ್ತುತ ಪಡಿಸಿದರು

# ‘ದ್ವೇಷ ಭಾಷಣ’ ಮಸೂದೆಗೆ ಅಸ್ತು

## ಮೇಲ್ಮನೆಯಲ್ಲೂ ಅಂಗೀಕಾರ • ಮಸೂದೆ ಪ್ರತಿ ಹರಿದು ವಿಪಕ್ಷಗಳ ಆಕ್ರೋಶ

ಪ್ರಜಾವಾಣಿ ವಾರ್ತೆ

**ಸುವರ್ಣ ವಿಧಾನಸೌಧ (ಬೆಳಗಾವಿ):** ವಿರೋಧ ಪಕ್ಷಗಳ ಸದಸ್ಯರ ತೀವ್ರ ಆಕ್ರೋಶ, ಗದ್ದಲ ಮಧ್ಯೆಯೇ, ದ್ವೇಷಭಾಷಣ ಮಾಡುವವರನ್ನು ಶಿಕ್ಷೆಗೆ ಗುರಿಪಡಿಸುವ ಮಸೂದೆಗೆ ವಿಧಾನ ಪರಿಷತ್ತಿನಲ್ಲಿ ಸರ್ಕಾರ ಶುಕ್ರವಾರ ಅಂಗೀಕಾರ ಪಡೆಯಿತು.

‘ಕರ್ನಾಟಕ ದ್ವೇಷ ಭಾಷಣ ಮತ್ತು ದ್ವೇಷ ಅಪರಾಧಗಳ (ಪ್ರತಿಬಂಧಕ) ಮಸೂದೆಯನ್ನು ವಿಧಾನಪರಿಷತ್‌ನಲ್ಲಿ ಪರ್ಯಾಲೋಚನೆಗೆ ಮಂಡಿಸಿದಾಗ, ಬಿಜೆಪಿ–ಜೆಡಿಎಸ್ ಸದಸ್ಯರು ಪ್ರತಿರೋಧ ವ್ಯಕ್ತಪಡಿಸಿದರು.ಮಸೂದೆಯ ಪ್ರತಿಗಳನ್ನು ಹರಿದು ಹಾಕಿ ಆಕ್ರೋಶ ವ್ಯಕ್ತಪಡಿಸಿದರು. ರಾಜ್ಯ ಸರ್ಕಾರ, ಕಾಂಗ್ರೆಸ್ ವಿರುದ್ಧ ಘೋಷಣೆಗಳನ್ನು ಕೂಗಿದರು.

ಮಸೂದೆ ಕುರಿತು ನಡೆದ ಚರ್ಚೆಯಲ್ಲಿ ಮಾತನಾಡಿದ ಬಿಜೆಪಿಯ ಸಿ.ಟಿ.ರವಿ, ‘ದ್ವೇಷ ಭಾಷಣದ ಹೆಸರಲ್ಲಿ ಸಂವಿಧಾನ ನೀಡಿದ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಕಿತ್ತುಕೊಳ್ಳುವ ಕೆಲಸವನ್ನು ಕಾಂಗ್ರೆಸ್ ಮಾಡುತ್ತಿದೆ. ನನ್ನನ್ನೇ ಜೈಲಿಗೆ ಹಾಕುವ ಪ್ರಯತ್ನ ಮಾಡಿದ್ದರು. ಇನ್ನು ಮಸೂದೆ ಬಂದರೆ ತಮ್ಮ ವಿರುದ್ಧ ಟೀಕೆ ಮಾಡಿದವರನ್ನು ಬಂಧಿಸುವ ಕೆಲಸ ಮಾಡುತ್ತಾರೆ’ ಎಂದು ದೂರಿದರು.

‘ಒಂದು ಧರ್ಮದಲ್ಲಿ, ದೇವರನ್ನು ನಂಬದವರನ್ನು ಕಾಫೀರರು ಎನ್ನುತ್ತಾರೆ. ಅವರನ್ನು ಕೊಲ್ಲಬೇಕು ಎಂದಿದೆ. ಈ ವಿಚಾರದ ಬಗ್ಗೆ ಮಾತನಾಡಿದರೂ, ದ್ವೇಷಭಾಷಣ ಎಂದು ಜೈಲಿಗೆ ಹಾಕಲು ಮಸೂದೆ ಅವಕಾಶ ಮಾಡಿಕೊಡುತ್ತದೆ’ ಎಂದು ರವಿ ಹೇಳಿದರು. ಅವರ ಮಾತಿಗೆ ಕಾಂಗ್ರೆಸ್ ಸದಸ್ಯರು ತೀವ್ರ ಆಕ್ಷೇಪ ವ್ಯಕ್ತಪಡಿಸಿದರು.

‘ದ್ವೇಷ ಭಾಷಣ ನಿಯಂತ್ರಣಕ್ಕೆ ಸರ್ಕಾರ ಮಸೂದೆ ಮಂಡಿಸಿದೆ. ಇಲ್ಲೇ ದ್ವೇಷಭಾಷಣ ನಡೆಯುತ್ತಿದೆ. ನೀವೇ ಪ್ರಚೋದನಾಕಾರಿ ಭಾಷಣ ಮಾಡಿದರೆ ಹೇಗೆ. ಮೊದಲು ಪ್ರಚೋದನಕಾರಿಯಾಗಿ ಮಾತನಾಡುವುದನ್ನು ಕಡಿಮೆ ಮಾಡು’ ಎಂದು ಸಭಾಪತಿ ಬಸವರಾಜ ಹೊರಟ್ಟಿ, ರವಿಗೆ ಬುದ್ಧಿಮಾತು ಹೇಳಿದರು.

ಅದಕ್ಕೆ ರವಿ ಅವರು, ‘ಮಸೂದೆ ಮೇಲೆ ಮಾತನಾಡುವಾಗ ಸಮಯದ ನಿರ್ಬಂಧವಿಲ್ಲ. ನೀವು ನಿರ್ಬಂಧ ಹೇರಬಾರದು. ಈ ಸದನಕ್ಕೆ ನಾನೂ ಶಾಶ್ವತ ಅಲ್ಲ, ನೀವೂ ಶಾಶ್ವತ ಅಲ್ಲ’ ಎಂದು ಆಕ್ರೋಶ ವ್ಯಕ್ತಪಡಿಸಿದರು. ಕಾಂಗ್ರೆಸ್‌ನ ಸದಸ್ಯರು ರವಿ ಅವರ ಮಾತಿಗೆ ತೀವ್ರ ಆಕ್ಷೇಪ ವ್ಯಕ್ತಪಡಿಸಿದರು.

ಬಿಜೆಪಿ ಮತ್ತು ಜೆಡಿಎಸ್ ಸದಸ್ಯರೂ ಎದ್ದುನಿಂತು ಸರ್ಕಾರದ ವಿರುದ್ಧ ಕೂಗಿದರು. ಆಡಳಿತ–ವಿರೋಧ ಪಕ್ಷಗಳ ಸದಸ್ಯರ ಮಾತಿನ ಗದ್ದಲ ಹೆಚ್ಚಾದ ಕಾರಣ ಸಭಾಪತಿ ಕಲಾಪವನ್ನು ಮುಂದೂಡಿದರು.

ಕಲಾಪ ಮತ್ತೆ ಆರಂಭವಾದಾಗ ಕಾಂಗ್ರೆಸ್‌ನ ಸದಸ್ಯರು, ‘ಸಿ.ಟಿ. ರವಿ ಅವರು ಕ್ಷಮೆ ಕೇಳಬೇಕು’ ಎಂದು ಪಟ್ಟು ಹಿಡಿದರು. ಬಸವರಾಜ ಹೊರಟ್ಟಿ ಅವರು, ‘ಅವರ ಮಾತನ್ನು ಪರಿಶೀಲಿಸಿ, ಅವು ಅಸಾಂವಿಧಾನಿಕವಾಗಿ ಇದ್ದರೆ ಕಡತದಿಂದ ತೆಗೆಸುತ್ತೇನೆ’ ಎಂದು ಹೇಳಿದರು.

ಬಿಜೆಪಿಯ ಪ್ರತಾಪ ಸಿಂಹ ನಾಯಕ್, ಕೇಶವ ಪ್ರಸಾದ್, ಭಾರತಿ ಶೆಟ್ಟಿ ಅವರು, ಸಂವಿಧಾನ, 19(1)ಎ ವಿಧಿಯಲ್ಲಿನ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಉಲ್ಲೇಖಿಸಿದರು. ಸರ್ಕಾರವು ತರಲು ಹೊರಟಿರುವ ಈ ಮಸೂದೆಯು ಅಭಿವ್ಯಕ್ತಿ ಸ್ವಾತಂತ್ರ್ಯದ ಹರಣ ಮತ್ತು ದ್ವೇಷ ರಾಜಕಾರಣಕ್ಕೆ ಕಾರಣವಾಗುತ್ತದೆ ಎಂದು ಆರೋಪಿಸಿದರು.

ಕಾಂಗ್ರೆಸ್‌ನ ಬಿ.ಕೆ. ಹರಿಪ್ರಸಾದ್, ‘ಸಂವಿಧಾನವನ್ನು ವಿರೋಧಿಸುವ ಬಿಜೆಪಿ ನಾಯಕರ ಬಾಯಿಯಲ್ಲೂ, ಸಂವಿಧಾನ ಕುರಿತು ಮಾತನಾಡಿಸುವಂತಹ ಸ್ಥಿತಿಯನ್ನು ಈ ಮಸೂದೆ ತಂದಿದೆ’ ಎಂದು ಕಾಲೆಳೆದರು.

‘ಸಂವಿಧಾನದ ಕೆಲವು ಆಯ್ದ ಭಾಗಗಳನ್ನು ತಮ್ಮ ಅನುಕೂಲಕ್ಕೆ ಬಳಸಿಕೊಂಡು ಮಾತನಾಡುವುದು ಬಿಜೆಪಿಯವರಿಗೆ ಅಭ್ಯಾಸವಾಗಿದೆ. 19(1)ಎ ವಿಧಿಯ ನಂತರ ಬರುವ 19(2)ಎ ವಿಧಿಯ ಬಗ್ಗೆ ಅವರು ಮಾತನಾಡುವುದೇ ಇಲ್ಲ. ಅಭಿವ್ಯಕ್ತಿ ಸ್ವಾತಂತ್ರ್ಯದಿಂದ ಶಾಂತಿ ಸುವ್ಯವಸ್ಥೆಗೆ ಧಕ್ಕೆಯಾದರೆ, ಅದನ್ನು ನಿರ್ಬಂಧಿಸುವ ಅಧಿಕಾರವನ್ನು ಈ ವಿಧಿ ಸರ್ಕಾರಕ್ಕೆ ನೀಡುತ್ತದೆ’ ಎಂದು ಪ್ರತಿಪಾದಿಸಿದರು.

> **ಸರ್ಕಾರವನ್ನು ಟೀಕಿಸುವುದಕ್ಕೂ, ಸರ್ಕಾರದ ವಿರುದ್ಧ ಪತ್ರಿಕೆಗಳಲ್ಲಿ ಬರೆದಿದ್ದಕ್ಕೂ ಜೈಲಿಗೆ ಹೋಗಬೇಕಾದ ಸ್ಥಿತಿಯನ್ನು ಈ ಮಸೂದೆ ತರಲಿದೆ**
> **ಕೇಶವಪ್ರಸಾದ್**
> ವಿಧಾನ ಪರಿಷತ್ತಿನಲ್ಲಿ ಬಿಜೆಪಿ ಸದಸ್ಯ

> **ಸರ್ಕಾರವನ್ನು ಟೀಕಿಸಿದರೆ ಯಾರೂ ಜೈಲಿಗೆ ಹೋಗುವುದಿಲ್ಲ. ದ್ವೇಷ ಭಾಷಣ ಮಾಡಿದರೆ, ದ್ವೇಷ ಬಿತ್ತಿದರೆ ಹೋಗುತ್ತೀರಿ. ದ್ವೇಷ ಬಿತ್ತುವುದನ್ನು ಬಿಟ್ಟುಬಿಡಿ**
> **ಎಂ.ನಾಗರಾಜ ಯಾದವ್**
> ಕಾಂಗ್ರೆಸ್ ಸದಸ್ಯ

### ಮಸೂದೆಗೆ ಅಂಕಿತ ಬೇಡ: ರಾಜ್ಯಪಾಲರಿಗೆ ಪತ್ರ


ಶೋಭಾ ಕರಂದ್ಲಾಜೆ

**ನವದೆಹಲಿ:** ಬೆಳಗಾವಿ ವಿಧಾನ ಮಂಡಲದ ಅಧಿವೇಶನದಲ್ಲಿ ಅಂಗೀಕರಿಸಿರುವ ‘ಕರ್ನಾಟಕ ದ್ವೇಷ ಭಾಷಣ ಮತ್ತು ದ್ವೇಷ ಅಪರಾಧಗಳ (ಪ್ರತಿಬಂಧಕ) ಮಸೂದೆ–2025’ಗೆ ಅಂಕಿತ ಹಾಕಬಾರದು ಎಂದು ಒತ್ತಾಯಿಸಿ ಕರ್ನಾಟಕ ರಾಜ್ಯಪಾಲ ಥಾವರ್ ಚಂದ್ ಗೆಹಲೋತ್ ಅವರಿಗೆ ಕೇಂದ್ರ ಕಾರ್ಮಿಕ ಖಾತೆ ರಾಜ್ಯ ಸಚಿವೆ ಶೋಭಾ ಕರಂದ್ಲಾಜೆ ಶುಕ್ರವಾರ ಪತ್ರ ಬರೆದಿದ್ದಾರೆ.

‘ದ್ವೇಷ ಭಾಷಣ ನಿಯಂತ್ರಣಕ್ಕೆ ಈ ಮಸೂದೆ ತರಲಾಗಿದೆ ಎಂದು ರಾಜ್ಯ ಸರ್ಕಾರ ಹೇಳಿಕೊಂಡಿದೆ. ಆದರೆ, ಮಸೂದೆಯನ್ನು ಕೂಲಂಕಷವಾಗಿ ಪರಿಶೀಲಿಸಿದಾಗ ಮಸೂದೆಯಲ್ಲಿ ಅನೇಕ ಲೋಪಗಳಿರುವುದು ಗಮನಕ್ಕೆ ತಂದಿದೆ. ಭಿನ್ನಾಭಿಪ್ರಾಯಗಳನ್ನು ಹತ್ತಿಕ್ಕಲು ಸರ್ಕಾರ ದುರುಪಯೋಗಪಡಿಸಿಕೊಳ್ಳುವ ಸಾಧ್ಯತೆ ಇದೆ. ಸಂವಿಧಾನದ 19ನೇ ವಿಧಿಯ ಅಡಿಯ ವಾಕ್ ಸ್ವಾತಂತ್ರ್ಯಕ್ಕೆ ಕಡಿವಾಣ ಹಾಕುವ ಉದ್ದೇಶವನ್ನು ಈ ಮಸೂದೆ ಹೊಂದಿದೆ’ ಎಂದು ಅವರು ಪತ್ರದಲ್ಲಿ ಹೇಳಿದ್ದಾರೆ.

ಆಡಳಿತ, ಸಾಮಾಜಿಕ ನ್ಯಾಯದ ಬಗ್ಗೆ ಧ್ವನಿ ಎತ್ತುವ ಕನ್ನಡ ಪರ ಸಂಘಟನೆಗಳು, ಮಹಿಳಾ ಸಂಘಟನೆಗಳು, ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ಸಂಘಟನೆಗಳು, ವಿದ್ಯಾರ್ಥಿಗಳ ಸಂಘಗಳ ಚಟುವಟಿಕೆಗಳನ್ನು ಹತ್ತಿಕ್ಕುವ ಸಾಧ್ಯತೆಯೂ ಇದೆ. ಹೀಗಾಗಿ, ಈ ಮಸೂದೆಯನ್ನು ರಾಷ್ಟ್ರಪತಿ ಅವರ ಪರಿಶೀಲನೆಗೆ ಕಳುಹಿಸಬೇಕು ಎಂದು ಅವರು ಹೇಳಿದ್ದಾರೆ.

### ‘ಸುಪ್ರೀಂ ನಿರ್ದೇಶನವಿದೆ’


ಪರಮೇಶ್ವರ

ದ್ವೇಷ ಭಾಷಣ ತಡೆಗೆ ಸರ್ಕಾರಗಳು ಅಗತ್ಯ ಕ್ರಮ ಕೈಗೊಳ್ಳಬೇಕು. ದ್ವೇಷ ಭಾಷಣ ಮಾಡುವವರು, ಸಮಾಜದ ಸಾಮರಸ್ಯ ಕದಡುವವರ ವಿರುದ್ಧ ಕ್ರಮ ಕೈಗೊಳ್ಳಲು ಸುಪ್ರೀಂಕೋರ್ಟ್ ನಿರ್ದೇಶನವಿದೆ ಎಂದು ಗೃಹ ಸಚಿವ ಡಾ.ಜಿ.ಪರಮೇಶ್ವರ ಹೇಳಿದರು.

ಬುದ್ಧಿವಂತರು ಎಂದುಕೊಂಡ ಬಿಜೆಪಿ ಸದಸ್ಯರು ದೇಶದ ಕೋರ್ಟ್ ತೀರ್ಪು, ಕಾನೂನು ಪ್ರಕ್ರಿಯೆ ಅರ್ಥ ಮಾಡಿಕೊಳ್ಳದೆ ವಿರೋಧ ಮಾಡುತ್ತಿದ್ದಾರೆ. ಧರ್ಮ ಎಂದರೆ ಎಲ್ಲ ಧರ್ಮಗಳೂ ಒಳಗೊಳ್ಳುತ್ತವೆ. ಇರುವ ಕಾನೂನುಗಳಲ್ಲಿ ದ್ವೇಷ ಭಾಷಣ ಮಾಡಿದವರಿಗೆ ಜಾಮೀನು ನೀಡಲು ಅವಕಾಶವಿದೆ. ಹಾಗಾಗಿ, ಜಾಮೀನು ನೀಡದಂತಹ ಕಾನೂನು ಬೇಕಿದೆ ಎಂದರು.

### ‘13 ಪ್ರಕರಣ ಇದ್ದರೂ ಹೊರಗಿದ್ದಾರೆ’


ಹರಿಪ್ರಸಾದ್

‘ದಕ್ಷಿಣ ಕನ್ನಡದ ಇವರದ್ದೇ ನಾಯಕರೊಬ್ಬರ ವಿರುದ್ಧ ದ್ವೇಷ ಭಾಷಣದ 13 ಪ್ರಕರಣಗಳು ಇವೆ. ಆದರೂ ಅವರು ಹೊರಗೆ ಇದ್ದಾರೆ’ ಎಂದು ಕಾಂಗ್ರೆಸ್‌ನ ಬಿ.ಕೆ. ಹರಿಪ್ರಸಾದ್ ಅವರು, ಬಿಜೆಪಿ ಸದಸ್ಯರನ್ನು ಉದ್ದೇಶಿಸಿ ಹೇಳಿದರು.

‘ಅವರ ಭಾಷಣ ಕೇಳಿ ಕೇಸರಿ ಶಾಲು ತೊಟ್ಟು, ತಳ ಸಮುದಾಯದ ಹುಡುಗರು ಕೊಲೆಯಾಗಿದ್ದಾರೆ. ಇಂಥದ್ದನ್ನೆಲ್ಲಾ ತಡೆಯಲೆಂದೇ ಈ ಮಸೂದೆ ತರಲಾಗುತ್ತಿದೆ’ ಎಂದು ವಿವರಿಸಿದರು.

### ಕಾಯ್ದೆಯ ದುರುಪಯೋಗವೇ ಹೆಚ್ಚು: ಛಲವಾದಿ


ನಾರಾಯಣ ಸ್ವಾಮಿ

ಪ್ರಸ್ತುತ ಅಸ್ತಿತ್ವದಲ್ಲಿರುವ ಕಾನೂನುಗಳನ್ನೇ ರಾಜ್ಯ ಸರ್ಕಾರ ದುರುಪಯೋಗ ಮಾಡಿಕೊಳ್ಳುತ್ತಿದೆ. ಈಗ ತರಲು ಉದ್ದೇಶಿಸಿರುವ ದ್ವೇಷ ಭಾಷಣ ಪ್ರತಿಬಂಧಕ ಕಾಯ್ದೆಯ ದುರುಪಯೋಗ ಆಗುವುದಿಲ್ಲ ಎನ್ನುವ ಗ್ಯಾರಂಟಿ ಇಲ್ಲ ಎಂದು ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ಹೇಳಿದರು.

ವಿರೋಧ ಪಕ್ಷದ ನಾಯಕ ಸ್ಥಾನದಲ್ಲಿದ್ದರೂ ನನ್ನ ವಿರುದ್ಧವೇ ಅಧಿಕಾರಿಗಳನ್ನು ದುರುಪಯೋಗ ಮಾಡಿಕೊಂಡು ಜಾಮೀನು ರಹಿತ ಪ್ರಕರಣ ದಾಖಲಿಸಿದ್ದರು. ಈ ಮಸೂದೆಯಲ್ಲೂ ಕಂದಾಯ, ಪೊಲೀಸ್ ಅಧಿಕಾರಿಗಳಿಗೇ ಜಾರಿಯ ಹೊಣೆ ನೀಡಲಾಗಿದೆ ಎಂದರು.

ಕಾರಾಗೃಹಗಳಲ್ಲಿ ಪೋಕ್ಸೊ ಪ್ರಕರಣದ ಆರೋಪಿಗಳ ಸಂಖ್ಯೆ ಹೆಚ್ಚಾಗಿದೆ ಎಂಬ ನಾರಾಯಣಸ್ವಾಮಿ ಉಲ್ಲೇಖಕ್ಕೆ ಪ್ರತಿಕ್ರಿಯಿಸಿದ ಕಾಂಗ್ರೆಸ್‌ನ ಬಿ.ಕೆ.ಹರಿಪ್ರಸಾದ್, ಪ್ರಭಾವಿ ರಾಜಕಾರಣಗಳ ಮೇಲೆ ಪೋಕ್ಸೊ ಪ್ರಕರಣ ಇದ್ದರೂ, ಹೊರಗೆ ಇದ್ದಾರೆ ಎಂದು ಕಾಲೆಳೆದರು.

## ಸುದ್ದಿ 2 ನಿಮಿಷ


### 92 ಸಾವಿರ ಎಕರೆ ಅಡಿಕೆಗೆ ಕೊಳೆರೋಗ: ರಾಮಲಿಂಗಾ ರೆಡ್ಡಿ

**ಸುವರ್ಣವಿಧಾನಸೌಧ(ಬೆಳಗಾವಿ):** ರಾಜ್ಯದ 10 ಜಿಲ್ಲೆಗಳಲ್ಲಿ 92,000 ಎಕರೆ ಪ್ರದೇಶದಲ್ಲಿನ ಅಡಿಕೆ ಬೆಳೆ ಕೊಳೆರೋಗಕ್ಕೆ ತುತ್ತಾಗಿದೆ ಎಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಅವರು ತಿಳಿಸಿದರು.

ವಿಧಾನಸಭೆಯಲ್ಲಿ ಪ್ರಶ್ನೋತ್ತರ ಅವಧಿಯಲ್ಲಿ ಬಿಜೆಪಿಯ ಗುರುರಾಜ್ ಶೆಟ್ಟಿ ಗಂಟಿಹೊಳೆ ಅವರ ಪ್ರಶ್ನೆಗೆ, ತೋಟಗಾರಿಕೆ ಸಚಿವ ಎಸ್.ಎಸ್. ಮಲ್ಲಿಕಾರ್ಜುನ ಅವರ ಪರವಾಗಿ ಉತ್ತರ ನೀಡಿದರು.

‘ಎನ್‌ಡಿಆರ್‌ಎಫ್‌ನಿಂದ ಪರಿಹಾರ ನೀಡಲು ಸಾಧ್ಯವಿಲ್ಲ. ಇಲಾಖೆಯಿಂದಲೂ ಪರಿಹಾರ ನೀಡುವ ಯೋಜನೆ ಇಲ್ಲ. ಆದರೆ, ಹವಾಮಾನ ಆಧಾರಿತ ವಿಮೆಯಿಂದ ಬೆಳೆಗಾರರಿಗೆ ಸ್ವಲ್ಪಮಟ್ಟಿಗೆ ಅನುಕೂಲ ಆಗಬಹುದು’ ಎಂದು ಹೇಳಿದರು.

2025–26 ನೇ ಸಾಲಿನಲ್ಲಿ ರಾಷ್ಟ್ರೀಯ ತೋಟಗಾರಿಕೆ ಮಿಷನ್ ಯೋಜನೆ ವಿಶೇಷ ಮಧ್ಯಪ್ರವೇಶ ಕಾರ್ಯಕ್ರಮದಡಿ ಎಲೆಚುಕ್ಕಿ ರೋಗ ನಿಯಂತ್ರಣ ಕಾರ್ಯಕ್ರಮಕ್ಕೆ ₹8.60 ಕೋಟಿ ನಿಗದಿ ಮಾಡಲಾಗಿದೆ. ಮುಂಗಾರು ಮತ್ತು ಹಿಂಗಾರು ಹಂಗಾಮುಗಳಿಗೆ ಮರು ವಿನ್ಯಾಸಗೊಳಿಸಲಾದ ಹವಾಮಾನ ಆಧಾರಿತ ಬೆಳೆ ವಿಮೆ ಯೋಜನೆಯಡಿ ಜಿಲ್ಲೆಗಳಿಗೆ ಅಡಿಕೆ ಬೆಳೆ ಅಧಿಸೂಚಿತವಾಗಿದ್ದು, ಹವಾಮಾನ ವೈಪರೀತ್ಯದಿಂದ ಬೆಳೆ ನಷ್ಟವಾದರೆ ಈ ಯೋಜನೆಯಡಿ ವಿಮೆ ಪರಿಹಾರ ಒದಗಿಸಲಾಗುತ್ತದೆ ಎಂದು ಹೇಳಿದರು.



ಎಲೆಚುಕ್ಕೆ ರೋಗ, ಹಳದಿ ಎಲೆ ರೋಗ, ಕೊಳೆ ರೋಗಗಳ ನಿರ್ವಹಣೆಗಾಗಿ ರೋಗಬಾಧಿತ ಸಸ್ಯ ಭಾಗ ತೆಗೆಯುವುದು, ಸಸ್ಯ ಸಂರಕ್ಷಣಾ ಕ್ರಮ ಮತ್ತು ಪೋಷಕಾಂಶಗಳ ಸಮಗ್ರ ನಿರ್ವಹಣೆ ಸಹಾಯಧನಕ್ಕಾಗಿ ₹577.76 ಕೋಟಿ ಪ್ರಸ್ತಾವನೆ ಸಿದ್ಧಪಡಿಸಲಾಗಿದೆ ಎಂದು ತಿಳಿಸಿದರು.

### ಅನಿರ್ದಿಷ್ಟಾವಧಿ ಮುಂದೂಡಿಕೆ

**ಸುವರ್ಣ ವಿಧಾನಸೌಧ(ಬೆಳಗಾವಿ):** ಇಲ್ಲಿ ಇದೇ 8ರಿಂದ ಶುರುವಾಗಿ 10 ದಿನ ನಡೆದ ವಿಧಾನಮಂಡಲದ ಅಧಿವೇಶನ ಅನಿರ್ದಿಷ್ಟಾವಧಿ ಅವಧಿಗೆ ಮುಂದೂಡಿಕೆಯಾಯಿತು.

ವಿಧಾನಸಭೆಯಲ್ಲಿ ಒಳ ಮೀಸಲಾತಿಗೆ ಕಾನೂನು ಬಲ ನೀಡುವ ಮಸೂದೆಗಳೂ ಸೇರಿ ಒಟ್ಟು 23 ಮಸೂದೆಗಳು ಅಂಗೀಕರಿಸಲ್ಪಟ್ಟಿವೆ. ಸಾಮಾಜಿಕ ಬಹಿಷ್ಕಾರ ಹಾಕುವವರು, ಅದಕ್ಕೆ ಪೂರಕ ಬೆಂಬಲ ನೀಡುವವರಿಗೆ ಶಿಕ್ಷೆ ವಿಧಿಸಲು ಅವಕಾಶ ಇರುವ ಮಸೂದೆಗೆ ಎರಡೂ ಸದನಗಳಲ್ಲಿ ಸುದೀರ್ಘ ಚರ್ಚೆಯ ಬಳಿಕ ಅನುಮೋದನೆ ನೀಡಲಾಯಿತು.

## ಬಿಜೆಪಿ ಸದಸ್ಯರ ಧರಣಿ

ಪ್ರಜಾವಾಣಿ ಚಿತ್ರ: ರಂಜು ಪಿ


ಬೆಳಗಾವಿಯ ಸುವರ್ಣ ವಿಧಾನಸೌಧದಲ್ಲಿ ಶುಕ್ರವಾರ ಚಳಿಗಾಲದ ಅಧಿವೇಶನದ ವಿಧಾನಪರಿಷತ್ ಕಲಾಪದಲ್ಲಿ ಮಂಡಿಸಲಾದ ದ್ವೇಷ ಭಾಷಣ ಮತ್ತು ದ್ವೇಷ ಅಪರಾಧ ತಡೆ ಮಸೂದೆ ಮೇಲಿನ ಚರ್ಚೆ ವೇಳೆ ಬಿಜೆಪಿ ಸದಸ್ಯರು ಸಭಾಧ್ಯಕ್ಷರ ಪೀಠದ ಮುಂದೆ ಧರಣಿ ನಡೆಸಿದರು

## ಒಳಮೀಸಲಾತಿ ಮಸೂದೆಗೆ ಪರಿಷತ್ ಒಪ್ಪಿಗೆ

**ಸುವರ್ಣ ವಿಧಾನಸೌಧ (ಬೆಳಗಾವಿ):** ಪರಿಶಿಷ್ಟಜಾತಿಯವರಿಗೆ ಒಳಮೀಸಲಾತಿ ಕಲ್ಪಿಸುವ ಸರ್ಕಾರಿ ಆದೇಶಗಳು ಮತ್ತು ಸುತ್ತೋಲೆಗಳಿಗೆ ಕಾನೂನಾತ್ಮಕ ರಕ್ಷಣೆ ನೀಡುವ ಉದ್ದೇಶದ ಮಸೂದೆಗೆ ವಿಧಾನ ಪರಿಷತ್ತು ಅಂಗೀಕಾರ ನೀಡಿದೆ.

ಸಮಾಜ ಕಲ್ಯಾಣ ಸಚಿವ ಎಚ್.ಸಿ.ಮಹದೇವಪ್ಪ ವಿಧಾನ ಪರಿಷತ್ತಿನಲ್ಲಿ ‘ಕರ್ನಾಟಕ ಅನುಸೂಚಿತ ಜಾತಿಗಳ (ಉಪವರ್ಗೀಕರಣ) ಮಸೂದೆಯನ್ನು ಪರ್ಯಾಲೋಚನೆಗೆ ಮಂಡಿಸಿದರು.

**ಇತರ ಮಸೂದೆಗಳು:**
- ಕರ್ನಾಟಕ ಖಾಸಗಿ ವೈದ್ಯಕೀಯ ಸಂಸ್ಥೆಗಳ (ತಿದ್ದುಪಡಿ) ಮಸೂದೆ–2025
- ಕರ್ನಾಟಕ ರಾಜ್ಯ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಬುಡಕಟ್ಟುಗಳ ಆಯೋಗ (ತಿದ್ದುಪಡಿ) ಮಸೂದೆ–2025
- ಕರ್ನಾಟಕ ಸಾಮಾಜಿಕ ಬಹಿಷ್ಕಾರ (ಪ್ರತಿಬಂಧ, ನಿಷೇಧ ಮತ್ತು ಪರಿಹಾರ) ಮಸೂದೆ–2025

## ಬಿಜೆಪಿ ಉತ್ತರ ಕರ್ನಾಟಕ ವಿರೋಧಿ: ಮುಖ್ಯಮಂತ್ರಿ

ಪ್ರಜಾವಾಣಿ ವಾರ್ತೆ

**ಸುವರ್ಣ ವಿಧಾನಸೌಧ (ಬೆಳಗಾವಿ):** ಉತ್ತರ ಕರ್ನಾಟಕದ ಎಲ್ಲ ಯೋಜನೆಗಳಿಗೆ ತಡೆಹಾಕಿ ಕೂತಿರುವ ಬಿಜೆಪಿ, ಉತ್ತರ ಕರ್ನಾಟಕದ ವಿರೋಧಿ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಕಿಡಿಕಾರಿದರು.

ಉತ್ತರ ಕರ್ನಾಟಕದ ಸಮಸ್ಯೆಗಳ ಕುರಿತು ವಿಧಾನ ಪರಿಷತ್ತಿನಲ್ಲಿ ನಡೆದ ಚರ್ಚೆಯ ಮೇಲೆ ಸಂಜೆ 6.30ರಿಂದ 9.30ರವರೆಗೆ ಉತ್ತರ ನೀಡಿದ ಅವರು, ಕಬ್ಬು ಮತ್ತು ಮೆಕ್ಕೆಜೋಳ ಬೆಳೆಗಾರರ ಸಂಕಷ್ಟಗಳಿಗೆ ಕೇಂದ್ರ ಸರ್ಕಾರವೇ ಹೊಣೆ ಎಂದೂ ದೂರಿದರು.

‘ಉತ್ತರ ಕರ್ನಾಟಕ ಬಹುಮುಖ್ಯ ನೀರಾವರಿ ಯೋಜನೆಗಳಲ್ಲಿ ಒಂದಾದ ಮಹದಾಯಿ ಯೋಜನೆಗೆ ಕೇಂದ್ರ ಸರ್ಕಾರದ ಪರಿಸರ ಸಚಿವಾಲಯ ಅನುಮತಿ ನೀಡಿಲ್ಲ. ಯೋಜನೆ ಅನುಷ್ಠಾನ ಸಂಬಂಧ ನಿಯೋಗ ಕರೆದುಕೊಂಡು ಹೋಗಿದ್ದಾಗ, ಗೋವಾದ ಜತೆಗೆ ರಾಜಿ ಮಾಡಿಕೊಳ್ಳಿ ಎಂದಿದ್ದರು. ಈಗ ಕೇಂದ್ರ, ಗೋವಾ ಮತ್ತು ಮಹಾರಾಷ್ಟ್ರದಲ್ಲಿ ನಿಮ್ಮದೇ ಬಿಜೆಪಿ ಸರ್ಕಾರವಿದೆ. ಈಗ ಅವರು ಏಕೆ ರಾಜಿ ಮಾಡಿಕೊಳ್ಳಬಾರದು. ನೀವು ಈಗ ಕೇಂದ್ರದ ಮೇಲೆ ಒತ್ತಡ ಹಾಕಿ’ ಎಂದು ಬಿಜೆಪಿ ಸದಸ್ಯರನ್ನು ತಿವಿದರು.

‘ಕೃಷ್ಣಾ ಮೇಲ್ದಂಡೆ ಯೋಜನೆ ಅಡಿ ಕರ್ನಾಟಕಕ್ಕೆ 173 ಟಿಎಂಸಿ ಅಡಿ ನೀರನ್ನು ಹಂಚಿಕೆ ಮಾಡಿ 2013ರಲ್ಲೇ ತೀರ್ಪು ಬಂದಿದೆ. ಆದರೆ 12 ವರ್ಷವಾದರೂ ಕೇಂದ್ರ ಸರ್ಕಾರವು ಅಧಿಸೂಚನೆ ಹೊರಡಿಸಿಲ್ಲ. ಭದ್ರಾ ಮೇಲ್ದಂಡೆ ಯೋಜನೆಗೆ 2023–24ರ ಕೇಂದ್ರ ಬಜೆಟ್‌ನಲ್ಲಿ ₹5,300 ಕೋಟಿ ಘೋಷಿಸಿದ್ದರು. ಅದರಲ್ಲಿ ಈವರೆಗೆ ಒಂದು ರೂಪಾಯಿಯೂ ಬಿಡುಗಡೆ ಆಗಿಲ್ಲ’ ಎಂದು ಕಾಗದ ಪತ್ರಗಳನ್ನು ಸದನದ ಮುಂದಿಟ್ಟರು.

‘ಕಬ್ಬಿನ ಖರೀದಿ ಬೆಲೆ ನಿಗದಿ ಮಾಡುವುದು ಕೇಂದ್ರ ಸರ್ಕಾರ. ಸಾಗಣೆ ವೆಚ್ಚವನ್ನೂ ಸೇರಿಸಿ ದೊಡ್ಡ ಖರೀದಿ ಬೆಲೆ ಎಂಬಂತೆ ಘೋಷಣೆ ಮಾಡಿದೆ. ಆದರೆ ಸಾಗಣೆ ವೆಚ್ಚ ಕಡಿತ ಮಾಡಿದರೆ ರೈತರಿಗೆ ಕಡಿಮೆ ಹಣ ಸಿಗುತ್ತದೆ. ಇದರಿಂದಲೇ ಕಬ್ಬು ಬೆಳೆಗಾರರಿಗೆ ಸಮಸ್ಯೆಯಾಗಿದ್ದು. ನಾವು ಕಾರ್ಖಾನೆ ಕಡೆಯಿಂದ ಹೆಚ್ಚುವರಿಯಾಗಿ ಸ್ವಲ್ಪ, ಸರ್ಕಾರದ ಕಡೆಯಿಂದ ಸ್ವಲ್ಪ ಹಣ ಕೊಟ್ಟು ಖರೀದಿ ಬೆಲೆ ಹೆಚ್ಚಿಸಿದ್ದೇವೆ’ ಎಂದರು.

‘ಮೆಕ್ಕೆಜೋಳ ಬೆಳೆಗಾರರ ಸಮಸ್ಯೆಗೂ ಕೇಂದ್ರ ಸರ್ಕಾರವೇ ಕಾರಣ. ಎಥೆನಾಲ್‌ಗಾಗಿ ಹೆಚ್ಚಿನ ಮೆಕ್ಕೆಜೋಳ ಖರೀದಿಗೆ ಹಂಚಿಕೆ ಮಾಡಿದ್ದರೆ, ಬಹಳಷ್ಟು ಸಮಸ್ಯೆ ಬಗೆಹರಿಯುತ್ತಿತ್ತು. ಆದರೆ ಅವರು ಹಾಗೆ ಮಾಡಲಿಲ್ಲ. ಇಂತಹ ಅಸಹಕಾರವನ್ನು ಈಗ ಇನ್ನಷ್ಟು ಹೆಚ್ಚಿಸಿದೆ. ನರೇಗಾ ಯೋಜನೆ ಅಡಿಯಲ್ಲಿ ಅನುದಾನ ಕಡಿತ ಮಾಡಿದೆ. ಜಲಜೀವನ ಮಿಷನ್ ಯೋಜನೆ ಅಡಿ ₹13,000 ಕೋಟಿ ಅನುದಾನ ತಡೆಹಿಡಿದಿದೆ. ಇದೆಲ್ಲವೂ ಕೇಂದ್ರದ ಬಿಜೆಪಿ ಸರ್ಕಾರವು ಉತ್ತರ ಕರ್ನಾಟಕದ ವಿರೋಧಿ ಎಂಬುದನ್ನು ತೋರಿಸುತ್ತವೆ’ ಎಂದರು.

### ‘ರಾಜಕೀಯ ನಿಶ್ಶಕ್ತಿ ಎಂಬುದಿಲ್ಲ’

‘ನನಗೆ ರಾಜಕೀಯ ನಿಶ್ಶಕ್ತಿ ಎಂಬುದೇ ಇಲ್ಲ. ಹಿಂದೆಯೂ ಇರಲಿಲ್ಲ, ಈಗಲೂ ಇಲ್ಲ. ಮುಂದೆಯೂ ಇರುವುದಿಲ್ಲ. ಹಾಗಂತ ಅಷ್ಟೆಲ್ಲ ತಲೆ ಕೆಡಿಸಿಕೊಂಡು ರಾಜಕೀಯ ಮಾಡಬೇಕಿಲ್ಲ’ ಎಂದು ಸಿದ್ದರಾಮಯ್ಯ ಹೇಳಿದರು.

ಉತ್ತರ ಕರ್ನಾಟಕ ಕುರಿತ ಚರ್ಚೆಗೆ ಉತ್ತರ ನೀಡಲು ನಿಂತ ಅವರು, ‘ನಿನ್ನೆಯೇ ಉತ್ತರ ನೀಡಬೇಕಿತ್ತು. ನನ್ನ ಆರೋಗ್ಯ ಸರಿಯಿರಲಿಲ್ಲ. ಹೀಗಾಗಿ ಸ್ವಲ್ಪ ನಿಶ್ಶಕ್ತನಾಗಿದ್ದೇನೆ’ ಎಂದರು.

ಮಧ್ಯಪ್ರವೇಶಿಸಿದ ಆರ್. ಅಶೋಕ, ‘ನಿಮಗೆ ರಾಜಕೀಯ ಶಕ್ತಿ ಬಂದಂತಿದೆ. ಮುಖದಲ್ಲಿ ಕಳೆ ಕಾಣುತ್ತಿದೆ’ ಎಂದು ಹೇಳಿದರು.

ಆಗ ಮುಖ್ಯಮಂತ್ರಿ, ‘ರಾಜಕೀಯ ನಿಶ್ಶಕ್ತಿ ಬರಲು ಅವಕಾಶ ಇಲ್ಲವೇ ಇಲ್ಲ. ಶಾರೀರಿಕವಾಗಿ ನಿಶ್ಶಕ್ತಿ ಇರುತ್ತದೆ’ ಎಂದರು.

ಬಿಜೆಪಿಯ ವಿ. ಸುನಿಲ್‌ಕುಮಾರ್, ‘ಇತ್ತೀಚೆಗೆ ನೀವು ರಾಜಕೀಯವಾಗಿ ನಿಶ್ಶಕ್ತ ಆಗಿದ್ದೀರಿ ಎನ್ನುವುದು ಚರ್ಚೆಯಾಗುತ್ತಿದೆ’ ಎಂದರು. ಮತ್ತೆ ಮುಖ್ಯಮಂತ್ರಿ, ‘ರಾಜಕೀಯ ನಿಶ್ಶಕ್ತಿ ಎಂಬುದೇ ಇಲ್ಲ. ಎಂದಿಗೂ ಬರುವುದಿಲ್ಲ’ ಎಂದು ಜೋರಾಗಿಯೇ ಹೇಳಿದರು.

‘ಎಲ್ಲರೂ ಅಭಿನಂದನೆ ಹೇಳುವುದನ್ನು ನೋಡಿದರೆ ಐದು ವರ್ಷ ಪೂರ್ಣಗೊಳಿಸುವುದಿಲ್ಲವೆಂದು ಕಾಣಿಸುತ್ತದೆ’ ಎಂದು ಬಿಜೆಪಿ ಉಚ್ಚಾಟಿತ ಸದಸ್ಯ ಬಸನಗೌಡ ಪಾಟೀಲ ಯತ್ನಾಳ ಕಾಲೆಳೆದರು.

‘ನಿಮ್ಮಲ್ಲಿ ಸಂಶಯ ಇರುವುದಕ್ಕೆ ನಿಮ್ಮನ್ನು ಪಾರ್ಟಿಯಿಂದ ಹೊರಹಾಕಿದ್ದಾರೆ. ಅಂತಹ ಸಂಶಯ ಇಟ್ಟುಕೊಳ್ಳಬೇಡಿ’ ಎಂದು ಸಿದ್ದರಾಮಯ್ಯ ಹೇಳಿದರು.

**‘ನಿಶ್ಶಕ್ತಿ: ಮೀನಿನ ಎಫೆಕ್ಟ್’:** ಉತ್ತರ ಕರ್ನಾಟಕಕ್ಕೆ ರಾಜ್ಯ ಸರ್ಕಾರ ನೀಡಿರುವ ಅನುದಾನ ಮತ್ತು ಯೋಜನೆಗಳ ಕುರಿತು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಉತ್ತರ ನೀಡಲು ಆರಂಭಿಸಿದಾಗ ಬಿಜೆಪಿ ಸದಸ್ಯರು ನಿಶ್ಶಕ್ತಿ ಬಗ್ಗೆ ಪ್ರಸ್ತಾಪಿಸಿದರು.



ಬಿಜೆಪಿಯ ಸಿ.ಟಿ.ರವಿ ಅವರು, ‘ಅದು ನಾಟಿ ಕೋಳಿ ಎಫೆಕ್ಟ್’ ಎಂದರು. ಬಿಜೆಪಿಯ ಕೇಶವ ಪ್ರಸಾದ್, ‘ಇಲ್ಲ. ಅದು ದೆಹಲಿ ಎಫೆಕ್ಟ್’ ಎಂದು ಸಿದ್ದರಾಮಯ್ಯ ಅವರ ಕಾಲೆಳೆದರು. ಸಿದ್ದರಾಮಯ್ಯ, ‘ಅದು ದೆಹಲಿ ಎಫೆಕ್ಟೂ ಅಲ್ಲ, ನಾಟಿ ಕೋಳಿ ಎಫೆಕ್ಟೂ ಅಲ್ಲ. ಮೀನಿನ ಎಫೆಕ್ಟ್. ಮೊನ್ನೆ ಊಟಕ್ಕೆ ಒಂದು ಕಡೆ ಹೋಗಿದ್ದೆ. ಅಲ್ಲಿ ಮೀನು ತಿಂದಿದ್ದರಿಂದ ಹೀಗಾಯಿತು’ ಎಂದರು.

ಸಭಾಪತಿ ಬಸವರಾಜ ಹೊರಟ್ಟಿ ಅವರು, ‘ಬೋನ್ ಇದ್ದ ಮೀನಾ, ಬೋನ್ ಇಲ್ಲದ ಮೀನಾ’ ಎಂದು ಪ್ರಶ್ನಿಸಿದರು. ಆಗ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ, ‘ಅವರು ತಿನ್ನುವುದಿಲ್ಲ. ನೀವು ಬೋನ್ ಅಥವಾ ಬೋನ್‌ಲೆಸ್ ಅಂದರೆ ಗೊತ್ತಾಗುವುದಿಲ್ಲ. ಆದರೆ ಅಲ್ಲಿ (ಕುರ್ಚಿಯನ್ನು ಉದ್ದೇಶಿಸಿ) ಅಲುಗಾಡುತ್ತಿರಬೇಕಲ್ಲವೇ’ ಎಂದು ಕಾಲೆಳೆದರು.

ಸಿದ್ದರಾಮಯ್ಯ ಅವರು, ‘ನನಗೆ ಸಮುದ್ರದ ಆಹಾರ ಆಗುವುದಿಲ್ಲ ಎನಿಸುತ್ತದೆ. ಆದರೆ ಇಲ್ಲೇನು ಅಲುಗಾಡುತ್ತಿಲ್ಲ. ಎಲ್ಲವೂ ಗಟ್ಟಿಯಾಗಿದೆ. ನೀವು ಎರಡು ಬಾರಿ ಸರ್ಕಾರ ರಚಿಸಿ, ಒಂಬತ್ತು ವರ್ಷದಲ್ಲಿ ಐವರು ಮುಖ್ಯಮಂತ್ರಿಯನ್ನು ಬದಲಿಸಿದಿರಿ. ಅಲುಗಾಡುತ್ತಿರುವುದು ನಿಮ್ಮಲ್ಲಿ, ನಮ್ಮಲ್ಲಲ್ಲ’ ಎಂದು ತಿರುಗೇಟು ನೀಡಿದರು.

## ಸಿ.ಎಂ ಬೆಂಬಲಕ್ಕೆ ಸಚಿವರು, ಶಾಸಕರು

ಪ್ರಜಾವಾಣಿ ವಾರ್ತೆ

**ಸುವರ್ಣ ವಿಧಾನಸೌಧ (ಬೆಳಗಾವಿ):** ನಾಯಕತ್ವ ಬದಲಾವಣೆ ವಿಷಯ ಚರ್ಚೆ ನಡೆಯುತ್ತಿದ್ದಾಗ ಸಚಿವರು ಹಾಗೂ ಕಾಂಗ್ರೆಸ್ ಸದಸ್ಯರು ಸಿದ್ದರಾಮಯ್ಯ ಬೆಂಬಲಕ್ಕೆ ನಿಂತರು.

‘ಮುಖ್ಯಮಂತ್ರಿ ಬದಲಾವಣೆ ಕುರಿತಂತೆ ಯಾವುದೇ ಚರ್ಚೆ ಆಗಿಲ್ಲ. ಈ ಚರ್ಚೆಯೇ ಅನವಶ್ಯಕ’ ಎಂದು ಪ್ರತಿಪಾದಿಸಿದರು.

ಮುಖ್ಯಮಂತ್ರಿ ಬದಲಾವಣೆ ಕುರಿತ ಚರ್ಚೆಗೆ ಆಕ್ಷೇಪ ವ್ಯಕ್ತಪಡಿಸಿದ ಕಾಂಗ್ರೆಸ್‌ನ ಆರ್.ವಿ. ದೇಶಪಾಂಡೆ, ‘ಎರಡೂವರೆ ವರ್ಷ ಎಂಬುದೆಲ್ಲ ಇಲ್ಲ. ಉಳಿದೆಲ್ಲವೂ ಅನವಶ್ಯಕ ಚರ್ಚೆ. ಇದನ್ನು ಇಲ್ಲಿಗೆ ನಿಲ್ಲಿಸಿ’ ಎಂದು ಸಲಹೆ ನೀಡಿದರು.

ಅವರಿಗೆ ದನಿಗೂಡಿಸಿದ ಕಾಂಗ್ರೆಸ್‌ನ ಅಪ್ಪಾಜಿ ಸಿ.ಎಸ್. ನಾಡಗೌಡ, ‘ಮುಖ್ಯಮಂತ್ರಿ ಸ್ಥಾನ ಬದಲಾವಣೆ ಇದ್ದಿದ್ದರೆ ಕಾಂಗ್ರೆಸ್ ಶಾಸಕರ ಬಳಿ ಚರ್ಚೆ ಆಗುತ್ತಿತ್ತು. ನಮ್ಮ ಬಳಿ ಆ ಕುರಿತು ಚರ್ಚೆಯೇ ಆಗಿಲ್ಲ’ ಎಂದು ಹೇಳಿದರು.

**‘ನಿಮ್ಮಪ್ಪನಾಣೆ ಅಧಿಕಾರಕ್ಕೆ ಬರಲ್ಲ’:** ‘ಮುಂದೆಯೂ ನಾವೇ ಅಧಿಕಾರಕ್ಕೆ ಬರುತ್ತೇವೆ. ನಿಮ್ಮಪ್ಪನಾಣೆ ನೀವು ಅಧಿಕಾರಕ್ಕೆ ಬರುವುದಿಲ್ಲ. 2028ಕ್ಕೂ ನಾವೇ. 2033ಕ್ಕೂ ನಾವೇ ಅಧಿಕಾರಕ್ಕೆ ಬರುವುದು’ ಎಂದು ಸಿದ್ದರಾಮಯ್ಯ ಅವರು ಬಿಜೆಪಿಯವರನ್ನು ಉದ್ದೇಶಿಸಿ ಗುಡುಗಿದರು.

ವಿಪಕ್ಷದ ನಾಯಕ ಆರ್. ಅಶೋಕ, ‘ಯಡಿಯೂರಪ್ಪ ಸಿ.ಎಂ ಆಗುವುದಕ್ಕೂ ಮೊದಲು ನೀವು ಹೀಗೆ ಹೇಳಿದ್ದೀರಿ. ಆದರೆ, ಯಡಿಯೂರಪ್ಪ ಐದು ಬಾರಿ ಮುಖ್ಯಮಂತ್ರಿ ಆದರು’ ಎಂದರು.

ಸಿದ್ದರಾಮಯ್ಯ, ‘ಅದಕ್ಕೆ ಅವರನ್ನು ಮುಖ್ಯಮಂತ್ರಿ ಆಗಿ ಐದು ವರ್ಷ ಪೂರ್ಣಗೊಳಿಸಲು ಬಿಡಲಿಲ್ಲ’ ಎಂದು ತಿರುಗೇಟು ನೀಡಿದರು. ಅದಕ್ಕೆ ಅಶೋಕ, ‘ಈಗ ಎರಡೂವರೆ ವರ್ಷದ ನಂತರ ನೀವು ಬದಲಾಗುತ್ತೀರಿ ಎಂಬ ಮಾಹಿತಿಯಿದೆ’ ಎಂದು ಕುಟುಕಿದರು.

ಆಕ್ರೋಶಗೊಂಡ ಸಿದ್ದರಾಮಯ್ಯ, ‘ನೀನು ವಿರೋಧ ಪಕ್ಷದ ನಾಯಕನಾಗಿ ಐದು ವರ್ಷ ಇರುತ್ತೀಯಾ’ ಎಂದು ಪ್ರಶ್ನಿಸಿದರು. ಅದಕ್ಕೆ ಬಿಜೆಪಿ ಶಾಸಕರು ಒಕ್ಕೊರಲಿನಿಂದ, ‘ಅಶೋಕ ಅವರೇ ಐದು ವರ್ಷ ವಿರೋಧ ಪಕ್ಷದ ನಾಯಕರು. ನಿಮ್ಮ ಕಥೆ ಹೇಳಿ’ ಎಂದು ಕಾಲೆಳೆದರು.

ಆಗ ಸಿದ್ದರಾಮಯ್ಯ, ‘ ಯಡಿಯೂರಪ್ಪ ಅವರಿಗೂ ಇದೇ ರೀತಿ ಹೇಳುತ್ತಿದ್ದೀರಿ. ಆದರೆ, ಈಗ ಎಲ್ಲವೂ ಅನವಶ್ಯಕ ಚರ್ಚೆ ಬಿಡಿ’ ಎಂದರು.

### ಆರು ನಿರ್ಣಯಗಳ ಅಂಗೀಕಾರ

ಉತ್ತರ ಕರ್ನಾಟಕ ಅಭಿವೃದ್ಧಿಗೆ ಪೂರಕವಾಗಿ ಕೇಂದ್ರ ಸರ್ಕಾರವನ್ನು ಒತ್ತಾಯಿಸುವ ಸಂಬಂಧ ವಿಧಾನ ಪರಿಷತ್ತಿನಲ್ಲಿ ಶುಕ್ರವಾರ ಆರು ನಿರ್ಣಯಗಳನ್ನು ಅಂಗೀಕರಿಸಲಾಯಿತು.

ಕಾನೂನು ಸಚಿವ ಎಚ್.ಕೆ.ಪಾಟೀಲ ಅವರು ಶುಕ್ರವಾರ ರಾತ್ರಿ 9.50ರ ವೇಳೆಗೆ ಈ ಮಸೂದೆಗಳನ್ನು ಮಂಡಿಸಿದರು.

‘ಕಲ್ಯಾಣ ಕರ್ನಾಟಕ ಪ್ರದೇಶದ ಅಭಿವೃದ್ಧಿಯನ್ನು ರಾಷ್ಟ್ರೀಯ ಅಭಿವೃದ್ಧಿಯಾಗಿ ಪರಿಗಣಿಸಿ, ಮಹಾರಾಷ್ಟ್ರದ ವಿದರ್ಭ ಮಾದರಿಯಲ್ಲಿ ಕೇಂದ್ರ ಸರ್ಕಾರ ತಕ್ಷಣ ₹ 5 ಸಾವಿರ ಕೋಟಿಯ ‘ವಿಶೇಷ ಕೇಂದ್ರ ನೆರವು’ ಯೋಜನೆಯನ್ನು ರೂಪಿಸಿ ಬಿಡುಗಡೆ ಮಾಡಬೇಕು’ ಎಂಬ ನಿರ್ಣಯಕ್ಕೆ ಅಂಗೀಕಾರ ಪಡೆಯಲಾಯಿತು.

**ಇತರ ನಿರ್ಣಯಗಳು:**
- ಕೃಷ್ಣಾ ಮೇಲ್ದಂಡೆ ಯೋಜನೆ–3 ಅನ್ನು ತಕ್ಷಣ ರಾಷ್ಟ್ರೀಯ ಯೋಜನೆಯಾಗಿ ಘೋಷಿಸಬೇಕು. ಜೊತೆಗೆ, ಕೃಷ್ಣಾ ಜಲ ವಿವಾದ ನ್ಯಾಯಮಂಡಳಿ–2ರ ಐತೀರ್ಪು ಅನ್ನು ಕೇಂದ್ರ ಸರ್ಕಾರದ ಗೆಜೆಟ್‌ನಲ್ಲಿ ಅಧಿಸೂಚಿಸಿ ಅನುಷ್ಠಾನಗೊಳಿಸಬೇಕು
- ರಾಯಚೂರು ಜಿಲ್ಲೆಯಲ್ಲಿ ಅಖಿಲ ಭಾರತ ವೈದ್ಯಕೀಯ ವಿಜ್ಞಾನ ಸಂಸ್ಥೆ ಸ್ಥಾಪನೆಗೆ ಶೀಘ್ರ ಅಂತಿಮ ಅನುಮೋದನೆ ನೀಡಬೇಕು
- ಬೆಂಗಳೂರಿನಲ್ಲಿರುವ 73 ರಾಷ್ಟ್ರೀಯ ಪ್ರಾಮುಖ್ಯತೆಯ ಸಂಸ್ಥೆಗಳನ್ನು ಗುರುತಿಸಿ ಅವುಗಳಲ್ಲಿ ಕನಿಷ್ಠ 25 ಪ್ರಮುಖ ಸಂಸ್ಥೆಗಳನ್ನು ಉತ್ತರ ಕರ್ನಾಟಕ ಭಾಗಕ್ಕೆ ವರ್ಗಾಯಿಸಬೇಕು
- ಎಥೆನಾಲ್ ಸಾಮರ್ಥ್ಯಕ್ಕೆ ಅನುಗುಣವಾಗಿ ಕೋಟಾ ಹಂಚಿಕೆ ಪ್ರಮಾಣವನ್ನು ತಕ್ಷಣ ಹೆಚ್ಚಿಸುವ ಮೂಲಕ ಪ್ರಾದೇಶಿಕ ತಾರತಮ್ಯವನ್ನು ನಿವಾರಿಸಬೇಕು.
- ಮಹದಾಯಿ ಯೋಜನೆ ಅನುಷ್ಠಾನಕ್ಕೆ ಅಗತ್ಯ ಮಂಜೂರಾತಿಗಳನ್ನು ತಕ್ಷಣ ನೀಡಬೇಕು

**‘ಶೇ 56ರಷ್ಟು ಮೀಸಲು : 9 ನೇ ಪರಿಚ್ಛೇದಕ್ಕೆ ಸೇರಿಸಿ’:** ‘ರಾಜ್ಯದಲ್ಲಿ ಎಸ್‌ಸಿ, ಎಸ್‌ಟಿ ಹಾಗೂ ಹಿಂದುಳಿದ ವರ್ಗಗಳಿಗೆ ಉದ್ಯೋಗ ಮತ್ತು ಶಿಕ್ಷಣದಲ್ಲಿ ಒಟ್ಟು ಮೀಸಲಾತಿಯನ್ನು ಶೇ 56ಕ್ಕೆ ಹೆಚ್ಚಿಸುವ ಉದ್ದೇಶದಿಂದ ರೂಪಿಸಿರುವ ಕಾಯ್ದೆಯನ್ನು ಸಂವಿಧಾನದ 9ನೇ ಪರಿಚ್ಛೇದದಲ್ಲಿ ಸೇರಿಸಬೇಕು’ ಸೇರಿದಂತೆ ಒಟ್ಟು ಏಳು ನಿರ್ಣಯಗಳನ್ನು ಪರಿಷತ್ತು ಅಂಗೀಕರಿಸಿತು.

### ತೋಳು ತಟ್ಟಿ ಹೇಳಿ: ಸಿ.ಎಂಗೆ ಮುನಿರತ್ನ ಸವಾಲು

‘ಈಗಲೂ ತೋಳು ತಟ್ಟಿ ಐದು ವರ್ಷ ನಾನೇ ಮುಖ್ಯಮಂತ್ರಿ ಎಂದು ಹೇಳಿ’ ಎಂದು ಬಿಜೆಪಿಯ ಮುನಿರತ್ನ ಆಗ್ರಹಿಸಿದರು. ಚರ್ಚೆಯ ವೇಳೆ ಮಧ್ಯಪ್ರವೇಶಿಸಿದ ಮುನಿರತ್ನ ಅವರು ತಮ್ಮ ತೋಳು ತಟ್ಟುತ್ತಾ, ‘ಸಿದ್ದರಾಮಯ್ಯ ಅವರು ಹಿಂದೆಲ್ಲ ಈ ರೀತಿ ತೋಳು ತಟ್ಟಿ ಸವಾಲು ಹಾಕುತ್ತಿದ್ದರು. ಈಗಲೂ ಅದನ್ನು ಹೇಳಲಿ’ ಎಂದು ತಮ್ಮ ಕಡು ವಿರೋಧಿ ಡಿ.ಕೆ.ಶಿವಕುಮಾರ್ ಅವರನ್ನು ಕೆಣಕುವಂತೆ ಮಾತನಾಡಿದರು.

## ಕಾರಾಗೃಹಗಳಲ್ಲಿ ಎಐ ಆಧಾರಿತ ಭದ್ರತೆ



**ಸುವರ್ಣ ವಿಧಾನಸೌಧ (ಬೆಳಗಾವಿ):** ರಾಜ್ಯದ ಎಲ್ಲ ಕಾರಾಗೃಹಗಳಲ್ಲಿ ನಿಷೇಧಿತ ವಸ್ತುಗಳನ್ನು ಪತ್ತೆಹಚ್ಚಲು ಕೃತಕ ಬುದ್ಧಿಮತ್ತೆ (ಎಐ) ಆಧಾರಿತ ಭದ್ರತಾ ತಂತ್ರಾಂಶವನ್ನು ಅಳವಡಿಸಲಾಗುತ್ತದೆ ಎಂದು ಗೃಹ ಸಚಿವ ಜಿ. ಪರಮೇಶ್ವರ ಅವರು ವಿಧಾನ ಸಭೆಯಲ್ಲಿ ಹೇಳಿದರು.

‘ಕಾರಾಗೃಹಗಳ ಭದ್ರತೆ ಹಾಗೂ ಆಡಳಿತ ವ್ಯವಸ್ಥೆಯನ್ನು ಬಲಪಡಿಸಿ, ಬಂದಿಗಳ ಚಲನವಲನಗಳ ಮೇಲೆ ಇನ್ನೂ ಹೆಚ್ಚಿನ ನಿಗಾವಹಿಸಲು ಬೆಂಗಳೂರು ಕೇಂದ್ರ ಕಾರಾಗೃಹದಲ್ಲಿ ‘ಎಐ– ಆಡಿಯೊ–ವಿಡಿಯೊ ಅನಾಲಿಟಿಕ್ಸ್ ಸಿಸ್ಟಮ್’ ಸಿಸಿಟಿವಿ ಕಣ್ಗಾವಲು ವ್ಯವಸ್ಥೆಯನ್ನು ಅಳವಡಿಸಲಾಗಿದೆ. ಇದನ್ನು ಎಲ್ಲ ಕಾರಾಗೃಹಗಳಿಗೂ ವಿಸ್ತರಿಸಲಾಗುವುದು’ ಎಂದರು.

ವಿರೋಧ ಪಕ್ಷದ ನಾಯಕ ಆರ್. ಅಶೋಕ ಅವರು ನಿಯಮ 69ರ ಅಡಿ ಮಾಡಿದ ಪ್ರಸ್ತಾವಕ್ಕೆ ಉತ್ತರಿಸಿದ ಪರಮೇಶ್ವರ, ‘ರಾಜ್ಯದ ಯಾವುದೇ ಕಾರಾಗೃಹಗಳಲ್ಲಿ ನಿಷೇಧಿತ ವಸ್ತುಗಳು ಇರದಂತೆ ತಪಾಸಣೆ ಮಾಡಿ, ಡಿ.31ರೊಳಗೆ ಎಲ್ಲ ನಿಷೇಧಿತ ವಸ್ತುಗಳನ್ನು ವಶಪಡಿಸಿಕೊಳ್ಳಲು ಕಾರಾಗೃಹ ಸಿಬ್ಬಂದಿಗೆ ಸೂಚಿಸಲಾಗಿದೆ’ ಎಂದರು.

ಬಂದಿಗಳನ್ನು ಎ, ಬಿ, ಸಿ ಮಾದರಿಯಲ್ಲಿ ವರ್ಗೀಕರಿಸಿ, ಸೂಕ್ಷ್ಮವಾಗಿ ಮೇಲ್ವಿಚಾರಣೆ ನಡೆಸಲಾಗುತ್ತದೆ. ನಿಷೇಧಿತ ವಸ್ತುಗಳನ್ನು ಸರಬರಾಜು ಮಾಡುವ ಸಿಬ್ಬಂದಿ ಮೇಲೆ ಕಠಿಣ ಕ್ರಮ ಕೈಗೊಳ್ಳಲಾಗುತ್ತದೆ. ಸಿಬ್ಬಂದಿಯ ಕರ್ತವ್ಯದ ಆಡಿಟ್ ಮಾಡಿ, ಸೂಕ್ತ ಭದ್ರತಾ ವ್ಯವಸ್ಥೆ ಕಲ್ಪಿಸಲು ಸೂಚಿಸಲಾಗಿದೆ ಎಂದು ಮಾಹಿತಿ ನೀಡಿದರು.

### ಅಂಕೋಲಾ ತಾಲ್ಲೂಕಿನ ಆಂದ್ಲೆ ಗ್ರಾಮದ ಜಗದೀಶ್ವರಿ ದೇವಾಲಯಕ್ಕೆ ಭೇಟಿ

## ಸಚಿವ, ಶಾಸಕರ ಹೊರಗಿರಿಸಿ ಡಿಕೆಶಿ ಪೂಜೆ

ಪ್ರಜಾವಾಣಿ ವಾರ್ತೆ

**ಕಾರವಾರ:** ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಶುಕ್ರವಾರ ಅಂಕೋಲಾ ತಾಲ್ಲೂಕಿನ ಆಂದ್ಲೆ ಗ್ರಾಮದ ಜಗದೀಶ್ವರಿ ದೇವಾಲಯದ ಗರ್ಭಗುಡಿ ಪ್ರವೇಶಿಸಿ, ಬಾಗಿಲುಮುಚ್ಚಿ ಏಕಾಂಗಿಯಾಗಿ ಪೂಜೆ ಸಲ್ಲಿಸಿದರು.

ಅವರ ಜೊತೆಗೆ ಬಂದಿದ್ದ ಜಿಲ್ಲಾ ಉಸ್ತುವಾರಿ ಸಚಿವ ಮಂಕಾಳ ವೈದ್ಯ, ಶಾಸಕ ಸತೀಶ ಸೈಲ್ ಅವರು ಹೊರಗಡೆಯೇ ಉಳಿದರು. ಇನ್ನೊಂದು ತಿಂಗಳಲ್ಲಿ ದೇಗುಲಕ್ಕೆ ಮತ್ತೆ ಭೇಟಿ ನೀಡುವುದಾಗಿಯೂ ತಿಳಿಸಿದರು.

‘ಈಗ ದೇವಸ್ಥಾನಕ್ಕೆ ಭೇಟಿ ನೀಡುವ ಭಕ್ತರ ಸಂಖ್ಯೆ ಕಡಿಮೆ. ಆಗಾಗ ಅತಿ ಗಣ್ಯರು ಬರುತ್ತಾರೆ. ಇಷ್ಟಾರ್ಥಗಳ ಬಗ್ಗೆ ಅಮ್ಮನವರ ಮೂರ್ತಿ ಎದುರು ನಿಂತು ಪ್ರಶ್ನೆ ಹಾಕುವುದು ವಾಡಿಕೆ. ಡಿ.ಕೆ. ಶಿವಕುಮಾರ್ ಕೂಡ ಇಷ್ಟಾರ್ಥ ಸಿದ್ಧಿಗೆ ಪ್ರಶ್ನೆ ಹಾಕಲು ಬಂದಿದ್ದಾರೆ' ಎಂದು ಮೂಲಗಳು ತಿಳಿಸಿವೆ.


ಅಂಕೋಲಾ ತಾಲ್ಲೂಕಿನ ಆಂದ್ಲೆ ಗ್ರಾಮದ ಜಗದೀಶ್ವರಿ ಅಮ್ಮನವರ ದೇವಸ್ಥಾನದಲ್ಲಿ ಶುಕ್ರವಾರ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಪೂಜೆಯ ಭಾಗವಾಗಿ ಪ್ರದಕ್ಷಿಣೆ ಸುತ್ತಿದರು.

ಡಿ.ಕೆ.ಶಿವಕುಮಾರ್ ಅವರು ದೇವಸ್ಥಾನಕ್ಕೆ ನಿಗದಿಯಂತೆ ಬೆಳಿಗ್ಗೆ 9 ಗಂಟೆಗೆ ಬರಬೇಕಿತ್ತು. ನಾಲ್ಕು ಗಂಟೆ ತಡವಾಗಿ ಬಂದರು.

**ತಿಂಗಳಲ್ಲಿ ಮತ್ತೆ ಭೇಟಿ –ಡಿಕೆಶಿ:** ಜಗದೀಶ್ವರಿ ದೇವಿ ದರ್ಶನದ ಬಳಿಕ ಡಿ.ಕೆ. ಶಿವಕುಮಾರ್ ಅವರು ಮಾತನಾಡುತ್ತಾ, ‘ಐದು ವರ್ಷದ ಹಿಂದೆ ಇದೇ ಸ್ಥಳಕ್ಕೆ ಕುಟುಂಬದವರು ಬಂದು, ಇಷ್ಟಾರ್ಥ ಸಿದ್ಧಿಗೆ ಪ್ರಾರ್ಥಿಸಿದ್ದರು. ಅದು ಈಡೇರಿದ ಬಳಿಕ ಬಂದು ಪೂಜೆ ಸಲ್ಲಿಸಿದ್ದೆ. ಈಗಲೂ ಇಷ್ಟಾರ್ಥ ಸಿದ್ಧಿಗೆ ಪ್ರಾರ್ಥಿಸಲು ಬಂದಿದ್ದೇನೆ’ ಎಂದರು.

‘ಜಗದೀಶ್ವರಿ ದೇವಿಸನ್ನಿಧಿಗೆ ಯಾರೇ ಬಂದು ಇಷ್ಟಾರ್ಥ ಸಿದ್ಧಿಗೆ ದೇವಿಗೆ ಅಲಂಕಾರ ಮಾಡಿಸಿ, ಪ್ರಶ್ನೆ ಕೇಳಿಸುತ್ತಾರೆ. ಕೋರಿಕೆ ಈಡೇರುವುದಿದ್ದರೆ ದೇವಿ ಐದು ರೂಪದಲ್ಲಿ ಪ್ರಸಾದ ನೀಡುತ್ತಾಳೆ. ಶಿವಕುಮಾರ್ ಅವರು ಹಲವು ಪ್ರಶ್ನೆ ಕೇಳಿದಾಗಲೂ ದೇವಿ ಪ್ರಸಾದ ಕರುಣಿಸಿದ್ದಾಳೆ' ಎಂದು ಅರ್ಚಕ ಗಣೇಶ ನಾಯ್ಕ ತಿಳಿಸಿದರು.

ಏನು ಕೋರಿಕೆ ಮುಂದಿಟ್ಟರು ಎಂಬುದನ್ನು ಅರ್ಚಕರು ತಿಳಿಸಲಿಲ್ಲ. ಆದರೆ, ‘ಪೂಜೆಯನ್ನು ಸಲ್ಲಿಸಿದ ಬಳಿಕ ಖುಷಿಯಲ್ಲಿದ್ದರು. ಇನ್ನೊಂದು ತಿಂಗಳಲ್ಲಿ ಪುನಃ ಪೂಜೆ ಸಲ್ಲಿಸಲು ಬರುವುದಾಗಿ ಹೇಳಿದರು' ಎಂದು ಹೇಳಿದರು.

ಆಂದ್ಲೆ ಗ್ರಾಮ ದೇವಸ್ಥಾನಕ್ಕೆ ಭೇಟಿ ನೀಡುವ ಮುನ್ನ ಡಿ.ಕೆ.ಶಿವಕುಮಾರ್ ಅವರು ಗೋಕರ್ಣದ ಮಹಾಬಲೇಶ್ವರ, ಮಹಾಗಣಪತಿ ದೇವಾಲಯಕ್ಕೂ ಭೇಟಿ ನೀಡಿ ಪೂಜೆ ಸಲ್ಲಿಸಿದರು.

prajavani.net prajavani
ಶನಿವಾರ, ಡಿಸೆಂಬರ್ 20, 2025 | ಬೆಂಗಳೂರು | ₹ 7.00 | ಸಂಪುಟ 78 | ಸಂಚಿಕೆ 350 | ಪುಟ 22
www.prajavani.net

# ಪ್ರಜಾ ವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

**ಹಾರ್ದಿಕ್ ಮಿಂಚು**

ಭಾರತದ ಹಾರ್ದಿಕ್ ಪಾಂಡ್ಯ (63; 25ಎ, 4x5, 6x5) ಅವರು ಅಹಮದಾಬಾದ್‌ನಲ್ಲಿ ನಡೆದ ದಕ್ಷಿಣ ಆಫ್ರಿಕಾ ವಿರುದ್ಧದ ಐದನೇ ಟಿ20 ಪಂದ್ಯದಲ್ಲಿ ಮಿಂಚಿನ ಅರ್ಧಶತಕ ಸಿಡಿಸಿದರು



ಕ್ಷಣ ಕ್ಷಣದ ಅಪ್‌ಡೇಟ್‌ಗಳಿಗಾಗಿ ಸ್ಕ್ಯಾನ್ ಮಾಡಿ

ಸೆನ್ಸೆಕ್ಸ್ 84,929 | ನಿಫ್ಟಿ 25,966 | $/₹ 89.67 | ಚಿನ್ನ (Std. 10g) ₹1,38,200 | ಶುದ್ಧ ಬೆಳ್ಳಿ (kg) ₹2,10,400 (ಬೆಂಗಳೂರು)

# ಕುರ್ಚಿ ಕದನ : ಮತ್ತೊಂದು ಮಜಲಿಗೆ


- ಎರಡೂವರೆ ವರ್ಷ ಒಪ್ಪಂದ ಆಗಿಲ್ಲ–ಸಿದ್ದರಾಮಯ್ಯ
- ನಮ್ಮಿಬ್ಬರ ಮಧ್ಯೆ ಒಪ್ಪಂದವಾಗಿದೆ– ಡಿಕೆಶಿ

ಬೆಳಗಾವಿ ಅಧಿವೇಶನದ ಅವಧಿಯ ಉದ್ದಕ್ಕೂ ಸದ್ದು ಮಾಡಿದ್ದ 'ನಾಯಕತ್ವ ಬದಲಾವಣೆ'ಯ ವಿಷಯ, ಕಲಾಪದ ಕೊನೇ ದಿನ ಮತ್ತೊಂದು ಮಜಲು ತಲುಪಿದೆ. 'ಎರಡೂವರೆ ವರ್ಷದ ಒಪ್ಪಂದ ಆಗಿಲ್ಲ. ಹೈಕಮಾಂಡ್ ನನ್ನ ಪರ' ಎಂದು ಸ್ಪಷ್ಟ ಧ್ವನಿಯಲ್ಲಿ ಹೇಳಿದ ಸಿದ್ದರಾಮಯ್ಯ ಅವರು ತಮ್ಮ ನಾಯಕತ್ವ ಅಬಾಧಿತ ಎಂದು ಶಾಸನ ಸಭೆಯಲ್ಲೇ ಸಾರಿದರು. ಅಂಕೋಲಾದ ಜಗದೀಶ್ವರಿ ಅಮ್ಮನವರಿಗೆ ಪ್ರಾರ್ಥನೆ ಸಲ್ಲಿಸಿದ ಬಳಿಕ ಮಾತನಾಡಿದ ಡಿ.ಕೆ.ಶಿವಕುಮಾರ್, 'ನನ್ನ ಮತ್ತು ಸಿದ್ದರಾಮಯ್ಯ ನಡುವೆ ಒಪ್ಪಂದ ಆಗಿದೆ' ಎಂದು ತಮ್ಮ ವಾದ ಮುಂದಿಟ್ಟರು

## 'ಹೈಕಮಾಂಡ್ ನಾಯಕರು ನನ್ನ ಪರ'

ಸುವರ್ಣ ವಿಧಾನಸೌಧ (ಬೆಳಗಾವಿ): 'ಮುಖ್ಯಮಂತ್ರಿ ಸ್ಥಾನದಲ್ಲಿ ಎರಡೂವರೆ ವರ್ಷಮಾತ್ರ ಇರುತ್ತೇನೆ ಎಂದು ಹೇಳಿಲ್ಲ. ಎರಡೂವರೆ ವರ್ಷದ ಕುರಿತು ಒಪ್ಪಂದ, ತೀರ್ಮಾನವೂ ಆಗಿಲ್ಲ. ನಾನು ಐದು ವರ್ಷಕ್ಕೆ ಆಯ್ಕೆಯಾಗಿದ್ದೇನೆ. ನನ್ನ ಪ್ರಕಾರ ಹೈಕಮಾಂಡ್ ನಾಯಕರು ನನ್ನ ಪರವಾಗಿದ್ದಾರೆ. ಹೈಕಮಾಂಡ್ ತೀರ್ಮಾನಿಸಿದರೆ ಮುಂದೆಯೂ ನಾನೇ ಮುಖ್ಯಮಂತ್ರಿ' ಎಂದು ಸಿದ್ದರಾಮಯ್ಯ ಹೇಳಿದರು.

ಇದೇ ಮೊದಲ ಬಾರಿಗೆ ಸಿದ್ದರಾಮಯ್ಯ ಅವರು ಎರಡೂವರೆ ವರ್ಷದ ಒಪ್ಪಂದವಾಗಿಲ್ಲವೆಂದು ಸ್ಪಷ್ಟ ಧ್ವನಿಯಲ್ಲಿ ಹೇಳಿದರು. ಉತ್ತರ ಕರ್ನಾಟಕ ಅಭಿವೃದ್ಧಿ ಕುರಿತು ವಿಧಾನಸಭೆಯಲ್ಲಿ ನಡೆದ ಚರ್ಚೆಗೆ ಶುಕ್ರವಾರ ಉತ್ತರಿಸುವ ಸಂದರ್ಭದಲ್ಲಿ, ಮುಖ್ಯಮಂತ್ರಿ ಸ್ಥಾನದ ವಿಚಾರವಾಗಿ ವಿರೋಧ ಪಕ್ಷದ ಶಾಸಕರು ಮತ್ತು ಸಿದ್ದರಾಮಯ್ಯ ನಡುವೆ ಬಿಸಿಬಿಸಿ ಚರ್ಚೆ ನಡೆಯಿತು.



'ಮುಖ್ಯಮಂತ್ರಿ ಸ್ಥಾನದ ಚರ್ಚೆ ನಮ್ಮ ಪಕ್ಷದ ವಿಚಾರ. ಅದನ್ನು ಸದನದಲ್ಲಿ ಚರ್ಚೆ ಮಾಡುವ ಇಲ್ಲವೆ ವಿರೋಧ ಪಕ್ಷದವರಿಗೆ ಹೇಳುವ ಅಗತ್ಯವಿಲ್ಲ' ಎಂದೂ ಸಿದ್ದರಾಮಯ್ಯ ಗುಡುಗಿದರು. 'ಮೊದಲು ನಮ್ಮನ್ನು ಜನರು ಆಯ್ಕೆ ಮಾಡುತ್ತಾರೆ. ಆನಂತರ ಶಾಸಕರು ಮುಖ್ಯಮಂತ್ರಿಯನ್ನು ಆಯ್ಕೆ ಮಾಡುತ್ತಾರೆ. ಹೈಕಮಾಂಡ್‌ನವರು ಅದನ್ನು ಒಪ್ಪುತ್ತಾರೆ. ಇನ್ನು, ನಮ್ಮಲ್ಲಿ ಎರಡೂವರೆ ವರ್ಷ ಎಂದು ಎಲ್ಲಿಯೂ ಹೇಳೇ ಇಲ್ಲ. ಆ ರೀತಿಯ ತೀರ್ಮಾನವಾಗಿಲ್ಲ. ನಾನು ಐದು ವರ್ಷಕ್ಕೆ ಆಯ್ಕೆಯಾಗಿದ್ದೇನೆ. ಇವೆಲ್ಲವೂ ನಮ್ಮ ಪಕ್ಷದ ವಿಚಾರ' ಎಂದು ವಿಪಕ್ಷ ನಾಯಕರಿಗೆ ತಿರುಗೇಟು ಕೊಟ್ಟರು.

'ನಾವೆಲ್ಲ ಸರಿಯಿದ್ದೇವೆ. ನಾನು ಎರಡನೇ ಬಾರಿ ಮುಖ್ಯಮಂತ್ರಿ ಆಗಿದ್ದೇನೆ. ಈಗಲೂ ನಾನೇ ಮುಖ್ಯಮಂತ್ರಿ. ಹೈಕಮಾಂಡ್ ನಾಯಕರು ತೀರ್ಮಾನಿಸುವವರೆಗೂ ನಾನೇ ಮುಖ್ಯಮಂತ್ರಿ. ಹೈಕಮಾಂಡ್‌ನವರು ತೀರ್ಮಾನದಂತೆ ನಡೆದುಕೊಳ್ಳುತ್ತೇವೆ' ಎಂದರು. 'ಹೈಕಮಾಂಡ್ ತೀರ್ಮಾನ ಮಾಡಿದರೆ ಮುಂದೆಯೂ ನಾನೇ ಇರುತ್ತೇನೆ' ಎಂದು ಅವರು ಹೇಳಿದರು.

## 'ಇಬ್ಬರೂ ಸೇರಿ ಹೈಕಮಾಂಡ್ ಒಪ್ಪಿಸಿದ್ದೆವು'

ಕಾರವಾರ: 'ನನ್ನ ಮತ್ತು ಸಿದ್ದರಾಮಯ್ಯ ನಡುವೆ ಒಪ್ಪಂದ ಆಗಿದೆ. ಅದರಂತೆ ಇಬ್ಬರೂ ಸೇರಿ ಹೈಕಮಾಂಡ್ ಅನ್ನು ಒಪ್ಪಿಸಿದ್ದೇವೆ' ಎಂದು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿದರು.

ಅಧಿವೇಶನದ ಕೊನೆಯ ದಿನವಾದ ಶುಕ್ರವಾರ ಅಂಕೋಲಾದ ಆಂದ್ಲೆ ಗ್ರಾಮದಲ್ಲಿರುವ ಜಗದೀಶ್ವರಿ ಅಮ್ಮನವರ ದೇವಸ್ಥಾನಕ್ಕೆ ಭೇಟಿ ನೀಡಿ ಅವರು ವಿಶೇಷ ಪೂಜೆ ಸಲ್ಲಿಸಿದರು. ಈ ವೇಳೆ, ತಮ್ಮ ಜತೆಗೆ ಬಂದಿದ್ದ ಸಚಿವರು, ಶಾಸಕರನ್ನು ಹೊರಗೆ ಉಳಿಸಲಾಗಿತ್ತು.

ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಅವರು, 'ಸಿದ್ದರಾಮಯ್ಯ ಮುಖ್ಯಮಂತ್ರಿಯಾಗಿ ಐದು ವರ್ಷದ ಅವಧಿ ಪೂರ್ಣಗೊಳಿಸುವುದಿಲ್ಲ ಎಂದು ನಾನೆಂದೂ ಹೇಳಿಲ್ಲ. ಹೈಕಮಾಂಡ್ ಅವರ ಪರವಾಗಿದ್ದ ಕಾರಣಕ್ಕೆ ಅವರು ಮುಖ್ಯಮಂತ್ರಿ ಆಗಿದ್ದಾರೆ' ಎಂದರು.

'ಹೈಕಮಾಂಡ್ ಸೂಚನೆಯಂತೆ ನಾವಿಬ್ಬರೂ ಮಾತುಕತೆ ನಡೆಸಿ, ಒಟ್ಟಾಗಿ ಸಾಗುತ್ತೇವೆ' ಎಂದು ಪ್ರತಿಪಾದಿಸಿದರು.

'ಐದು ವರ್ಷಗಳ ಹಿಂದೆ ಆಂದ್ಲೆ ಜಗದೀಶ್ವರಿ ಅಮ್ಮನವರ ದೇವಸ್ಥಾನಕ್ಕೆ ಭೇಟಿ ನೀಡಿ, ಇಷ್ಟಾರ್ಥಕ್ಕೆ ಪ್ರಾರ್ಥಿಸಿದ್ದೆ. ಪ್ರಾರ್ಥನೆ ಫಲಿಸಿತ್ತು. ಮತ್ತೆ ಇಲ್ಲಿಗೆ ಬಂದಿದ್ದೇನೆ' ಎಂದರು.



## ಸಂಭ್ರಮದ ಪಯಣ...

ಚಿತ್ರ: ಭರತ್ ಕಂದಕೂರ



ಎಳ್ಳ ಅಮಾವಾಸ್ಯೆ ನಿಮಿತ್ತ ಹೊಲಗಳಿಗೆ ಚರಗ ಚೆಲ್ಲಲು ಸಂಭ್ರಮದಿಂದ ಎತ್ತಿನ ಬಂಡಿಗಳಲ್ಲಿ ಹೊರಟ ಕುಟುಂಬಗಳು ಶುಕ್ರವಾರ ಕೊಪ್ಪಳ ತಾಲ್ಲೂಕಿನ ಮೈನಳ್ಳಿಯ ಹೊರವಲಯದಲ್ಲಿ ಕಂಡಿದ್ದು ಹೀಗೆ

# 'ಉತ್ತರ'ದ ಅಭಿವೃದ್ಧಿಗೆ ಬದ್ಧ

## ಎಷ್ಟೇ ವೆಚ್ಚವಾದರೂ ಶಿಫಾರಸುಗಳ ಅನುಷ್ಠಾನ: ಸಿ.ಎಂ

ಪ್ರಜಾವಾಣಿ ವಾರ್ತೆ

ಸುವರ್ಣ ವಿಧಾನಸೌಧ (ಬೆಳಗಾವಿ): 'ಪ್ರಾದೇಶಿಕ ಅಸಮತೋಲನ ನಿವಾರಣೆಗೆ ಸಂಬಂಧಿಸಿದಂತೆ ಆರ್ಥಿಕ ತಜ್ಞ ಪ್ರೊ.ಎಂ. ಗೋವಿಂದ ರಾವ್ ಸಮಿತಿ ನೀಡಲಿರುವ ವರದಿಯಲ್ಲಿನ ಶಿಫಾರಸುಗಳನ್ನು ಜಾರಿಗೆ ತರುವ ಮೂಲಕ ಉತ್ತರ ಕರ್ನಾಟಕದ ಸಮಗ್ರ ಅಭಿವೃದ್ಧಿಗೆ ನಮ್ಮ ಸರ್ಕಾರ ಶ್ರಮಿಸಲು ಬದ್ಧ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಘೋಷಿಸಿದರು.

ಉತ್ತರ ಕರ್ನಾಟಕದ ಅಭಿವೃದ್ಧಿ ಕುರಿತು ಉಭಯ ಸದನಗಳಲ್ಲಿ ನಡೆದ ಚರ್ಚೆಗೆ, ಶುಕ್ರವಾರ ಎರಡೂ ಕಡೆ ತಲಾ ಮೂರು ಗಂಟೆ ಉತ್ತರ ನೀಡಿದ ಅವರು, 'ಸಮಿತಿಯು ಜನವರಿಯಲ್ಲಿ ವರದಿ ಸಲ್ಲಿಸಲಿದೆ' ಎಂದರು.

ಕಾಂಗ್ರೆಸ್ ಸರ್ಕಾರ ಕೈಗೊಂಡಿರುವ ಯೋಜನೆಗಳು, ಬಿಜೆಪಿ ಸರ್ಕಾರದ ಅವಧಿಯ ವೈಫಲ್ಯ, ಕೇಂದ್ರ ಸರ್ಕಾರದಿಂದ ಆಗುತ್ತಿರುವ ಅನ್ಯಾಯದ ಬಗ್ಗೆಯೂ ಮುಖ್ಯಮಂತ್ರಿ ವಿವರಿಸಿದರು.

'ಉತ್ತರ ಕರ್ನಾಟಕ ಭಾಗದ ಅಭಿವೃದ್ಧಿಗೆ ಕಾಂಗ್ರೆಸ್ ಮತ್ತು ಬಿಜೆಪಿ ಸರ್ಕಾರದ ಅವಧಿಯಲ್ಲಿ ಅನುಷ್ಠಾನಗೊಳಿಸಿರುವ ಯೋಜನೆಗಳು, ಅನುದಾನ ವೆಚ್ಚದ ಕುರಿತಂತೆ ಶ್ವೇತಪತ್ರ ಹೊರಡಿಸಲೂ ಸಿದ್ಧ. ಕೇಂದ್ರ ಸರ್ಕಾರದಿಂದ ರಾಜ್ಯಕ್ಕೆ ಆಗುತ್ತಿರುವ ಅನ್ಯಾಯ ಪ್ರಶ್ನಿಸಲು ದೆಹಲಿಗೆ ಸರ್ವಪಕ್ಷ ನಿಯೋಗ ಕೊಂಡೊಯ್ಯುತ್ತೇವೆ. ಆಗ ವಿರೋಧ ಪಕ್ಷಗಳ ಸದಸ್ಯರೂ ಬನ್ನಿ' ಎಂದು ಆಹ್ವಾನಿಸಿದರು.

ಬಿಜೆಪಿ, ಜೆಡಿಎಸ್ ಸದಸ್ಯರು, 'ಉತ್ತರ ಕರ್ನಾಟಕ ದ್ರೋಹಿ ಸರ್ಕಾರವಿದು' ಎಂದು ಕೂಗುತ್ತಾ ಸಭಾತ್ಯಾಗ ಮಾಡಿದರು. ತಿರುಗೇಟು ನೀಡಿದ ಮುಖ್ಯಮಂತ್ರಿ, '371ಜೆ ವಿಶೇಷ ಸ್ಥಾನಮಾನ ಕೊಟ್ಟಿದ್ದು ಕೇಂದ್ರದಲ್ಲಿದ್ದ ಕಾಂಗ್ರೆಸ್ ಸರ್ಕಾರ. ಅದನ್ನು ತಿರಸ್ಕರಿಸಿದ್ದು ಬಿಜೆಪಿಯ ಉಪ ಪ್ರಧಾನಿ ಎಲ್.ಕೆ. ಅಡ್ವಾಣಿ. ಹೀಗಾಗಿ, ಉತ್ತರ ಕರ್ನಾಟಕದ ಬಗ್ಗೆ ವಿರೋಧ ಪಕ್ಷದವರಿಗೆ ಮಾತನಾಡಲು ಯಾವುದೇ ನೈತಿಕತೆ ಇಲ್ಲ' ಎಂದು ಸಿಡಿಮಿಡಿಗೊಂಡರು.



**ಮುಖ್ಯಮಂತ್ರಿ ಹೇಳಿದ್ದೇನು?:** 'ಎಸ್.ಎಂ. ಕೃಷ್ಣ ಅವರ ಕಾಲದಲ್ಲಿ ನಂಜುಂಡಪ್ಪ ಸಮಿತಿ ರಚನೆಯಾಗಿತ್ತು. ನಂಜುಂಡಪ್ಪ ವರದಿಯ ಬಳಿಕ ನೀಡಿದ ಅನುದಾನಗಳ ಬಳಕೆ, ಅನುಷ್ಠಾನ ಮತ್ತು ಫಲಿತಾಂಶದ ಬಗ್ಗೆ ಅಧ್ಯಯನ ಮಾಡಲು ಗೋವಿಂದ್ ರಾವ್ ಸಮಿತಿ ರಚನೆ ಮಾಡಿದ್ದೇವೆ. ಸಮಿತಿಯ ವರದಿಯ ಪ್ರಕಾರ, ಯಾವ ಜಿಲ್ಲೆ ಹಿಂದುಳಿದಿದೆಯೊ ಆ ಜಿಲ್ಲೆಗಳಿಗೆ ಹೆಚ್ಚು ಒತ್ತು ಕೊಟ್ಟು ಶಕ್ತಿ ತುಂಬುವ ಕೆಲಸ ಮಾಡಲಾಗುವುದು' ಎಂದು ಸಿದ್ದರಾಮಯ್ಯ ಭರವಸೆ ನೀಡಿದರು.

'ಕರ್ನಾಟಕದ ಎಲ್ಲ ಜನರ ತಲಾ ಆದಾಯ ಹೆಚ್ಚಬೇಕೆನ್ನುವುದು ನಮ್ಮ ಉದ್ದೇಶ. ಉತ್ತರ ಕರ್ನಾಟಕದ ಅಭಿವೃದ್ಧಿಗೆ ಇಲ್ಲಿಯವರೆಗೆ ಸರ್ಕಾರ ಕೆಲಸ ಮಾಡಿದೆ. ಮುಂದೆಯೂ ಹೆಚ್ಚು ಒತ್ತು ನೀಡಿ, ಸಾಧ್ಯವಾದ ಮಟ್ಟಿಗೆ ತಲಾದಾಯದ ಅಂತರ ಕಡಿಮೆ ಮಾಡಲಾಗುವುದು' ಎಂದು ಹೇಳಿದರು.

▶12

# ಶಾಸಕ ಬೈರತಿ ಜಾಮೀನು ಅರ್ಜಿ ವಜಾ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಕ್ಲು ಶಿವು ಕೊಲೆ ಪ್ರಕರಣದ ಆರೋಪಿಯಾಗಿರುವ ಬಿಜೆಪಿ ಶಾಸಕ ಬೈರತಿ ಬಸವರಾಜ್ ಅವರ ನಿರೀಕ್ಷಣಾ ಜಾಮೀನಿನ ಮಧ್ಯಂತರ ಅರ್ಜಿಯನ್ನು ಹೈಕೋರ್ಟ್ ತಿರಸ್ಕರಿಸಿದೆ.

ಪ್ರಕರಣಕ್ಕೆ ಸಂಬಂಧಿಸಿ ಆರೋಪಿಗಳ ವಿರುದ್ಧ ಕೋಕಾ (ಕರ್ನಾಟಕ ರಾಜ್ಯ ಸಂಘಟಿತ ಅಪರಾಧಗಳ ನಿಯಂತ್ರಣ ಕಾಯ್ದೆ–2000) ಹೇರಿಕೆಯನ್ನು ಪ್ರಶ್ನಿಸಲಾಗಿದ್ದ ರಿಟ್ ಅರ್ಜಿಯಲ್ಲಿ ಪ್ರಕರಣದ ಐದನೇ ಆರೋಪಿಯಾಗಿರುವ ಬೈರತಿ ಬಸವರಾಜ್ ಮಧ್ಯಂತರ ಕ್ರಿಮಿನಲ್ ಅರ್ಜಿ ಸಲ್ಲಿಸಿ ನಿರೀಕ್ಷಣಾ ಜಾಮೀನು ಕೋರಿದ್ದರು. ವಿಚಾರಣೆ ನಡೆಸಿದ ನ್ಯಾ. ಎಸ್.ಸುನಿಲ್ ದತ್ ಯಾದವ್ ಅವರಿದ್ದ ಏಕಸದಸ್ಯ ಪೀಠ ಶುಕ್ರವಾರ ಮಧ್ಯಂತರ ಜಾಮೀನು ನಿರಾಕರಿಸಿ ಆದೇಶಿಸಿತು. ಆದರೆ, ಕೋಕಾ ಕಾಯ್ದೆ ಹೇರಿಕೆ ನಿರ್ಧಾರವನ್ನು ರದ್ದುಪಡಿಸಿತು. ರಾಜ್ಯ ಹೆಚ್ಚುವರಿ ಪ್ರಾಸಿಕ್ಯೂಟರ್ ಬಿ.ಎನ್. ಜಗದೀಶ್ ವಾದ ಮಂಡಿಸಿದ್ದರು.

# ಅರಣ್ಯ ಗುತ್ತಿಗೆ ಕಾನೂನುಬಾಹಿರ

## ಕೇಂದ್ರದ ಪೂರ್ವಾನುಮತಿ ಇಲ್ಲದೆ ಭೂಬಳಕೆ ಸಲ್ಲ: ಸುಪ್ರೀಂ

ಪ್ರಜಾವಾಣಿ ವಾರ್ತೆ

ನವದೆಹಲಿ: 1980ರ ಅರಣ್ಯ (ಸಂರಕ್ಷಣಾ) ಕಾಯ್ದೆಯ ಸೆಕ್ಷನ್ 2ರ ಅಡಿಯಲ್ಲಿ ಕೇಂದ್ರ ಸರ್ಕಾರದ ಪೂರ್ವಾನುಮತಿ ಇಲ್ಲದೆ ಅರಣ್ಯ ಭೂಮಿಯನ್ನು ಗುತ್ತಿಗೆ ನೀಡಲು ಅಥವಾ ಕೃಷಿ ಉದ್ದೇಶಗಳಿಗಾಗಿ ಬಳಸಲು ಸಾಧ್ಯವಿಲ್ಲ. ಕಾನೂನು ಉಲ್ಲಂಘಿಸಿ ನೀಡಿದ ಅಂತಹ ಯಾವುದೇ ಗುತ್ತಿಗೆ ಕಾನೂನುಬಾಹಿರ ಎಂದು ಸುಪ್ರೀಂ ಕೋರ್ಟ್ ತೀರ್ಪು ನೀಡಿದೆ.

ಕಲಘಟಗಿ ತಾಲ್ಲೂಕಿನ ಗಾಂಧಿ ಜೀವನ್ ಸಾಮೂಹಿಕ ಕೃಷಿ ಸಹಕಾರ ಸಂಘಕ್ಕೆ 134 ಎಕರೆ ಅರಣ್ಯ ಭೂಮಿಯ ಗುತ್ತಿಗೆ ಮುಂದುವರಿಸಲು ಅವಕಾಶ ನೀಡಿದ್ದ ಕರ್ನಾಟಕ ಹೈಕೋರ್ಟ್‌ನ ಆದೇಶವನ್ನು ನ್ಯಾಯಮೂರ್ತಿಗಳಾದ ವಿಕ್ರಮ್‌ನಾಥ್ ಮತ್ತು ಸಂದೀಪ್ ಮೆಹ್ತಾ ಅವರ ಪೀಠವು ರದ್ದುಪಡಿಸಿದೆ.

ಅರಣ್ಯ ಭೂಮಿಯನ್ನು ಕೃಷಿ ಉದ್ದೇಶಗಳಿಗಾಗಿ ಗುತ್ತಿಗೆ ನೀಡುವುದೇ ಕಾನೂನುಬಾಹಿರ ಮತ್ತು 1980ರ ಕಾಯ್ದೆಗೆ ವಿರುದ್ಧವಾಗಿದೆ ಎಂದು ಅಭಿಪ್ರಾಯಪಟ್ಟಿರುವ ನ್ಯಾಯಪೀಠವು, 'ತಜ್ಞರೊಂದಿಗೆ ಸಮಾಲೋಚಿಸಿ ಸ್ಥಳೀಯ ಸಸ್ಯಗಳು ಮತ್ತು ಮರಗಳನ್ನು ನೆಡುವ ಮೂಲಕ 134 ಎಕರೆ ಪ್ರದೇಶದಲ್ಲಿ ಅರಣ್ಯವನ್ನು ಪುನರ್‌ಸ್ಥಾಪಿಸಲು ಅರಣ್ಯ ಇಲಾಖೆ ಕ್ರಮ ಕೈಗೊಳ್ಳಬೇಕು. ಈ ಸಂಬಂಧ 12 ತಿಂಗಳಲ್ಲಿ ಅನುಸರಣಾ ವರದಿ ಸಲ್ಲಿಸಬೇಕು' ಎಂದು ನಿರ್ದೇಶನ ನೀಡಿದೆ.

'ಪ್ರತಿವಾದಿ ಸಹಕಾರ ಸಂಘಕ್ಕೆ ಕೃಷಿ ಉದ್ದೇಶಗಳಿಗಾಗಿ ಅರಣ್ಯಭೂಮಿ ಗುತ್ತಿಗೆ ನೀಡಿದ್ದು ಸರಿಯಲ್ಲ. ಇದರಿಂದಾಗಿ, ಸುಮಾರು 134 ಎಕರೆಗಳಷ್ಟು ವಿಸ್ತಾರವಾದ ಅರಣ್ಯ ಪ್ರದೇಶ ನಾಶವಾಯಿತು. ಅಲ್ಲದೇ, ಸಹಕಾರ ಸಂಘವು 10 ವರ್ಷಗಳಿಗೂ ಹೆಚ್ಚು ಕಾಲ ಅರಣ್ಯ ಪ್ರದೇಶದ ಗುತ್ತಿಗೆ ಪಡೆದಿತ್ತು. ಗುತ್ತಿಗೆಯ ವಿಸ್ತರಣೆಗೆ ಸಂಘ ಅರ್ಹತೆಯನ್ನೇ ಹೊಂದಿರಲಿಲ್ಲ' ಎಂದು ಪೀಠ ಹೇಳಿದೆ.

▶9

### ಪ್ರಕರಣವೇನು?

ಕಲಘಟಗಿ ತಾಲ್ಲೂಕಿನ ಬೆಣಚಿ ಮತ್ತು ತುಮರಿಕೊಪ್ಪ ಗ್ರಾಮಗಳಲ್ಲಿರುವ 134 ಎಕರೆ ಮತ್ತು 6 ಗುಂಟೆಯನ್ನು ಸಹಕಾರ ಸಂಘಕ್ಕೆ ಹತ್ತು ವರ್ಷಗಳ ಅವಧಿಗೆ ಅರಣ್ಯ ಇಲಾಖೆ 1976ರಲ್ಲಿ ಗುತ್ತಿಗೆ ನೀಡಲಾಗಿತ್ತು. ಗುತ್ತಿಗೆ ಅವಧಿಯಲ್ಲಿ, ಸಂಘದ ಸದಸ್ಯರು ಮರಗಳನ್ನು ಕಡಿದು ಭೂಮಿಯಲ್ಲಿ ಸಾಗುವಳಿ ಮಾಡಿದ್ದರು. ಗುತ್ತಿಗೆ ಅವಧಿಯನ್ನು ವಿಸ್ತರಿಸಲು ಅರಣ್ಯ ಇಲಾಖೆ 1985ರಲ್ಲಿ ನಿರಾಕರಿಸಿತ್ತು.

ಈ ಆದೇಶ ಪ್ರಶ್ನಿಸಿ ಸಂಘವು 1987ರಲ್ಲಿ ಹೈಕೋರ್ಟ್ ಮೊರೆ ಹೋಗಿತ್ತು. ಈ ಅರ್ಜಿಯನ್ನು ಹೈಕೋರ್ಟ್ ವಜಾಗೊಳಿಸಿತ್ತು. ಆ ಬಳಿಕ, ಈ ಜಾಗವನ್ನು ಸ್ವಾಧೀನಕ್ಕೆ ಪಡೆಯಲು ಅರಣ್ಯ ಇಲಾಖೆ ಪ್ರಕ್ರಿಯೆ ಆರಂಭಿಸಿತ್ತು. ಜಾಗ ಸ್ವಾಧೀನಕ್ಕೆ ಅರಣ್ಯ ಸಂರಕ್ಷಣಾಧಿಕಾರಿ 2004ರಲ್ಲಿ ಆದೇಶ ಹೊರಡಿಸಿದ್ದರು. ಸಂಘ ಸಲ್ಲಿಸಿದ್ದ ಮೇಲ್ಮನವಿಯನ್ನು ಅರಣ್ಯ ಸಂರಕ್ಷಣಾಧಿಕಾರಿ 2006ರಲ್ಲಿ ತಿರಸ್ಕರಿಸಿದ್ದರು. ಅರಣ್ಯ ಇಲಾಖೆಯು ಜಾಗವನ್ನು 2007ರಲ್ಲಿ ಸ್ವಾಧೀನಪಡಿಸಿಕೊಂಡಿತ್ತು.

# 'ಜಿ ರಾಮ್ ಜಿ: ಗ್ರಾಮ ವಿರೋಧಿ'

ನವದೆಹಲಿ (ಪಿಟಿಐ): ಗ್ರಾಮೀಣರ ಆರ್ಥಿಕ ಸಬಲೀಕರಣಕ್ಕೆ 20 ವರ್ಷಗಳಿಂದ ಕಾರ್ಯನಿರ್ವಹಿಸುತ್ತಿರುವ 'ನರೇಗಾ'ವನ್ನು ಪ್ರಧಾನಿ ಮೋದಿ ನೇತೃತ್ವದ ಸರ್ಕಾರ ಒಂದೇ ದಿನದಲ್ಲಿ ನಾಶಮಾಡಿದೆ ಎಂದು ಆರೋಪಿಸಿರುವ ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ, 'ನರೇಗಾ'ಕ್ಕೆ ಪರ್ಯಾಯವಾಗಿ ರೂಪಿಸಿರುವ 'ವಿಬಿ–ಜಿ ರಾಮ್ ಜಿ' ಮಸೂದೆ 'ಗ್ರಾಮ ವಿರೋಧಿ' ಎಂದು ಆರೋಪಿಸಿದ್ದಾರೆ.

ಸುದ್ದಿ ▶9

**ಚಿನಕುರುಳಿ** ಪ್ರಕಾಶ್ ಶೆಟ್ಟಿ




# ಬಾಂಗ್ಲಾ: ಮತ್ತೊಮ್ಮೆ ಉದ್ವಿಗ್ನ

ಪ್ರಜಾವಾಣಿ ವಾರ್ತೆ/ಪಿಟಿಐ/ಎಎಫ್‌ಪಿ

ಢಾಕಾ/ನವದೆಹಲಿ: ಮೀಸಲಾತಿ ವಿರೋಧಿ ಹೋರಾಟದ ಮುಂಚೂಣಿಯಲ್ಲಿದ್ದ 32 ವರ್ಷದ ಯುವ ನಾಯಕ ಶರೀಫ್ ಉಸ್ಮಾನ್ ಹಾದಿ ಅವರ ಸಾವಿನ ಬಳಿಕ ಬಾಂಗ್ಲಾದೇಶ ಮತ್ತೊಮ್ಮೆ ಹೊತ್ತಿ ಉರಿಯುತ್ತಿದೆ. ಶುಕ್ರವಾರ ಬೆಳಿಗ್ಗೆ ದೇಶವನ್ನು ಉದ್ದೇಶಿಸಿ ಮಾತನಾಡಿದ ಮಧ್ಯಂತರ ಸರ್ಕಾರದ ಮುಖ್ಯ ಸಲಹೆಗಾರ ಮೊಹಮ್ಮದ್ ಯೂನುಸ್ ಅವರು ಹಾದಿ ಅವರ ಸಾವಿನ ವಿಚಾರವನ್ನು ತಿಳಿಸಿದರು.

'ಹಾದಿ ಅವರಿಗೆ ಗುಂಡಿಕ್ಕಿದ್ದ ಆರೋಪಿಗಳು ಭಾರತಕ್ಕೆ ಓಡಿ ಹೋಗಿದ್ದಾರೆ' ಎಂಬುದು ಪ್ರತಿಭಟನಕಾರರ ಆರೋಪ. ದೀಪು ಚಂದ್ರದಾಸ್ ಎಂಬ ಹಿಂದೂ ವ್ಯಕ್ತಿಯನ್ನು ಗುಂಪೊಂದು ಬೆಂಕಿ ಹಚ್ಚಿ ಹತ್ಯೆ ಮಾಡಿದೆ. ದೀಪು ಅವರ ಹತ್ಯೆ ಕುರಿತು ಭಾರತೀಯರು ಸಾಮಾಜಿಕ ಜಾಲತಾಣಗಳಲ್ಲಿ ಭಾರಿ ಆಕ್ರೋಶ ಹೊರಹಾಕಿದ್ದಾರೆ.

> **ದೇಶದ ಪ್ರಜಾಸತ್ತಾತ್ಮಕ ಪ್ರಗತಿಯನ್ನು ಬೆದರಿಕೆ, ಉಗ್ರ ಚಟುವಟಿಕೆಗಳಿಂದ ನಿಲ್ಲಿಸಲು ಯಾರಿಂದಲೂ ಸಾಧ್ಯವಿಲ್ಲ. ನಾವು ತಾಳ್ಮೆಯಿಂದ ಇರೋಣ. ಶಾಂತಿ ಕಾಪಾಡೋಣ**
> **ಮೊಹಮ್ಮದ್ ಯೂನುಸ್,** ಮಧ್ಯಂತರ ಸರ್ಕಾರದ ಮುಖ್ಯ ಸಲಹೆಗಾರ

**ಗುಂಡಿಕ್ಕಿದ ಘಟನೆ ಏನು?:** 2026ರ ಫೆಬ್ರುವರಿ 12ರಂದು ಬಾಂಗ್ಲಾದಲ್ಲಿ ಸಾರ್ವತ್ರಿಕ ಚುನಾವಣೆ ಘೋಷಣೆಯಾಗಿದೆ. ಹಾದಿ ಅವರು ಚುನಾವಣೆಯಲ್ಲಿ ಸ್ಪರ್ಧಿಸುವ ಘೋಷಣೆ ಮಾಡಿದ್ದರು ಮತ್ತು ಪ್ರಚಾರ ಆರಂಭಿಸಿದ್ದರು. ಡಿ.12ರಂದು ಅವರು ಪ್ರಚಾರದಲ್ಲಿ ಇದ್ದರು. ಆಗ ಬೈಕ್‌ನಲ್ಲಿ ಬಂದ ಮುಸುಕುಧಾರಿ ವ್ಯಕ್ತಿಯೊಬ್ಬ ಅವರ ಮೇಲೆ ಗುಂಡು ಹಾರಿಸಿದ್ದಾನೆ. ತೀವ್ರ ಗಾಯಗೊಂಡಿದ್ದ ಹಾದಿ ಅವರನ್ನು ಹೆಚ್ಚಿನ ಚಿಕಿತ್ಸೆಗೆ ಸಿಂಗಪುರಕ್ಕೆ ಕಳುಹಿಸಿಕೊಡಲಾಗಿತ್ತು.

▶12

### ಭಯೋತ್ಪಾದಕರ ನಂಟಿನ ಬೆದರಿಕೆ: ಹೊಸ ವಿಧಾನದ ಮೂಲಕ ಹಣ ಸುಲಿಗೆ

# 'ಸ್ಫೋಟ'ದ ಹೆಸರಲ್ಲಿ ಸೈಬರ್ ವಂಚನೆ

- ಆದಿತ್ಯ ಕೆ.ಎ.

ಬೆಂಗಳೂರು: ಸೈಬರ್ ಅಪರಾಧ ಪ್ರಕರಣಗಳು ದಿನಕ್ಕೊಂದು ಸ್ವರೂಪ ಪಡೆದುಕೊಳ್ಳುತ್ತಿದ್ದು, 'ಭಯೋತ್ಪಾದಕರು ನಡೆಸುವ ಸ್ಫೋಟ ಹಾಗೂ ಸಂಚು ಪ್ರಕರಣಗಳಲ್ಲಿ ತಾವು ಭಾಗಿ ಆಗಿದ್ದೀರಿ' ಎಂದು ಸಾರ್ವಜನಿಕರನ್ನು ಬೆದರಿಸುವ 'ಹೊಸ ತಂತ್ರ'ವನ್ನು ಸೈಬರ್ ವಂಚಕರು ಬಳಸುತ್ತಿದ್ದಾರೆ. ಆ ಮೂಲಕ ನಾಗರಿಕರಿಂದ ಲಕ್ಷಾಂತರ ರೂಪಾಯಿ ದೋಚುತ್ತಿದ್ದಾರೆ.

'ಡಿಜಿಟಲ್ ಅರೆಸ್ಟ್', ಒಟಿಪಿ ದುರುಪಯೋಗ, ತಮ್ಮ ಹೆಸರಿನಲ್ಲಿ ಬಂದಿರುವ ಕೊರಿಯರ್‌ನಲ್ಲಿ ಡ್ರಗ್ಸ್ ಇದೆ, ಹೂಡಿಕೆಯಿಂದ ಹೆಚ್ಚಿನ ಲಾಭಾಂಶ ಬರಲಿದೆ ಎಂಬುದಾಗಿ ಇದುವರೆಗೂ ಹೇಳಿ ಹಣ ವರ್ಗಾವಣೆ ಮಾಡಿಸಿಕೊಂಡು ವಂಚಿಸುತ್ತಿದ್ದ ಸೈಬರ್ ಕಳ್ಳರು, 'ಈಗ ಭಯೋತ್ಪಾದಕರ ನಂಟು ಹೊಂದಿದ್ದೀರಿ' ಎಂದು ಬೆದರಿಸಲು ಆರಂಭಿಸಿದ್ದಾರೆ.

'ವಿಧಾನಗಳನ್ನು ಪದೇ ಪದೇ ಬದಲಾವಣೆ ಮಾಡಿಕೊಂಡು ಸಾರ್ವಜನಿಕರಲ್ಲಿ ನಂಬಿಕೆ ಬರುವಂತೆ ಸೈಬರ್ ವಂಚಕರು ಮಾಡುತ್ತಿದ್ದಾರೆ. ಇದು ಕಾರ್ಯಾಚರಣೆಗೂ ಸವಾಲು, ಅಡ್ಡಿ ಆಗುತ್ತಿದೆ' ಎಂದು ಸೈಬರ್ ಅಪರಾಧ ಠಾಣೆಯ ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು. ಕಳೆದೆರಡು ತಿಂಗಳಲ್ಲಿ ಈ ರೀತಿಯ ದೂರುಗಳು ಸೈಬರ್ ಅಪರಾಧ ಪೊಲೀಸ್ ಠಾಣೆಗೆ ಬರುತ್ತಿವೆ.

ವೀರಾಂಜನೇಯ ಲೇಔಟ್‌ನ ಯುವಕನಿಗೆ ಕರೆ ಮಾಡಿದ್ದ ವಂಚಕರು, ದೆಹಲಿಯ ಕೆಂಪುಕೋಟೆಯ ಬಳಿ ನ.11ರ ಸಂಜೆ ಸಂಭವಿಸಿದ್ದ ಸ್ಫೋಟ ಪ್ರಕರಣದಲ್ಲಿ 'ನಿಮ್ಮ ಮೊಬೈಲ್ ನಂಬರ್ ಬಳಕೆ ಆಗಿರುವುದು ಕಂಡುಬಂದಿದೆ' ಎಂದು ಬೆದರಿಸಿ ₹5.53 ಲಕ್ಷ ವರ್ಗಾವಣೆ ಮಾಡಿಸಿಕೊಂಡು ವಂಚಿಸಿದ್ದಾರೆ ಎಂದು ಮೂಲಗಳು ಹೇಳಿವೆ.

▶12

### ವಿಡಿಯೊ ಕರೆಯಲ್ಲೇ ಹೇಳಿಕೆ

'ಡಿ.1ರಂದೇ ಗೌತಮ್ ಎಂಬಾತ ವಿಡಿಯೊ ಕರೆಯ ಮೂಲಕ ದೂರುದಾರರಿಂದ ಹೇಳಿಕೆ ಪಡೆದುಕೊಳ್ಳುವ ನಾಟಕವಾಡಿದ್ದ. ಬೇರೆ ಕಡೆಗೆ ಎದ್ದು ಹೋಗುವಂತಿಲ್ಲ. ಬೇರೆಯವರಿಗೆ ಮಾಹಿತಿ ನೀಡುವಂತಿಲ್ಲ ಎಂದು ಸೂಚಿಸಿದ್ದ. ಅದಾದ ಮೇಲೆ ಪ್ರಕರಣದಿಂದ ತಮ್ಮನ್ನು ಕಾಪಾಡುತ್ತೇವೆ. ಅದಕ್ಕೆ ಸರ್ಕಾರಿ ಶುಲ್ಕವಿದ್ದು, ಪಾವತಿಸಿದರೆ ಬಿಡುತ್ತೇವೆ. ತನಿಖೆ ಪೂರ್ಣಗೊಂಡ ಬಳಿಕ ಹಣ ವಾಪಸ್ ವರ್ಗಾವಣೆ ಮಾಡುತ್ತೇವೆ ಎಂದು ತಿಳಿಸಿದ್ದ. ಆತನ ಮಾತು ನಂಬಿದ್ದ ಯುವಕ, ಡಿ.1ರಿಂದ 6ರ ವರೆಗೆ ಫೋನ್ ಪೇ ಹಾಗೂ ಬ್ಯಾಂಕ್ ಖಾತೆಯಿಂದ ಹಣ ವರ್ಗಾವಣೆ ಮಾಡಿದ್ದರು. ಘಟನೆ ನಡೆದು ಮೂರು ದಿನಗಳ ಬಳಿಕ ಸೈಬರ್ ವಂಚನೆ ಎಂಬುದು ಅರಿವಿಗೆ ಬಂದು ದೂರು ನೀಡಿದ್ದಾರೆ' ಎಂದು ಮೂಲಗಳು ಹೇಳಿವೆ.

### 'ಸಿಮ್: ನೀವೇ ಬಳಸುವುದು ಸುರಕ್ಷಿತ'

'ಸಿಮ್ ಕಾರ್ಡ್ ದುರ್ಬಳಕೆಯಾಗಿ ಸೈಬರ್ ವಂಚನೆ ಅಥವಾ ಕಾನೂನು ಬಾಹಿರ ಚಟುವಟಿಕೆಗಳಲ್ಲಿ ಭಾಗಿಯಾದರೆ ಅಂತಹ ಸಿಮ್ ಕಾರ್ಡ್‌ನ ಮೂಲ ಬಳಕೆದಾರನೇ ಅಪರಾಧಿ ಆಗುತ್ತಾನೆ. ತಮಗೆ ಎಷ್ಟೇ ಆಪ್ತರಿದ್ದರೂ ಸಿಮ್ ಕಾರ್ಡ್ ಬೇರೆಯವರಿಗೆ ಕೊಡಬಾರದು. ಸಿಮ್ ಕಳೆದು ಹೋದರೆ ಬ್ಲಾಕ್ ಮಾಡಿಸಬೇಕು' ಎಂದು ಅಧಿಕಾರಿಯೊಬ್ಬರು ಹೇಳಿದರು.

**ಹವಾಮಾನ ಮುನ್ಸೂಚನೆ:** ನಗರದಲ್ಲಿ ಮೋಡ ಕವಿದ ವಾತಾವರಣ ಇರಲಿದೆ

# 2ನೇ ವಿಮಾನ ನಿಲ್ದಾಣ: ದೂರದೃಷ್ಟಿಯಿಂದ ಟೆಂಡರ್

ಪ್ರಜಾವಾಣಿ ವಾರ್ತೆ

**ಬೆಂಗಳೂರು:** 'ರಾಜ್ಯ ರಾಜಧಾನಿಯ ಸಮೀಪ ಎರಡನೇ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ನಿರ್ಮಿಸಲು 'ಬೆಂಗಳೂರು ಇಂಟರ್ ನ್ಯಾಷನಲ್ ಏರ್‌ಪೋರ್ಟ್ ಲಿಮಿಟೆಡ್'ನ (ಬಿಐಎಎಲ್) ಅನುಮತಿ ಬೇಕು ಎಂಬ ಅರಿವಿದೆ. ಅದಕ್ಕೆ 2033ರವರೆಗೂ ಕಾಲಾವಕಾಶವಿದೆ. ಹೀಗಾಗಿ ದೂರದೃಷ್ಟಿ ಇಟ್ಟುಕೊಂಡು ಈಗಿನಿಂದಲೇ ಉಳಿದ ಕೆಲಸಗಳನ್ನು ಆರಂಭಿಸಿದ್ದೇವೆ' ಎಂದು ಮೂಲಸೌಕರ್ಯ ಅಭಿವೃದ್ಧಿ ಸಚಿವ ಎಂ.ಬಿ. ಪಾಟೀಲ ತಿಳಿಸಿದರು.

ಎರಡನೇ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣ ಕುರಿತು ಸಂಸತ್ ಅಧಿವೇಶನದಲ್ಲಿ ಪ್ರಸ್ತಾಪವಾಗಿರುವ ಹಿನ್ನೆಲೆಯಲ್ಲಿ ಅವರು ಶುಕ್ರವಾರ ಪ್ರತಿಕ್ರಿಯಿಸಿದರು.

ದೇವನಹಳ್ಳಿಯ ಸಮೀಪ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣವಿದೆ. ಇದು ಆರಂಭವಾದಾಗಲೇ 2033ರವರೆಗೂ 150 ಕಿ.ಮೀ. ಸುತ್ತಮುತ್ತಲಿನ ಪ್ರದೇಶದಲ್ಲಿ ಮತ್ತೊಂದು ವಿಮಾನ ನಿಲ್ದಾಣ ನಿರ್ಮಿಸಬಾರದೆಂಬ ಷರತ್ತು ವಿಧಿಸಲಾಗಿತ್ತು. ನವದೆಹಲಿ ಮತ್ತು ನವೀ ಮುಂಬೈಗಳಲ್ಲಿ ಇಂತಹ ಷರತ್ತುಗಳನ್ನು ಸಡಿಲಿಸಿ, ಎರಡನೇ ವಿಮಾನ ನಿಲ್ದಾಣಗಳ ನಿರ್ಮಾಣಕ್ಕೆ ಅವಕಾಶ ಮಾಡಿಕೊಡಲಾಗಿದೆ ಎಂದು ಹೇಳಿದರು.

ವಿಮಾನ ನಿಲ್ದಾಣ ನಿರ್ಮಾಣವಾಗಬೇಕಿದ್ದರೆ ಸ್ಥಳದ ಆಯ್ಕೆ, ಅದರ ಪರಿಶೀಲನೆ, ಭೂಸ್ವಾಧೀನ, ಪರಿಹಾರ ವಿತರಣೆ ಮುಂತಾದ ಅಂಶಗಳು ಮುಖ್ಯವಾಗುತ್ತವೆ. ಈ ಪ್ರಕ್ರಿಯೆ ಮುಗಿಯಲು ಐದಾರು ವರ್ಷಗಳು ಬೇಕಾಗುತ್ತವೆ. ಈಗ ಕರ್ನಾಟಕ ಕೈಗಾರಿಕಾ ಮತ್ತು ಮೂಲಸೌಕರ್ಯ ಅಭಿವೃದ್ಧಿ ನಿಗಮದ (ಕೆಎಸ್‌ಐಐಡಿಸಿ) ಮೂಲಕ ಸ್ಥಳದ ಅನುಕೂಲ, ತಾಂತ್ರಿಕ ಮತ್ತು ಆರ್ಥಿಕ ಕಾರ್ಯಸಾಧ್ಯತಾ ವರದಿಯ ಉದ್ದೇಶಕ್ಕಾಗಿ ಟೆಂಡರ್ ಕರೆಯಲಾಗಿದೆ ಎಂದು ವಿವರಿಸಿದರು.


ಎಂ.ಬಿ. ಪಾಟೀಲ

ಕಾರ್ಯಸಾಧ್ಯತಾ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಲು 5 ತಿಂಗಳ ಕಾಲಾವಕಾಶ ನೀಡಲಾಗುವುದು. ಪ್ರಯಾಣಿಕರ ದಟ್ಟಣೆ, ಕೈಗಾರಿಕೆ ಮತ್ತು ಪ್ರವಾಸೋದ್ಯಮ ಬೆಳವಣಿಗೆಗೆ ಇರುವ ಅವಕಾಶ, ಮೂಲಸೌಕರ್ಯ, ಭೌಗೋಳಿಕ ಲಕ್ಷಣಗಳು, ಮಳೆಯ ಪ್ರಮಾಣ, ಒಳಚರಂಡಿ, ಶಬ್ದ ಮಾಲಿನ್ಯ, ತ್ಯಾಜ್ಯ ನಿರ್ವಹಣೆ ಮುಂತಾದ ಅಂಶಗಳನ್ನು ಪರಿಗಣಿಸಬೇಕಾಗುತ್ತದೆ ಎಂದು ಸ್ಪಷ್ಟಪಡಿಸಿದರು.

'ಕನಕಪುರ ರಸ್ತೆಯಲ್ಲಿರುವ ಚೂಡಹಳ್ಳಿ ಮತ್ತು ಸೋಮನಹಳ್ಳಿ ಹಾಗೂ ನೆಲಮಂಗಲ-ಕುಣಿಗಲ್ ರಸ್ತೆಯಲ್ಲಿ ಇರುವ ಮತ್ತೊಂದು ಸ್ಥಳವನ್ನು ಭಾರತೀಯ ವಿಮಾನ ನಿಲ್ದಾಣ ಪ್ರಾಧಿಕಾರದ (ಎಎಐ) ಉನ್ನತ ತಂಡ ಪರಿಶೀಲಿಸಿ, ತನ್ನ ವರದಿಯನ್ನು ನಮಗೆ ನೀಡಿದೆ. ಇದಾದ ನಂತರವೇ ಈಗ ಟೆಂಡರ್ ಆಹ್ವಾನಿಸಲಾಗಿದೆ' ಎಂದು ಸಚಿವ ಎಂ.ಬಿ.ಪಾಟೀಲ ತಿಳಿಸಿದ್ದಾರೆ.

# ಜಿಬಿಎ: 12 ಮಾರ್ಗಸೂಚಿ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಐದು ನಗರ ಪಾಲಿಕೆಗಳ ವಾರ್ಡ್‌ಗಳಿಗೆ ಮೀಸಲಾತಿ ನಿಗದಿಪಡಿಸಲು 12 ಮಾರ್ಗಸೂಚಿಗಳನ್ನು ನಿಗದಿಪಡಿಸಿ ನಗರಾಭಿವೃದ್ಧಿ ಇಲಾಖೆ ಆದೇಶ ಹೊರಡಿಸಿದೆ.

ಗ್ರೇಟರ್ ಬೆಂಗಳೂರು ಆಡಳಿತ ಕಾಯ್ದೆ- 2024ರಂತೆ ರಚನೆಯಾಗಿರುವ ಐದು ನಗರ ಪಾಲಿಕೆಗಳ ವಾರ್ಡ್ ಮೀಸಲಾತಿ ನಿಗದಿಪಡಿಸಲು ನಗರಾಭಿವೃದ್ಧಿ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಅಧ್ಯಕ್ಷತೆಯಲ್ಲಿ 2025ರ ಸೆಪ್ಟೆಂಬರ್ 29ರಂದು ಸಮಿತಿ ರಚಿಸಲಾಗಿತ್ತು.

**ವಾರ್ಡ್ ಮೀಸಲಾತಿ**

ಜಿಬಿಎ ಮುಖ್ಯ ಆಯುಕ್ತ, ಸಮಾಜ ಕಲ್ಯಾಣ ಇಲಾಖೆ ಪ್ರಧಾನ ಕಾರ್ಯದರ್ಶಿ, ಕಾನೂನು ಇಲಾಖೆ ಪ್ರಧಾನ ಕಾರ್ಯದರ್ಶಿ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಕಾರ್ಯದರ್ಶಿ, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಕಾರ್ಯದರ್ಶಿ ಅವರು ಸಮಿತಿಯ ಸದಸ್ಯರಾಗಿದ್ದರು. ಈ ಸಮಿತಿ ಡಿ.12ರಂದು ಸಭೆ ನಡೆಸಿದ್ದು, ವಾರ್ಡ್ ಮೀಸಲಾತಿ ನಿಗದಿಗೆ ಮಾರ್ಗಸೂಚಿಗಳನ್ನು ಹೊರಡಿಸಬೇಕು ಎಂದು ಅಭಿಪ್ರಾಯಪಟ್ಟಿತು. ಅದರಂತೆ, ಡಿ.19ರಂದು ಮಾರ್ಗಸೂಚಿಗಳನ್ನು ಹೊರಡಿಸಲಾಗಿದೆ.

## ಮಾರ್ಗಸೂಚಿಗಳು

- ಕೇಂದ್ರ ಸರ್ಕಾರದ ಜನಗಣತಿ ನಿರ್ದೇಶನಾಲಯವು ಅಧಿಕೃತವಾಗಿ ಪ್ರಕಟಿಸಿರುವ 2011ರ ಜನಗಣತಿಯ ಮಾಹಿತಿಯನ್ನು ಪರಿಗಣಿಸಬೇಕು
- ಪರಿಶಿಷ್ಟ ಜಾತಿ/ ಪಂಗಡದವರಿಗೆ ಮೀಸಲಿರಿಸುವ ಸ್ಥಾನಗಳ ಸಂಖ್ಯೆಯನ್ನು ಆಯಾ ನಗರ ಪಾಲಿಕೆಯ ಒಟ್ಟು ಜನಸಂಖ್ಯೆಗೆ ಅನುಸಾರವಾಗಿ ಹಾಗೂ ಒಟ್ಟು ವಾರ್ಡ್‌ಗಳ ಸಂಖ್ಯೆಗೆ ಅನುಗುಣವಾಗಿ ನಿಗದಿಪಡಿಸಬೇಕು
- ಒಟ್ಟು ವಾರ್ಡ್‌ಗಳ ಸಂಖ್ಯೆಯಲ್ಲಿ ಮೂರನೇ ಒಂದರಷ್ಟು ವಾರ್ಡ್‌ಗಳ ಮೀಸಲಾತಿಯನ್ನು ಹಿಂದುಳಿತ ವರ್ಗಗಳಿಗೆ ನಿಗದಿಪಡಿಸಬೇಕು. ಎಸ್‌ಸಿ, ಎಸ್‌ಟಿ ಮತ್ತು ಹಿಂದುಳಿದ ವರ್ಗಗಳ ಒಟ್ಟು ಮೀಸಲಾತಿ ಪ್ರಮಾಣ ಶೇ 50ರಷ್ಟನ್ನು ಮೀರುವಂತಿಲ್ಲ.
- ಎಸ್‌ಸಿ, ಎಸ್‌ಟಿ ಮೀಸಲು ಸ್ಥಾನ ನಿಗದಿಪಡಿಸುವಾಗ ವಾರ್ಡ್‌ಗಳಲ್ಲಿ ಆಯಾ ಪ್ರವರ್ಗದಲ್ಲಿ ಇಳಿಮುಖವಾಗುವ ಜನಸಂಖ್ಯೆಯನ್ನು ಪರಿಗಣಿಸಬೇಕು
- ಪರಿಶಿಷ್ಟ ಜಾತಿ ಪಟ್ಟಿಯಲ್ಲಿ ಅತಿಹೆಚ್ಚು ಜನಸಂಖ್ಯೆ ಹೊಂದಿರುವ ವಾರ್ಡ್ ಅನ್ನು ನಿಗದಿಪಡಿಸಿ ಬಳಿಕ, ಪರಿಶಿಷ್ಟ ಪಂಗಡದ ಪಟ್ಟಿಯಲ್ಲಿ ಅತಿಹೆಚ್ಚು ಜನಸಂಖ್ಯೆ ಹೊಂದಿರುವ ವಾರ್ಡ್ ಅನ್ನು ನಿಗದಿಪಡಿಸಬೇಕು.
- ಎಸ್‌ಸಿ, ಎಸ್‌ಟಿಗೆ ಮೀಸಲಾದ ಸ್ಥಾನಗಳಲ್ಲಿ ಶೇ 50ರಷ್ಟು ಸ್ಥಾನಗಳು ಮಹಿಳೆಯರಿಗೆ ಮೀಸಲಿರಬೇಕು.
- ಎಸ್‌ಸಿ, ಎಸ್‌ಟಿ, ಹಿಂದುಳಿದ ವರ್ಗ ಮತ್ತು ಮಹಿಳಾ ಮೀಸಲಾತಿ ಹಾಗೂ ಸಾಮಾನ್ಯ ಸ್ಥಾನಗಳ ಪ್ರಮಾಣ ಆಯಾ ನಗರ ಪಾಲಿಕೆ ಮಟ್ಟದಲ್ಲಿ ಕಾಯ್ದುಕೊಳ್ಳಬೇಕು
- ಹಿಂದುಳಿದ ವರ್ಗಗಳಿಗೆ ಮೀಸಲಿರಿಸಿದ ಸ್ಥಾನಗಳಲ್ಲಿ ಶೇ 80ರಷ್ಟನ್ನು ಪ್ರವರ್ಗ–ಎ ಮತ್ತು ಶೇ 20ರಷ್ಟನ್ನು ಪ್ರವರ್ಗ–ಬಿ ಅಭ್ಯರ್ಥಿಗಳಿಗೆ ಮೀಸಲಿರಿಸಬೇಕು.
- ಹಿಂದುಳಿದ ಪ್ರವರ್ಗ ಎ ಮತ್ತು ಪ್ರವರ್ಗ ಬಿಗಳಲ್ಲಿ ಶೇ 50ರಷ್ಟನ್ನು ಮಹಿಳೆಯರಿಗೆ ಮೀಸಲಿರಿಸಬೇಕು.
- ಆಯಾ ನಗರ ಪಾಲಿಕೆಯಲ್ಲಿ ಎಸ್‌ಸಿ, ಎಸ್‌ಟಿ, ಹಿಂದುಳಿದ ಪ್ರವರ್ಗ ಎ ಮತ್ತು ಪ್ರವರ್ಗ ಬಿಗಳಿಗೆ ಹಂಚಿಕೆ ಮಾಡಿ, ಉಳಿದ ಸ್ಥಾನಗಳನ್ನು ಸಾಮಾನ್ಯ ಎಂದು ವರ್ಗೀಕರಿಸಬೇಕು
- ಸಾಮಾನ್ಯ ಸ್ಥಾನಗಳಲ್ಲಿ ಶೇ 50ರಷ್ಟನ್ನು ಮಹಿಳೆಯರಿಗೆ ಮೀಸಲಿರಿಸಬೇಕು
- ಮೀಸಲಿರಿಸಿದ ಸ್ಥಾನಗಳನ್ನು ಪುನರಾವರ್ತನೆ ಆಗದಂತೆ ನಗರ ಪಾಲಿಕೆಯ ಬೇರೆ ಬೇರೆ ವಾರ್ಡ್‌ಗಳಿಗೆ ಸರದಿ ಮೂಲಕ ಮೀಸಲಾತಿಯನ್ನು ಹಂಚಿಕೆ ಮಾಡಬೇಕು. ಸಾಮಾನ್ಯ ಸ್ಥಾನಗಳಿಗೆ ಪುನರಾವರ್ತನೆ ಪರಿಗಣಿಸುವಂತಿಲ್ಲ.





**ಶ್ರದ್ಧಾಂಜಲಿ**



**ಎಂ.ಶಿವಶಂಕರ್**
ಮಾಜಿ ಛೇರ್ಮನ್ ಮುನಿಸ್ವಾಮಪ್ಪನವರ ಮಗ
ಕಾವಲ್‌ಬೈರಸಂದ್ರ, ಬೆಂಗಳೂರು

ದಿನಾಂಕ:19-12-2025 ರಂದು ರಾತ್ರಿ 8.00 ಗಂಟೆಗೆ ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಅಂತ್ಯಕ್ರಿಯೆಗಳನ್ನು ದಿನಾಂಕ: 20-12-2025 ರಂದು ಮಧ್ಯಾಹ್ನ 3.00 ಗಂಟೆಗೆ ಕಾವಲ್ ಬೈರಸಂದ್ರ ಸ್ವಂತ ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು
**ಇಂತಿ ದುಃಖತಪ್ತರು: ಮಾಜಿ ಛೇರ್ಮನ್ ಮುನಿಸ್ವಾಮಪ್ಪನವರ ಕುಟುಂಬದವರು**
**9845900423, 9845933120**

## ನಗರಸಭೆ ಕಾರ್ಯಾಲಯ ನೆಲಮಂಗಲ

ನೆಲಮಂಗಲ, ಬೆಂಗಳೂರು ಗ್ರಾಮಾಂತರ ಜಿಲ್ಲೆ-562123
ದೂರವಾಣಿ ಸಂಖ್ಯೆ: 080-27722135
Email : ka.nelmangala.cmc@gmail.com

ಸಂಖ್ಯೆ: ನಸನೆ/ತಾಂತ್ರಿಕ(ವಿ)/ಟೆಂಡರ್/44/2025-26 ದಿನಾಂಕ : 19.12.2025

**ಅಲ್ಪಾವಧಿ ಟೆಂಡರ್ ಪ್ರಕಟಣೆ (2ನೇ ಕರೆ)**
**(ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)**

(ಸ್ಟ್ಯಾಂಡರ್ಡ್ ಡಾಕ್ಯೂಮೆಂಟ್ KW 1&2 ರ & KG ನಿಬಂಧನೆಗಳಂತೆ ಅರ್ಜಿ & ಆಹ್ವಾನಿಸಲಾಗಿದೆ)

ಪೌರಾಯುಕ್ತರು ನಗರಸಭೆ ನೆಲಮಂಗಲ ಬೆಂಗಳೂರು ಗ್ರಾಮಾಂತರ ಜಿಲ್ಲೆ ಇವರಿಂದ 2018-19ನೇ ಸಾಲಿನ ಎಸ್.ಎಫ್.ಸಿ ವಿಶೇಷ ನಿಧಿ ಅನುಧಾನದಡಿ ವಿವಿಧ ಕಾಮಗಾರಿಗಳಿಗೆ 2ನೇ ಬಾರಿ ಅಲ್ಪಾವಧಿ ಟೆಂಡರ್ ಕೈಗೊಳ್ಳಲು ಒಟ್ಟು ಮೊತ್ತ **ರೂ: 399.40 ಲಕ್ಷಗಳ** ಕಾಮಗಾರಿಗಳ ಐಟಂವಾರು ಇ-ಪ್ರೊಕ್ಯೂರ್‌ಮೆಂಟ್ ನ ಕೆ.ಪಿ.ಪಿ ಪೋರ್ಟಲ್‌ನ ದ್ವಿ ಲಕೋಟೆ ಪದ್ಧತಿಯಡಿ ಅರ್ಹ ದರ್ಜೆಯ ನೋಂದಾಯಿತ ಗುತ್ತಿಗೆದಾರರಿಂದ ಟೆಂಡರ್ ಕರೆಯಲಾಗಿದೆ.

| ಕ್ರ.ಸಂ. | ಇಂಡೆಂಟ್ ಸಂಖ್ಯೆ | ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ) | ಮೀಸಲಾತಿ ವಿವರ |
|---|---|---|---|
| 01 | DMA/2025-26/BR/WORKINDENT48577/CALL-2 | 99.80 | ಸಾಮಾನ್ಯ |
| 02 | DMA/2025-26/BR/WORKINDENT48417/CALL-2 | 99.90 | ಸಾಮಾನ್ಯ |
| 03 | DMA/2025-26/BR/WORKINDENT48536/CALL-2 | 99.90 | CAT-II(A) |
| 04 | DMA/2025-26/BR/WORKINDENT48541/CALL-2 | 99.80 | ಸಾಮಾನ್ಯ |

ಇ-ಪ್ರೊಕ್ಯೂರ್‌ಮೆಂಟ್ ಮುಖಾಂತರ ಟೆಂಡರ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ ಮತ್ತು ತೆರೆಯುವ ದಿನಾಂಕ ಮುಂತಾದ ಹೆಚ್ಚಿನ ವಿವರಗಳಿಗಾಗಿ ವೆಬ್‌ಸೈಟ್: **https://kppp.karnataka.gov.in** ಹಾಗೂ ನಗರಸಭೆಯ ತಾಂತ್ರಿಕ ಶಾಖೆಯನ್ನು ಸಂಪರ್ಕಿಸಬಹುದು.

| ಶ್ರೀ ಗಣೇಶ್ ಎನ್ | ಶ್ರೀ ಆನಂದ್ ಜಿ | ಶ್ರೀ ಬಿ. ಪದ್ಮನಾಭ್ | ಶ್ರೀ ಗಂಗಾಧರ್ ಹೆಚ್ |
|---|---|---|---|
| ಮಾನ್ಯ ಅಧ್ಯಕ್ಷರು ನಗರಸಭೆ, ನೆಲಮಂಗಲ | ಮಾನ್ಯ ಉಪಾಧ್ಯಕ್ಷರು ನಗರಸಭೆ, ನೆಲಮಂಗಲ | ಮಾನ್ಯ ಸ್ಥಾಯಿ ಸಮಿತಿ ಅಧ್ಯಕ್ಷರು ನಗರಸಭೆ, ನೆಲಮಂಗಲ | ಪೌರಾಯುಕ್ತರು, ನಗರಸಭೆ, ನೆಲಮಂಗಲ |

ವಾ.ಸಾ.ಸಂ.ಇ/ವಾಪ್ರ/4557/ಶಿರಡಿ ಸಾಯಿ/2024-25

## ನಗರಸಭಾ ಕಾರ್ಯಾಲಯ ಮಾದನಾಯಕನಹಳ್ಳಿ

ಬೆಂಗಳೂರು ಉತ್ತರ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ-562123
ದೂರವಾಣಿ ಸಂಖ್ಯೆ: 080-23718487
ಇ-ಮೇಲ್: itstaff_ulb_mnhalli@yahoo.com

ಸಂಖ್ಯೆ: ಮಾ.ನ.ಕಾ/ತಾ.ಶಾ/11/2025-26 ದಿನಾಂಕ: 19-12-2025

**ಟೆಂಡರ್ ಪ್ರಕಟಣೆ**
**(Through GOK e-Procurement Portal www.kppp.karnataka.gov.in only)**

2025-26ನೇ ಸಾಲಿನ ನಗರಸಭಾ ನಿಧಿಯಡಿ ಈ ಕೆಳಕಂಡ ಕಾಮಗಾರಿಯನ್ನು ನಿರ್ವಹಿಸಲು ಸಂಬಂಧಪಟ್ಟ ಟೆಂಡರ್ ಡಾಕ್ಯೂಮೆಂಟ್‌ನ ಷರತ್ತು ಹಾಗೂ ಸೂಚನೆಗೊಳಪಟ್ಟು ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಟೆಂಡರ್ ಆಹ್ವಾನಿಸಲಾಗಿದೆ. ಇಂಡೆಂಟ್ ಸಂಖ್ಯೆ: DMA/2025-26/RD/WORK_INDENT53010. ಟೆಂಡರ್‌ಗಿಟ್ಟ ಮೊತ್ತ: 23.00 ಲಕ್ಷಗಳು. (1) ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 03/01/2026 ಸಂಜೆ 5.00 ಗಂಟೆಯವರೆಗೆ. (2) ಬಿಡ್ ತೆರೆಯುವ ದಿನಾಂಕ: 05/01/2026 ಸಾಯಂಕಾಲ 5.15 ಗಂಟೆಗೆ. ಹೆಚ್ಚಿನ ವಿವರಗಳನ್ನು ಕಛೇರಿ ತಾಂತ್ರಿಕ ಶಾಖೆಯಿಂದ ಪಡೆಯಬಹುದಾಗಿದೆ. ಯಾವುದೇ ತಿದ್ದುಪಡಿಗಳಿದ್ದಲ್ಲಿ ಕೆ.ಪಿ.ಪಿ. ಪೋರ್ಟಲ್ ನಲ್ಲಿ ಮಾತ್ರ ತಿಳಿಸಲಾಗುವುದು.

ಸಹಿ/- ಪೌರಾಯುಕ್ತರು,
ನಗರಸಭೆ, ಮಾದನಾಯಕನಹಳ್ಳಿ

ವಾಸಾಸಂಇ/ವಾಪ್ರ/ಸ್ಯಾನ್/4563/2025-26

## ಬೆಂಗಳೂರು ಘನತ್ಯಾಜ್ಯ ನಿರ್ವಹಣೆ ನಿಯಮಿತ

ನೋಂದಣಿ ಕಚೇರಿ: 30/1, 1ನೇ ಮತ್ತು 2ನೇ ಮಹಡಿ, ಯುಎನ್‌ಐ ಕಟ್ಟಡ, ತಿಮ್ಮಯ್ಯ ರಸ್ತೆ, ಮಿಲ್ಲರ್ಸ್ ಟ್ಯಾಂಕ್ ಬಂಡ್ ಪ್ರದೇಶ, ವಸಂತ ನಗರ, ಬೆಂಗಳೂರು- 560051. ಇ-ಮೇಲ್ : dgm3bswml@gmail.com

ಸಂಖ್ಯೆ: ಡಿಜಿಎಂ-3/ಬಿಎಸ್‌ಡಬ್ಲ್ಯೂಎಂಎಲ್/ಪಿಆರ್/723/2025-26 ದಿನಾಂಕ: 19.12.2025

**ಆಸಕ್ತಿ ಅಭಿವ್ಯಕ್ತಿಪಡಿಸುವಿಕೆಗಾಗಿ ಆಹ್ವಾನ**
**(ಜಿಓಕೆ ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)**

| ಕಾಮಗಾರಿಯ ಹೆಸರು |
|---|
| ಸೇವಾ ಮಾದರಿಯಲ್ಲಿ ಎರಡು (2) ವರ್ಷಗಳ ಅವಧಿಗೆ 500 ಟಿಪಿಡಿ ಹಸಿ ತ್ಯಾಜ್ಯ ಜೈವಿಕ ಸಂಸ್ಕರಣಾ ಘಟಕದ ಸ್ಥಾಪನೆ ಮತ್ತು ಕಾರ್ಯಾಚರಣೆ ಮತ್ತು ನಿರ್ವಹಣೆ ಮಾಡುವ ಕಾಮಗಾರಿ. |

(1) ಬೆಂಗಳೂರು ಘನತ್ಯಾಜ್ಯ ನಿರ್ವಹಣಾ ಲಿಮಿಟೆಡ್ ಸೇವಾ ಮಾದರಿಯಲ್ಲಿ ಎರಡು (2) ವರ್ಷಗಳ ಅವಧಿಗೆ 500 ಟಿಪಿಡಿ ಹಸಿ ತ್ಯಾಜ್ಯ ಜೈವಿಕ ಸಂಸ್ಕರಣಾ ಘಟಕದ ಸ್ಥಾಪನೆ ಮತ್ತು ಕಾರ್ಯಾಚರಣೆ ಮತ್ತು ನಿರ್ವಹಣೆ ಮಾಡುವ ಕಾಮಗಾರಿಗೆ ಅರ್ಹ ಸಂಸ್ಥೆಗಳಿಂದ ಆಸಕ್ತಿ ಅಭಿವ್ಯಕ್ತಪಡಿಸುವಿಕೆ (ಇಓಐ) ಯನ್ನು ಆಹ್ವಾನಿಸುತ್ತಿದೆ.
(2) ಆಸಕ್ತಿ ಅಭಿವ್ಯಕ್ತಿಪಡಿಸುವಿಕೆ (ಇಓಐ) ಅನ್ನು ಹಸಿ ತ್ಯಾಜ್ಯ ಜೈವಿಕ ಸಂಸ್ಕರಣಾ ಘಟಕವನ್ನು ಸ್ಥಾಪಿಸಲು ಉತ್ತಮ ತಂತ್ರಜ್ಞಾನಗಳನ್ನು ಪಡೆಯಲು ಮಾತ್ರ ಆಹ್ವಾನಿಸಲಾಗಿದೆ.
(3) ಆಸಕ್ತಿ ಅಭಿವ್ಯಕ್ತಿಪಡಿಸುವಿಕೆ (ಇಓಐ)ಯ ವಿವರಗಳನ್ನು ಕರ್ನಾಟಕ ಸರ್ಕಾರದ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್ **https://kppp.karnataka.gov.in** ನಿಂದ ಡೌನ್‌ಲೋಡ್ ಮಾಡಬಹುದು.
(4) ಕೆಪಿಪಿ ಪೋರ್ಟಲ್ ಮುಖಾಂತರ ಪ್ರತಿಕ್ರಿಯೆಯನ್ನು ಸ್ವೀಕರಿಸಲು ಕೊನೆಯ ದಿನಾಂಕ (ಗಡುವು): **05.01.2026 ರಂದು ಸಂಜೆ 4.00 ಗಂಟೆಯವರೆಗೆ.**
(5) ಕೆಪಿಪಿ ಪೋರ್ಟಲ್ ಮುಖಾಂತರ ಪ್ರತಿಕ್ರಿಯೆಗಳನ್ನು ತೆರೆಯುವ **ದಿನಾಂಕ: 06.01.2026 ರಂದು ಸಂಜೆ 4.30 ರ ನಂತರ.**
(6) ಸ್ವೀಕರಿಸಿದ ಯಾವುದೇ ಅಥವಾ ಎಲ್ಲಾ ಪ್ರತಿಕ್ರಿಯೆಗಳನ್ನು ಸ್ವೀಕರಿಸುವ / ತಿರಸ್ಕರಿಸುವ ಹಕ್ಕನ್ನು ಯಾವುದೇ ಕಾರಣಗಳನ್ನು ನೀಡದೆ ಬಿಎಸ್‌ಡಬ್ಲ್ಯೂಎಂಎಲ್‌ನ ಉಪ ಪ್ರಧಾನ ವ್ಯವಸ್ಥಾಪಕರು-3 ರವರಿಗೆ ಕಾಯ್ದಿರಿಸಲಾಗಿದೆ.

ಸಹಿ/-
ಉಪ ಪ್ರಧಾನ ವ್ಯವಸ್ಥಾಪಕರು-3, ಬಿಎಸ್‌ಡಬ್ಲ್ಯೂಎಂಎಲ್

ವಾಸಾಸಂಇ/ವಾ.ಪ್ರ/4560/ಶಿರಡಿ ಸಾಯಿ/2025-26

# 'ವಿಕಸಿತ ಭಾರತ ಶಿಕ್ಷಣ ಅಧಿಷ್ಠಾನ' ಮಸೂದೆಗೆ ವಿರೋಧ

**ಬೆಂಗಳೂರು:** ಕೇಂದ್ರ ಸರ್ಕಾರ ಇತ್ತೀಚೆಗೆ ಸಂಸತ್‌ನಲ್ಲಿ ಮಂಡಿಸಿರುವ 'ವಿಕಸಿತ ಭಾರತ ಶಿಕ್ಷಣ ಅಧಿಷ್ಠಾನ' ಮಸೂದೆಗೆ ಎಐಡಿಎಸ್‌ಒ ವಿರೋಧ ವ್ಯಕ್ತಪಡಿಸಿದೆ.

ಈ ಮಸೂದೆ ಅಡಿ ಉನ್ನತ ಶಿಕ್ಷಣದ ನಿಯಂತ್ರಕ ಸಂಸ್ಥೆಗಳಾದ ಯುಜಿಸಿ, ಎಐಸಿಟಿಇ ಮತ್ತು ಎನ್‌ಸಿಟಿಇಗಳನ್ನು ವಿಲೀನಗೊಳಿಸಿ ನೇರವಾಗಿ ಕೇಂದ್ರ ಸರ್ಕಾರದ ಅಡಿಯಲ್ಲಿ ಕಾರ್ಯನಿರ್ವಹಿಸುವ ಏಕೈಕ ಸಂಸ್ಥೆಯನ್ನಾಗಿ ಮಾಡುವ ಮೂಲಕ ಸಾಂಸ್ಥಿಕ ಸ್ವಾಯತ್ತತೆಯನ್ನು ನಿರ್ಬಂಧಿಸಲು ಸರ್ಕಾರ ಪ್ರಯತ್ನಿಸುತ್ತಿದೆ ಎಂದು ಎಐಡಿಎಸ್‌ಒ ರಾಜ್ಯ ಕಾರ್ಯದರ್ಶಿ ಅಜಯ್ ಕಾಮತ್ ತಿಳಿಸಿದ್ದಾರೆ.

ಈ ಮಸೂದೆಯು ಸಾಂಸ್ಥಿಕ ಸ್ವಾಯತ್ತತೆಯ ಮೇಲಿನ ನೇರ ದಾಳಿಯಾಗಿದೆ ಮತ್ತು ಶೈಕ್ಷಣಿಕ ಸಂಸ್ಥೆಗಳ ಪ್ರಜಾಸತ್ತಾತ್ಮಕ ತತ್ವಗಳಿಗೆ ಗಂಭೀರ ಬೆದರಿಕೆ ಒಡ್ಡುತ್ತದೆ ಎಂದು ಹೇಳಿದ್ದಾರೆ.



ಸ್ವಾತಂತ್ರ್ಯಉದ್ಯಾನದಲ್ಲಿ ಎಎಪಿ ಕಾರ್ಯಕರ್ತರು ಪ್ರತಿಭಟಿಸಿದರು–ಪ್ರಜಾವಾಣಿ ಚಿತ್ರ

# ಗಾಂಧಿ ಹೆಸರಿಗೆ ಕೊಕ್ ಆಮ್ ಆದ್ಮಿ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ನರೇಗಾ ಯೋಜನೆಗೆ ಪರ್ಯಾಯವಾಗಿ ರೂಪಿಸಿರುವ ವಿಕಸಿತ ಭಾರತ ಉದ್ಯೋಗ ಖಾತರಿ ಮತ್ತು ಜೀವನೋಪಾಯ ಮಿಷನ್ ಮಸೂದೆಯಲ್ಲಿ ಮಹಾತ್ಮ ಗಾಂಧೀಜಿ ಅವರ ಹೆಸರನ್ನು ತೆಗೆದು ಹಾಕಿರುವ ಕೇಂದ್ರ ಸರ್ಕಾರದ ವಿರುದ್ಧ ಆಮ್ ಆದ್ಮಿ ಪಕ್ಷದ ಕಾರ್ಯಕರ್ತರು ಶುಕ್ರವಾರ ಪ್ರತಿಭಟನೆ ನಡೆಸಿದರು.

ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಜಮಾವಣೆಗೊಂಡ ಕಾರ್ಯಕರ್ತರು ಕೇಂದ್ರದ ವಿರುದ್ಧ ಘೋಷಣೆ ಕೂಗಿದರು.

ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ಮುಖ್ಯಮಂತ್ರಿ ಚಂದ್ರು ಮಾತನಾಡಿ, 'ದೇಶದ ಸ್ವಾತಂತ್ರ್ಯಕ್ಕಾಗಿ ಗಾಂಧೀಜಿ ತಮ್ಮ ಪ್ರಾಣವನ್ನೇ ತ್ಯಾಗ ಮಾಡಿದ್ದಾರೆ. ಇಷ್ಟು ವರ್ಷ ಗಾಂಧೀಜಿ ಹೆಸರಿನಲ್ಲೇ ಯೋಜನೆ ನಡೆಯುತ್ತಿತ್ತು. ಆದರೆ, ಏಕಾಏಕಿ ಕೇಂದ್ರದ ಬಿಜೆಪಿ ಸರ್ಕಾರ ನೂತನ ಮಸೂದೆಯ ಮೂಲಕ ರಾಷ್ಟ್ರಪಿತನ ಹೆಸರನ್ನೇ ತೆಗೆದುಹಾಕಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಕಾರ್ಯಾಧ್ಯಕ್ಷ ಸೀತಾರಾಮ್ ಗುಂಡಪ್ಪ ಮಾತನಾಡಿ 'ಗ್ರಾಮೀಣ ಭಾಗದ ರೈತರಿಗೆ ಜೀವನೋಪಾಯಕ್ಕಾಗಿ 100 ದಿನ ಉದ್ಯೋಗ ನೀಡಿ ಎಲ್ಲ ವೆಚ್ಚವನ್ನು ಕೇಂದ್ರವೇ ಭರಿಸುತ್ತಿತ್ತು. ಆದರೆ, ನೂತನ ಮಸೂದೆಯಲ್ಲಿ ರಾಜ್ಯ ಸರ್ಕಾರಗಳು ಪಾಲನ್ನು ನೀಡಬೇಕೆಂದು ಬೇಡಿಕೆ ಇಡುತ್ತಿರುವುದು ಕೇಂದ್ರದ ರೈತ ವಿರೋಧಿ ಹಾಗೂ ಪಲಾಯನವಾದದ ಸಂಕೇತ. ಕೇಂದ್ರ ಅನುದಾನಕ್ಕಾಗಿ ರಾಜ್ಯಗಳಿಗೆ ಆಶ್ರಯಿಸುತ್ತಿರುವುದು ಸಂವಿಧಾನ ವಿರೋಧಿ' ಎಂದರು.

ಪ್ರಚಾರ ಸಮಿತಿ ಉಪಾಧ್ಯಕ್ಷ ಲಕ್ಷ್ಮೀಕಾಂತ್ ರಾವ್, ಪ್ರಧಾನ ಕಾರ್ಯದರ್ಶಿ ಸಂಚಿತ್ ಸಹವಾನಿ, ಉಷಾ ಮೋಹನ್, ಡಾ. ಸತೀಶ್ ಕುಮಾರ್, ಬಸವರಾಜ ಮುದಿಗೌಡರ್, ಶಶಿಧರ್ ಆರಾಧ್ಯ, ಸುಷ್ಮಾ ವೀರ್, ಜಗದೀಶ್ ಚಂದ್ರ, ರವಿಕುಮಾರ್, ಉಮೇಶ್ ಯಾದವ್, ನವೀನ್ ಅಯ್ಯರ್, ಪುಟ್ಟಣ್ಣ ಗೌಡ ಭಾಗವಹಿಸಿದ್ದರು.

## ಮಹಿಳೆಯರಿಗೆ ನೆರವು: ಅರ್ಜಿ ಆಹ್ವಾನ

ಬೆಂಗಳೂರು: ಸ್ವಂತ ಉದ್ಯಮಕ್ಕೆ ಆರ್ಥಿಕ ನೆರವು ಬಯಸುವ ಮಹಿಳೆಯರಿಂದ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮವು ಅರ್ಜಿ ಆಹ್ವಾನಿಸಿದೆ.

ನಿರುದ್ಯೋಗಿಗಳು, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರು, ವಿಧವೆಯರು, ಅಂಗವಿಕಲರು, ಸಂಕಷ್ಟಕ್ಕೊಳಗಾದವರು, ಅಲ್ಪಸಂಖ್ಯಾತರು, ಲಿಂಗತ್ವ ಅಲ್ಪಸಂಖ್ಯಾತರು, ದಮನಿತರು, ಎಚ್‌ಐವಿ ಸೋಂಕಿತರು ಅರ್ಜಿ ಸಲ್ಲಿಸಬಹುದು. ಆಸಕ್ತರು 2026ರ ಜ. 15ರ ಒಳಗೆ ಸೇವಾ ಸಿಂಧು ಪೋರ್ಟಲ್ https//sevasindhu.karnataka.gov.in ಮೂಲಕ ಅರ್ಜಿ ಸಲ್ಲಿಸಬಹುದು.

## ಚನ್ನಮ್ಮ, ವೀರಮಹಿಳೆ ಪ್ರಶಸ್ತಿಗಳಿಗೆ ಅರ್ಜಿ

**ಬೆಂಗಳೂರು:** ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ 2025–26ರ ಸಾಲಿನ ಕಿತ್ತೂರು ರಾಣಿ ಚನ್ನಮ್ಮ ಮತ್ತು ವೀರ ಮಹಿಳೆ ಪ್ರಶಸ್ತಿಗೆ ಅರ್ಜಿ ಆಹ್ವಾನಿಸಿದೆ.

ಕ್ರೀಡೆ, ಕಲೆ, ಸಾಹಿತ್ಯ, ಶಿಕ್ಷಣ ಕ್ಷೇತ್ರದಲ್ಲಿ ಸಾಧನೆ ಮಾಡಿದ, ಮಹಿಳಾ ಅಭಿವೃದ್ಧಿಗೆ ಸಲ್ಲಿಸಿರುವ ಸೇವೆಗಾಗಿ ವ್ಯಕ್ತಿ ಮತ್ತು ಸಂಸ್ಥೆಗಳಿಗೆ ಕಿತ್ತೂರು ರಾಣಿ ಚನ್ನಮ್ಮ ಪ್ರಶಸ್ತಿ. ಕ್ಲಿಷ್ಟಕರ ಸನ್ನಿವೇಶದಲ್ಲಿ ಇತರರ ಜೀವ ರಕ್ಷಿಸಿದವರಿಗೆ ವೀರ ಮಹಿಳೆ ಪ್ರಶಸ್ತಿ ಪ್ರದಾನ ಮಾಡಲಾಗುವುದು. ಆಸಕ್ತರು 2026 ಜ. 7ರ ಒಳಗೆ ಅರ್ಜಿ ಸಲ್ಲಿಸಬೇಕು ಎಂದು ಇಲಾಖೆ ಉಪ ನಿರ್ದೇಶಕರು ತಿಳಿಸಿದ್ದಾರೆ.

**ಅರ್ಜಿ ಸಲ್ಲಿಸಲು ವಿಳಾಸ:** ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬೆಂಗಳೂರು ನಗರ ಜಿಲ್ಲೆ, ಸುಧಾರಣಾ ಸಂಸ್ಥೆಗಳ ಸಂಕೀರ್ಣ, ಡಾ.ಎಂ.ಎಚ್. ಮರೀಗೌಡ ರಸ್ತೆ, ಕಿದ್ವಾಯಿ ಆಸ್ಪತ್ರೆ ಪಕ್ಕ, ಬೆಂಗಳೂರು-560029

# ಇಂದಿರಾನಗರದಲ್ಲಿ 'ಭೂಮಿಕಾ ಕ್ಲಬ್' ಇಂದು

ಪ್ರಜಾವಾಣಿ ವಾರ್ತೆ

**ಬೆಂಗಳೂರು:** 'ಪ್ರಜಾವಾಣಿ' ಹಾಗೂ 'ಡೆಕ್ಕನ್ ಹೆರಾಲ್ಡ್' ಮಹಿಳೆಯರಿಗಾಗಿ ಸ್ಥಾಪಿಸಿರುವ 'ಭೂಮಿಕಾ ಕ್ಲಬ್' ವೇದಿಕೆಯು ಇದೇ ಶನಿವಾರ (ಡಿ.20) ಸಂಜೆ 4ಕ್ಕೆ ಇಂದಿರಾನಗರದಲ್ಲಿರುವ ಇಂದಿರಾನಗರ ಕ್ಲಬ್‌ನಲ್ಲಿ 33ನೇ ಆವೃತ್ತಿಯ ವಿಶೇಷ ಕಾರ್ಯಕ್ರಮ ಹಮ್ಮಿಕೊಂಡಿದೆ.

'ಫ್ರೀಡಂ ಹೆಲ್ತಿ ಕುಕ್ಕಿಂಗ್ ಆಯಿಲ್' ಮತ್ತು ಮಣಿಪಾಲ್ ಆಸ್ಪತ್ರೆಯ ಸಹಯೋಗದಲ್ಲಿ ಈ ಕಾರ್ಯಕ್ರಮ ನಡೆಯಲಿದೆ. ಅಡುಗೆ ತಯಾರಿ, ಸಂಗೀತ ಕಾರ್ಯಕ್ರಮ ಸೇರಿ ಹಲವು ವಿಶಿಷ್ಟತೆಯನ್ನು ಈ ಕಾರ್ಯಕ್ರಮ ಒಳಗೊಂಡಿರಲಿದೆ. 2022ರಲ್ಲಿ ಪ್ರಾರಂಭವಾದ ಈ ವೇದಿಕೆಯು, ಈವರೆಗೆ ಬೆಂಗಳೂರಿನಲ್ಲಿ 14 ಕಾರ್ಯಕ್ರಮಗಳನ್ನು ನಡೆಸಿದೆ. ರಾಜ್ಯದಾದ್ಯಂತ ಜನಪ್ರಿಯವಾದ ಈ ಕಾರ್ಯಕ್ರಮವನ್ನು ಈಗ ಮತ್ತೆ ಬೆಂಗಳೂರಿನಲ್ಲಿ ಹಮ್ಮಿಕೊಳ್ಳಲಾಗಿದೆ.

ನೋಂದಣಿಗೆ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಆರೋಗ್ಯ ಮತ್ತು ಕ್ಷೇಮದ ಬಗ್ಗೆ ಮಣಿಪಾಲ್ ಆಸ್ಪತ್ರೆಯ ವೈದ್ಯಕೀಯ ತಜ್ಞರಾದ ಡಾ. ಪೂನಂ ಪಾಟೀಲ ಅವರು ಉಪನ್ಯಾಸ ನೀಡಲಿದ್ದಾರೆ. ಪದ್ಮಿನಿ ಪ್ರಿಯ ನೃತ್ಯ ಕಲಾ ಅಕಾಡೆಮಿಯ ಉಷಾ ಬಸಪ್ಪ ಅವರಿಂದ ಭರತನಾಟ್ಯ ಪ್ರದರ್ಶನ ನಡೆಯಲಿದೆ. ಅನಘಾ ಎಂ. ಅವರಿಂದ ವಿಶೇಷ ಸಂಗೀತ ಕಾರ್ಯಕ್ರಮ ಆಯೋಜಿಸಲಾಗಿದೆ.

ವರ್ಷಿಣಿ ಅವರಿಂದ ಹಾಸ್ಯ ಭಾಷಣ (ಸ್ಟ್ಯಾಂಡ್ ಅಪ್ ಕಾಮಿಡಿ), ಚಂದನಾ ಲಕ್ಷ್ಮೀಕಾಂತ್ ಅವರಿಂದ ಜುಂಬಾ ಚಟುವಟಿಕೆ ಹಾಗೂ ಅಡುಗೆ ತಯಾರಿ ಸ್ಪರ್ಧೆಯನ್ನೂ ಆಯೋಜಿಸಲಾಗಿದೆ.

ಹೊಸ ವಿಷಯಗಳನ್ನು ಕಲಿಯಲು, ಸಮಾನ ಮನಸ್ಕರೊಂದಿಗೆ ಬೆರೆಯಲು, ಸೃಜನಶೀಲತೆ ಪ್ರದರ್ಶಿಸಲು, ಆರೋಗ್ಯ ಮತ್ತು ಕ್ಷೇಮ ಜಗತ್ತಿನ ಬಗ್ಗೆ ಮಾಹಿತಿ ಪಡೆಯಲು ಈ ಕಾರ್ಯಕ್ರಮ ಸಹಕಾರಿಯಾಗಲಿದೆ. ಪ್ರೇಕ್ಷಕರಿಗೆ ವಿವಿಧ ಸ್ಪರ್ಧೆ ಇರಲಿದ್ದು, ಭಾಗವಹಿಸಿದ ಎಲ್ಲರಿಗೂ ಉಡುಗೊರೆಗಳು ಇರಲಿವೆ. ಒಬ್ಬ ಅದೃಷ್ಟ ಪ್ರೇಕ್ಷಕರಿಗೆ ₹15 ಸಾವಿರ ಮೌಲ್ಯದ ವಾಟರ್ ಪ್ಯೂರಿಫೈಯರ್ ಗೆಲ್ಲುವ ಅವಕಾಶ ಇರಲಿದೆ.

ಅದೃಷ್ಟ ಪ್ರೇಕ್ಷಕರೊಬ್ಬರಿಗೆ 'ಪ್ರಜಾವಾಣಿ ಸಿನಿ ಸಮ್ಮಾನ' ಸಮಾರಂಭದ ಎರಡು ವಿವಿಐಪಿ ಪಾಸ್‌ಗಳನ್ನು ಗೆಲ್ಲುವ ಅವಕಾಶವಿರುತ್ತದೆ. 10 ಅದೃಷ್ಟ ಪ್ರೇಕ್ಷಕರಿಗೆ ಮಲ್ಟಿಪ್ಲೆಕ್ಸ್‌ನಲ್ಲಿ ಚಲನಚಿತ್ರ ವೀಕ್ಷಣೆಗೆ ತಲಾ ಎರಡು ಟಿಕೆಟ್‌ಗಳನ್ನು ಗೆಲ್ಲುವ ಅವಕಾಶ ಇರಲಿದೆ. ಕಾರ್ಯಕ್ರಮಕ್ಕೆ ಪ್ರವೇಶ ಉಚಿತ ಇರಲಿದ್ದು, ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡುವ ಮೂಲಕ ಹೆಸರು ನೋಂದಾಯಿಸಿಕೊಳ್ಳಬೇಕು.

**ವಿವರಕ್ಕೆ ಸಂಪರ್ಕ ಸಂಖ್ಯೆ: 9035036186**

## ಲಾರಿ ಹರಿದು ಸಾವು

ಮುಳಬಾಗಿಲು: ನಗರದ ಹೊರವಲಯದ ತಾಯಲೂರು ವೃತ್ತದಲ್ಲಿ ಲಾರಿ ಹರಿದು ಯುವಕನೊಬ್ಬ ಮೃತಪಟ್ಟಿದ್ದಾನೆ.

ತಾಲ್ಲೂಕಿನ ರಾಮಚಂದ್ರ ಅಗ್ರಹಾರ ಗ್ರಾಮದ ಗಂಗರಾಜು (20) ಮೃತ ಯುವಕ. ಈ ಸಂಬಂಧ ಮುಳಬಾಗಿಲು ನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# 'ಘನತೆ ಉಳಿಸಿಕೊಂಡಿರುವ ಮಾಧ್ಯಮ'

ಪ್ರಜಾವಾಣಿ ವಾರ್ತೆ

**ಬೆಂಗಳೂರು:** 'ಮುಖ್ಯವಾಹಿನಿ ಮಾಧ್ಯಮವು ಇಂದಿಗೂ ತನ್ನ ಗಟ್ಟಿತನದ ಮೂಲಕ ಘನತೆಯನ್ನು ಉಳಿಸಿಕೊಂಡು ಬಂದಿದೆ. ಇದೇ ನಮಗೆಲ್ಲ ಆಶಾದಾಯಕ ಬೆಳವಣಿಗೆ' ಎಂದು ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ವೂಡೇ ಪಿ.ಕೃಷ್ಣ ಹೇಳಿದರು.

ಬೆಂಗಳೂರು ನಾಗರೀಕರ ವೇದಿಕೆ ಮತ್ತು ಬುದ್ಧ ಬಸವ ಗಾಂಧಿ ಸಾಂಸ್ಕೃತಿಕ ಟಸ್ಟ್ ಆಶ್ರಯದಲ್ಲಿ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಶಿವಾನಂದ ತಗಡೂರು ಅವರಿಗೆ ಲೋಹಿಯಾ ಪ್ರಶಸ್ತಿ ಪ್ರದಾನ ಮಾಡಿ ಮಾತನಾಡಿದರು.

'ರಾಮಮನೋಹರ ಲೋಹಿಯಾ ಅವರು ದೇಶದ ರಾಜಕಾರಣದಲ್ಲಿ ಚಲನೆ ತಂದವರು. ಲೋಹಿಯಾ ವಾದದಲ್ಲಿ ಬೆಳೆದು ಅರಳಿದ ಪ್ರತಿಭೆಗಳು ದೇಶದ ಉದ್ದಗಲಕ್ಕೂ ಇದ್ದಾರೆ.' ಎಂದರು.

ಕನ್ನಡಪ್ರಭ ಸಂಪಾದಕ ರವಿ ಹೆಗಡೆ, ತ್ಯಾಗರಾಜ ಕೋ-ಆಪರೇಟಿವ್ ಬ್ಯಾಂಕ್ ಅಧ್ಯಕ್ಷ ಎಂ.ಆರ್.ವೆಂಕಟೇಶ್, ದೂರದರ್ಶನದ ಕಾರ್ಯಕ್ರಮ ಮುಖ್ಯಸ್ಥೆ ಎಚ್.ಎನ್.ಆರತಿ ಮಾತನಾಡಿದರು.

ಕಾರ್ಯಕ್ರಮದ ಸಂಯೋಜಕ ಎಸ್.ರಾಮಲಿಂಗೇಶ್ವರ (ಸಿಸಿರಾ) ಸ್ವಾಗತಿಸಿದರು. ಭೂಮಿ ಫೌಂಡೇಷನ್, ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘ, ಪತ್ರಿಕಾ ವಿತರಕರ ಸಂಘ, ರಂಗಸಿರಿ ಬಳಗ ಮತ್ತು ವಿವಿಧ ಘಟಕಗಳ ಪದಾಧಿಕಾರಿಗಳು ಪಾಲ್ಗೊಂಡಿದ್ದರು.

## ಮಕ್ಕಳ ಗ್ರಾಮಸಭೆ ಸಮಸ್ಯೆಗಳ ಆಗರ

ದಾಬಸ್ ಪೇಟೆ: ಕುಡಿಯುವ ನೀರು ಒದಗಿಸಿ, ಶಾಲೆಯ ಪಕ್ಕದ ವಿದ್ಯುತ್ ಟ್ರಾನ್ಸ್‌ಫಾರ್ಮರ್ ಬದಲಿಸಿ, ಶಾಲೆಗೆ ಗೇಟ್ ಅಳವಡಿಸಿ, ಸೈಕಲ್ ಕೊಡಿಸಿ, ಶಾಲೆಯ ಬಳಿ ಕಸ ಇದೆ ತೆರವು ಮಾಡಿ, ಬೀದಿ ನಾಯಿಗಳ ಕಾಟದಿಂದ ಶಾಲೆಗೆ ಹೋಗಲು ಭಯ...

ಸೋಂಪುರ ಹೋಬಳಿಯ ಹೊನ್ನೇನಹಳ್ಳಿ ಗ್ರಾಮದ ಶಾಲಾ ಆವರಣದಲ್ಲಿ ಏರ್ಪಡಿಸಿದ್ದ 'ಮಕ್ಕಳ ಗ್ರಾಮ ಸಭೆ'ಯಲ್ಲಿ ವಿದ್ಯಾರ್ಥಿಗಳು ತಮ್ಮ ಸಮಸ್ಯೆಗಳನ್ನು ಹೇಳಿಕೊಂಡರು.

ಹೊನ್ನೇನಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಗೆ ಹೊನ್ನೇನಹಳ್ಳಿ ತಾಂಡ್ಯ, ಬರಗೇನಹಳ್ಳಿ, ಕೆ.ಜಿ.ಶ್ರೀನಿವಾಸಪುರ, ಕೆಂಗಲ್ ಗೊಲ್ಲರಹಟ್ಟಿ, ಶ್ರೀಪತಿಹಳ್ಳಿ, ವೀರಸಾಗರ ಗ್ರಾಮಗಳ ಶಾಲೆಗಳ ಮಕ್ಕಳು ತಮ್ಮ ಹತ್ತಾರು ಸಮಸ್ಯೆಗಳನ್ನು ಅಧಿಕಾರಿಗಳ ಗಮನಕ್ಕೆ ತಂದರು.

'ಪಂಚಾಯಿತಿ ಅಧಿಕಾರಿಗಳು ಮತ್ತು ಸಂಬಂಧಿಸಿದ ಅಧಿಕಾರಿಗಳೊಂದಿಗೆ ಶಾಲೆಗಳ ಹತ್ತಿರ ತೆರಳಿ ಪರಿಶೀಲನೆ ನಡೆಸಿ ಪರಿಹಾರ ನೀಡುತ್ತಾರೆ' ಎಂದು ಗ್ರಾಮ ಪಂಚಾಯಿತಿ ಅಧ್ಯಕ್ಷೆ ಸುಮಿತ್ರ ಶ್ರೀನಿವಾಸ್ ಭರವಸೆ ನೀಡಿದರು.

'ಸ್ವಯಂ ರಕ್ಷಣೆಗೆ ಮಕ್ಕಳು, ಪೋಷಕರು ಮತ್ತು ಶಿಕ್ಷಕರು ಮಕ್ಕಳ ಸಹಾಯವಾಣಿ 1098ಗೆ ದೂರವಾಣಿಗೆ ಕರೆ ಮಾಡಿ, ಇಲ್ಲವೇ ಗ್ರಾಮ ಪಂಚಾಯಿತಿ, ಪೊಲೀಸರ ಗಮನಕ್ಕೆ ತರುವ ಪ್ರಯತ್ನ ಮಾಡಬೇಕು' ಎಂದು ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ರವಿಶಂಕರ್ ಹೇಳಿದರು.

ಹೊನ್ನೇನಹಳ್ಳಿ ಹಿರಿಯ ಪ್ರಾಥಮಿಕ ಶಾಲೆ ಮುಖ್ಯ ಶಿಕ್ಷಕ ಪುಟ್ಟರುದ್ರಾರಾಧ್ಯ ಮಾತನಾಡಿ, ಅಂಗವಿಕಲರ ಬಗ್ಗೆ ಕೇವಲ ಕನಿಕರ ಬೇಡ. ಈ ಮಕ್ಕಳಿಗೆ ಉತ್ತಮ ಅವಕಾಶ ನೀಡಿದರೆ ಮುಂದೆ ಅವರು ಸಹ ದೇಶದ ಆಸ್ತಿಯಾಗುತ್ತಾರೆ ಎಂದರು.

# ಸ್ಥಳಾಂತರ: ಜಾಗ ಅರಣ್ಯ ಇಲಾಖೆಗೆ?

## ವೈಮಾನಿಕ ತರಬೇತಿ ಶಾಲೆ: ವಿಶೇಷ ಆದೇಶ ಹೊರಡಿಸಿದ್ದ ಮೈಸೂರು ಮಹಾರಾಜರು

• ಆರ್.ಮಂಜುನಾಥ್

**ಮುಖ್ಯಾಂಶಗಳು**
- ಶಾಲೆ ಇಲ್ಲದಿದ್ದರೆ ಇತರೆ ಚಟುವಟಿಕೆಗೆ ಅವಕಾಶವಿಲ್ಲ
- ಕಾಯ್ದೆಯಂತೆ 217 ಎಕರೆ ಅರಣ್ಯ ಭೂಮಿಯಾಗಲಿದೆ
- ಬೃಹತ್ ಸಂಖ್ಯೆಯಲ್ಲಿ ಪೈಲಟ್ ಆಕಾಂಕ್ಷಿಗಳು

ಬೆಂಗಳೂರು: ಜಕ್ಕೂರು ವಾಯುನೆಲೆ ಪ್ರದೇಶದಲ್ಲಿ ಇರುವ ವೈಮಾನಿಕ ತರಬೇತಿ ಶಾಲೆಯನ್ನು ಮುಚ್ಚಿದರೆ ಅಥವಾ ಸ್ಥಳಾಂತರ ಮಾಡಿದರೆ, ವಾಯುನೆಲೆ ಪ್ರದೇಶದ 217 ಎಕರೆ ಭೂಮಿಯನ್ನು ಅರಣ್ಯ ಇಲಾಖೆಗೆ ನೀಡಬೇಕಾಗುತ್ತದೆ.

ವೈಮಾನಿಕ ತರಬೇತಿ ಶಾಲೆ ಆರಂಭಿಸುವ ಉದ್ದೇಶಕ್ಕಾಗಿಯೇ ವಿಶೇಷ ಆದೇಶದ ಮೂಲಕ ಮೈಸೂರು ಮಹಾರಾಜರು ಅರಣ್ಯ ಭೂಮಿಯನ್ನು ನೀಡಿದ್ದರು. ಆ ಉದ್ದೇಶ ಬದಲಾದರೆ, ಭೂಮಿಯನ್ನು ಬೇರೆ ಯಾವುದೇ ಯೋಜನೆಗೆ ಉಪಯೋಗಿಸುವಂತಿಲ್ಲ.

ದೇಶದಲ್ಲೇ ಮೊದಲ ವೈಮಾನಿಕ ತರಬೇತಿ ಶಾಲೆಯನ್ನು ಸ್ಥಾಪಿಸುವ ಉದ್ದೇಶದಿಂದ ಅರಣ್ಯ ಭೂಮಿಯಾಗಿದ್ದ ಜಕ್ಕೂರು- ಅಲ್ಲಾಳಸಂದ್ರದ ಭೂಮಿಯನ್ನು ವಾಯುನೆಲೆಗಾಗಿ ನೀಡಲು ಮೈಸೂರು ಮಹಾರಾಜರು ವಿಶೇಷ ಆದೇಶ ಹೊರಡಿಸಿದ್ದರು.

1935ರ ಮೈಸೂರಿನ ಅರಣ್ಯ ಕಾಯ್ದೆಯಂತೆ, ಬೆಂಗಳೂರಿನ ಜಕ್ಕೂರು-ಅಲ್ಲಾಳಸಂದ್ರದ ಸರ್ವೆ ನಂಬರ್‌ಗಳಲ್ಲಿ 377 ಎಕರೆ 2 ಗುಂಟೆ ಅರಣ್ಯ ಭೂಮಿಯ ಭಾಗವಾಗಿತ್ತು. ಮೈಸೂರು ಮಹಾರಾಜರ ನಿರ್ಣಯದಂತೆ, 1940ರ ಸೆಪ್ಟೆಂಬರ್ 17ರಂದು ವಿಶೇಷ ಆದೇಶ (ಎಫ್ 1545-ಎಸ್- ಎಫ್‌ಟಿ. 58-40-2) ಹೊರಡಿಸಿ, 199 ಎಕರೆ 14 ಗುಂಟೆ ಪ್ರದೇಶವನ್ನು ಜಕ್ಕೂರು ವೈಮಾನಿಕ ತರಬೇತಿ ಶಾಲೆಗೆ ನೀಡಲಾಯಿತು.

ತದ ನಂತರ, ಇನ್ನೂ 17 ಎಕರೆಯನ್ನು ಹೆಚ್ಚುವರಿಯಾಗಿ ನೀಡಿ, 217 ಎಕರೆ ಪ್ರದೇಶದಲ್ಲಿ ಜಕ್ಕೂರು ವಾಯುನೆಲೆ ಸ್ಥಾಪಿಸಲು ಯೋಜನೆ ರೂಪಿಸಲಾಯಿತು. 1948ರಲ್ಲಿ ಅಂದಿನ ಪ್ರಧಾನಿ ಜವಾಹರಲಾಲ್ ನೆಹರೂ ಅವರು ಈ ಶಾಲೆಯನ್ನು ಉದ್ಘಾಟಿಸಿದ್ದರು.

'ಜಕ್ಕೂರು ವೈಮಾನಿಕ ತರಬೇತಿ ಶಾಲೆ ಇರುವವರೆಗೂ ಯಾವುದೇ ಸಮಸ್ಯೆ ಉದ್ಭವಿಸುವುದಿಲ್ಲ. ಅದನ್ನು ಮುಚ್ಚಿ ಬೇರೆ ಯಾವುದೇ ರೀತಿಯ ಚಟುವಟಿಕೆಯನ್ನು ಅಲ್ಲಿ ನಡೆಸಿದ್ದೇ ಆದಲ್ಲಿ ಆಗ ಅರಣ್ಯ ಕಾಯ್ದೆ ಮುಂಚೂಣಿಗೆ ಬರುತ್ತದೆ. ಮಹಾರಾಜರ ಉದ್ದೇಶಕ್ಕೆ ವಿರುದ್ಧವಾಗಿ ಬೇರೆ ಚಟುವಟಿಕೆಗಳು ಆರಂಭವಾದರೆ, ಅರಣ್ಯ ಕಾಯ್ದೆಯಂತೆ ಜಕ್ಕೂರು ವಾಯುನೆಲೆ ಪ್ರದೇಶವನ್ನು ಅರಣ್ಯ ಇಲಾಖೆ ವಶಕ್ಕೆ ಪಡೆದುಕೊಳ್ಳಬಹುದು' ಎಂದು ಅರಣ್ಯ ಇಲಾಖೆ ಅಧಿಕಾರಿಗಳು ಮಾಹಿತಿ ನೀಡಿದರು.

### ಪರವಾನಗಿ ನೀಡಲು ಕೋರಿ ಪತ್ರ




'ಜಕ್ಕೂರು ವೈಮಾನಿಕ ತರಬೇತಿ ಶಾಲೆಗೆ ಅಗತ್ಯ ಪರವಾನಗಿ/ ಸಮ್ಮತಿ ನೀಡಿ ಎಂದು ರಾಜ್ಯ ಸರ್ಕಾರ ಸಾಕಷ್ಟು ಬಾರಿ ಮನವಿ ಸಲ್ಲಿಸಿದ್ದರೂ ಯಾವುದೇ ಪ್ರತಿಕ್ರಿಯೆ ಬಂದಿಲ್ಲ. ಈಗಾಗಲೇ ತುಂಬಾ ವಿಳಂಬವಾಗಿದ್ದು, ಅತಿದೊಡ್ಡ ಸಂಖ್ಯೆಯಲ್ಲಿ ಪೈಲಟ್ ತರಬೇತಿ ಪಡೆಯುತ್ತಿರುವ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಕೂಡಲೇ ಕ್ರಮ ಕೈಗೊಳ್ಳಿ' ಎಂದು ಕೇಂದ್ರ ನಾಗರಿಕ ವಿಮಾನಯಾನ ಸಚಿವಾಲಯದ ಕಾರ್ಯದರ್ಶಿ ಸಮೀರ್‌ಕುಮಾರ್ ಸಿನ್ಹಾ ಅವರಿಗೆ ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಅವರು ಡಿ.16ರಂದು ಪತ್ರ ಬರೆದಿದ್ದಾರೆ.




ಶಾಲಿನಿ ರಜನೀಶ್

'ಇಂಡಿಗೊ ಪ್ರಕರಣದ ನಂತರ, ದೇಶದಲ್ಲಿ ತರಬೇತಿ ಪಡೆದ ಪೈಲಟ್‌ಗಳಿಗೆ ಬೇಡಿಕೆ ಹೆಚ್ಚಾಗಿದೆ. ಹೀಗಾಗಿ, ನಾಗರಿಕ ವಿಮಾನಯಾನ ಮಹಾನಿರ್ದೇಶನಾಲಯ (ಡಿಜಿಸಿಎ) ಮತ್ತು ನಾಗರಿಕ ವಿಮಾನಯಾನ ಸಚಿವಾಲಯ, ಜಕ್ಕೂರು ವೈಮಾನಿಕ ತರಬೇತಿ ಶಾಲೆಗೆ ಅಗತ್ಯ ಪರವಾನಗಿಯನ್ನು ಶೀಘ್ರವೇ ನೀಡಬೇಕು' ಎಂದು ಮನವಿ ಮಾಡಿದ್ದಾರೆ.

'ಪರವಾನಗಿ ನೀಡಲು ಸಾಧ್ಯವಿಲ್ಲದಿದ್ದರೆ ಈ ಬಗ್ಗೆ ಮಾಹಿತಿ ನೀಡಬೇಕು. ಇದರಿಂದ ರಾಜ್ಯ ಸರ್ಕಾರ, ತರಬೇತಿ ಪಡೆಯುತ್ತಿರುವವರಿಗೆ ಪರ್ಯಾಯ ಮಾರ್ಗವನ್ನು ಪರಿಶೀಲಿಸುತ್ತದೆ. ಬಾಕಿ ಉಳಿದಿರುವ ತರಬೇತಿಯನ್ನು ಇತರೆ ಶಾಲೆಗಳಲ್ಲಿ ಸಿಗುವಂತೆ ಮಾಡಿ, ಅವರ ವೃತ್ತಿಗೆ ಯಾವುದೇ ಅಡಚಣೆಯಾಗದಂತೆ ಕ್ರಮ ಕೈಗೊಳ್ಳುತ್ತದೆ. ಹೀಗಾಗಿ, ತಾವು ಖುದ್ದಾಗಿ ಈ ವಿಷಯದಲ್ಲಿ ಮಧ್ಯಪ್ರವೇಶಿಸಿ, ಪರವಾನಗಿ ಪ್ರಕ್ರಿಯೆಯನ್ನು ಶೀಘ್ರ ಪೂರ್ಣಗೊಳಿಸಿಕೊಡಬೇಕು' ಎಂದು ಕೋರಿದ್ದಾರೆ.

### ಇನ್ನೇನು ನಿರೀಕ್ಷಿಸಲು ಸಾಧ್ಯ?: ರವಿ ಕೃಷ್ಣಾರೆಡ್ಡಿ



'ರಾಜಕಾರಣಿಗಳ ಮಾರುವೇಷದಲ್ಲಿರುವ ರಿಯಲ್ ಎಸ್ಟೇಟ್ ದಲ್ಲಾಳಿಗಳಿಂದ ಇನ್ನೇನು ತಾನೇ ನಿರೀಕ್ಷಿಸಲು ಸಾಧ್ಯ? ಇವರಿಗೆ ಬೇಕಾಗಿದ್ದಲ್ಲಿ, ಮೈಸೂರು, ಹುಬ್ಬಳ್ಳಿ, ಕಲಬುರಗಿಯಲ್ಲೂ ವೈಮಾನಿಕ ತರಬೇತಿ ಶಾಲೆ ಆರಂಭಿಸಲಿ. ಆದರೆ, ಮೈಸೂರಿಗೆ ಜಕ್ಕೂರಿನ ವೈಮಾನಿಕ ಶಾಲೆಯನ್ನು ಸ್ಥಳಾಂತರಿಸಲು ಆಲೋಚಿಸಿರುವುದು ರಿಯಲ್ ಎಸ್ಟೇಟ್ ಮಾಫಿಯಾಗೆ ಅನುಕೂಲ ಮಾಡಿಕೊಡುವ ಹುನ್ನಾರವಾಗಿದೆ' ಎಂದು ಕರ್ನಾಟಕ ರಾಷ್ಟ್ರ ಸಮಿತಿ (ಕೆಆರ್‌ಎಸ್) ಪಕ್ಷದ ಸಂಸ್ಥಾಪಕ ರವಿ ಕೃಷ್ಣಾರೆಡ್ಡಿ ಅಭಿಪ್ರಾಯಪಟ್ಟರು.

'ಬೆಂಗಳೂರಿನಲ್ಲಿ ಕೆಲವೇ ಕೆಲವು ವಿಶಾಲವಾದ ಸರ್ಕಾರಿ ಜಾಗಗಳು ಉಳಿದುಕೊಂಡಿವೆ. ಅವುಗಳನ್ನೂ ರಿಯಲ್ ಎಸ್ಟೇಟ್‌ಗೆ ನೀಡುವ ಮೂಲಕ, ನಗರವಾಸಿಗಳಿಗೆ ಉಸಿರುಗಟ್ಟಿಸುವ ವಾತಾವರಣ ನಿರ್ಮಿಸಲು ಸರ್ಕಾರ ಮುಂದಾಗಿದೆ' ಎಂದು ಅವರು ಹೇಳಿದರು.

**ಹಸಿರು ಪರಿಸರ ಉಳಿಯಲಿ:** 'ಬೆಂಗಳೂರಿನ ಉತ್ತರ ಭಾಗದಲ್ಲಿ ಬರೀ ಕಾಂಕ್ರೀಟ್ ನಿರ್ಮಾಣವಾಗಿದೆ. ಜಕ್ಕೂರು ವಾಯುನೆಲೆ ಪ್ರದೇಶ 'ಶ್ವಾಸಕೋಶ'ದಂತೆ ಕಾರ್ಯನಿರ್ವಹಿಸುತ್ತಿದ್ದು, ಒಂದಷ್ಟು ಸ್ವಚ್ಛಗಾಳಿಯನ್ನು ಒದಗಿಸುತ್ತಿದೆ. ಈ ಪ್ರದೇಶದಲ್ಲೂ ಬೃಹತ್ ಕಟ್ಟಡಗಳು ನಿರ್ಮಾಣವಾದರೆ, ಹವಾಮಾನ ವೈಪರೀತ್ಯದಿಂದ ಉಷ್ಣಾಂಶವೂ ಹೆಚ್ಚಾಗುತ್ತದೆ. ಆದ್ದರಿಂದ, ಈ ಪ್ರದೇಶದಲ್ಲಿ ಯಾವುದೇ ಕಟ್ಟಡ ನಿರ್ಮಾಣ ಚಟುವಟಿಕೆಗಳು ನಡೆಯದಂತೆ ಸರ್ಕಾರ ಕ್ರಮ ಕೈಗೊಳ್ಳಬೇಕು' ಎಂದು ಪರಿಸರ ಕಾರ್ಯಕರ್ತರು ಆಗ್ರಹಿಸಿದರು.

## ಸುದ್ದಿ 2 ನಿಮಿಷ

### 'ಉನ್ನತ ಸ್ಥಾನ, ಉತ್ತಮ ವೇತನವೇ ಸಾಧನೆಯಲ್ಲ'

ಬೆಂಗಳೂರು: 'ಉನ್ನತ ಸ್ಥಾನಕ್ಕೆ ಏರುವುದು, ಕೈತುಂಬಾ ವೇತನ ಪಡೆಯುವುದು ನಿಜವಾದ ಯಶಸ್ಸು ಅಲ್ಲ. ಇತರರೂ ಸಂತೋಷವಾಗಿರುವಂತೆ ಮಾಡುವುದೇ ಯಶಸ್ಸು' ಎಂದು ಅಖಿಲ ಭಾರತೀಯ ತಾಂತ್ರಿಕ ಶಿಕ್ಷಣ ಮಂಡಳಿಯ ಅಧ್ಯಕ್ಷ ಟಿ.ಜಿ. ಸೀತಾರಾಂ ಹೇಳಿದರು.

ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ(ವಿಟಿಯು) ಆಯೋಜಿಸಿದ್ದ ಮಾಸಿಕ ಉಪನ್ಯಾಸ ಕಾರ್ಯಕ್ರಮದಲ್ಲಿ 'ಸಾರ್ವತ್ರಿಕ ಮಾನವೀಯ ಮೌಲ್ಯ' ಕುರಿತು ಅವರು ಮಾತನಾಡಿದರು.

'ಎಂಜಿನಿಯರ್‌ಗಳು ತಾಂತ್ರಿಕವಾಗಿ ಹೆಚ್ಚು ಬಲಶಾಲಿಯಾಗಿದ್ದ ಮಾತ್ರಕ್ಕೆ ಮಾನವೀಯ ಮೌಲ್ಯಗಳನ್ನು ರೂಢಿಸಿಕೊಳ್ಳಬಾರದು ಎಂದೇನಿಲ್ಲ. ಪ್ರತಿ ಮನುಷ್ಯನಿಗೂ ಮಾನವೀಯ ಮೌಲ್ಯಗಳು ಅಮೂಲ್ಯ. ತಂತ್ರಜ್ಞಾನ ಹೊರತಾದ ಒಂದು ಲೋಕವಿದೆ ಎಂಬ ಅರಿವು ಇರಬೇಕು' ಎಂದು ತಿಳಿಸಿದರು. ವಿಟಿಯು ಬೆಂಗಳೂರು ಪ್ರಾದೇಶಿಕ ಕಚೇರಿಯ ನಿರ್ದೇಶಕ ಎಚ್.ಆರ್. ಸುದರ್ಶನ ರೆಡ್ಡಿ ಮಾತನಾಡಿ, 'ತಂತ್ರಜ್ಞಾನವನ್ನು ಅಧ್ಯಯನ ಮಾಡುವ ವಿದ್ಯಾರ್ಥಿಗಳು ಯಂತ್ರೋಪಕರಣದ ರೀತಿ ಆಗಬಾರದು ಎಂಬ ಕಾರಣಕ್ಕೆ ಮಾನವೀಯ ಮೌಲ್ಯಗಳನ್ನು ತುಂಬಲು ಈ ರೀತಿಯ ಉಪನ್ಯಾಸ ಕಾರ್ಯಕ್ರಮ ಆಯೋಜಿಸುತ್ತಾ ಬಂದಿದ್ದೇವೆ' ಎಂದರು.

ವಿಟಿಯು ಕುಲಸಚಿವ ಪ್ರಸಾದ್ ಬಿ.ರಾಮ್‌ಪುರೆ, ಕುಲಸಚಿವ (ಮೌಲ್ಯಮಾಪನ) ಯು.ಜೆ. ಉಜ್ವಲ್ ಭಾಗವಹಿಸಿದ್ದರು.

### ರಾಜ್ಯೋತ್ಸವ ಆಚರಿಸಿದ್ದಕ್ಕೆ ನೋಟಿಸ್: ಪ್ರತಿಭಟನೆ



ಕೆ.ಆರ್.ಪುರ: ಅಪಾರ್ಟ್‌ಮೆಂಟ್‌ನಲ್ಲಿ ಕರ್ನಾಟಕ ರಾಜ್ಯೋತ್ಸವ ಆಚರಣೆ ಮಾಡಿದ್ದಕ್ಕೆ ಕೆಲಸದಿಂದ ತೆಗೆದು ಹಾಕುವುದಾಗಿ ಸಿಬ್ಬಂದಿಗೆ ನೋಟಿಸ್ ಜಾರಿ ಮಾಡಿರುವುದನ್ನು ಖಂಡಿಸಿ ಭಟ್ಟರಹಳ್ಳಿ ಸಮೀಪದ ಜೀನಾ ಶಾಲೋಮ್ ಅಪಾರ್ಟ್‌ಮೆಂಟ್ ಎದುರು ಯುವ ಕರ್ನಾಟಕ ವೇದಿಕೆ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಅಪಾರ್ಟ್‌ಮೆಂಟ್ ಅಸೋಸಿಯೇಷನ್ ಪ್ರಧಾನ ಕಾರ್ಯದರ್ಶಿ ಅಪಾರ್ಟ್‌ಮೆಂಟ್ ಸಿಬ್ಬಂದಿಗೆ ನೋಟಿಸ್ ಜಾರಿ ಮಾಡಿರುವುದರಿಂದ ಕರ್ನಾಟಕ ವೇದಿಕೆಯ ಕಾರ್ಯಕರ್ತರು ಪ್ರತಿಭಟಿಸಿದರು.

ಯುವ ಕರ್ನಾಟಕ ವೇದಿಕೆ ಸಂಘಟನಾ ಕಾರ್ಯದರ್ಶಿ ಆರ್. ಮಂಜುನಾಥ್ ಮಾತನಾಡಿ, 'ಕರ್ನಾಟಕದಲ್ಲಿ ಕನ್ನಡಿಗರ ಮೇಲೆ ನಿರಂತರ ದೌರ್ಜನ್ಯ ನಡೆಸುತ್ತಿದ್ದಾರೆ. ಮಿತಿ ಮೀರುತ್ತಿರುವ ಉತ್ತರ ಭಾರತೀಯರ ದಬ್ಬಾಳಿಕೆ, ದರ್ಪ ಕೊನೆ ಯಾವಾಗ' ಎಂದು ಪ್ರಶ್ನಿಸಿದರು. ಜೀನಾ ಶಾಲೋಮ್ ಅಪಾರ್ಟ್‌ಮೆಂಟ್‌ನಲ್ಲಿ ಕ್ಯಾಪ್ರಿಯೋ ಸಂಸ್ಥೆಯ ವತಿಯಿಂದ ನವೆಂಬರ್ 30 ರಾಜ್ಯೋತ್ಸವ ಆಚರಿಸಿದ್ದಾರೆ. ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ, 21 ಕನ್ನಡಿಗರನ್ನು ಕೆಲಸದಿಂದ ತೆಗೆದು ಹಾಕಲಾಗುವುದು ಎಂದು ಒಡಿಶಾ ಮೂಲದ ಪ್ರಧಾನ ಕಾರ್ಯದರ್ಶಿ ಸೌಮ್ಯಜಿತ್ ಹಾಗೂ ಸಹ ಖಜಾಂಚಿ ಸಾಕ್ಷಿ ಎಂಬುವವರು ನೋಟಿಸ್ ಜಾರಿ ಮಾಡಿದ್ದಾರೆ ಎಂದು ದೂರಿದರು.

ವೇದಿಕೆಯ ಸದಸ್ಯರಾದ ಕೃಷ್ಣಮೂರ್ತಿ, ಓಂ ಮಹೇಶ್, ಚೋಲಿಸ್, ಸುನೀಲ್, ಚಿಕ್ಕಣ್ಣ , ರಾಜೇಶ್, ಶಂಕರ್, ವೆಂಕಿ ಮತ್ತು ಗಂಗಾಧರ್ ಭಾಗವಹಿಸಿದ್ದರು.

# ರಾಷ್ಟ್ರೀಯ ಇಂಧನ ಸಂರಕ್ಷಣಾ ದಿನಾಚರಣೆ

ಪ್ರಜಾವಾಣಿ ವಾರ್ತೆ



ಕ್ರೆಡಲ್ ಆಯೋಜಿಸಿದ್ದ ಚಿತ್ರ ಬಿಡಿಸುವ ಸ್ಪರ್ಧೆಯಲ್ಲಿ ವಿಜೇತರಿಗೆ ಬಹುಮಾನ ವಿತರಿಸಲಾಯಿತು

ಬೆಂಗಳೂರು: ರಾಷ್ಟ್ರೀಯ ಇಂಧನ ಸಂರಕ್ಷಣಾ ಸಪ್ತಾಹದ ಭಾಗವಾಗಿ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ (ಕ್ರೆಡಲ್) ಕೇಂದ್ರ ಕಚೇರಿಯಲ್ಲಿ ಶುಕ್ರವಾರ ಇಂಧನ ಸಂರಕ್ಷಣಾ ದಿನ ಆಚರಿಸಲಾಯಿತು. ವಿವಿಧ ಪ್ರೌಢಶಾಲೆಗಳ ವಿದ್ಯಾರ್ಥಿಗಳಿಗೆ ಚಿತ್ರ ಬಿಡಿಸುವ ಸ್ಪರ್ಧೆ ಏರ್ಪಡಿಸಲಾಯಿತು.

ಕೇಂದ್ರದ ಇಂಧನ ಸಚಿವಾಲಯದ 'ಇಂಧನ ದಕ್ಷತೆಯ ಬ್ಯೂರೊ' (ಬಿಇಇ), ಇಂಧನ ಸಂರಕ್ಷಣೆ ಮತ್ತು ಸುಸ್ಥಿರ ಅಭ್ಯಾಸಗಳನ್ನು ಅಳವಡಿಸಿಕೊಳ್ಳುವ ಮಹತ್ವವನ್ನು ಸಾರುವ ಉದ್ದೇಶದಿಂದ ಎಲ್ಲ ರಾಜ್ಯಗಳಲ್ಲಿ ಇಂಧನ ಇಲಾಖೆ ವತಿಯಿಂದ ಸಪ್ತಾಹದ ಆಚರಣೆಯನ್ನು ಕಡ್ಡಾಯಗೊಳಿಸಿದೆ. ಅದರ ಭಾಗವಾಗಿ, ಮಹಾತ್ಮಗಾಂಧಿ ಗ್ರಾಮೀಣ ಇಂಧನ ಮತ್ತು ಅಭಿವೃದ್ಧಿ ಸಂಸ್ಥೆಯ ಸಹಯೋಗದೊಂದಿಗೆ ಕ್ರೆಡಲ್ ಈ ಕಾರ್ಯಕ್ರಮವನ್ನು ಏರ್ಪಡಿಸಿತ್ತು.

ಸ್ಪರ್ಧೆಯಲ್ಲಿ ಮೊದಲ ಬಹುಮಾನ ಪಡೆದವರಿಗೆ ₹3,000, ಎರಡನೇ ಬಹುಮಾನ ಪಡೆದವರಿಗೆ ₹ 2,000, ಮೂರನೇ ಬಹುಮಾನ ಪಡೆದವರಿಗೆ ₹1,500 ಹಾಗೂ ಸಮಾಧಾನಕರ ಬಹುಮಾನವಾಗಿ 11 ಮಂದಿಗೆ ತಲಾ ₹500 ನಗದು ವಿತರಿಸಲಾಯಿತು.

# ರಾಜಣ್ಣ ಕ್ಷಮೆ ಕೇಳಲು ಆಗ್ರಹ

ಬೆಂಗಳೂರು: 'ಶಾಸಕ ಕೆ.ಎನ್. ರಾಜಣ್ಣ ಇತ್ತೀಚೆಗೆ ಖಾಸಗಿ ವಾಹಿನಿಯ ಸಂದರ್ಶನದಲ್ಲಿ ಸವಿತಾ ಸಮುದಾಯದ ಬಗ್ಗೆ ಆಕ್ಷೇಪಾರ್ಹ ಪದ ಬಳಕೆ ಮಾಡಿದ್ದಾರೆ. ಅವರು ಕೂಡಲೇ ಕ್ಷಮೆ ಕೇಳಬೇಕು' ಎಂದು ರಾಜ್ಯ ಸವಿತಾ ಸಮುದಾಯದ ಕಾರ್ಯಾಧ್ಯಕ್ಷ ಬೈಲಪ್ಪ ನಾರಾಯಣ ಸ್ವಾಮಿ ಆಗ್ರಹಿಸಿದರು.

ಸುದ್ದಿಗೋಷ್ಠಿಯಲ್ಲಿ ಶುಕ್ರವಾರ ಮಾತನಾಡಿದ ಅವರು, 'ಶಾಸಕರು ಬಳಸಿದ ಪದದಿಂದಾಗಿ ನಮ್ಮ ಸಮುದಾಯಕ್ಕೆ ನೋವುಂಟಾಗಿದೆ. ರಾಜಣ್ಣ ಅವರ ಹೇಳಿಕೆಯನ್ನು ವಾಹಿನಿ ಯವರು ಪ್ರಶ್ನಿಸಬಹುದಿತ್ತು. ಅಲ್ಲದೇ ಆ ನಿರ್ದಿಷ್ಟ ತುಣುಕು ಪ್ರಸಾರವಾಗದಂತೆ ಎಚ್ಚರ ವಹಿಸಬೇಕಿತ್ತು' ಎಂದು ಹೇಳಿದರು.

ಪ್ರಧಾನ ಕಾರ್ಯದರ್ಶಿ ಕೆ. ಬಾಲಕೃಷ್ಣ ಮಾತನಾಡಿ, 'ಇದೇ ರೀತಿ ಹಿಂದೆ ಆಕ್ಷೇಪಾರ್ಹ ಪದ ಬಳಸಿದ್ದ ವಿಧಾನ ಪರಿಷತ್ ಸದಸ್ಯ ಸಿ.ಟಿ. ರವಿ ಅವರ ವಿರುದ್ಧ ಪ್ರತಿಭಟಿಸಿದ್ದೆವು. ಸಾರ್ವಜನಿಕರು ಆ ಪದವನ್ನು ಬೈಗುಳವಾಗಿ ಬಳಸಬಾರದು' ಎಂದು ತಿಳಿಸಿದರು.

'ಕರ್ನಾಟಕ ದ್ವೇಷ ಭಾಷಣ ಮತ್ತು ಅಪರಾಧ(ತಡೆ) ಮಸೂದೆ 2025' ಜಾರಿಗೆ ಬಂದರೆ ಇಂಥ ಆಕ್ಷೇಪಾರ್ಹ ಪದ ಬಳಸುವವರ ವಿರುದ್ಧ ಕ್ರಮ ಕೈಗೊಳ್ಳಲು ಅನುಕೂಲವಾಗಲಿದೆ. ಸವಿತಾ ಸಮಾಜದವರು ಈ ಕಾಯ್ದೆ ಬಳಸಿ, ದೂರು ಸಲ್ಲಿಸಬೇಕು' ಎಂದು ಸಮುದಾಯದ ನಾಯಕಿ ನಾಗವೇಣಿ ತಿಳಿಸಿದರು.

ಸವಿತಾ ಸಮಾಜದ ಮುಖಂಡರಾದ ವೇಣುಗೋಪಾಲ್, ರಾಘವೇಂದ್ರ, ಕೌಶಿಕ್ ಮತ್ತು ಜಿ.ಆರ್. ಅಭಿಷೇಕ್ ಉಪಸ್ಥಿತರಿದ್ದರು.

# ಮುಂದುವರಿದ ಡಿಕೆಶಿ –ಬಿವೈವಿ ವಾಕ್ಸಮರ

## ‘ಭ್ರಷ್ಟಾಚಾರದ ಪಿತಾಮಹ’ –ಬಿವೈವಿ
## • ‘ಸಾಬೀತು ಮಾಡಲಿ’ –ಡಿಕೆಶಿ

ಪ್ರಜಾವಾಣಿ ವಾರ್ತೆ

**ಬೆಳಗಾವಿ:** ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಮತ್ತು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ಮಾತಿನ ಕದನ ಶುಕ್ರವಾರವೂ ಮುಂದುವರಿಯಿತು.


ಬಿ.ವೈ. ವಿಜಯೇಂದ್ರ

ಸುವರ್ಣ ವಿಧಾನಸೌಧದ ಹೊರಗೆ ಪ್ರತ್ಯೇಕವಾಗಿ ಮಾತನಾಡಿದ ಇಬ್ಬರೂ ಪರಸ್ಪರ ಆರೋಪ ಮಾಡಿದರು.

‘ವಿಜಯೇಂದ್ರ ಕಲೆಕ್ಷನ್ ಕಿಂಗ್’ ಎಂಬ ಡಿ.ಕೆ.ಶಿವಕುಮಾರ್ ಆರೋಪಕ್ಕೆ, ಪ್ರತಿಕ್ರಿಯಿಸಿದ ವಿಜಯೇಂದ್ರ, ‘ಡಿ.ಕೆ.ಶಿವಕುಮಾರ್ ಭ್ರಷ್ಟಾಚಾರದ ಪಿತಾಮಹ. ಈ ಮಾತನ್ನು ನಾನಷ್ಟೇ ಅಲ್ಲ; ಕಾಂಗ್ರೆಸ್‌ನವರೂ ಹೇಳುತ್ತಾರೆ. ಅವರ ಬಾಯಿಯಿಂದ ಭ್ರಷ್ಟಾಚಾರದ ಬಗ್ಗೆ ಮಾತು ಬಾರದಿದ್ದರೆ ಉತ್ತಮ’ ಎಂದು ಕಿಡಿಕಾರಿದರು.

‘ಶಿವಕುಮಾರ್ ಅಧಿಕಾರದ ಮದದಲ್ಲಿ ಮಾತನಾಡುತ್ತಿದ್ದೀರಿ. ನಾನೂ ಒಬ್ಬ ಜನಪ್ರತಿನಿಧಿ ಇದ್ದೇನೆ. ಯಾರಿಗೋ ಬೆದರಿಕೆ ಹಾಕಿದ ಹಾಗೆ, ದಬ್ಬಾಳಿಕೆ ಮಾಡಿದ ಹಾಗೆ ನನ್ನೊಂದಿಗೆ ವರ್ತಿಸಬೇಡಿ’ ಎಂದೂ ತಾಕೀತು ಮಾಡಿದರು.

‘ಬೆಂಗಳೂರು ನಗರ ಸೇರಿ ಇಡೀ ರಾಜ್ಯದಲ್ಲಿ ಒಂದು ರಸ್ತೆಗುಂಡಿ ಮುಚ್ಚುವ ಯೋಗ್ಯತೆ ಇವರ ಸರ್ಕಾರಕ್ಕೆ ಇಲ್ಲ. ಈ ಸರ್ಕಾರ ಬಂದಾಗಿನಿಂದ ಖಜಾನೆ ಖಾಲಿ ಮಾಡಿ ಹೈಕಮಾಂಡ್ ತೃಪ್ತಿಪಡಿಸುತ್ತಿರುವುದು ನಡೆದೇ ಇದೆ. ಯಾವಾಗ ಕಾಂಗ್ರೆಸ್ ರಾಜ್ಯದಲ್ಲಿ ಅಧಿಕಾರಕ್ಕೆ ಬಂದಿದೆಯೋ ಅವಾಗೆಲ್ಲ ಎಟಿಎಂ ಆಗಿ ಕೆಲಸ ಮಾಡಿದ್ದಾರೆ. ಖಜಾನೆ ಖಾಲಿ ಆಗಿದೆ ಎಂದರೆ ನಿಮಗೆ ಏಕೆ ಸಿಟ್ಟು ಬರುತ್ತದೆ ಎಂದೂ ಪ್ರಶ್ನಿಸಿದರು.

### ಮುಖ್ಯಾಂಶಗಳು

- ‘ವಿಜಯೇಂದ್ರ ಕಲೆಕ್ಷನ್ ಕಿಂಗ್’ ಎಂದು ಟೀಕಿಸಿದ್ದ ಉಪಮುಖ್ಯಮಂತ್ರಿ
- ‘ಯಾರಿಗೊ ಬೆದರಿಕೆ ಹಾಕಿದ ಹಾಗೆ ನನ್ನೊಂದಿಗೆ ವರ್ತಿಸಬೇಡಿ’ ಎಂದು ವಿಜಯೇಂದ್ರ ತಿರುಗೇಟು

### ‘ಮುಂದೆ ಸರಿಯಾದ ಉತ್ತರ ಕೊಡ್ತೇನೆ’

‘ನಮ್ಮ ಸರ್ಕಾರ ಹೈಕಮಾಂಡ್‌ನ ಎಟಿಎಂ ಎಂಬ ಆರೋಪವನ್ನು ಅವರು ಸಾಬೀತು ಪಡಿಸಬೇಕು. ಈ ವಿಜಯೇಂದ್ರಗೆ ಮುಂದೆಯೂ ‘ಸರಿಯಾದ ಉತ್ತರ’ ಕೊಡುತ್ತೇನೆ’ ಎಂದು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಗರಂ ಆಗಿ ಪ್ರತಿಕ್ರಿಯಿಸಿದರು.

ಸುದ್ದಿಗಾರರ ಜೊತೆಗೆ ಮಾತನಾಡಿದ ಅವರು, ವಿಜಯೇಂದ್ರ ಯಾವ ಆಧಾರದಲ್ಲಿ ಈ ರೀತಿ ಆರೋಪ ಮಾಡಿದ್ದಾರೆ ಎಂದು ಕೇಳಿಯೇ ಕೇಳುತ್ತೇನೆ’ ಎಂದರು.

‘ಚಳಿಗಾಲದ ಅಧಿವೇಶನ ಯಶಸ್ವಿಯಾಗಿದೆ. ನಮ್ಮ ಮೇಲೆ ಆರೋಪ ಮಾಡಲು ಬಿಜೆಪಿಯವರಿಗೆ ಬೇರೇನೂ ಸಿಗುತ್ತಿಲ್ಲ. ಇಂಥ ವಿಚಾರ ಹೊರ ತರುತ್ತಿದ್ದಾರೆ’ ಎಂದೂ ಹೇಳಿದರು.

‘ಪ್ರಕರಣವೊಂದರಲ್ಲಿ ತನಿಖೆಗಾಗಿ ದೆಹಲಿ ಪೊಲೀಸರು ಕರೆದಿದ್ದಾರೆ. ಅಧಿವೇಶನದಲ್ಲಿ ಕ್ರಿಯಾಶೀಲನಾದ ಕಾರಣ ಹೋಗಲು ಆಗಿಲ್ಲ. ಮುಂದಿನ ವಾರ ಬರುವುದಾಗಿ ಉತ್ತರಿಸಿದ್ದೇನೆ’ ಎಂದು ಪ್ರಶ್ನೆಯೊಂದಕ್ಕೆ ಅವರು ಪ್ರತಿಕ್ರಿಯಿಸಿದರು.

# ಎಬಿವಿಪಿ ಪ್ರಾಂತ ಕಾರ್ಯಕಾರಿಣಿ ರಚನೆ

ಪ್ರಜಾವಾಣಿ ವಾರ್ತೆ

**ಮಡಿಕೇರಿ:** ಶುಕ್ರವಾರ ಅಂತ್ಯಗೊಂಡ ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ತಿನ 45ನೇ ಕರ್ನಾಟಕ ದಕ್ಷಿಣ ಪ್ರಾಂತ ಸಮ್ಮೇಳನದಲ್ಲಿ 2026–27ನೇ ಸಾಲಿನ ವಿದ್ಯಾರ್ಥಿ ಪರಿಷತ್ ಪ್ರಾಂತ ಕಾರ್ಯಕಾರಿಣಿ ರಚಿಸಲಾಯಿತು.

ಅಧ್ಯಕ್ಷರಾಗಿ ರವಿ ಮಂಡ್ಯ, ಕಾರ್ಯದರ್ಶಿಯಾಗಿ ಗೋಪಿ ರಂಗಸ್ವಾಮಿ, ಸಹ ಕಾರ್ಯದರ್ಶಿಯಾಗಿ ಎಚ್.ಬಿ.ಪ್ರಜ್ವಲ್, ಯಶವಂತ್, ದಿವ್ಯಾ, ಸುಧಾ ಶೆಣೈ, ಸುವಿತ್ ಶೆಟ್ಟಿ ಅವರು ಆಯ್ಕೆಯಾದರು.

‘ಬೆಂಗಳೂರು ಹುಡುಗರು’ ಸಂಸ್ಥೆಯ ಸಹ ಸಂಸ್ಥಾಪಕ ಮನೋಜ್ ನಂದೀಶಪ್ಪ ಅವರಿಗೆ ‘ಮೀಡಿಯಾ ಮಾಸ್ಟರ್ ಯೂಟ್ಯೂಬ್ ಚಾನೆಲ್‌ನ ಎಂ.ಎಸ್. ರಾಘವೇಂದ್ರ ಅವರು ಯುವ ಪುರಸ್ಕಾರ ಪ್ರದಾನ ಮಾಡಿದರು.

**ಸಮ್ಮೇಳನದ ಒತ್ತಾಯಗಳು:** ರಾಜ್ಯದಲ್ಲಿ ಎಲ್ಲ ವಿಶ್ವವಿದ್ಯಾಲಯಗಳಿಗೆ ಮೂಲ ಸೌಕರ್ಯ ಒದಗಿಸಿ ಸದೃಢಗೊಳಿಸಬೇಕು, ಪ್ರಾದೇಶಿಕ ಸಮಗ್ರ ಅಭಿವೃದ್ಧಿಗೆ ಪೂರಕವಾಗುವ ಹೂಡಿಕೆ ನೀತಿಗಳನ್ನು ರೂಪಿಸಿ ಅನುಷ್ಠಾನಗೊಳಿಸಬೇಕು ಹಾಗೂ ಉದ್ಯೋಗಾವಕಾಶಗಳನ್ನು ಒದಗಿಸುವ ಹೂಡಿಕೆ ಕೈ ತಪ್ಪದಂತೆ ನೋಡಿಕೊಳ್ಳಬೇಕು, ಪ್ರಾಥಮಿಕ ಹಂತದಲ್ಲೇ ಕೃತಕ ಬುದ್ಧಿಮತ್ತೆ ಪರಿಚಯಿಸಬೇಕು. ಶಿಕ್ಷಣ ಸಂಸ್ಥೆಗಳಿಗೆ ಗುಣಮಟ್ಟದ ಎಐ ಆಧಾರಿತ ಶೈಕ್ಷಣಿಕ ಪರಿಕರಗಳನ್ನು ಕಲ್ಪಿಸಬೇಕು.



ಸಮ್ಮೇಳನದಲ್ಲಿ ‘ಬೆಂಗಳೂರು ಹುಡುಗರು’ ಸಂಸ್ಥೆಯ ಸಹ ಸಂಸ್ಥಾಪಕ ಮನೋಜ್ ನಂದೀಶಪ್ಪ ಅವರಿಗೆ ‘ಯುವ ಪುರಸ್ಕಾರ’ ಪ್ರದಾನ ಮಾಡಲಾಯಿತು. ಎಂ.ಎಸ್. ರಾಘವೇಂದ್ರ, ಪ್ರಾಂತ ಅಧ್ಯಕ್ಷ ರವಿ ಮಂಡ್ಯ, ಪದಾಧಿಕಾರಿಗಳಾದ ಗೋಪಿ ರಂಗಸ್ವಾಮಿ, ತುಮಕೂರು ವಿಭಾಗದ ಅಜಯಕುಮಾರ್ ಭಾಗವಹಿಸಿದ್ದರು

# ಡಿಸಿಎಂ ಕಾರ್ಯದರ್ಶಿ ಕಾರು ಡಿಕ್ಕಿ: ಬೈಕ್ ಸವಾರ ಸಾವು

**ಸವದತ್ತಿ (ಬೆಳಗಾವಿ ಜಿಲ್ಲೆ):** ಇಲ್ಲಿನ ನಿಕ್ಕಂ ಕಲ್ಯಾಣ ಮಂಟಪದ ಹತ್ತಿರ ಗುರುವಾರ ರಾತ್ರಿ ಉಪ ಮುಖ್ಯಮಂತ್ರಿ ಅವರ ಆಪ್ತ ಕಾರ್ಯದರ್ಶಿ ರಾಜೇಂದ್ರ ಪ್ರಸಾದ ಅವರಿದ್ದ ಕಾರು ಡಿಕ್ಕಿ ಹೊಡೆದು ಬೈಕ್ ಸವಾರ, ಕವಲಪೇಠ ಓಣಿಯ ನಿವಾಸಿ ಮಂಜುನಾಥ ನೀಲಪ್ಪ ಬೈರನಟ್ಟಿ (30) ಮೃತಪಟ್ಟಿದ್ದಾರೆ.

‘ಕಾರು ಚಾಲಕ ಹೇಮಂತಕುಮಾರ ಅವರ ವೇಗದ ಚಾಲನೆ ಅಪಘಾತಕ್ಕೆ ಕಾರಣ. ರಾಜೇಂದ್ರ ಪ್ರಸಾದ ಅವರ ಕುತ್ತಿಗೆ ಮತ್ತು ಎದೆಗೆ ಗಾಯವಾಗಿದೆ’ ಎಂದು ಸವದತ್ತಿ ಠಾಣೆ ಪೊಲೀಸರು ತಿಳಿಸಿದ್ದಾರೆ.

‘ಪಿ.ಎಸ್ ರಾಜೇಂದ್ರಪ್ರಸಾದ್ ಮತ್ತು ಕಾರು ಚಾಲಕರಿಗೆ ಗಾಯಗಳಾಗಿದ್ದು, ಅಪಾಯ ಇಲ್ಲ. ಅದರೆ, ಅಪಘಾತದಲ್ಲಿ ಯುವಕ ಮೃತಪಟ್ಟಿದ್ದು ದುರ್ದೈವ. ಅವರ ಮನೆಗೆ ಭೇಟಿ ನೀಡುವೆ. ಅವರ ಕುಟುಂಬಕ್ಕೆ ಅಗತ್ಯ ನೆರವು ನೀಡಲಾಗುವುದು’ ಎಂದು ಡಿಸಿಎಂ ಡಿ.ಕೆ.ಶಿವಕುಮಾರ್ ತಿಳಿಸಿದರು.

## 18ನೇ ಕ್ರಸ್ಟ್ ಗೇಟ್ ಅಳವಡಿಕೆ 24ರಿಂದ

**ಹೊಸಪೇಟೆ (ವಿಜಯನಗರ):** ತುಂಗಭದ್ರಾ ಅಣೆಕಟ್ಟೆಯ 18ನೇ ಕ್ರಸ್ಟ್‌ಗೇಟ್ ಅಳವಡಿಕೆಗೆ ಎಲ್ಲ ಸಿದ್ಧತೆ ಆಗಿದ್ದು, 2 ಅಡಿಯಷ್ಟು ಕೆಳಗೆ ನೀರು ಇಳಿದ ತಕ್ಷಣ, ಬಹುತೇಕ 3 ದಿನದಲ್ಲಿ ಗೇಟ್ ಅಳವಡಿಕೆ ಕಾರ್ಯ ನಡೆಯಲಿದೆ.

‘ಶುಕ್ರವಾರ ಜಲಾಶಯದಲ್ಲಿ ನೀರಿನ ಸಂಗ್ರಹ 49.66 ಟಿಎಂಸಿ ಅಡಿ ಇತ್ತು. ಸದ್ಯ ಕಾಲುವೆಗಳಿಗೆ 10,853 ಕ್ಯೂಸೆಕ್, ಹಾಗೂ ನದಿಗೆ 6,200 ಕ್ಯೂಸೆಕ್ ನೀರು ಹರಿಯುತ್ತಿದೆ. ದಿನಕ್ಕೆ ಬಹುತೇಕ 2 ಟಿಎಂಸಿ ಅಡಿ ನೀರು ಖಾಲಿಯಾಗುತ್ತಿದೆ. 1,613 ಅಡಿ ಮಟ್ಟಕ್ಕೆ ನೀರು ತಲುಪಿದಾಗ (43 ಟಿಎಂಸಿ ಅಡಿ) ಹೊಸ ಗೇಟ್ ಅಳವಡಿಸುವ ಕಾರ್ಯ ಬಹುತೇಕ ಡಿ.24ರಿಂದ ಆರಂಭವಾಗಲಿದೆ’ ಎಂದು ತುಂಗಭದ್ರಾ ಮಂಡಳಿಯ ಮೂಲಗಳು ತಿಳಿಸಿವೆ.

## ಜಾರ್ಜ್ ಹೆಲಿಕಾಪ್ಟರ್ ತುರ್ತು ಭೂಸ್ಪರ್ಶ

**ಬೆಳಗಾವಿ:** ಇಂಧನ ಸಚಿವ ಕೆ.ಜೆ.ಜಾರ್ಜ್ ಪ್ರಯಾಣಿಸುತ್ತಿದ್ದ ಹೆಲಿಕಾಪ್ಟರ್ ಶುಕ್ರವಾರ ಇಲ್ಲಿನ ಸುವರ್ಣ ವಿಧಾನಸೌಧದ ಹೆಲಿಪ್ಯಾಡ್‌ನಲ್ಲಿ ತುರ್ತು ಭೂಸ್ಪರ್ಶ ಮಾಡಿತು.


ಸಚಿವರು ಬೆಂಗಳೂರಿಗೆ ಪ್ರಯಾಣಿಸುತ್ತಿದ್ದರು. ಸಿಂಗಲ್ ಎಂಜಿನ್ ಹೆಲಿಕಾಪ್ಟರ್ ಟೇಕ್ ಆಫ್ ಆಗಿತ್ತು. ಆದರೆ, ಕೆಲಹೊತ್ತು ಹಾರಾಡಿದ್ದು, ಪ್ರತಿಕೂಲ ಹವಾಮಾನದಿಂದ ಗೊಂದಲ ಆದಂತಿತ್ತು. ಪೈಲಟ್ ಸುರಕ್ಷಿತವಾಗಿ ಕೆಳಗಿಳಿಸಿದರು. ಹವಾಮಾನ ಸಹಜ ಸ್ಥಿತಿಗೆ ಬಂದ ಬಳಿಕ ಹೆಲಿಕಾಪ್ಟರ್ ಮತ್ತೆ ಬೆಂಗಳೂರಿನತ್ತ ಹಾರಿತು.



ನಾವೂ ಭಾರತೀಯರು ಭಾರತದಲ್ಲಿದ್ದಾಗ!

# ತೆರೆದಿದೆ ಮನ ಓ ಬಾ ಅತಿಥಿ

ವಿದೇಶಿ ಪ್ರವಾಸಿಗರಿಗೆ ನಮ್ಮ ಪ್ರವಾಸಿ ತಾಣಗಳಲ್ಲಿ ಮೂಲ ಸೌಕರ್ಯ ಕಲ್ಪಿಸಿದರಷ್ಟೇ ಸಾಕೆ? ಬದುಕಿನ ಬನಿಯ ಅರಸಿ ಬರುವ ಯಾತ್ರಿಕರಿಗೆ, ಪ್ರವಾಸೋದ್ಯಮದ ಪರಿಕಲ್ಪನೆಯ ಆಚೆಗೂ ಮೀರಿದ ಆತ್ಮೀಯತೆಯ ನಂಟನ್ನು ಉಣಬಡಿಸುವ ಜರೂರೂ ಇದೆಯಲ್ಲವೇ? ಅಂತಹದ್ದೊಂದು ಕಾಯಕದಲ್ಲಿ ನಿರತರಾಗಿದ್ದಾರೆ ಮೈಸೂರಿನ ಶಶಿಕಲಾ ಅಶೋಕ್. ವಿದೇಶಿ ಅತಿಥಿಗಳಿಗೆ ಆತಿಥ್ಯವನ್ನಷ್ಟೇ ಅಲ್ಲ ಭಾರತೀಯ ಸಂಸ್ಕೃತಿಯ ಸೊಬಗನ್ನೂ ಪರಿಚಯಿಸುವ ವಿಶೇಷ ಕೈಂಕರ್ಯದಲ್ಲಿ ತೊಡಗಿಕೊಂಡಿದ್ದಾರೆ.



“ಮೈಸೂರಿನ ತಾಣಗಳನ್ನು ನೋಡಿ ಖುಷಿಯಾಯಿತು. ಬಾಳೆಎಲೆ ಮೇಲಿನ ಊಟ ವಿಸ್ಮಯ ಮೂಡಿಸಿತು. ಸೀರೆ, ಮಲ್ಲಿಗೆ ಹೂವು ತೊಟ್ಟು ಪುಳಕಗೊಂಡಿರುವೆ. ಸೀರೆ ಉಡಬೇಕೆಂಬ ಆಸೆ ಕೈಗೂಡಿತು.
**ವಜೇನಿಯಾ,** ಜರ್ಮನಿ



ಯಾವ ದೇಶದವರಾದರೇನು ನೀರೆ? ಸೊಬಗೇ ಸೊಬಗು ಸೀರೆ. ಸೀರೆ ಉಡಿಸುತ್ತಿರುವ ಶಶಿಕಲಾ



“ಉದ್ದನೆಯ ಸೀರೆ ಕಂಡು ಅಚ್ಚರಿಗೊಂಡೆವು. ಅದನ್ನು ಉಟ್ಟುಕೊಳ್ಳುವ ವಿಧಾನ ಆಸಕ್ತಿದಾಯಕ.
**ಸು ಮತ್ತು ನಿಗೆಲ್ ದಂಪತಿ,** ಇಂಗ್ಲೆಂಡ್

• ಸುಮಾ ಬಿ.

**‘ಐ ಆ್ಯಮ್ ನಾಟ್ ಟೇಕಿಂಗ್ ಎನಿತಿಂಗ್ ಫ್ರಂ ಯುವರ್ ಹೋಮ್. ಐ ಆ್ಯಮ್ ಟೇಕಿಂಗ್ ಒನ್ ತಿಂಗ್, ದಟ್ ಈಸ್ ಸ್ಯಾಟಿಸ್‌ಫ್ಯಾಕ್ಷನ್’.**

–ಇಂಗ್ಲೆಂಡ್‌ನಿಂದ ಬಂದಿದ್ದ ವೈದ್ಯ ಪ್ರವಾಸಿಯೊಬ್ಬರು ಮೈಸೂರಿನ ಶಶಿಕಲಾ ಅವರ ಮನೆಯ ಊಟ ಸವಿದು ಹೇಳಿದ ಮಾತಿದು.

ಹೌದು, ಇಂತಹ ‘ಸಂತೃಪ್ತಿ’ಯನ್ನು 15 ವರ್ಷಗಳಿಂದ ವಿದೇಶಿ ಪ್ರವಾಸಿಗರಿಗೆ ಉಣಬಡಿಸುತ್ತಿದ್ದಾರೆ ಶಶಿಕಲಾ ಅಶೋಕ್. ‘ಸಂತೃಪ್ತಿಯನ್ನು ಉಣಬಡಿಸುವುದೇ?’ ಎಂದು ಹುಬ್ಬು ಗಂಟಿಕ್ಕಬೇಡಿ. ವಿದೇಶಿ ಪ್ರವಾಸಿಗರಿಗೆ ಅಕ್ಕರೆಯ ಆತಿಥ್ಯ ನೀಡುತ್ತಿರುವ ಶಶಿಕಲಾ ಅವರು ಭಾರತೀಯ ಆಹಾರ ಪದ್ಧತಿಯ ಜೊತೆಗೆ ಸಂಸ್ಕೃತಿ, ಆಚಾರ- ವಿಚಾರಗಳನ್ನೂ ಸದ್ದಿಲ್ಲದೇ ಅವರ ಮನಕ್ಕೆ ದಾಟಿಸುತ್ತಿದ್ದಾರೆ. ಆ ಮೂಲಕ ಪ್ರವಾಸಿಗರಿಗೆ ಸಂತೃಪ್ತ ಭಾವ ನೀಡುತ್ತಿದ್ದಾರೆ.

ಈ ಕಾರ್ಯಕ್ಕೆ, ಒಂಟಿಕೊಪ್ಪಲಿನಲ್ಲಿರುವ, ಅರ್ಧ ಶತಮಾನದಷ್ಟು ಹಳೆಯದಾದ ಅವರ ಮನೆಯೇ ಕಾರ್ಯಾಲಯ. ಮೈಸೂರು ಸುತ್ತಮುತ್ತಲಿನ ವಿವಿಧ ಪ್ರವಾಸಿ ತಾಣಗಳನ್ನು ಕಣ್ತುಂಬಿಕೊಂಡು ಈ ಮನೆಗೆ ಭೇಟಿ ನೀಡುವ ವಿದೇಶಿಯರಿಗೆ ಭಾರತೀಯ ಸಂಸ್ಕೃತಿಯ ದರ್ಶನ ಇಲ್ಲಿ ಲಭ್ಯವಾಗುತ್ತದೆ. ಅನತಿ ದೂರದಿಂದಲೇ ಬ್ಯಾಂಡು, ಭಜಂತ್ರಿಯೊಂದಿಗೆ, ಪ್ರತಿಯೊಬ್ಬರಿಗೂ ಹೂವಿನ ಹಾರ ಹಾಕಿ, ತಿಲಕವಿಟ್ಟು ಮನೆಗೆ ಸ್ವಾಗತವೀಯುವ ಅವರ ಕ್ರಮದಿಂದ ವಿದೇಶಿಯರು ಪುಳಕಗೊಳ್ಳುತ್ತಾರೆ.

ಪ್ರತಿಯೊಬ್ಬರಿಗೂ ಬಾಳೆಎಲೆಯಲ್ಲೇ ಊಟ, ಬಳಿಕ ಮೈಸೂರು ವೀಳ್ಯದೆಲೆಯ ತಾಂಬೂಲ. ಲಘು ಸಂಗೀತ, ಭರತನಾಟ್ಯ ಪ್ರದರ್ಶನ ಈ ವೇಳೆ ಜೊತೆಯಾಗುತ್ತವೆ. ಮಹಿಳೆಯರಿಗೆ ಸೀರೆ ಉಡಿಸುವುದು, ಜಡೆ ಹಾಕಿ ಮಲ್ಲಿಗೆ ಹೂವು ಮುಡಿಸುವುದು, ಮೆಹೆಂದಿ ಬಿಡಿಸುವುದು, ಬೀಳ್ಕೊಡುವಾಗ ಅರಸಿನ, ಕುಂಕುಮವಿಟ್ಟು ಬಾಗಿನ ಕೊಡುವುದು, ಪುರುಷರಿಗೆ ಪಂಚೆ, ಶಲ್ಯ, ಮೈಸೂರು ಪೇಟ ತೊಡಿಸಿ ಬೀಗುವುದು... ಹೀಗೆ ಭಾರತೀಯ ಸಂಸ್ಕೃತಿಯನ್ನು ಪರಿಚಯಿಸುವ ಕಾಯಕ ಇಲ್ಲಿ ನಿರಂತರ. ಇನ್ನು ಸಾಕಷ್ಟು ಬಿಡುವು ಮಾಡಿಕೊಂಡು ಬರುವ ಪ್ರವಾಸಿಗರಿಗೆ ಅಳಗುಳಿ ಮನೆ, ಪಗಡೆ ಆಟದ ಪರಿಚಯವನ್ನೂ ಮಾಡಿಸುತ್ತಿದ್ದಾರೆ ಶಶಿಕಲಾ.

ಕರ್ನಾಟಕದ ಇತರ ಪ್ರವಾಸಿ ತಾಣಗಳಿಗೆ ಭೇಟಿ ಕೊಟ್ಟಾಗ ಹೋಟೆಲ್‌ನಲ್ಲಿ ಯಾಂತ್ರಿಕವಾಗಿ ಊಟ ಮಾಡುವ ಪ್ರವಾಸಿಗರು, ಮೈಸೂರಿನಲ್ಲಿ ಶಶಿಕಲಾ ಅವರ ಮನೆಯ ಆತಿಥ್ಯ ಕಂಡು ಬೆರಗಾಗುತ್ತಾರೆ. ಭಾರತೀಯರ ಮನೆಗಳಲ್ಲಿನ ಊಟ, ಸಂಸ್ಕೃತಿಯ ಒಟ್ಟಂದದ ಕಲ್ಪನೆಯು ವಿದೇಶಿಯರ ಮನದಲ್ಲಿ ಮೂಡುತ್ತದೆ.

ಈ ರೀತಿಯ ಭಿನ್ನ ಹಾದಿಯಲ್ಲಿ ನಡೆಯುತ್ತ ಉದ್ಯಮಿಯಾಗಿ ಗುರುತಿಸಿಕೊಂಡಿರುವ ಶಶಿಕಲಾ ಅವರಿಗೆ ವಿದೇಶಿಯರಿಗೆ ಉಣಬಡಿಸುವ ಅವಕಾಶ ಒದಗಿಬಂದದ್ದು ಆಕಸ್ಮಿಕವಾಗಿ. ಶಶಿಕಲಾ ಅವರ ಪತಿ ಅಶೋಕ್ ವಿದೇಶಿ ಪ್ರವಾಸ ಸಂಘಟಕರು. ಭಾರತಕ್ಕೆ ಬರುವ ವಿದೇಶಿ ಪ್ರವಾಸಿಗರಿಗೆ ಪ್ರವಾಸಿತಾಣಗಳ ವೀಕ್ಷಣೆಗೆ ಸಿದ್ಧತೆ ಮಾಡಿಕೊಡುತ್ತಾರೆ.

ಹೀಗೆ 2009ರಲ್ಲಿ ಮೈಸೂರಿಗೆ ಬಂದಿದ್ದ ಜರ್ಮನಿಯ ಎರಡು ಕುಟುಂಬಗಳು, ಭಾರತೀಯ ಸಾಂಪ್ರದಾಯಿಕ ಶೈಲಿಯ ಊಟ ಸವಿಯುವ ಇಂಗಿತ ವ್ಯಕ್ತಪಡಿಸಿದವು. ಆಗ ಮಧ್ಯಾಹ್ನದ ಊಟದ ಸಮಯ ಮೀರಿದ್ದರಿಂದ ಅವರನ್ನು ಅಶೋಕ್ ಹೋಟೆಲಿನ ಬದಲಾಗಿ ತಮ್ಮ ಮನೆಗೇ ಕರೆತಂದರು. ಊಟ ಮಾಡಿದ ಬಳಿಕ ಆ ಅನಿರೀಕ್ಷಿತ ಅತಿಥಿಗಳಲ್ಲಿ ಕಂಡುಬಂದ ತೃಪ್ತಿ, ಸಂತಸ ಶಶಿಕಲಾ ಅವರಲ್ಲಿ ಪ್ರವಾಸಿಗರ ಆತಿಥ್ಯದ ಪರಿಕಲ್ಪನೆ ಒಡಮೂಡಿಸಿತು. ಅಂದಿನಿಂದ ಅವರು ವಿದೇಶಿಯರಿಗೆ ಅಪ್ಪಟ ದೇಸಿ ಊಟ ಉಣಬಡಿಸುವುದನ್ನೇ ಕಾಯಕವನ್ನಾಗಿಸಿಕೊಂಡರು.

ರಾಜ್ಯದಲ್ಲಿ ವಿದೇಶಿ ಪ್ರವಾಸಿಗರು ಹೆಚ್ಚು ಭೇಟಿ ನೀಡುವ ಸ್ಥಳಗಳಲ್ಲಿ ಮೈಸೂರು ಮುಂಚೂಣಿಯಲ್ಲಿದೆ. ಸಾಮಾನ್ಯವಾಗಿ ಡಿಸೆಂಬರ್‌ನಿಂದ ಮಾರ್ಚ್‌ವರೆಗೆ ನಿರಂತರವಾಗಿ ಪ್ರವಾಸಿಗರು ಭೇಟಿ ನೀಡುತ್ತಾರೆ. ವಾರದಲ್ಲಿ ಮೂರ್ನಾಲ್ಕು ದಿನ ಶಶಿಕಲಾ ಅವರ ಮನೆಯಲ್ಲಿ ವಿದೇಶಿ ಅತಿಥಿಗಳು ಇದ್ದೇ ಇರುತ್ತಾರೆ. ಇಬ್ಬರಿಂದ ಹಿಡಿದು 25ರಿಂದ 30 ಪ್ರವಾಸಿಗರು ಒಮ್ಮೆಲೇ ಬರುತ್ತಾರೆ. ಹೆಚ್ಚು ಪ್ರವಾಸಿಗರು ಭೇಟಿ ನೀಡುವ ಸಂದರ್ಭದಲ್ಲಿ ಒಂದಿಬ್ಬರು ಅಡುಗೆ ಸಹಾಯಕರನ್ನು ಜೊತೆಯಲ್ಲಿಟ್ಟುಕೊಳ್ಳುತ್ತಾರೆ. ಖಾದ್ಯ ತಯಾರಿಯೆಲ್ಲ ಶಶಿಕಲಾ ಅವರದ್ದೇ.

‘ನಾನು ತಯಾರಿಸುವ ಅಡುಗೆಯ ರುಚಿಯಲ್ಲಿ ಸ್ವಲ್ಪ ವ್ಯತ್ಯಾಸವಾದರೂ ಭಾರತಕ್ಕೆ ಕೆಟ್ಟ ಹೆಸರು. ವಿದೇಶಿಯರು ತಮ್ಮ ಊರುಗಳಿಗೆ ತೆರಳಿದಾಗ ನನ್ನ ಹೆಸರನ್ನೇನೂ ಹೇಳುವುದಿಲ್ಲ; ಬದಲಾಗಿ ಭಾರತದ ಹೆಸರನ್ನು ಹೇಳುತ್ತಾರೆ. ಹೀಗಾಗಿ, ದೇಶದ ಪ್ರತಿನಿಧಿಯಾಗಿ ಅವರಿಗೆ ಆತಿಥ್ಯ ನೀಡುತ್ತೇನೆ. ಆ ಪ್ರಜ್ಞೆ ಯಾವಾಗಲೂ ನನ್ನಲ್ಲಿ ಜಾಗೃತವಾಗೇ ಇರುತ್ತದೆ. ನಾವು ಅಕ್ಕರೆ, ಆತಿಥ್ಯ ತೋರಿದರೆ ಅವರಲ್ಲೂ ಆ ಭಾವ ಸ್ಫುರಿಸುತ್ತದೆ. ಮನುಷ್ಯ ಏನೇ ಕೊಟ್ಟರೂ ‘ಬೇಕು ಬೇಕು’ ಎನ್ನುತ್ತಾನೆ. ‘ಸಾಕು’ ಎನ್ನುವುದು ಊಟದಲ್ಲಿ ಮಾತ್ರ. ನಮ್ಮ ಮನೆಯಲ್ಲಿ ಊಟ ಮಾಡುವವರು ಸಂತೃಪ್ತಿಯಿಂದ ಹಿಂದಿರುಗಬೇಕು ಎಂಬುದೇ ನನ್ನ ಆಸ್ಥೆ’ ಎನ್ನುತ್ತಾರೆ ಶಶಿಕಲಾ.

ಅಮೆರಿಕದ ನೊಬೆಲ್ ಪ್ರಶಸ್ತಿ ಪುರಸ್ಕೃತ ಡೇವಿಡ್ ಜೆ. ಗ್ರಾಸ್ ಸೇರಿದಂತೆ 40ಕ್ಕೂ ಹೆಚ್ಚು ದೇಶಗಳ ಪ್ರವಾಸಿಗರು ಈವರೆಗೆ ಶಶಿಕಲಾ ಅವರ ಆತಿಥ್ಯ ಪಡೆದಿದ್ದಾರೆ, ಮೆಚ್ಚಿಕೊಂಡಿದ್ದಾರೆ. ಮೈಸೂರಿನ ಚೇಂಬರ್ ಆಫ್ ಕಾಮರ್ಸ್‌ನಲ್ಲಿ ಸಹಕಾರ್ಯದರ್ಶಿ ಆಗಿರುವ ಶಶಿಕಲಾ, ಭಾರತೀಯ ಸಂಸ್ಕೃತಿ ಬಗ್ಗೆ ಕಾಲೇಜು ವಿದ್ಯಾರ್ಥಿಗಳಿಗೆ ಉತ್ತೇಜನಕಾರಿ ಉಪನ್ಯಾಸವನ್ನೂ ನೀಡುತ್ತಾರೆ.



ನಮಸ್ತೆ, ಹೇಗಿದ್ದೀರಿ?– ಸೀರೆಯುಟ್ಟು ಸಂಭ್ರಮಿಸುತ್ತಿರುವ ವಿದೇಶಿ ಮಹಿಳೆಯರು

## ಅವರ ಸಂಗ ಪೇಚಿನ ಪ್ರಸಂಗ

- ಕೆಲ ವಿದೇಶಿಯರು ಊಟ ಮಾಡುವಾಗ ಚಪಾತಿ ಜೊತೆ ಬಡಿಸಿದ ದಾಲ್, ಕೋಸಂಬರಿ, ಉಪ್ಪಿನಕಾಯಿ, ಹಪ್ಪಳ-ಸಂಡಿಗೆ ಎಲ್ಲವನ್ನೂ ಸೇರಿಸಿ ರೋಲ್ ಮಾಡಿ ತಿನ್ನಲು ಶುರುಮಾಡುತ್ತಾರಂತೆ. ಆಗ ಅವರನ್ನು ತಡೆದು ಇಲ್ಲಿನ ಊಟದ ಕ್ರಮದ ಪಾಠ ಮಾಡಿದ್ದಾರೆ ಶಶಿಕಲಾ. ಬಹುತೇಕರಿಗೆ ಕೈತುತ್ತು ತಿನ್ನಿಸಿ ತಾಯಿಯ ಪ್ರೀತಿಯನ್ನೂ ತೋರಿದ್ದಾರೆ.
- ಊಟವೆಲ್ಲ ಮುಗಿದ ಬಳಿಕ ‘ಈ ಬಾಳೆಎಲೆನೂ ತಿನ್ನಬೇಕಾ’ ಎಂದು ಕೇಳಿದವರುಂಟು. ಆಗ ನಗು ಉಮ್ಮಳಿಸಿದರೂ ನಯವಾಗೇ ಬಾಳೆ ಎಲೆಯ ಮಹತ್ವ, ಬಳಸುವ ರೀತಿಯನ್ನು ವಿವರಿಸಿದ್ದಾರೆ.
- ವಿದೇಶಿ ಮಹಿಳೆಯರಿಗೆ ಸೀರೆ ಉಡಿಸಿ, ಮಲ್ಲಿಗೆ ಹೂ ಮುಡಿಸುವಾಗ ಶಶಿಕಲಾ ಅವರ ಮಾಂಗಲ್ಯದ ಮೇಲೆಯೂ ಕೆಲವರ ಕಣ್ಣು ಬೀಳುವುದುಂಟು! ‘ಈ ಸರ ಎಷ್ಟು ಚೆನ್ನಾಗಿದೆ. ಸ್ವಲ್ಪ ಕೊಡಿ ಫೋಟೊ ತೆಗೆಸಿಕೊಂಡು ವಾಪಸ್ ಕೊಡುವೆ’ ಎಂಬ ಬಯಕೆ ಹೊರಸೂಸಿದವರಿದ್ದಾರೆ. ಆಗ ಮಾಂಗಲ್ಯದ ಮಹತ್ವವನ್ನೂ ಮನದಟ್ಟು ಮಾಡಿಸಿದ್ದಾರೆ ಶಶಿಕಲಾ.
- ಯು.ಕೆಯಿಂದ ಬಂದಿದ್ದ ನ್ಯಾಯಮೂರ್ತಿಯೊಬ್ಬರು ‘ಭಾರತದ ನ್ಯಾಯಾಲಯಗಳಲ್ಲಿ ಸಾಕ್ಷಿಗಳು ಪ್ರಮಾಣ ಮಾಡುವ ಭಗವದ್ಗೀತೆಯನ್ನು ನೋಡಬಹುದೇ?’ ಎಂದು ಕೇಳಿದರಂತೆ. ಅವರಿಗೆ ಮನೆಯಲ್ಲಿದ್ದ ಭಗವದ್ಗೀತೆ ಪುಸ್ತಕವನ್ನೇ ಶಶಿಕಲಾ ಉಡುಗೊರೆಯಾಗಿ ನೀಡಿದ್ದಾರೆ.

## ಹೀಗಿರುತ್ತದೆ ಊಟದ ಮೆನು

ಚಪಾತಿ, ತೊವ್ವೆ, ಚಿತ್ರಾನ್ನ ಅಥವಾ ಪುಳಿಯೋಗರೆ, ಎರಡು ಬಗೆಯ ಕೋಸಂಬರಿ, ಎರಡು ಬಗೆಯ ಸಿಹಿಖಾದ್ಯ, ಹಪ್ಪಳ, ಸಂಡಿಗೆ, ಉಪ್ಪಿನಕಾಯಿ, ಬಾಳೆಹಣ್ಣು. ಬಹುತೇಕ ಪ್ರವಾಸಿಗರಿಗೆ ಮೈಸೂರುಪಾಕ್‌ನ ರುಚಿ ತೋರಿಸಿದ್ದಾರೆ. ಅಲ್ಲದೆ ಹಬ್ಬದ ಸಮಯಗಳಲ್ಲಿ ಬರುವ ಪ್ರವಾಸಿಗರಿಗೆ ಆಯಾ ಹಬ್ಬದ ಸಾಂಪ್ರದಾಯಿಕ ಅಡುಗೆಗಳನ್ನು ಸವಿಯುವ ಭಾಗ್ಯ ದೊರೆಯುತ್ತದೆ. ಹೋಳಿ, ದೀಪಾವಳಿ, ದಸರಾ ಹಬ್ಬಗಳನ್ನು ವಿದೇಶಿಯರೊಂದಿಗೆ ಆಚರಿಸಿದೆ ಶಶಿಕಲಾ ಅವರ ಕುಟುಂಬ.

ತಮ್ಮ ಅತಿಥಿಗಳೊಂದಿಗೆ ಒಡನಾಡಲು ಅನುವಾಗುವಂತೆ ಫ್ರೆಂಚ್, ಇಗ್ಬೊ, ಜರ್ಮನ್ ಭಾಷೆಗಳನ್ನು ಶಶಿಕಲಾ ಕಲಿತಿದ್ದಾರೆ. ಇನ್ನು ಪ್ರವಾಸಿಗರಿಗೆ ಕನ್ನಡ ಹೇಳಿಕೊಡುವುದನ್ನು ಅವರು ಮರೆತಿಲ್ಲ. ‘ಪೋರ್ಚುಗೀಸರು, ಡಚ್ಚರು, ಬ್ರಿಟಿಷರು ಭಾರತವನ್ನು ಕೊಳ್ಳೆ ಹೊಡೆದರು’ ಎಂದು ಶಾಲಾ ದಿನಗಳಲ್ಲಿ ಓದಿದ ನೆನಪು. ಅವರ ದೇಶಗಳ ಪ್ರವಾಸಿಗರು ಈಗ ನಮ್ಮನೆ ಅತಿಥಿಗಳು. ಭಾರತೀಯರ ಹೃದಯ ವೈಶಾಲ್ಯವನ್ನು ಇದು ತೋರುತ್ತದೆ. ನಮ್ಮೊಂದಿಗೆ ಸ್ನೇಹದಿಂದಿದ್ದರೆ ಎಂತಹವರನ್ನೂ ಇಲ್ಲಿನ ಸಂಸ್ಕೃತಿ ಪೊರೆಯುತ್ತದೆ ಎನ್ನುವುದಕ್ಕೆ ಇದೇ ಉದಾಹರಣೆ’ ಎನ್ನುತ್ತಾ ಹೆಮ್ಮೆಯ ನಗೆ ಬೀರುತ್ತಾರೆ ಶಶಿಕಲಾ.

# ಅಂಡಾಣು ಸಂರಕ್ಷಿಸುವ ಅಗತ್ಯ ಇದೆಯೇ?



ಸ್ಪಂದನ
**ಡಾ. ವೀಣಾ ಎಸ್. ಭಟ್**

**ನನ್ನ ತಾಯಿ** ಕ್ಯಾನ್ಸರ್‌ನಿಂದ ನಿಧನರಾಗಿ ಎರಡು ವರ್ಷಗಳಾಯಿತು. ನನ್ನ ವಯಸ್ಸು 23. ನಾನು ಒಬ್ಬಳೇ ಮಗಳು. ನನಗೆ ಮುಟ್ಟು ಸರಿಯಾಗಿ ಆಗುವುದಿಲ್ಲ. ತಜ್ಞ ವೈದ್ಯರು ಪರೀಕ್ಷೆ ಮಾಡಿದಾಗ, ಎ.ಎಂ.ಎಚ್ ಹಾರ್ಮೋನ್ ಪ್ರಮಾಣ ಕಡಿಮೆ ಇರುವುದು ಗೊತ್ತಾಯಿತು. ಈಗಲೇ ಅಂಡಾಣುಗಳನ್ನು ಫ್ರೀಸ್ ಮಾಡಿ ಇಡಬಹುದು ಎಂದು ಅವರು ಸಲಹೆ ನೀಡಿದ್ದಾರೆ. ಇದು ಉಪಯುಕ್ತವೇ?

ಹೆಣ್ಣುಮಗುವೊಂದು ಭ್ರೂಣಾವಸ್ಥೆಯಲ್ಲಿ ಇರುವಾಗಲೇ ಎ.ಎಂ.ಎಚ್ ಹಾರ್ಮೋನ್‌ನ (ಆ್ಯಂಟಿ ಮ್ಯುಲೇರಿಯನ್ ಹಾರ್ಮೋನ್) ಉತ್ಪಾದನೆ ಆರಂಭವಾಗುತ್ತದೆ. ಆ ಮಗುವಿಗೆ ಮುಂದೆ ಋತುಚಕ್ರದ ಸಮಯದಲ್ಲಿ ಬಿಡುಗಡೆಯಾಗುವ ಅಂಡಾಣುಗಳ ಪ್ರಮಾಣದ ಬಗ್ಗೆ, ಅಂದರೆ ಅಂಡಾಶಯವು ಹೊಂದಿರುವ ಅಂಡಾಣುಗಳ ಮೀಸಲು ಸಾಮರ್ಥ್ಯದ ಬಗ್ಗೆ ನೀವು ಮಾಡಿಸಿರುವ ಪರೀಕ್ಷೆಯು ಒಂದು ಅಂದಾಜು ನೀಡುತ್ತದೆ ಎಂದು ನಿಮ್ಮ ವೈದ್ಯರು ನಿಮಗೆ ಹೇಳಿರಬಹುದು. ಎ.ಎಂ.ಎಚ್ ಕಡಿಮೆ ಇರುವುದರಿಂದ, ಭವಿಷ್ಯದಲ್ಲಿ ಮಗು ಮಾಡಿಕೊಳ್ಳಬೇಕೆಂದಾಗ ಉತ್ತಮ ಅಂಡಾಣು ಬಿಡುಗಡೆಯಾಗದೇ ಹೋಗಬಹುದು; ಆಗ ಈ ಮೊದಲೇ ನಿಮ್ಮ ಅಂಡಾಣುಗಳನ್ನು ಶೀತಲೀಕರಣ ತಂತ್ರಜ್ಞಾನದ ಮೂಲಕ ಸಂರಕ್ಷಿಸಿ ಇಟ್ಟುಕೊಂಡಿದ್ದರೆ, ಆ ಮೂಲಕ ಮಗುವನ್ನು ಪಡೆಯುವ ಸಾಧ್ಯತೆ ಹೆಚ್ಚಾಗಿರುತ್ತದೆ ಎಂದು ಅವರು ನಿಮಗೆ ತಿಳಿಸಿರಬಹುದು. ಆದರೆ ಎ.ಎಂ.ಎಚ್ ವರದಿಯೊಂದನ್ನೇ ಆಧಾರವಾಗಿ ಇಟ್ಟುಕೊಂಡು ಅಂಡಾಶಯದ ಮೀಸಲು ಸಾಮರ್ಥ್ಯವನ್ನು ಅಳೆಯಲಾಗದು. ಅದು ಮಹಿಳೆಯ ವಯಸ್ಸು, ಆ್ಯಂಟ್ರಲ್ ಕೋಶಗಳ ಎಣಿಕೆಯ ಸಂಖ್ಯೆ ಮತ್ತು ಎ.ಎಂ.ಎಚ್ ಪರೀಕ್ಷೆಯನ್ನು ಹೇಗೆ, ಎಲ್ಲಿ, ಯಾವ ಲ್ಯಾಬ್‌ನಲ್ಲಿ ಮಾಡಲಾಗಿದೆ ಎನ್ನುವ ಎಲ್ಲ ಅಂಶಗಳನ್ನೂ ಅವಲಂಬಿಸಿರುತ್ತದೆ.

ನೀವು ಸ್ವಲ್ಪ ದಿನ ಬಿಟ್ಟು ಇನ್ನೊಮ್ಮೆ ಬೇರೆ ಲ್ಯಾಬ್‌ನಲ್ಲಿ ಎ.ಎಂ.ಎಚ್ ಪರೀಕ್ಷೆ ಮಾಡಿಸಿ. ಜೊತೆಗೆ ತೂಕ ಪರೀಕ್ಷಿಸಿಕೊಳ್ಳಿ. ನಿಮ್ಮ ಎತ್ತರಕ್ಕೆ ತಕ್ಕಂತೆ ತೂಕ ಕಾಯ್ದುಕೊಳ್ಳುವುದು ಮುಖ್ಯ. ಹೆಚ್ಚು ಪ್ರೋಟೀನ್‌ಯುಕ್ತ ಆಹಾರ, ಹಸಿರುಸೊಪ್ಪು, ತರಕಾರಿಗಳನ್ನು ದಿನನಿತ್ಯ ಸೇವಿಸಿ. ಕನಿಷ್ಠ ಒಂದು ಗಂಟೆಯಾದರೂ ಪ್ರತಿದಿನ ದೈಹಿಕ ಚಟುವಟಿಕೆಯನ್ನು ಮಾಡಿ. ಯಾಕೆಂದರೆ ಮುಂದೆ ತಾಯಿ ಆಗಬೇಕಾದರೂ ಸರಿಯಾದ ತೂಕ, ರಕ್ತದಲ್ಲಿ ಹಿಮೊಗ್ಲೋಬಿನ್ ಮಟ್ಟ ಎಲ್ಲವೂ ಗರ್ಭಪೂರ್ವದಲ್ಲೇ ಸರಿಯಾಗಿ ಇರಬೇಕಾಗುತ್ತದೆ. ಒಂದು ಹೆಣ್ಣುಮಗು ತಾಯಿಯ ಗರ್ಭದಲ್ಲಿ ಇರುವಾಗಲೇ ಅಂಡಾಶಯದ ಕೋಶಿಕೆಗಳು ಮುಂದೆ ಆಕೆ ತರುಣಿಯಾದಾಗ ಎಷ್ಟರಮಟ್ಟಿಗೆ ಇರುತ್ತವೆ ಎಂಬುದು ನಿರ್ಧಾರವಾಗುತ್ತದೆ.

ತಾಯಿಯ ಆರೋಗ್ಯವು ಪ್ರಮುಖವಾಗಿ ಮಕ್ಕಳ ಆರೋಗ್ಯವನ್ನು ಅದರಲ್ಲೂ ಸಂತಾನೋತ್ಪತ್ತಿ ಆರೋಗ್ಯವನ್ನು ನಿರ್ಧರಿಸುತ್ತದೆ. ನೀವು ಉತ್ತಮ ಜೀವನಶೈಲಿಯನ್ನು ಅನುಸರಿಸಿ ಒಳ್ಳೆಯ ಆರೋಗ್ಯವನ್ನು ಹೊಂದಲು ಪ್ರಯತ್ನಿಸಿ. ಚಿಂತಿಸಬೇಡಿ. ಇನ್ನೊಮ್ಮೆ ತಜ್ಞ ವೈದ್ಯರನ್ನು ಭೇಟಿ ಮಾಡಿ.

# ಕ್ರಿಸ್‌ಮಸ್ ಸಂಭ್ರಮಕ್ಕೆ ಕೇಕ್ ಮೆರುಗು

ರಸಾಸ್ವಾದ



ಕೇಕ್‌ನೊಂದಿಗೆ ನಂದಿನಿ ಆದರ್ಶ

**ಕ್ರಿಸ್‌ಮಸ್** ಹಬ್ಬಕ್ಕೂ ಕೇಕ್‌ಗೂ ಅವಿನಾಭಾವ ಸಂಬಂಧವಿದೆ. ಉಡುಗೊರೆಗಳನ್ನು ಹೊತ್ತು ತರುವ ಸಾಂತಾ ಕ್ಲಾಸ್ ತಾತನಷ್ಟೇ ಮಹತ್ವ ಮತ್ತು ಆಕರ್ಷಣೆ ಕ್ರಿಸ್‌ಮಸ್ ಕೇಕ್‌ಗೂ ಇದೆ. ಅದರಲ್ಲೂ ತರಹೇವಾರಿ ಒಣಹಣ್ಣುಗಳನ್ನು ಹಾಕಿ ಮಾಡುವ ಕೇಕ್‌ಗಳು ಈ ಹಬ್ಬದಲ್ಲಿ ಕಾಯಂ ಸ್ಥಾನ ಪಡೆದಿವೆ.

ಕ್ರಿಸ್‌ಮಸ್ ಅಂದರೆ ಬಗೆ ಬಗೆಯ ಕೇಕುಗಳನ್ನು ತಯಾರಿಸಿ ಮನೆಗೆ ಬಂದವರಿಗೆ, ಸ್ನೇಹಿತರು, ಸಂಬಂಧಿಕರಿಗೆ ಉಡುಗೊರೆಯ ರೂಪದಲ್ಲಿ ಕೊಡುವುದೂ ವಾಡಿಕೆ.

ಬೇಕರಿಯಿಂದ ಕೇಕ್ ತರುವ ಬದಲು ಮನೆಯಲ್ಲೇ ಕೇಕ್ ತಯಾರಿಸಲು ಆರಂಭಿಸಿದವರು ಬೆಂಗಳೂರಿನ ನಂದಿನಿ ಆದರ್ಶ. ಪದವಿ ಮುಗಿಸಿ ಉದ್ಯೋಗಸ್ಥೆಯಾಗಿದ್ದ ಅವರು ಮಕ್ಕಳ ಆರೈಕೆಗಾಗಿ ಉದ್ಯೋಗಕ್ಕೆ ಅಲ್ಪವಿರಾಮ ಹಾಕಿ, ಕೇಕ್ ಸೇರಿದಂತೆ ಇತರ ಸಿಹಿತಿನಿಸುಗಳ ತಯಾರಿಕೆಯಲ್ಲಿ ತೊಡಗಿಕೊಂಡಿದ್ದಾರೆ. ಆರಂಭದಲ್ಲಿ ತಮ್ಮ ಮಕ್ಕಳಿಗಾಗಿ ಮನೆಯಲ್ಲೇ ಶುಚಿ-ರುಚಿಯಾಗಿ ಕೇಕ್ ತಯಾರಿಸುತ್ತಿದ್ದ ನಂದಿನಿ ಅವರ ಕೈರುಚಿ ಸವಿಯುವ ಅವಕಾಶ ಮನೆಗೆ ಬಂದ ಅತಿಥಿಗಳಿಗೂ ದೊರೆಯತೊಡಗಿತು. ಸಂಬಂಧಿಕರು, ಸ್ನೇಹಿತರ ಬಾಯಿಂದ ಬಾಯಿಗೆ ಕೇಕ್ ರುಚಿಯಷ್ಟೇ ಅಲ್ಲ, ಪ್ರಚಾರವೂ ದೊರೆಯಿತು. ಹತ್ತು ವರ್ಷಗಳಿಂದ ಮನೆಯಲ್ಲೇ ಕೇಕ್ ತಯಾರಿಸಿ, ಗ್ರಾಹಕರಿಗೂ ಕೇಕ್‌ನ ಸಿಹಿ ಉಣಬಡಿಸುತ್ತಿರುವ ನಂದಿನಿ, ಕೇಕ್ ತಯಾರಿಕೆಯಲ್ಲೀಗ ಸಿದ್ಧಹಸ್ತರಾಗಿದ್ದಾರೆ. ವಿವಿಧ ಕೇಕ್‌ಗಳ ತಯಾರಿಯಲ್ಲಿ ಅವರು ಬಳಸುವ ಪದಾರ್ಥಗಳು ನೈಸರ್ಗಿಕವಾಗಿರುವುದು ವಿಶೇಷ. ರಾಸಾಯನಿಕ ಪದಾರ್ಥಗಳು ಕೇಕ್‌ಪ್ರಿಯರ ಹೊಟ್ಟೆ ಸೇರಬಾರದೆಂಬ ಕಾಳಜಿಯೂ ಅವರಿಗಿದೆ. ಹಾಗಾಗಿ, ಅವರು ತಾವು ಬಳಸುವ ಪದಾರ್ಥಗಳ ಮಾಹಿತಿಯನ್ನು ಗ್ರಾಹಕರಿಗೆ ಮುಂಚಿತವಾಗಿಯೇ ನೀಡುವ ಅಭ್ಯಾಸವನ್ನೂ ಹೊಂದಿದ್ದಾರೆ.





ಬ್ಲ್ಯೂಬೆರ್‍ರಿ ಕೇಕ್, ಕಾಫಿ ಕೇಕ್, ಸ್ಟ್ರಾಬೆರ್‍ರಿ ಕೇಕ್, ಕ್ಯಾರಮಲ್ ಕೇಕ್, ಕ್ಯಾರೆಟ್ ಆ್ಯಂಡ್ ವಾಲ್‌ನಟ್ ಕೇಕ್, ಬೇಕ್ ಚೀಸ್ ಕೇಕ್, ಮ್ಯಾಕ್ರೋನ್ಸ್, ಕಪ್ ಕೇಕ್, ಸಿನಮನ್ ರೋಲ್ಸ್, ಬ್ರೌನಿ, ಟ್ರೆಡಿಷನಲ್ ಇಂಗ್ಲಿಷ್ ಫ್ರೂಟ್ ಕೇಕ್ ಸೇರಿದಂತೆ ಹಲವು ವೈವಿಧ್ಯಮಯ ಕೇಕ್‌ಗಳನ್ನು ಮಾಡುವ ನಂದಿನಿ ಅವರ ಸಿಗ್ನೇಚರ್ ಕೇಕ್ ಎಂದರೆ ಬ್ಲ್ಯೂಬೆರ್‍ರಿ ಕೇಕ್.

ಕ್ರಿಸ್‌ಮಸ್ ಸಮಯದಲ್ಲಿ ಫ್ರೂಟ್ ಕೇಕ್ ಮತ್ತು ಪ್ಲಮ್ ಕೇಕ್‌ಗಳಿಗೆ ಹೆಚ್ಚು ಬೇಡಿಕೆ ಇರುತ್ತದೆ. ಒಣ ಹಣ್ಣುಗಳು, ಖರ್ಜೂರ, ಮಸಾಲೆ ಪದಾರ್ಥಗಳನ್ನು ಬಳಸಿ ಮಾಡುವ ಫ್ರೂಟ್ ಕೇಕ್, ಚಳಿಗಾಲದಲ್ಲಿ ಆರೋಗ್ಯಕ್ಕೂ ಹಿತಕಾರಿ ಅನ್ನುವುದು ಅವರ ಅಭಿಮತ.

–ಅನಸೂಯ

## ಇಂಗ್ಲಿಷ್ ಫ್ರೂಟ್ ಕೇಕ್

ಇಂಗ್ಲೆಂಡ್‌ನಲ್ಲಿ ಹೆಚ್ಚಾಗಿ ಈ ಕೇಕ್ ಅನ್ನು ಮಾಡುವುದರಿಂದ ಅದಕ್ಕೆ ಈ ಹೆಸರು ಬಂದಿದೆ.

**ಪದಾರ್ಥಗಳು:** ಹೊಂಬಣ್ಣದ ಒಣದ್ರಾಕ್ಷಿ 225 ಗ್ರಾಂ, ಸಾಮಾನ್ಯ ಒಣದ್ರಾಕ್ಷಿ 145 ಗ್ರಾಂ, ಒಣಗಿದ ಆ್ಯಪ್ರಿಕಾಟ್ 45 ಗ್ರಾಂ (ಸಣ್ಣದಾಗಿ ಹೆಚ್ಚಿದ್ದು), ಖರ್ಜೂರ 45 ಗ್ರಾಂ (ಬೀಜ ತೆಗೆದು, ಸಣ್ಣದಾಗಿ ಹೆಚ್ಚಿದ್ದು), ಡಾರ್ಕ್ ರಮ್ ಅಥವಾ ಬ್ರಾಂದಿ 2 ದೊಡ್ಡ ಚಮಚ, ಕಿತ್ತಳೆ ಹಣ್ಣು ಅರ್ಧ ಭಾಗ (ರಸ ಮತ್ತು ತುರಿದ ಸಿಪ್ಪೆ), ಉಪ್ಪಿಲ್ಲದ ಬೆಣ್ಣೆ 100 ಗ್ರಾಂ, ಲೈಟ್ ಬ್ರೌನ್ ಶುಗರ್ 112 ಗ್ರಾಂ, ಮೊಟ್ಟೆ 2, ಕ್ಯಾಂಡಿಡ್ ಪೀಲ್ 12 ಗ್ರಾಂ, ಚೆರ್‍ರಿ ಹಣ್ಣು 32 ಗ್ರಾಂ, ಕ್ಯಾಂಡಿಡ್ ಶುಂಠಿ 1 ದೊಡ್ಡ ಚಮಚ (ಸಣ್ಣದಾಗಿ ಹೆಚ್ಚಿದ್ದು), ಬಾದಾಮಿ 20 ಗ್ರಾಂ (ಸಣ್ಣದಾಗಿ ಹೆಚ್ಚಿದ್ದು), ಮೈದಾಹಿಟ್ಟು 100 ಗ್ರಾಂ, ಆ್ಯಪಲ್ ಪೈ ಸ್ಪೈಸ್ (ಮಸಾಲೆ ಪುಡಿ) ಸಣ್ಣ ಚಮಚದಲ್ಲಿ ಅರ್ಧ.



**ತಯಾರಿಸುವ ವಿಧಾನ:** ಒಂದು ದೊಡ್ಡ ಪಾತ್ರೆಯಲ್ಲಿ ಹೊಂಬಣ್ಣದ ಒಣದ್ರಾಕ್ಷಿ, ಆ್ಯಪ್ರಿಕಾಟ್ ಮತ್ತು ಖರ್ಜೂರವನ್ನು ಹಾಕಿಕೊಳ್ಳಿ. ಇದಕ್ಕೆ ರಮ್, ತುರಿದ ಕಿತ್ತಳೆ ಸಿಪ್ಪೆ ಮತ್ತು ರಸವನ್ನು ಸೇರಿಸಿ ಚೆನ್ನಾಗಿ ಬೆರೆಸಿ. ಪಾತ್ರೆಗೆ ಮುಚ್ಚಳ ಮುಚ್ಚಿ ಇಡೀ ರಾತ್ರಿ ನೆನೆಯಲು ಬಿಡಿ.

ಕೇಕ್ ತಯಾರಿಸುವ ಮುನ್ನ ಓವನ್ ಅನ್ನು ಮುಂಚಿತವಾಗಿಯೇ 150° ಸೆಲ್ಸಿಯಸ್‌ಗೆ ಕಾಯಿಸಿಟ್ಟುಕೊಳ್ಳಿ. ಕೇಕ್ ಪ್ಯಾನ್‌ಗೆ ಬೆಣ್ಣೆ ಸವರಿ, ಅದರೊಳಗೆ ಬೇಕಿಂಗ್ ಪೇಪರ್ ಹಾಕಿ ಸಿದ್ಧಪಡಿಸಿಕೊಳ್ಳಿ. ಒಂದು ಪಾತ್ರೆಯಲ್ಲಿ ಬೆಣ್ಣೆ ಮತ್ತು ಸಕ್ಕರೆಯನ್ನು ಸೇರಿಸಿ, ಮಿಶ್ರಣವು ಹಗುರವಾಗಿ ಮತ್ತು ನೊರೆ-ಯಾಗುವವರೆಗೆ ಚೆನ್ನಾಗಿ ಕಲಸಿ. ನಂತರ ಮೊಟ್ಟೆಗಳನ್ನು ಒಂದೊಂದಾಗಿ ಸೇರಿಸುತ್ತಾ ಚೆನ್ನಾಗಿ ಮಿಶ್ರ ಮಾಡಿ. ಈಗ ಈ ಮಿಶ್ರಣಕ್ಕೆ ನೆನೆಸಿಟ್ಟ ಹಣ್ಣುಗಳು, ಕ್ಯಾಂಡಿಡ್ ಪೀಲ್, ಕ್ಯಾಂಡಿಡ್ ಚೆರ್‍ರಿ, ಕ್ಯಾಂಡಿಡ್ ಶುಂಠಿ ಮತ್ತು ಹೆಚ್ಚಿದ ಬಾದಾಮಿಯನ್ನು ಸೇರಿಸಿ ನಿಧಾನವಾಗಿ ಬೆರೆಸಿ.

ಮೈದಾಹಿಟ್ಟು ಮತ್ತು ಆ್ಯಪಲ್ ಪೈ ಮಸಾಲೆ ಪುಡಿಯನ್ನು ಜರಡಿಯಾಡಿ, ನಂತರ ಇದನ್ನು ಹಣ್ಣಿನ ಮಿಶ್ರಣಕ್ಕೆ ಹಾಕಿ ಹಗುರವಾಗಿ ಮತ್ತು ಸಮವಾಗಿ ಬೆರೆಸಿ. ಸಿದ್ಧಪಡಿಸಿದ ಕೇಕ್ ಪ್ಯಾನ್‌ಗೆ ಚಮಚದ ಮೂಲಕ ಈ ಮಿಶ್ರಣವನ್ನು ಹಾಕಿ ಮೇಲ್ಭಾಗವನ್ನು ಸಮತಟ್ಟು ಮಾಡಿ. ಚಮಚದ ಹಿಂಭಾಗದಿಂದ ಕೇಕ್‌ನ ಮಧ್ಯಭಾಗದಲ್ಲಿ ಸ್ವಲ್ಪ ತಗ್ಗು ಮಾಡಿ (ಇದು ಕೇಕ್ ಸಮನಾಗಿ ಬೇಯಲು ಸಹಾಯ ಮಾಡುತ್ತದೆ). ಮೊದಲೇ ಬಿಸಿ ಮಾಡಿದ ಓವನ್‌ನಲ್ಲಿ ಎರಡೂವರೆ ಗಂಟೆಗಳ ಕಾಲ ಬೇಕ್ ಮಾಡಿ. ಕೇಕ್‌ನ ಮಧ್ಯಕ್ಕೆ ಒಂದು ಕಡ್ಡಿಯನ್ನು ಚುಚ್ಚಿ ಪರೀಕ್ಷಿಸಿ; ಕಡ್ಡಿಗೆ ಏನೂ ಅಂಟಿಕೊಳ್ಳದಿದ್ದರೆ ಕೇಕ್ ಬೆಂದಿದೆ ಎಂದರ್ಥ. ಕೇಕ್ ಅನ್ನು ಪ್ಯಾನ್‌ನಲ್ಲೇ ಪೂರ್ತಿಯಾಗಿ ತಣ್ಣಗಾಗಲು ಬಿಡಿ. ನಂತರ ಹೊರತೆಗೆಯಿರಿ.

ಹೊರತೆಗೆದ ಕೇಕ್ ಮೇಲೆ ಟೂತ್‌ಪಿಕ್‌ನಿಂದ ಎರಡು ಸಣ್ಣ ರಂಧ್ರ ಮಾಡಿ, ಅದರ ಮೇಲೆ ಒಂದೆರಡು ಚಮಚ ರಮ್ ಅಥವಾ ಬ್ರಾಂದಿಯನ್ನು ಹಾಕಿದರೆ ರುಚಿ ಇನ್ನಷ್ಟು ಹೆಚ್ಚುತ್ತದೆ. ಬಳಿಕ ಕೇಕ್ ಅನ್ನು ವ್ಯಾಕ್ಸ್‌ಪೇಪರ್ ಮತ್ತು ಫಾಯಿಲ್‌ನಿಂದ ಸುತ್ತಿ, ಗಾಳಿಯಾಡದ ಡಬ್ಬಿಯಲ್ಲಿ ಮುಚ್ಚಿಟ್ಟರೆ ಎರಡು ತಿಂಗಳ ತನಕ ಬಳಸಬಹುದು.

# ತಂಪಿನ ತಾಣ ‘ತಂಗಿ ಮನೆ’

• ಗುರುರಾಜ್ ಎಸ್. ದಾವಣಗೆರೆ

**ಅಸಹಾಯಕ** ಹೆಣ್ಣುಮಕ್ಕಳಿಗೆ ಆಶ್ರಯ ನೀಡಿ ನೆರವಿಗೆ ನಿಲ್ಲುವ ಶಕ್ತಿಧಾಮ, ಅಮ್ಮನ ಮನೆ, ಅಮ್ಮನ ಮಡಿಲು ಸಂಸ್ಥೆಗಳ ಬಗ್ಗೆ ಕೇಳಿದ್ದೇವೆ. ಇದೀಗ ಅವುಗಳ ಸಾಲಿಗೆ ಹೊಸ ಸೇರ್ಪಡೆ ‘ತಂಗಿ ಮನೆ’. ಆದರೆ ಇದರ ಉದ್ದೇಶ ಮಾತ್ರ ಬೇರೆ.

ಇದು, ತಿಂಗಳ ಋತುಚಕ್ರದ ಸಮಸ್ಯೆಗಳನ್ನು ಎದುರಿಸುವಲ್ಲಿ ಹೆಣ್ಣುಮಕ್ಕಳಿಗೆ ಸಹಾಯ ಮಾಡಲು ಗೌರಿಬಿದನೂರಿನ ಸರ್ಕಾರಿ ಎಸ್‌ಎಸ್‌ಇಎ ಪದವಿ ಪೂರ್ವ ಕಾಲೇಜಿನಲ್ಲಿ ಇತ್ತೀಚೆಗೆ ಪ್ರಾರಂಭವಾಗಿರುವ ನೆರವಿನ ತಾಣ. ಎಷ್ಟೋ ಸರ್ಕಾರಿ ಶಾಲೆ- ಕಾಲೇಜುಗಳಲ್ಲಿ ಸರಿಯಾದ ತರಗತಿ ಕೊಠಡಿಗಳೇ ಇರುವುದಿಲ್ಲ. ವಾಸ್ತವ ಹೀಗಿರುವಾಗ, ಅಲ್ಲಿ ಇಂಥದ್ದೊಂದು ಪ್ರತ್ಯೇಕ ಕೋಣೆಯನ್ನು ನಿರೀಕ್ಷಿಸಲೂ ಸಾಧ್ಯವಿಲ್ಲ. ಆದರೆ ಪ್ರಾಂಶುಪಾಲ ಜಿ.ವಿ.ಶ್ರೀನಿವಾಸ್ ಅವರ ಪ್ರಯತ್ನ ಮತ್ತು ಬೆಂಗಳೂರು ಮೂಲದ ‘ನೀಡುವ ಹೃದಯ ಫೌಂಡೇಷನ್’ ಸಹಕಾರದೊಂದಿಗೆ ಕಾಲೇಜಿನ ನೆಲಮಹಡಿಯ ರೂಮೊಂದರಲ್ಲಿ ‘ತಂಗಿ ಮನೆ’ ಅಥವಾ ‘ಪಿಂಕ್ ರೂಮ್’ ಆರಂಭಗೊಂಡಿದೆ.

‘ಪೀರಿಯಡ್ಸ್‌ನ ದಿನಗಳಲ್ಲಿ ಹೊಟ್ಟೆನೋವು ಶುರುವಾದರೆ ಮನೆಗೆ ಫೋನ್ ಮಾಡಿ ಯಾರನ್ನಾದರೂ ಕರೆಸಿಕೊಂಡು ಅವರ ಜೊತೆಗೆ ಮನೆಗೆ ತೆರಳಬೇಕಾಗುತ್ತಿತ್ತು. ಆದರೆ, ಮನೆಯವರಿಗೂ ಈಗ ನಿಶ್ಚಿಂತೆ’ ಎನ್ನುತ್ತಾಳೆ ಪ್ರಥಮ ಪಿಯು ವಿದ್ಯಾರ್ಥಿನಿ ಕೋಕಿಲಾ. ಆ ದಿನಗಳಲ್ಲಿ ಕಾಲೇಜಿನಿಂದ ಮನೆಗೆ ಹೋಗಿಬಿಡುತ್ತಿದ್ದುದರಿಂದ ಕ್ಲಾಸ್‌ಗಳು ಮಿಸ್ ಆಗುತ್ತಿದ್ದವು. ಇನ್ನು ಮುಂದೆ ಹಾಗೆ ಆಗೋದಿಲ್ಲ’ ಎಂದು ಗೆಲುವಿನಿಂದ ಹೇಳುತ್ತಾರೆ ವಿದ್ಯಾರ್ಥಿನಿಯರಾದ ಸುಪ್ರಜಾ ಮತ್ತು ಚಂದ್ರಕಲಾ.

ಪ್ರತಿಷ್ಠಿತ ಖಾಸಗಿ ಕಾಲೇಜುಗಳಲ್ಲಿ ಹೆಣ್ಣುಮಕ್ಕಳಿಗಾಗಿ ಸುಸಜ್ಜಿತ ವಿಶ್ರಾಂತಿ ಕೋಣೆ ಇರುತ್ತದೆ. ವಸತಿ ಕಾಲೇಜುಗಳು ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ, ಆರೋಗ್ಯ ಸಹಾಯಕರು ಇಲ್ಲವೆ ವೈದ್ಯರನ್ನೇ ನೇಮಿಸಿರುತ್ತವೆ. ಕೆಲವು ಕಡೆ ತುರ್ತು ಚಿಕಿತ್ಸಾ ವ್ಯವಸ್ಥೆ ಮತ್ತು ಆಂಬುಲೆನ್ಸ್ ಸೌಲಭ್ಯಗಳೂ ಇರುತ್ತವೆ. ಆದರೆ ಸರ್ಕಾರಿ ಕಾಲೇಜಿನಲ್ಲಿ ವಿದ್ಯಾರ್ಥಿನಿಯರಿಗಾಗಿ ಇಂಥದ್ದೊಂದು ವಿಶ್ರಾಂತಿ ಕೋಣೆಯ ವ್ಯವಸ್ಥೆ ಮಾಡುವುದು ಸಮರ್ಥ ಮತ್ತು ಆಶಾದಾಯಕ ಹೆಜ್ಜೆಯೇ ಹೌದು.



“**ಪಿಂಕ್ ರೂಮ್ ಶುರುವಾದಾಗಿನಿಂದ ಅದರ ಬಳಕೆ ಸರಿಯಾಗಿ ಆಗುತ್ತಿದೆ. ಪ್ರತಿದಿನ ಒಬ್ಬರಲ್ಲ ಒಬ್ಬರು ವಿದ್ಯಾರ್ಥಿನಿ ಕೋಣೆಯಲ್ಲಿ ವಿಶ್ರಾಂತಿ ಪಡೆಯುತ್ತಿರುತ್ತಾರೆ.**
**ಶ್ರೀನಿವಾಸ್ ಜಿ.ವಿ.,** ಪ್ರಾಚಾರ್ಯ, ಸರ್ಕಾರಿ ಎಸ್‌ಎಸ್‌ಇಎ ಪದವಿ ಪೂರ್ವ ಕಾಲೇಜು, ಗೌರಿಬಿದನೂರು



“**ಪಿಂಕ್ ರೂಮ್ ಶುರುವಾದಾಗಿನಿಂದ ಋತುಚಕ್ರದ ಸಮಯದಲ್ಲಿ ಸ್ವಲ್ಪ ವಿಶ್ರಾಂತಿ ಪಡೆದು ಪುನಃ ತರಗತಿಗೆ ಬರುತ್ತಾರೆ. ಇದರಿಂದ ಹೆಣ್ಣುಮಕ್ಕಳ ಅಧ್ಯಯನದ ಪ್ರಗತಿಗೆ ತುಂಬಾ ಸಹಾಯವಾಗಿದೆ.**
**ಸುಮಾ ಆರ್.,** ‘ತಂಗಿ ಮನೆ’ಯ ಉಸ್ತುವಾರಿ ವಹಿಸಿಕೊಂಡಿರುವ ಅಧ್ಯಾಪಕಿ, ಸರ್ಕಾರಿ ಎಸ್‌ಎಸ್‌ಇಎ ಪದವಿ ಪೂರ್ವ ಕಾಲೇಜು, ಗೌರಿಬಿದನೂರು

## ಇತರೆಡೆಯೂ ನೆರವಿಗೆ ಸಿದ್ಧ



ಕರ್ನಾಟಕದ ಎಲ್ಲ ಸರ್ಕಾರಿ ಶಾಲೆಗಳಲ್ಲಿ, ಅದರಲ್ಲೂ ಬಾಲಕಿಯರ ಶಾಲಾ- ಕಾಲೇಜುಗಳಲ್ಲಿ ಪಿಂಕ್ ರೂಮ್ ವ್ಯವಸ್ಥೆ ಕಲ್ಪಿಸಲು ನಮ್ಮ ಸಂಸ್ಥೆ ಸದಾ ಸಿದ್ಧವಿದೆ. ಈ ಕುರಿತು ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿಯವರೊಂದಿಗೆ ಮಾತನಾಡಿದ್ದೇನೆ. 2022ರಿಂದ ಇಲ್ಲಿಯವರೆಗೆ ಕೋಲಾರ ಜಿಲ್ಲೆಯ ಐದು ಕಡೆ (ಮದನಹಳ್ಳಿ ಕ್ರಾಸ್, ಕುರುಗಲ್, ಅಮನಲ್ಲೂರು, ಕ್ಯಾಲನೂರು ಮತ್ತು ಗೌರಿಬಿದನೂರು) ತಂಗಿ ಮನೆ ಪ್ರಾರಂಭಿಸಿದ್ದೇವೆ.
ನನಗೆ ಉದ್ಯೋಗ ಕಲ್ಪಿಸಿರುವ ಪ್ಲೇಸಿಂಪಲ್ ಗೇಮ್ಸ್ ಪ್ರೈವೇಟ್ ಲಿಮಿಟೆಡ್ ಕಂಪನಿಯ ಕಾರ್ಪೊರೇಟ್ ಸಾಮಾಜಿಕ ಜವಾಬ್ದಾರಿಯ ಅಡಿ ಈ ಕೆಲಸ ನಡೆಯುತ್ತಿದೆ. ನಮ್ಮ ಸಂಸ್ಥೆಯ ಕೆಲಸ ನೋಡಿ ಒರಾಕಲ್ ಕಂಪನಿಯು ಚೆನ್ನೈನ ಶಾಲೆಯೊಂದರಲ್ಲಿ ಪಿಂಕ್ ರೂಮ್ ಸ್ಥಾಪಿಸಿದೆ. ಹೆಣ್ಣುಮಕ್ಕಳ ಶಿಕ್ಷಣಕ್ಕೆ ನೆರವಾಗುವ ಈ ವ್ಯವಸ್ಥೆ ಬೇಕೆಂದು ಯಾರೇ ಮುಂದೆ ಬಂದರೂ ಅವರಿಗೆ ಸಹಕರಿಸಲಾಗುವುದು.

**ಅಂಥೋನಿ ಸಜೀತ್,** ನೀಡುವ ಹೃದಯ ಫೌಂಡೇಶನ್




ತಂಗಿ ಮನೆಯಲ್ಲಿ

## ಏನೆಲ್ಲಾ ಇವೆ?

ತಂಗಿ ಮನೆಯಲ್ಲಿ ಮಂಚ, ಸ್ಯಾನಿಟರಿ ಪ್ಯಾಡ್ ವೆಂಡಿಂಗ್ ಮಷೀನ್, ಕುಡಿಯುವ ನೀರಿನ ವ್ಯವಸ್ಥೆ, ತೆರೆ ಕಲ್ಪಿಸುವ ಸ್ಟ್ಯಾಂಡ್ ಕರ್ಟನ್, ಹೊಟ್ಟೆನೋವು ನಿವಾರಕ ಮಾತ್ರೆಗಳು, ಹಾಟ್‌ವಾಟರ್ ಪ್ಯಾಕ್... ಹೀಗೆ ಋತುಸ್ರಾವದ ದಿನಗಳ ನೋವನ್ನು ಕಡಿಮೆ ಮಾಡಿಕೊಳ್ಳಲು ಅನೇಕ ಸೌಲಭ್ಯಗಳಿವೆ.

# ‘ಭೂ ಒತ್ತುವರಿ ಸಾಬೀತಾದರೆ ವಾಪಸ್’

## ಯಾವುದೇ ಅಕ್ರಮ ಮಾಡಿಲ್ಲ, ತನಿಖೆಗೂ ಸಿದ್ಧ: ಕಂದಾಯ ಸಚಿವ ಕೃಷ್ಣ ಬೈರೇಗೌಡ

ಪ್ರಜಾವಾಣಿ ವಾರ್ತೆ

**ಸುವರ್ಣ ವಿಧಾನಸೌಧ (ಬೆಳಗಾವಿ):** ‘ನನ್ನ ವಿರುದ್ಧದ ಭೂ ಒತ್ತುವರಿ ಪ್ರಕರಣಕ್ಕೆ ಸಂಬಂಧಿಸಿದಂತೆ ಯಾವುದೇ ತನಿಖೆಗೂ ಸಿದ್ಧ. ಯಾವ ರೀತಿಯ ತನಿಖೆ ಆಗಬೇಕು ಎಂಬುದನ್ನು ವಿರೋಧ ಪಕ್ಷದ ನಾಯಕರು ಮತ್ತು ಸಭಾನಾಯಕರು ಸೇರಿ ತೀರ್ಮಾನಿಸಲಿ. ನಾನು ತಯಾರಿದ್ದೇನೆ’ ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ಅವರು ಹೇಳಿದರು.

ಕೋಲಾರ ತಾಲ್ಲೂಕು ಗರುಡಪಾಳ್ಯ ಗ್ರಾಮದಲ್ಲಿ ಸರ್ಕಾರಿ ಭೂಮಿ ಒತ್ತುವರಿ ಆಗಿದೆ ಎಂಬ ವಿರೋಧ ಪಕ್ಷಗಳ ಆರೋಪಕ್ಕೆ ವಿಧಾನಸಭೆಯಲ್ಲಿ ಶುಕ್ರವಾರ ಅವರು ಸ್ವಯಂಪ್ರೇರಿತ ಹೇಳಿಕೆ ನೀಡಿದರು. ‘ಒಂದು ವೇಳೆ ಒತ್ತುವರಿ ಆಗಿದೆ ಎಂಬುದು ಸಾಬೀತಾದರೆ ಆ ಭೂಮಿ ಸರ್ಕಾರಕ್ಕೆ ಬಿಟ್ಟು ಕೊಡಲು ಸಿದ್ಧ’ ಎಂದು ಅವರು ವಿರೋಧ ಪಕ್ಷದವರಿಗೆ ಸವಾಲು ಹಾಕಿದರು.

**ಹೇಳಿಕೆಯ ವಿವರ:** ‘ಗರುಡಪಾಳ್ಯ ಗ್ರಾಮವು ಮೈಸೂರು ಮಹಾರಾಜರ ಮನೆತನಕ್ಕೆ ಸೇರಿದ ಗ್ರಾಮವಾಗಿತ್ತು. 1923 ರಲ್ಲಿ ಅವರು ಅಲ್ಲಿ ಕೃಷಿ ತರಬೇತಿ ಕೇಂದ್ರ ನಡೆಸುತ್ತಿದ್ದರು. ರಾಸಾಯನಿಕ ಗೊಬ್ಬರವನ್ನು ಹೊರದೇಶದಿಂದ ಆಮದು ಮಾಡಿ, ರೈತರಿಗೆ ಪರಿಚಯ ಮಾಡಿಸುವ ಕೇಂದ್ರವಾಗಿ ನಡೆಸುತ್ತಿದ್ದರು. ಇದು



ವಿಧಾನಸಭೆಯಲ್ಲಿ ಕೃಷ್ಣ ಬೈರೇಗೌಡ ದಾಖಲೆ ಪ್ರದರ್ಶಿಸಿದರು

ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಅವರಿಗೆ ಸೇರಿದ ಜಮೀನು. ಇದರ ವ್ಯವಹಾರವನ್ನು ಮಹಾರಾಜರ ಕಾರ್ಯದರ್ಶಿ ನಾರಾಯಣಸ್ವಾಮಿ ಅವರು ನೋಡಿಕೊಳ್ಳುತ್ತಿದ್ದರು. ಅದನ್ನು ನಾರಾಯಣಸ್ವಾಮಿ ಅವರು 1953 ರಲ್ಲಿ ನಮ್ಮ ತಾತ ಚೌಡೇಗೌಡರಿಗೆ 10 ವರ್ಷಗಳ ಭೋಗ್ಯಕ್ಕೆ ನೀಡಿದ್ದರು’ ಎಂದು ಕೃಷ್ಣ ತಿಳಿಸಿದರು.

‘ಭೋಗ್ಯದ ಅವಧಿ ಮುಗಿಯುವುದಕ್ಕೂ ಮೊದಲೇ ರಾಜಮನೆತನದವರು ಆ ಭೂಮಿಯನ್ನು ಮಾರಾಟಕ್ಕೆ ಇಟ್ಟರು. ಚೌಡೇಗೌಡರು ಆ ಜಮೀನು ಖರೀದಿಸುವುದಾಗಿ ಹೇಳಿದರೂ ಸರಿಯಾದ ಸಮಯಕ್ಕೆ ಹಣ ಹೊಂದಿಸಲಾಗಲಿಲ್ಲ. ಆದ್ದರಿಂದ, ಜಮೀನನ್ನು 1959 ರಲ್ಲಿ ಅಬೀಬುಲ್ಲಾ ಖಾನ್ ಅವರಿಗೆ ಮಾರಾಟ ಮಾಡಿದರು. ಅದರ ವಿರುದ್ಧ ನಮ್ಮ ತಾತ ಕೋಲಾರ ವಿಶೇಷ ಜಿಲ್ಲಾಧಿಕಾರಿ ಬಳಿ ದೂರು ದಾಖಲಿಸಿದರು. ವಿಚಾರಣೆ ನಡೆಸಿದ ಜಿಲ್ಲಾಧಿಕಾರಿ ಅವರು ಅಬೀಬುಲ್ಲಾ ಖಾನ್ ಅವರೇ ಭೂಮಿ ಮಾಲೀಕರು ಎಂಬ ಆದೇಶ ನೀಡಿದರು’ ಎಂದು ಹೇಳಿದರು.

‘ಗರುಡಪಾಳ್ಯ ಎಂಬ ಇಡೀ ಹಳ್ಳಿಯು ಒಬ್ಬ ಮಾಲೀಕನಿಗೆ ಸೇರಿದ್ದು. ಯಾರೂ ವಾಸ ಮಾಡದೇ ಇರುವ ‘ಬೇಚರಾಗ್’ ಗ್ರಾಮ. ಈ ಹಳ್ಳಿಯು ಶ್ರೀಕಂಠದತ್ತ ಒಡೆಯರ್ ಟ್ರಸ್ಟ್‌ಗೆ ಸೇರಿದಾಗಿದ್ದು, 1953 ರಲ್ಲಿ ಇಡೀ ಹಳ್ಳಿಯನ್ನು ರಾಜಮನೆತನವು ಭೋಗ್ಯಕ್ಕೆ ನೀಡಿತ್ತು. ಬಳಿಕ ಅಬೀಬುಲ್ಲಾ ಖಾನ್ ಅವರಿಗೆ ₹47,601ಕ್ಕೆ ಮಾರಾಟ ಮಾಡಿದೆ ಎಂದು ಬರೆದಿತ್ತು. ಬಳಿಕ, ಈ ಆದೇಶವನ್ನು ಪ್ರಶ್ನಿಸಿ ಮೈಸೂರು ಮೇಲ್ಮನವಿ ಪ್ರಾಧಿಕಾರಕ್ಕೆ ಚೌಡೇಗೌಡರು ಮೇಲ್ಮನವಿ ದಾಖಲಿಸಿದ್ದರು. ಆಗ, ಅಬೀಬುಲ್ಲಾ ಖಾನ್ ಅವರು ಒಪ್ಪಂದಕ್ಕೆ ಬಂದರು. ಗ್ರಾಮದ ಸಂಪೂರ್ಣ 256 ಎಕರೆ ಒಡೆತನವನ್ನು ಚೌಡೇಗೌಡರಿಗೆ ಬಿಟ್ಟುಕೊಟ್ಟರು. ಇದೆಲ್ಲವೂ ಕ್ರಯಪತ್ರದಲ್ಲಿ ಸ್ಪಷ್ಟವಾಗಿದೆ. ಅಂದಿನಿಂದ ಈವರೆಗೆ ಆ ಜಮೀನು ನಮ್ಮ ಅನುಭವದಲ್ಲಿಯೇ ಇದೆ’ ಎಂದರು.

‘ನಮ್ಮ ತಾತನ ಬಳಿಕ ಜಮೀನು ಪಾಲಾಯಿತು. ಸರ್ವೆ ನಂ 46 ಮತ್ತು 47 ನಮ್ಮ ಪಾಲಿಗೆ ಬಂದಿದ್ದು, ಈ ಜಮೀನನ್ನು 2022 ರ ಬಳಿಕ ಅಂದರೆ 2024 ರಲ್ಲಿ ನೋಂದಣಿ ಮಾಡಿಸಿಕೊಂಡಿದ್ದೇವೆ. ಇದರಲ್ಲಿ 20 ಎಕರೆ ಪ್ರದೇಶ ಕಲ್ಲುಗಳಿಂದ ಕೂಡಿದ ಕೆರೆಯ ಪಕ್ಕದಲ್ಲಿ ಕೆರೆಯಿಂದ ಮೇಲ್ಮಟ್ಟದಲ್ಲಿ ಅಂದರೆ 10 ರಿಂದ 15 ಅಡಿ ಮೇಲೆ ‘ಕಲ್ಲು ಗುಟ್ಟ’ ಎಂದು ಇದೆ. ಇದಕ್ಕೆ ಕೆಲವು ವರ್ಷ ಗೋಮಾಳ ಅಂತ ದಾಖಲೆಯಲ್ಲಿ ಬರೆಸಲಾಗಿತ್ತು. ಅದೂ ಕೂಡ ಖರೀದಿ ಮಾಡಿದ್ದ 256 ಎಕರೆಯಲ್ಲಿ ಸೇರಿದೆ. ಸ್ಮಶಾನ ಎಂದು ನಮೂದು ಪುಸ್ತಕದಲ್ಲಿ ಮಾತ್ರ ಇದೆ. ಪಹಣಿ ಸೇರಿದಂತೆ ಇತರೆ ಯಾವುದೇ ದಾಖಲೆಗಳಲ್ಲಿ ಸ್ಮಶಾನದ ನಮೂದು ಇಲ್ಲ. ಇದು ಕಂದಾಯ ಗ್ರಾಮ ಆಗಿದ್ದು, ಒಂದು ಕುಟುಂಬಕ್ಕೆ ಸೇರಿದ್ದಾಗಿದೆ’ ಎಂದು ಸ್ಪಷ್ಟಪಡಿಸಿದರು.

### ‘ಕೆರೆಗಳು ಈಗಲೂ ಅಸ್ತಿತ್ವದಲ್ಲಿವೆ’

‘ಈ ಜಮೀನಿನಲ್ಲಿ ಎರಡು ಕೆರೆಗಳಿವೆ. ಅವು ಈಗಲೂ ಅಸ್ತಿತ್ವದಲ್ಲಿವೆ’ ಎಂದು ಕೃಷ್ಣ ಬೈರೇಗೌಡ ಹೇಳಿದರು.

‘ಆ ಕಾರಣಕ್ಕಾಗಿಯೇ, ಕೆರೆ ಭೂಮಿಯನ್ನು ಒತ್ತುವರಿ ಮಾಡಿಕೊಂಡಿದ್ದೇವೆ ಎಂದು ಆರೋಪಿಸುತ್ತಿದ್ದಾರೆ. ಆದರೆ, ಆ ಕೆರೆಗಳ ಭೂಮಿಯು ನಮ್ಮ ಕುಟುಂಬದ ಹೆಸರಿನಲ್ಲಿದೆ. ಕೆರೆಗಳು ಮತ್ತು ಕೆರೆಗಳಿಗೆ ಹೊಂದಿಕೊಂಡಿರುವ ನಾಲೆಗಳ ಯಾವುದೇ ಒಂದಿಂಚೂ ಭೂಮಿಯನ್ನು ಒತ್ತುವರಿ ಮಾಡಿಲ್ಲ. ಬೇಕಿದ್ದರೆ ವಿರೋಧ ಪಕ್ಷದ ನಾಯಕರು ಮತ್ತು ಮಾಧ್ಯಮದವರು ಬಂದು ಪರಿಶೀಲಿಸಲಿ’ ಎಂದು ಅವರು ಹೇಳಿದರು.

**ನಿಷ್ಠುರವಾಗಿ ಕೆಲಸ ಮಾಡುವಾಗ ಅದನ್ನು ಒಪ್ಪುವವರು ಇರುತ್ತಾರೆ. ನಿಷ್ಠುರವಾಗಿ ಕೆಲಸ ಮಾಡಿದ್ದಕ್ಕಾಗಿ ಬಾಧಿತರಾಗುವುದೂ ಇರುತ್ತದೆ. ನಿಷ್ಠುರವಾಗಿ ಕೆಲಸ ಮಾಡುವವರನ್ನು ಸಿಲುಕಿಸಲು ಪ್ರಯತ್ನಿಸುತ್ತಾರೆ**

**ಕೃಷ್ಣ ಬೈರೇಗೌಡ,** ಕಂದಾಯ ಸಚಿವ

### ‘ತನಿಖೆಯಾಗಿ ಸತ್ಯ ಹೊರಬರಲಿ’

ಜಮೀನು ಕೆರೆಯೊ, ಸ್ಮಶಾನವೊ ಎಂಬುದು ತನಿಖೆ ಮಾಡಿಸಲಿ. ನಿಮ್ಮ ಮೇಲೆ ಬಂದಿರುವ ಆರೋಪಗಳಿಂದ ಕಳಂಕರಹಿತರಾಗಿ ಹೊರಬನ್ನಿ. ತಪ್ಪು ಮಾಡಿದ್ದರೆ, ಅದಕ್ಕೆ ಶಿಕ್ಷೆಯಾಗಲಿ. ಸತ್ಯಾಸತ್ಯತೆ ಹೊರಬರಲಿ. ದಾಖಲೆಗಳನ್ನು ಕೈಯಲ್ಲಿ ಬರೆಯುವಾಗ ತಿದ್ದುಪಡಿ ಆಗಿದೆ. ಒಮ್ಮೆ ಕೆರೆಯಾಗಿದ್ದು ಯಾವಾಗಲೂ ಕೆರೆಯೇ ಎಂಬುದನ್ನು ನೆನಪಿಡಬೇಕು

**ಆರ್.ಅಶೋಕ,**
ವಿರೋಧ ಪಕ್ಷ ನಾಯಕ

# ‘ಹೆದರಿದರೆ ಜನ ಸ್ಮರಿಸುವುದಿಲ್ಲ’

## ಹೈಕೋರ್ಟ್ ಕೊಲಿಜಿಯಂಗೆ ಕನ್ನಡಿಗರ ಕೊರತೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ‘ಪರಿಣಾಮಗಳಿಗೆ ಹೆದರಿ ಸರಿಯಾದ ತೀರ್ಮಾನ ಕೈಗೊಳ್ಳುವ ನಿಲುವಿನಿಂದ ಯಾವತ್ತೂ ಹಿಂದೆ ಸರಿಯಬಾರದು. ಜನರು ಸೂಕ್ತ ಸಮಯದಲ್ಲಿ ಖಂಡಿತಾ ನಮ್ಮ ತೀರ್ಮಾನಗಳನ್ನು ಸ್ಮರಿಸುತ್ತಾರೆ ಎಂಬುದನ್ನು ಅರ್ಥ ಮಾಡಿಕೊಳ್ಳಬೇಕು’ ಎಂದು ಕರ್ನಾಟಕ ಹೈಕೋರ್ಟ್‌ನ ಹಿರಿಯ ನ್ಯಾಯಮೂರ್ತಿ ಕೆ.ಎಸ್.ಮುದಗಲ್ ಅಭಿಪ್ರಾಯಪಟ್ಟರು.



ನ್ಯಾ.ಕೆ.ಎಸ್. ಮುದಗಲ್

ಕರ್ನಾಟಕ ಹೈಕೋರ್ಟ್ ನ್ಯಾಯಮೂರ್ತಿಗಳಲ್ಲಿ ಮೂರನೇ ಸ್ಥಾನದಲ್ಲಿರುವ ಅವರು ಇದೇ 22ಕ್ಕೆ ಸೇವೆಯಿಂದ ನಿವೃತ್ತಿ ಹೊಂದುತ್ತಿರುವ ಹಿನ್ನೆಲೆಯಲ್ಲಿ, ಕರ್ನಾಟಕ ರಾಜ್ಯ ವಕೀಲರ ಪರಿಷತ್ (ಕೆಎಸ್‌ಬಿಸಿ) ಮತ್ತು ‘ಬೆಂಗಳೂರು ವಕೀಲರ ಸಂಘ’ದ ವತಿಯಿಂದ ಹೈಕೋರ್ಟ್‌ನಲ್ಲಿ ಶುಕ್ರವಾರ ಅವರಿಗೆ ಪ್ರತ್ಯೇಕವಾಗಿ ಸಾಂಪ್ರದಾಯಿಕ ಬೀಳ್ಕೊಡುಗೆ ನೀಡಲಾಯಿತು.

ಈ ವೇಳೆ ಮಾತನಾಡಿದ ಅವರು, ‘ಆಡಳಿತಾತ್ಮಕ ಕೆಲಸ ನಿಭಾಯಿಸುವಾಗ ಅನೇಕ ಸಂದರ್ಭಗಳಲ್ಲಿ ಸ್ವತಂತ್ರ ನಿರ್ಧಾರ ಕೈಗೊಳ್ಳಲು ಆಗುವುದಿಲ್ಲ. ಆಗೆಲ್ಲಾ ಅಗ್ನಿಪರೀಕ್ಷೆ ಎದುರಿಸಬೇಕಾಗುತ್ತದೆ. ಅನುಕೂಲಕರ ವಾತಾವರಣದಲ್ಲಿ ನಾವು ಏನನ್ನೂ ಸಾಧಿಸುವುದಿಲ್ಲ. ಬೆಂಕಿಯಲ್ಲಿ ಬೆಂದು ಸುತ್ತಿಗೆ ಏಟು ತಿನ್ನುವ ಕತ್ತರಿಯೇ ಯಾವತ್ತೂ ಹರಿತವಾಗುತ್ತದೆ’ ಎಂದು ಅವರು ವೃತ್ತಿಯ ಒತ್ತಡವನ್ನು ಬಣ್ಣಿಸಿದರು.

‘1976ರಲ್ಲಿನ ಎಡಿಎಂ ಜಬಲ್‌ಪುರ್ v/s ಶಿವಕಾಂತ್ ಶುಕ್ಲಾ ಪ್ರಕರಣದಲ್ಲಿ ನ್ಯಾಯಮೂರ್ತಿ ಹಂಸರಾಜ್ ಖನ್ನಾ ಅವರು ನ್ಯಾಯದ ಪರ ನಿಂತು ಬರೆದ ಅಲ್ಪಮತದ ಆದರೆ ಭಿನ್ನ (ತುರ್ತು ಪರಿಸ್ಥಿತಿ ಸಂದರ್ಭದಲ್ಲಿನ ವ್ಯಕ್ತಿ ಸ್ವಾತಂತ್ರ್ಯಕ್ಕೆ ಸಂಬಂಧಿಸಿದ ತೀರ್ಪು) ತೀರ್ಪು ಚರಿತ್ರಾರ್ಹವಾದದ್ದು. ಅವರು ತಮ್ಮ ವೃತ್ತಿಯನ್ನು ಒತ್ತೆಯಾಗಿಟ್ಟು ಆ ತೀರ್ಪನ್ನು ಬರೆದಿದ್ದರು. 41 ವರ್ಷಗಳ ಬಳಿಕ 2017ರಲ್ಲಿ ಕೆ.ಎಸ್.ಪುಟ್ಟಸ್ವಾಮಿ ಮತ್ತು ಇತರರು v/s ಭಾರತ ಸರ್ಕಾರದ ಪ್ರಕರಣದಲ್ಲಿ ಆ ಐತಿಹಾಸಿಕ ಭಿನ್ನ ತೀರ್ಪನ್ನು ಎತ್ತಿ ಹಿಡಿಯಲಾಯಿತು’ ಎಂದು ಸ್ಮರಿಸಿದರು.

**ಪರಿಚಯ:** ಕೊಟ್ರವ್ವ ಸೋಮಪ್ಪ ಮುದಗಲ್ ಅವರು 1963ರ ಡಿಸೆಂಬರ್ 22ರಂದು ಜನಿಸಿದ್ದು, ಬಿ.ಕಾಂ, ಧಾರವಾಡ ವಿಶ್ವವಿದ್ಯಾಲಯದ ಎಲ್‌ಎಲ್‌ಬಿ ಪದವೀಧರರು. 1988ರ ಜುಲೈ 6ರಂದು ವೃತ್ತಿ ಪ್ರವೇಶಿಸಿದ ಅವರು ಧಾರವಾಡ ಮತ್ತು ಬೆಂಗಳೂರಿನಲ್ಲಿ ವಕೀಲಿಕೆ ನಡೆಸಿದರು. 1998ರ ಜೂನ್ 17ರಂದು ಜಿಲ್ಲಾ ನ್ಯಾಯಾಧೀಶರಾಗಿ ನೇಮಕಗೊಂಡ ಅವರು ವಿವಿಧ ಜಿಲ್ಲೆಗಳಲ್ಲಿ ಕಾರ್ಯ ನಿರ್ವಹಿಸಿದ್ದಾರೆ. 2016ರ ನವೆಂಬರ್ 14ರಂದು ಹೈಕೋರ್ಟ್ ನ್ಯಾಯಮೂರ್ತಿಯಾಗಿ ಪದೋನ್ನತಿ ಹೊಂದಿದರು.



ಹೈಕೋರ್ಟ್‌ನ ನ್ಯಾಯಾಂಗ ಮತ್ತು ವಿಚಕ್ಷಣಾ ವಿಭಾಗ, ರಾಜ್ಯ ಸರ್ಕಾರದ ಕಾನೂನು ಇಲಾಖೆಯ ಪ್ರಧಾನ ಕಾರ್ಯದರ್ಶಿ ಹಾಗೂ ರಾಜ್ಯ ಸರ್ಕಾರಿ ಮೇಲ್ಮನವಿ ನ್ಯಾಯಮಂಡಳಿಯ ಮೊದಲ ಮಹಿಳಾ ಮೇಲ್ವಿಚಾರಣಾ ಅಧಿಕಾರಿ ಎಂಬ ಖ್ಯಾತಿಗೆ ಭಾಜನರಾಗಿರುವ ನ್ಯಾಯಮೂರ್ತಿ ಮುದಗಲ್ ಅವರು ಸದ್ಯ ಹೈಕೋರ್ಟ್‌ನ ಮೂವರು ಸದಸ್ಯರ ಕೊಲಿಜಿಯಂನಲ್ಲಿರುವ ಏಕೈಕ ಕನ್ನಡತಿ ಎನಿಸಿದ್ದಾರೆ. ಇವರ ನಿವೃತ್ತಿ ನಂತರ ಕರ್ನಾಟಕ ಹೈಕೋರ್ಟ್‌ನ ಕೊಲಿಜಿಯಂ ಬಳಗದಲ್ಲಿ ಕನ್ನಡಿಗ ನ್ಯಾಯಮೂರ್ತಿಗಳ ಕೊರತೆ ತಲೆದೋರಲಿದೆ.

ನ್ಯಾಯಮೂರ್ತಿ ಮುದಗಲ್ ಅವರ ನಿವೃತ್ತಿ ಬಳಿಕ ಕೊಲಿಜಿಯಂ ಪುನರಚನೆಯಾಗಲಿದ್ದು, ಮುಖ್ಯ ನ್ಯಾಯಮೂರ್ತಿ ವಿಭು ಬಖ್ರು, ಎರಡನೇ ಸ್ಥಾನದಲ್ಲಿರುವ ನ್ಯಾಯಮೂರ್ತಿ ಅನು ಶಿವರಾಮನ್ ಮತ್ತು ಜಯಂತ್ ಬ್ಯಾನರ್ಜಿ ಕೊಲಿಜಿಯಂನಲ್ಲಿ ಸ್ಥಾನ ಪಡೆಯಲಿದ್ದಾರೆ. ಈ ಮೂವರೂ ನ್ಯಾಯಮೂರ್ತಿಗಳು ಕ್ರಮವಾಗಿ ದೆಹಲಿ, ಕೇರಳ ಮತ್ತು ಉತ್ತರ ಪ್ರದೇಶದವರಾಗಿದ್ದಾರೆ.





ಬ್ಲೇಡ್ ರಹಿತ ಶಸ್ತ್ರಚಿಕಿತ್ಸೆ ನಡೆಸುವ ಸಂಚಾರಿ ಘಟಕಕ್ಕೆ ಡಾ.ಸುಪ್ರಿಯಾ ಶ್ರೀಗಣೇಶ್ ಮತ್ತು ಡಾ.ಶ್ರೀಗಣೇಶ್ ಚಾಲನೆ ನೀಡಿದರು

# ಬ್ಲೇಡ್ ರಹಿತ ಕಣ್ಣಿನ ಶಸ್ತ್ರಚಿಕಿತ್ಸೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಇಲ್ಲಿನ ನೇತ್ರಧಾಮ ಆಸ್ಪತ್ರೆಯು ಬ್ಲೇಡ್ ರಹಿತ ಕಣ್ಣಿನ ಶಸ್ತ್ರಚಿಕಿತ್ಸೆ ನಡೆಸುವ ‘ಝೀಮರ್ ಝಡ್8 ನಿಯೊ’ ಫೆಮ್ಟೋಸೆಕೆಂಡ್ ಲೇಸರ್ ವ್ಯವಸ್ಥೆ ಹೊಂದಿರುವ ಸಂಚಾರಿ ಘಟಕವನ್ನು ಪರಿಚಯಿಸಿದೆ.

ನಗರದಲ್ಲಿ ಶುಕ್ರವಾರ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಈ ಘಟಕಕ್ಕೆ ಚಾಲನೆ ನೀಡಲಾಯಿತು. ಪ್ರಾಯೋಗಿಕ ಹಂತದಲ್ಲಿ ಈ ವ್ಯವಸ್ಥೆಯಡಿ 900ಕ್ಕೂ ಹೆಚ್ಚು ಯಶಸ್ವಿ ಶಸ್ತ್ರಚಿಕಿತ್ಸೆಗಳನ್ನು ನಡೆಸಲಾಗಿದೆ. ‘ಝೀಮರ್ ಝಡ್8 ನಿಯೊ’ ತಂತ್ರಜ್ಞಾನ ಆಧಾರಿತ ಫೆಮ್ಟೋಸೆಕೆಂಡ್ ಲೇಸರ್ ನೆರವಿನಿಂದ ಕಣ್ಣಿನ ಪೊರೆ ಸೇರಿ ವಿವಿಧ ಶಸ್ತ್ರಚಿಕಿತ್ಸೆ ನಡೆಸಬಹುದು. ಇದು ಸುರಕ್ಷಿತ ವಿಧಾನ ಎಂದು ಆಸ್ಪತ್ರೆಯ ವೈದ್ಯರು ತಿಳಿಸಿದರು.

ನೇತ್ರಧಾಮದ ಕಾರ್ಯನಿರ್ವಾಹಕ ನಿರ್ದೇಶಕಿ ಡಾ. ಸುಪ್ರಿಯಾ ಶ್ರೀಗಣೇಶ್, ‘ಸುರಕ್ಷಿತ ಮತ್ತು ನಿಖರ ಶಸ್ತ್ರಚಿಕಿತ್ಸೆಗೆ ಈ ತಂತ್ರಜ್ಞಾನ ಸಹಕಾರಿ. ಬ್ಲೇಡ್ ರಹಿತ ಈ ಶಸ್ತ್ರಚಿಕಿತ್ಸೆಯು ಸಾಂಪ್ರದಾಯಿಕ ಶಸ್ತ್ರಚಿಕಿತ್ಸೆಗೆ ಹೋಲಿಸಿದಲ್ಲಿ ನೋವು ರಹಿತವಾಗಿರುತ್ತದೆ. ಹೆಚ್ಚಿನ ವಿಶ್ರಾಂತಿಯ ಅಗತ್ಯತೆಯೂ ಇರುವುದಿಲ್ಲ’ ಎಂದರು.

ನೇತ್ರಧಾಮದ ವ್ಯವಸ್ಥಾಪಕ ನಿರ್ದೇಶಕ ಡಾ. ಶ್ರೀಗಣೇಶ್, ‘ಹೊಸ ತಂತ್ರಜ್ಞಾನದ ಯಂತ್ರವು ಬೆಂಗಳೂರಿನ ಮೂರು, ಮೈಸೂರಿನ ಒಂದು ಸೇರಿ ಸಂಸ್ಥೆಯ ಐದು ಕೇಂದ್ರಗಳಲ್ಲಿ ಕಾರ್ಯನಿರ್ವಹಿಸಲಿದೆ’ ಎಂದರು.

# ‘ಕನ್ನಡದಲ್ಲಿ ಪರೀಕ್ಷೆ: ಹೋರಾಟಕ್ಕೆ ಸಂದ ಜಯ’

## ಕರವೇ ನಿಯೋಗದಿಂದ ಬೆಂಗಳೂರು ವಿಭಾಗದ ರೈಲ್ವೆ ಅಧಿಕಾರಿಗಳ ಭೇಟಿ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ನೈರುತ್ಯ ರೈಲ್ವೆಯ ಬೆಂಗಳೂರು ವಿಭಾಗದಲ್ಲಿ ಬಡ್ತಿ ಪರೀಕ್ಷೆಗಳನ್ನು ಕನ್ನಡದಲ್ಲಿಯೂ ಬರೆಯಲು ಅವಕಾಶ ನೀಡಿರುವುದು ಕರ್ನಾಟಕ ರಕ್ಷಣಾ ವೇದಿಕೆಯ ಹೋರಾಟಕ್ಕೆ ಸಂದ ಜಯ ಎಂದು ಕರ್ನಾಟಕ ರಕ್ಷಣಾ ವೇದಿಕೆ(ಕರವೇ) ಅಧ್ಯಕ್ಷ ಟಿ.ಎ. ನಾರಾಯಣಗೌಡ ತಿಳಿಸಿದ್ದಾರೆ.

ಕರವೇ ನಿಯೋಗವು ಶುಕ್ರವಾರ ಬೆಂಗಳೂರು ವಿಭಾಗದ ರೈಲ್ವೆ ಅಧಿಕಾರಿಗಳನ್ನು ಭೇಟಿ ಮಾಡಿ ಚರ್ಚೆ ನಡೆಸಿದ ಬಳಿಕ ಅವರು ಮಾತನಾಡಿದರು.

‘ಗೂಡ್ಸ್ ರೈಲು ವ್ಯವಸ್ಥಾಪಕ ಹುದ್ದೆಗೆ ಸಂಬಂಧಿಸಿದ ಪದೋನ್ನತಿ ಪರೀಕ್ಷೆ ಸೇರಿದಂತೆ ಎಲ್ಲ ಪರೀಕ್ಷೆಗಳನ್ನು ಕನ್ನಡದಲ್ಲಿ ಬರೆಯಲು ಅವಕಾಶ ನೀಡಬೇಕು ಎಂದು ಆಗ್ರಹಿಸಿ ಮನವಿ ಸಲ್ಲಿಸಿದೆವು. ನಮ್ಮ ಆಗ್ರಹಕ್ಕೆ ರೈಲ್ವೆ ಇಲಾಖೆಯ ಡಿಆರ್‌ಎಂ, ಪಿಸಿಪಿಒ ಸೇರಿದಂತೆ ಹಿರಿಯ ಅಧಿಕಾರಿಗಳು ತಕ್ಷಣ ಸ್ಪಂದಿಸಿದ್ದಾರೆ. ಕನ್ನಡ ಭಾಷೆಯಲ್ಲಿ ಪರೀಕ್ಷೆ ಬರೆಯುವ ಅವಕಾಶ ನೀಡಿದ್ದಾರೆ’ ಎಂದು ತಿಳಿಸಿದ್ದಾರೆ.

‘ಕೇಂದ್ರ ರೈಲ್ವೆ ಖಾತೆ ರಾಜ್ಯ ಸಚಿವ ವಿ.ಸೋಮಣ್ಣ ಅವರೂ ನಮ್ಮ ಮನವಿ ಮೇರೆಗೆ ಅಧಿಕಾರಿಗಳೊಂದಿಗೆ ಮಾತುಕತೆ ನಡೆಸಿದ್ದಾರೆ. ಸಂಸದರಾದ ಪಿ.ಸಿ. ಮೋಹನ್ ಮತ್ತು ತೇಜಸ್ವಿ ಸೂರ್ಯ ಕೂಡ ಕಾಳಜಿ ವಹಿಸಿದರು’ ಎಂದು ಮಾಹಿತಿ ನೀಡಿದ್ದಾರೆ.





ಕನ್ನಡ ಭಾಷೆಯಲ್ಲಿ ಪರೀಕ್ಷೆ ಬರೆಯಲು ಅವಕಾಶ ನೀಡುವಂತೆ ಒತ್ತಾಯಿಸಿ ಕರ್ನಾಟಕ ರಕ್ಷಣಾ ವೇದಿಕೆ ಅಧ್ಯಕ್ಷ ಟಿ.ಎ. ನಾರಾಯಣಗೌಡ ನೇತೃತ್ವದ ನಿಯೋಗವು ನೈರುತ್ಯ ರೈಲ್ವೆ ಬೆಂಗಳೂರು ವಿಭಾಗದ ಅಧಿಕಾರಿಗಳಿಗೆ ಮನವಿ ಸಲ್ಲಿಸಿತು

**ಸಂವಿಧಾನಕ್ಕೆ ಅಪಚಾರ:** ರೈಲ್ವೆ ಇಲಾಖೆಯ ಬಡ್ತಿ ಹಾಗೂ ನೇಮಕಾತಿ ಪರೀಕ್ಷೆಗಳಲ್ಲಿ ತ್ರಿಭಾಷಾ ಸೂತ್ರವನ್ನು ಕಡೆಗಣಿಸಿ ಕರ್ನಾಟಕದ ಆಡಳಿತ ಕನ್ನಡ ಭಾಷೆಗೆ ಅವಕಾಶ ನೀಡದೆ ಕೇವಲ ಹಿಂದಿ ಮತ್ತು ಇಂಗ್ಲಿಷ್ ಭಾಷೆಗಳಿಗೆ ಅವಕಾಶ ಕಲ್ಪಿಸಿರುವುದು ಸಂವಿಧಾನಕ್ಕೆ ಎಸಗಿದ ಅಪಚಾರ. ಹಿಂದಿ ಭಾಷಿಕರಿಗೆ ಅನುಕೂಲ ಮಾಡುವ ಸ್ಪಷ್ಟ ಪಿತೂರಿ ಎಂದು ಕನ್ನಡ ಗೆಳೆಯರ ಬಳಗ, ಕರ್ನಾಟಕ ವಿಕಾಸರಂಗ ಆರೋಪಿಸಿದೆ.

ಈ ಅಧಿಸೂಚನೆಯನ್ನು ರದ್ದುಪಡಿಸಿ, ಕನ್ನಡಕ್ಕೆ ಅವಕಾಶ ನೀಡಿ ಕೂಡಲೇ ಮರು ಅಧಿಸೂಚನೆ ಹೊರಡಿಸಬೇಕು ಎಂದು ಎಂದು ಬಳಗದ ಅಧ್ಯಕ್ಷ ವ.ಚ. ಚನ್ನೇಗೌಡ, ಸಂಚಾಲಕ ರಾ.ನಂ. ಚಂದ್ರಶೇಖರ ಆಗ್ರಹಿಸಿದ್ದಾರೆ.

### ‘ಶಿಸ್ತು ಕ್ರಮ ಕೈಗೊಳ್ಳಿ’

ಕನ್ನಡವನ್ನು ಕಡೆಗಣಿಸಿರುವ ನೈರುತ್ಯ ರೈಲ್ವೆ ಬೆಂಗಳೂರು ವಿಭಾಗದ ಅಧಿಕಾರಿಗಳ ಮೇಲೆ ಶಿಸ್ತು ಕ್ರಮ ಕೈಗೊಳ್ಳಿ ಎಂದು ರೈಲ್ವೆ ಖಾತೆ ರಾಜ್ಯ ಸಚಿವ ವಿ. ಸೋಮಣ್ಣ ಅವರಿಗೆ ಕನ್ನಡ ಅಭಿವೃದ್ಧಿ ಪ್ರಾಧಿಕಾರ ಅಧ್ಯಕ್ಷ ಪುರುಷೋತ್ತಮ ಬಿಳಿಮಲೆ ಪತ್ರ ಬರೆದಿದ್ದಾರೆ.

‘ಕನ್ನಡದಲ್ಲಿ ಬರೆಯುವ ಅವಕಾಶವನ್ನು ನಿರಾಕರಿಸುವ ಮೂಲಕ ಕನ್ನಡಿಗರ ಭಾವನೆಗಳಿಗೆ ತೀವ್ರ ಘಾಸಿಯನ್ನು ಉಂಟು ಮಾಡಿದ್ದಾರೆ. ಹುಬ್ಬಳ್ಳಿ, ಮೈಸೂರು ವಿಭಾಗದಲ್ಲಿ ಕನ್ನಡದಲ್ಲಿ ಪರೀಕ್ಷೆ ಬರೆಯಬಹುದಾದರೆ ಬೆಂಗಳೂರು ವಿಭಾಗದಲ್ಲಿ ಯಾಕೆ ಸಾಧ್ಯವಾಗಿಲ್ಲ ಎಂಬುದರ ಬಗ್ಗೆಯೂ ತನಿಖೆ ಮಾಡಬೇಕು. 15 ದಿನಗಳ ಹಿಂದೆ ಕನ್ನಡಕ್ಕೆ ಅವಕಾಶ ನೀಡದೇ ನಡೆಸಿದ್ದ ಪರೀಕ್ಷೆಯನ್ನು ರದ್ದು ಮಾಡಬೇಕು. ಕನ್ನಡ ಭಾಷೆಗೆ ಅವಕಾಶ ನೀಡಿ ಮರು ಪರೀಕ್ಷೆ ನಡೆಸುವ ಮೂಲಕ ಕನ್ನಡಿಗರಿಗೆ ನ್ಯಾಯ ಒದಗಿಸಿ’ ಎಂದು ಪತ್ರದಲ್ಲಿ ಆಗ್ರಹಿಸಿದ್ದಾರೆ.

# ಸನ್ನದು ಹಿಂಪಡೆಯಲು ಬಯಸಿದರೆ ಮನವಿ ತಿರಸ್ಕಾರ ಸಲ್ಲ: ಹೈಕೋರ್ಟ್

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ‘ವಕೀಲರು ತಮ್ಮ ಸನ್ನದು ನೋಂದಣಿಯನ್ನು ಸಮರ್ಪಿಸಿ, ವಕೀಲರ ಕಲ್ಯಾಣ ನಿಧಿ ಕಾಯ್ದೆಯ ಪ್ರಕಾರ ಆರ್ಥಿಕ ಪ್ರಯೋಜನವನ್ನು ಪಡೆದ ನಂತರ ಸನ್ನದು ಶರಣಾಗತಿಯನ್ನು ಪುನಃ ಹಿಂಪಡೆಯಲು ಬಯಸಿ ಮರುನೋಂದಣಿ ಕೋರಿದರೆ, ಅದಕ್ಕೆ ಅನುಮತಿ ನೀಡುವುದು, ಕರ್ನಾಟಕ ರಾಜ್ಯ ವಕೀಲರ ಪರಿಷತ್‌ನ (ಕೆಎಸ್‌ಬಿಸಿ) ಕರ್ತವ್ಯವಾಗಿರುತ್ತದೆ’ ಎಂದು ಹೈಕೋರ್ಟ್ ಆದೇಶಿಸಿದೆ.

ಈ ಸಂಬಂಧ ರಾಯಚೂರಿನ ವಕೀಲ ಎಂ.ಎ.ಹಮೀದ್ ಸಲ್ಲಿಸಿದ್ದ ರಿಟ್ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಸೂರಜ್ ಗೋವಿಂದರಾಜ್ ಅವರಿದ್ದ ಏಕಸದಸ್ಯ ನ್ಯಾಯಪೀಠ, ‘ಅರ್ಜಿದಾರರು ಸಲ್ಲಿಸಿರುವ ಮನವಿಯನ್ನು ಅಂಗೀಕರಿಸಬೇಕು’ ಎಂದು ಕರ್ನಾಟಕ ರಾಜ್ಯ ವಕೀಲರ ಪರಿಷತ್‌ಗೆ ನಿರ್ದೇಶಿಸಿದೆ.

‘ಕೆಎಸ್‌ಬಿಸಿ ಕ್ರಮ ಏಕಪಕ್ಷೀಯವಾಗಿದೆ’ ಎಂಬ ಅರ್ಜಿದಾರರ ಪರ ಹೈಕೋರ್ಟ್ ವಕೀಲ ರಹಮತ್ ಉಲ್ಲಾ ಕೊತ್ವಾಲ್ ಅವರ ವಾದವನ್ನು ನ್ಯಾಯಪೀಠ ಪುರಸ್ಕರಿಸಿದೆ.

**ಪ್ರಕರಣವೇನು?:** ‘ಅರ್ಜಿದಾರ ಹಮೀದ್ ಅವರು ಕಳೆದ 25 ವರ್ಷಗಳಿಂದ ರಾಯಚೂರಿನಲ್ಲಿ ವಕೀಲಿ ವೃತ್ತಿ ನಡೆಸುತ್ತಿದ್ದರು. ಕೋವಿಡ್–19ರ ಸಂದರ್ಭದಲ್ಲಿ ಕಾರಣಾಂತರಗಳಿಂದ ವೃತ್ತಿಯಿಂದ ಸ್ವಯಂ ನಿವೃತ್ತಿ ಪಡೆದುಕೊಳ್ಳಲು ಬಯಸಿ ಕೆಎಸ್‌ಬಿಸಿಗೆ ತಮ್ಮ ಸನ್ನದು ಒಪ್ಪಿಸಿದ್ದರು. ಪರಿಣಾಮ ವಕೀಲರ ಕಲ್ಯಾಣ ನಿಧಿ ಕಾಯ್ದೆ–2001ರ ಅನುಸಾರ ಅವರಿಗೆ ₹1.42 ಲಕ್ಷ ಮೊತ್ತವನ್ನು ಪಾವತಿಸಲಾಗಿತ್ತು. ಈ ಮೊತ್ತ ತಮ್ಮ ನಿರೀಕ್ಷಿತ ಮೊತ್ತಕ್ಕಿಂತ ಕೇವಲವಾಗಿರುವ ಕಾರಣ ನಾನು ಪುನಃ ಸನ್ನದು ವಾಪಸು ಪಡೆದು ವೃತ್ತಿ ಮುಂದುವರಿಸುತ್ತೇನೆ’ ಎಂದು ಅರ್ಜಿದಾರರು ಕೆಎಸ್‌ಬಿಸಿಗೆ ಮನವಿ ಸಲ್ಲಿಸಿದ್ದರು. ಈ ಮನವಿಯನ್ನು ಕೆಎಸ್‌ಬಿಸಿ ತಿರಸ್ಕರಿಸಿತ್ತು. ಇದನ್ನು ಪ್ರಶ್ನಿಸಿ ಅರ್ಜಿದಾರರು ಹೈಕೋರ್ಟ್ ಮೆಟ್ಟಿಲೇರಿದ್ದರು.

# ಮೈಸೂರು: ‘ಸ್ತುತಿ ಶಂಕರ- ಸ್ತೋತ್ರ ಮಹಾಸಮರ್ಪಣೆ’ ಇಂದು

ಪ್ರಜಾವಾಣಿ ವಾರ್ತೆ

**ಮೈಸೂರು:** ಶೃಂಗೇರಿ ಶಾರದಾಪೀಠದ ಭಾರತೀ ತೀರ್ಥ ಸ್ವಾಮೀಜಿ ಅವರ ಸನ್ಯಾಸ ಸ್ವೀಕಾರದ ಸುವರ್ಣ ಮಹೋತ್ಸವ ಪ್ರಯುಕ್ತ ಡಿ.20ರಂದು ಸಂಜೆ 4ಕ್ಕೆ ನಗರದ ಅರಮನೆ ಆವರಣದಲ್ಲಿ ‘ಸ್ತುತಿ ಶಂಕರ’- ಸ್ತೋತ್ರ ಮಹಾಸಮರ್ಪಣೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ’ ಎಂದು ಸ್ತುತಿ ಶಂಕರ ಸಂಚಾಲನ ಸಮಿತಿ ಕಾರ್ಯಾಧ್ಯಕ್ಷ ಸುಧಾಕರ ಶೆಟ್ಟಿ ತಿಳಿಸಿದರು.

ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ‘ಸುವರ್ಣಭಾರತೀ ಶೀರ್ಷಿಕೆ ಅಡಿಯಲ್ಲಿ ಹಮ್ಮಿಕೊಂಡಿರುವ ಕಲ್ಯಾಣವೃಷ್ಟಿ ಮಹಾಭಿಯಾನ ಸ್ತೋತ್ರ ಸಮರ್ಪಣಾ ಕಾರ್ಯಕ್ರಮದಲ್ಲಿ ಶಂಕರಾಚಾರ್ಯ ವಿರಚಿತ ಕಲ್ಯಾಣವೃಷ್ಟಿಸ್ತವ, ಶಿವ ಪಂಚಾಕ್ಷರ ನಕ್ಷತ್ರ ಮಾಲಾ ಹಾಗೂ ಲಕ್ಷ್ಮೀನರಸಿಂಹಕರುಣಾರಸ ಸೇರಿದಂತೆ ಸ್ತೋತ್ರಗಳ ಪಠಣ ನಡೆಯಲಿದೆ. 20 ಸಾವಿರ ಮಂದಿ ಪಾಲ್ಗೊಳ್ಳುವ ನಿರೀಕ್ಷೆ ಇದೆ’ ಎಂದು ಮಾಹಿತಿ ನೀಡಿದರು.

‘ಶೃಂಗೇರಿ ಪೀಠದ ವಿಧುಶೇಖರ ಭಾರತೀ ಸ್ವಾಮೀಜಿ ಸಾನ್ನಿಧ್ಯ ವಹಿಸಲಿದ್ದು, ಕೃಷ್ಣರಾಜನಗರ ಯಡತೊರೆ ಯೋಗಾನಂದೇಶ್ವರ ಸರಸ್ವತಿ ಮಠದ ಶಂಕರಭಾರತೀ ಸ್ವಾಮೀಜಿ ಹಾಗೂ ಬ್ರಹ್ಮಾನಂದ ಭಾರತೀ ಸ್ವಾಮೀಜಿ ಉಪಸ್ಥಿತರಿರುವರು. ರಾಜವಂಶಸ್ಥೆ ಪ್ರಮೋದಾದೇವಿ ಒಡೆಯರ್ ಮತ್ತು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಪಾಲ್ಗೊಳ್ಳಲಿದ್ದಾರೆ’ ಎಂದರು.

‘ಸ್ತೋತ್ರ ಮಹಾಸಮರ್ಪಣೆಗಾಗಿ ಒಂದು ವರ್ಷದಿಂದ ಸಿದ್ಧತೆ ನಡೆದಿದೆ. ಜಿಲ್ಲೆಯಾದ್ಯಂತ ಭಕ್ತ ಮಹಿಳೆಯರು, ವಿದ್ಯಾರ್ಥಿಗಳು ಸ್ತೋತ್ರ ಪಠಣವನ್ನು ಅಭ್ಯಾಸ ಮಾಡಿದ್ದಾರೆ. ಪಾರಾಯಣ ಮಾಡುವ ಎಲ್ಲರಿಗೂ ಗುರುತಿನ ಚೀಟಿ ನೀಡಲಾಗಿದೆ. ಎಲ್ಲರನ್ನೂ ವಾಹನಗಳಲ್ಲಿ ಕರೆತರಲಾಗುವುದು’ ಎಂದು ತಿಳಿಸಿದರು.

**ಪ್ರವೇಶ:** ಅರಮನೆ ಪೂರ್ವ ಮುಖ್ಯದ್ವಾರ, ಉತ್ತರದ ಕೋಟೆ ಆಂಜನೇಯಸ್ವಾಮಿ ದೇವಸ್ಥಾನ ದ್ವಾರ, ದಕ್ಷಿಣದ ವರಾಹ ದ್ವಾರಗಳ ಮೂಲಕ ಪ್ರವೇಶವಿದೆ. ವಾಹನ ನಿಲುಗಡೆಗೆ ಅರಮನೆಯ ವರಾಹ ದ್ವಾರ, ಕೋಟೆ ಮಾರಮ್ಮ ಗುಡಿಯ ಸಮೀಪ, ಕಾಡಾ ಕಚೇರಿ ಆವರಣ, ದೊಡ್ಡಕೆರೆ ಫುಟ್‌ಬಾಲ್ ಮೈದಾನ ಹಾಗೂ ವಸ್ತುಪ್ರದರ್ಶನ ಮೈದಾನದ ಹಿಂಭಾಗ, ತರಕಾರಿ ಮಾರುಕಟ್ಟೆಯ ಪಕ್ಕದಲ್ಲಿ ವ್ಯವಸ್ಥೆ ಕಲ್ಪಿಸಲಾಗಿದೆ. ವೈದ್ಯಕೀಯ ಸೇವೆ, ತುರ್ತುಚಿಕಿತ್ಸೆ, ಶೌಚಾಲಯದ ವ್ಯವಸ್ಥೆ ಮಾಡಲಾಗಿದೆ. ಶ್ರೋತೃಗಳಾಗಿ ಭಾಗವಹಿಸಲು ಯಾವುದೇ ಗುರುತಿನ ಚೀಟಿ, ಶುಲ್ಕವಿರುವುದಿಲ್ಲ’ ಎಂದರು.

## ಶ್ರೇಷ್ಠ ತೋಟಗಾರಿಕಾ ಪ್ರಶಸ್ತಿಗೆ ರೈತರ ಆಯ್ಕೆ

**ಬಾಗಲಕೋಟೆ:** ಭಾನುವಾರದಿಂದ 14ನೇ ತೋಟಗಾರಿಕಾ ಮೇಳ ಆರಂಭವಾಗಲಿದ್ದು, ಈ ಸಾಲಿಗೆ ಆಯ್ಕೆಯಾದ ಶ್ರೇಷ್ಠ ತೋಟಗಾರಿಕಾ ರೈತರಿಗೆ ಪ್ರಶಸ್ತಿ ನೀಡಲಾಗುವುದು.

ರಮೇಶ ಎಚ್. (ಬೆಂಗಳೂರು ಗ್ರಾಮಾಂತರ ಜಿಲ್ಲೆ), ಮುನಿರಾಜು ಬಿ.ಎನ್. (ಬೆಂಗಳೂರು ನಗರ) ಪ್ರಶಸ್ತಿಗೆ ಆಯ್ಕೆಯಾಗಿದ್ದಾರೆ. ಡಿ.21ರಂದು 8 ರೈತರು, 22ರಂದು 8 ಹಾಗೂ 23 8 ರೈತರನ್ನು ಸನ್ಮಾನಿಸಿ ಪ್ರಶಸ್ತಿ ಪ್ರದಾನ ಮಾಡಲಾಗುವುದು.

## ನಗರದಲ್ಲಿ ಇಂದು

**ನಿರ್ಗಮನ ಪಥಸಂಚಲನ:** ಅತಿಥಿ: ಎಂ.ಎ. ಸಲೀಂ, ಉಪಸ್ಥಿತಿ: ಬಿ. ದಯಾನಂದ, ಸೀಮಾಂತ್ ಕುಮಾರ್ ಸಿಂಗ್, ಎಂ.ಬಾಬು, ಆಯೋಜನೆ ಹಾಗೂ ಪೊಲೀಸ್ ತರಬೇತಿ ಶಾಲೆ, ಥಣಿಸಂದ್ರ, ಬೆಳಿಗ್ಗೆ 8

**ಅಂಗವಿಕಲರಿಗೆ ‘ಜಾಬ್ ಹಬ್ಬ’:** ಉದ್ಘಾಟನೆ: ಶರಣಪ್ರಕಾಶ ಪಾಟೀಲ, ಅತಿಥಿಗಳು: ಪ್ರತೀಕ್ ಮಾಧವ್, ಕೃಷ್ಣಮೂರ್ತಿ ಅನಂತಶಿವಂ, ಸೂರ್ಯಪ್ರಕಾಶ್ ಕೆ., ಶೇಖರ್ ನಾಯ್ಕ್, ಕ್ಯಾಪ್ಟನ್ ಶಾಂತಿ, ದಾಸ್ ಸೂರ್ಯವಂಶಿ, ಆಯೋಜನೆ: ಅಸಿಸ್ ಟೆಕ್ ಫೌಂಡೇಷನ್, ಸ್ಥಳ: ಬಿಎಂಎಸ್ ಮಹಿಳಾ ಕಾಲೇಜು, ಬ್ಯೂಗಲ್ ರಾಕ್ ರಸ್ತೆ, ಗಾಂಧಿ ಬಜಾರ್, ಬಸವನಗುಡಿ, ಬೆಳಿಗ್ಗೆ 9

**ಅಯ್ಯಪ್ಪಸ್ವಾಮಿಯ 55ನೇ ವಾರ್ಷಿಕೋತ್ಸವ ಹಾಗೂ ಅಲಂಕೃತ ರಥ ಮೆರವಣಿಗೆ:** ಬೆಳಿಗ್ಗೆ 10ರಿಂದ ವಿಶೇಷ ಪೂಜೆ, ಮಧ್ಯಾಹ್ನ 12.30ರಿಂದ ಅನ್ನದಾನ, ಸಂಜೆ 6ರಿಂದ ಮೆರವಣಿಗೆ, ಆಯೋಜನೆ ಹಾಗೂ ಸ್ಥಳ: ಅಯ್ಯಪ್ಪ ಸೇವಾ ಸಮಿತಿ, ಜಯನಗರ 7ನೇ ಬ್ಲಾಕ್

**ಚಳಿಗಾಲದ ಉತ್ಸವ:** ಮಕ್ಕಳಿಗಾಗಿ ಮನರಂಜನೆ ಹಾಗೂ ಆಟೋಟ ಚಟುವಟಿಕೆಗಳು, ಆಯೋಜನೆ ಹಾಗೂ ಸ್ಥಳ: ಸ್ಪಾಸ್ಟಿಕ್ಸ್ ಸೊಸೈಟಿ ಆಫ್ ಕರ್ನಾಟಕ, ಇಂದಿರಾನಗರ, ಬೆಳಿಗ್ಗೆ 10ರಿಂದ

**‘ಚೆಲ್ ಸ್ನೇಕ್ ಹೆಡ್’ ಮೀನು ಪ್ರದರ್ಶನ:** ಆಯೋಜನೆ: ಅಕ್ವೇರಿಯಂ ಪ್ಯಾರಡೈಸ್, ಸ್ಥಳ: ಫನ್‌ವರ್ಲ್ಡ್ ಆವರಣ, ಟಿವಿ ಟವರ್ ಬಳಿ, ಜಯಮಹಲ್ ಮುಖ್ಯರಸ್ತೆ, ಬೆಳಿಗ್ಗೆ 11

**ಕರ್ನಾಟಕ ರಾಜ್ಯೋತ್ಸವ:** ಉದ್ಘಾಟನೆ: ಸಾ.ರಾ. ಗೋವಿಂದು, ‘ವಿದ್ಯಾಶ್ರೀ’ ಪ್ರಶಸ್ತಿ ಪ್ರದಾನ: ಜೆ. ಆಂಥೋನಿ ಜಾರ್ಜ್, ಅಧ್ಯಕ್ಷತೆ: ಬಿ.ಎಸ್. ನಾಗರಾಜಮೂರ್ತಿ, ಪ್ರಶಸ್ತಿ ಪ್ರದಾನ: ವ.ಚ. ಚನ್ನೇಗೌಡ, ಪ್ರಶಸ್ತಿ ಪುರಸ್ಕೃತರು: ಡಿ.ವಿ. ಗುರುಪ್ರಸಾದ್, ಎಚ್.ಎನ್. ರಮೇಶ್‌ಬಾಬು, ಎಂ. ಖಾಸೀಮ್ ಮಲ್ಲಿಗೆಮಡುವು, ಆಯೋಜನೆ: ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ ಕನ್ನಡ ಕ್ರಿಯಾ ಸಮಿತಿ ಬೆಂಗಳೂರು ಕೇಂದ್ರೀಯ ವಿಭಾಗ, ಸ್ಥಳ: ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ವಿಭಾಗೀಯ ಕಾರ್ಯಾಗಾರ, ಶಾಂತಿನಗರ, ಬೆಳಿಗ್ಗೆ 11

**ಕ್ರಿಸ್ಮಸ್ ಸಂಭ್ರಮಾಚರಣೆ:** ಅತಿಥಿಗಳು: ಡಿ.ಕೆ. ಶಿವಕುಮಾರ್, ಸೀಮಾಂತ್ ಕುಮಾರ್ ಸಿಂಗ್, ಆಯೋಜನೆ: ಬಾಲ್ಡ್‌ವಿನ್ ಮೆಥೋಡಿಸ್ಟ್ ಎಜುಕೇಷನ್ ಸೊಸೈಟಿ, ಸ್ಥಳ: ಬಾಲ್ಡ್‌ವಿನ್ ಇಂಟರ್‌ನ್ಯಾಷನಲ್ ಸಭಾಂಗಣ, ಬಾಲ್ಡ್‌ವಿನ್ ಬಾಲಕರ ಪ್ರೌಢಶಾಲೆ, ಹೊಸೂರು ರಸ್ತೆ, ಬೆಳಿಗ್ಗೆ 11

**ಸೇವಾ ಸಂಕಲ್ಪ:** ಧಾರ್ಮಿಕ–ಸಾಮಾಜಿಕ–ಸಾಂಸ್ಕೃತಿಕ ವಾರ್ಷಿಕ ಸಡಗರ, ನವದುರ್ಗಾ ದೀಪ ನಮಸ್ಕಾರ, 108 ಕಳಶ ಪೂಜೆ, ಸಭಾ ಸಂಜೆ, ಭರತನಾಟ್ಯ ವೈಭವ ಆಯೋಜನೆ: ಅಭಯ ಸೇವಾ ಫೌಂಡೇಷನ್, ಸ್ಥಳ: ಶ್ರೀರಾಮ ಮಂದಿರ ಆಟದ ಮೈದಾನ, ರಾಜಾಜಿನಗರ, ಮಧ್ಯಾಹ್ನ 2

**ಮನೆಯಂಗಳದಲ್ಲಿ ಮಾತುಕತೆ:** ತಿಂಗಳ ಅತಿಥಿ: ಬಿ.ಜಯಶ್ರೀ, ಉಪಸ್ಥಿತಿ: ಕೆ.ಎಂ. ಗಾಯಿತ್ರಿ, ಆಯೋಜನೆ: ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಸ್ಥಳ: ನಯನ ಸಭಾಂಗಣ, ಕನ್ನಡ ಭವನ, ಜೆ.ಸಿ. ರಸ್ತೆ, ಮಧ್ಯಾಹ್ನ 3




ಬಿ.ಜಯಶ್ರೀ

**ಗೀತಾ ಗೋವಿಂದ ಸಂಸ್ಕೃತ ಸಂಘದ ಸುವರ್ಣ ಮಹೋತ್ಸವ ಸಮಾರಂಭ:** ಅತಿಥಿ: ಕೆ. ರಾಮಸುಬ್ರಮಣಿಯನ್, ಆಯೋಜನೆ: ಪಿ.ಎನ್. ರಾಮಚಂದ್ರ ಅಯ್ಯರ್ ಟ್ರಸ್ಟ್, ಸ್ಥಳ: ಟಿಟಿಡಿ ಕಲ್ಯಾಣ ಮಂಟಪ, ಮಲ್ಲೇಶ್ವರ, ಮಧ್ಯಾಹ್ನ 3.30

**ಉಪನ್ಯಾಸ:** ‘ಸ್ವತಂತ್ರ ಭಾರತದ ಭವಿಷ್ಯಕ್ಕಾಗಿ ಪರಂಪರೆಯನ್ನು ಸಂರಕ್ಷಿಸುವ ಮಹತ್ವ ಮತ್ತು ಪ್ರಸ್ತುತತೆ’ ವಿಷಯದ ಬಗ್ಗೆ ಉಪನ್ಯಾಸ: ಜೆ.ಸಾಯಿ ದೀಪಕ್, ಆಯೋಜನೆ: ಪೂರ್ಣಪ್ರಮತಿ, ಸ್ಥಳ: ಆರ್.ವಿ. ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್ಮೆಂಟ್, ಜಯನಗರ, ಮಧ್ಯಾಹ್ನ 3.30

**ಮೂರು ಪುಸ್ತಕಗಳ ಬಿಡುಗಡೆ:** ಸಿ.ಆರ್. ಗೋಪಾಲ್ ಅವರ ‘ದಾಸ ಸಾಹಿತ್ಯ ಪ್ರಣೀತ ಅಭ್ಯುದಯದ ಆಯಾಮಗಳು’, ‘ಸಮಾಜಕಾರ್ಯದ ಪಕ್ಷಿನೋಟ’, ಅಶೋಕ ಆರ್. ಅವರ ‘ಮನಸ್ಸು ಮುನ್ನುಡಿ’ ಪುಸ್ತಕ, ಅಧ್ಯಕ್ಷತೆ: ನಾ. ಗೀತಾಚಾರ್ಯ, ಅತಿಥಿ: ರಮೇಶ್ ಬಿ., ಆಯೋಜನೆ: ನಿರುತ ಪಬ್ಲಿಕೇಷನ್ಸ್, ಸ್ಥಳ: ಡಾ.ಮನಮೋಹನ್ ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾಲಯ, ಸಂಜೆ 4



**‘ಕಾಮನಬಿಲ್ಲು’ ಚಿಣ್ಣರ ಕಲರವ:** ಅತಿಥಿಗಳು: ಎಂ.ವಿ. ಸತೀಶ್, ಎಸ್.ಆರ್. ವೀರೇಂದ್ರ ಪ್ರಸಾದ್, ಆಯೋಜನೆ ಹಾಗೂ ಸ್ಥಳ: ಸರ್.ಎಂ. ವಿಶ್ವೇಶ್ವರಯ್ಯ ವಿದ್ಯಾನಿಕೇತನ, ಶೆಟ್ಟಿಹಳ್ಳಿ, ಸಂಜೆ 5

**ಮುತ್ತುಸ್ವಾಮಿ ದೀಕ್ಷಿತರ 250ನೇ ಜನ್ಮವಾರ್ಷಿಕೋತ್ಸವ:** ನೃತ್ಯ ಪ್ರದರ್ಶನ: ರಕ್ಷಾ ಕಾರ್ತಿಕ್ ಮತ್ತು ತಂಡ, ಆಯೋಜನೆ ಹಾಗೂ ಸ್ಥಳ: ಮೇಡೈ ದಿ ಸ್ಟೇಜ್, ಕೋರಮಂಗಲ, ಸಂಜೆ 5

**ಅನನ್ಯ–ಯುವಸಂಭ್ರಮ:** ಗಾಯನ: ಕಾರ್ತಿಕೇಯ ಶರ್ಮ, ಪಿಟೀಲು: ಬಿ.ಆರ್. ಕುಶಾಲ್, ಮೃದಂಗ: ರಘು ಭಾಗವತ್, ಆಯೋಜನೆ: ನಾದಜ್ಯೋತಿ ಸಂಗೀತ ಸಭಾ ಟ್ರಸ್ಟ್, ಸ್ಥಳ: ಅನನ್ಯ ಸಭಾಂಗಣ, ಮಲ್ಲೇಶ್ವರ, ಸಂಜೆ 6

**ಶಿಶಿರಛಂದ 9ನೇ ವಾರ್ಷಿಕ ನೃತ್ಯೋತ್ಸವ:** ಭರತನಾಟ್ಯ: ಪದ್ಮಿನಿ ಸಿರಿಶ್, ಒಡಿಸ್ಸಿ: ಇಂದು ವಿಜಯ್, ಆಯೋಜನೆ: ಆದ್ಯಾಶಾ ಫೌಂಡೇಷನ್, ಸ್ಥಳ: ಜೆಎಸ್‌ಎಸ್ ಸಭಾಂಗಣ, ಜಯನಗರ, ಸಂಜೆ 6

**ಭರತನಾಟ್ಯ ರಂಗಪ್ರವೇಶ:** ಸಾಚಿ ವರುಣ್, ಅತಿಥಿಗಳು: ಡಾ.ಸಿ. ಆರ್. ಚಂದ್ರಶೇಖರ್, ಸುಕುಮಾರ್ ಕೂನಾ, ವಂದ್ಯ ಶ್ರೀನಾಥ್, ಎ. ಕುಮುದ, ಆಯೋಜನೆ: ನಾಟ್ಯಾಂಜಲಿ ನೃತ್ಯ ಶಾಲೆ, ಸ್ಥಳ: ಡಾ.ಪ್ರೇಮಚಂದ್ರ ಸಾಗರ್ ಸಭಾಂಗಣ, ದಯಾನಂದ ಸಾಗರ್ ಕಾಲೇಜು, ಕುಮಾರಸ್ವಾಮಿ ಲೇಔಟ್, ಸಂಜೆ 6

**ಭರತನಾಟ್ಯ ರಂಗಪ್ರವೇಶ:** ವಿದಿತಾ ಎನ್., ಅತಿಥಿಗಳು: ಆರತಿ ಎಚ್.ಎನ್., ಆರ್.ವಿ. ರಾಘವೇಂದ್ರ, ಕೆ.ವಿ. ನರಸಿಂಹನ್, ಎಸ್. ನಂಜುಂಡಗೌಡ, ಮಿಥುನ್ ಶ್ಯಾಮ್, ಆಯೋಜನೆ: ಶಾರದಾ ಡಾನ್ಸ್ ಸೆಂಟರ್, ಸ್ಥಳ: ಚೌಡಯ್ಯ ಸ್ಮಾರಕ ಭವನ, ವೈಯಾಲಿಕಾವಲ್, ಸಂಜೆ 6

**ಊಂಜಲ್ ಸಂಗೀತೋತ್ಸವ:** ರಚನಾ ಶರ್ಮಾ ಮತ್ತು ಸಂಗಡಿಗರು, ಆಯೋಜನೆ: ತಿರುಮಲ ತಿರುಪತಿ ದೇವಸ್ಥಾನಗಳು ಹಿಂದೂಧರ್ಮ ಪ್ರಚಾರ ಪರಿಷತ್, ಸ್ಥಳ: ವೆಂಕಟೇಶ್ವರಸ್ವಾಮಿ ದೇವಸ್ಥಾನ (ಟಿಟಿಡಿ), 16ನೇ ಅಡ್ಡರಸ್ತೆ, ವೈಯಾಲಿಕಾವಲ್, ಸಂಜೆ 6

**ಕೆ.ಎನ್. ಕೃಷ್ಣಮೂರ್ತಿ ಅವರ ಸ್ಮರಣಾರ್ಥ ಸಂಗೀತ ಕಛೇರಿ:** ಗಾಯನ: ಚಂದನ ಬಾಲ ಕಲ್ಯಾಣ್, ಪಿಟೀಲು: ಎಚ್.ವಿ. ರಘುರಾಮ್, ಮೃದಂಗ: ಎಸ್. ಅಶೋಕ್, ಘಟ: ಸಚಿನ್ ದೇವಿ ಪ್ರಸಾದ್, ಆಯೋಜನೆ: ವಿದ್ವಾನ್ ಕೆ.ಎನ್. ಕೃಷ್ಣಮೂರ್ತಿ ಗುರುವಂದನಾ ಟ್ರಸ್ಟ್, ಸ್ಥಳ: ಜಯಮಾರುತಿ ಸೇವಾ ಸಮಿತಿ, ಕಮಲಾನಗರ ಮುಖ್ಯರಸ್ತೆ, ಬಸವೇಶ್ವರನಗರ, ಸಂಜೆ 6.15

**ಕರ್ನಾಟಕ ರಾಜ್ಯೋತ್ಸವ:** ಗಾಯನ ಹಾಗೂ ಸಂಜನಾ ಮೆಲೋಡಿಸ್ ಆರ್ಕೆಸ್ಟ್ರಾದಿಂದ ಸಾಂಸ್ಕೃತಿಕ ಕಾರ್ಯಕ್ರಮ, ಆಯೋಜನೆ ಹಾಗೂ ಸ್ಥಳ: ಗಂಗಾನಗರ ಬಡಾವಣೆ ಗೆಳೆಯರ ಬಳಗ, 30 ಸಿ ಬಸ್ ನಿಲ್ದಾಣ, ಬಿನ್ನಿಮಿಲ್ ರಸ್ತೆ, ಗಂಗೇನಹಳ್ಳಿ, ಸಂಜೆ 6.30

**ಮಾರ್ಗಶೀರ್ಷೋತ್ಸವ–2025:** ನಾಮಸಂಕೀರ್ತನೆ: ಶ್ರೀನಾಥದಾಸ್ ಮತ್ತು ತಂಡ, ಆಯೋಜನೆ ಮತ್ತು ಸ್ಥಳ: ಸುರಭಾರತೀ, ಎಚ್‌ಆರ್‌ಬಿಆರ್ ಲೇಔಟ್, ಸಂಜೆ 6.30ರಿಂದ

**‘ತೀರ್ಥ ಪ್ರಬಂಧ’ ಧಾರ್ಮಿಕ ಪ್ರವಚನ:** ಶ್ರೀನಿಧಿ ಆಚಾರ್ಯ, ಆಯೋಜನೆ ಹಾಗೂ ಸ್ಥಳ: ವಿಜಯ ಮಧ್ವ ಸಂಘ, ಗಂಗಾಧರ ಬಡಾವಣೆ, ವಿಜಯನಗರ, ಸಂಜೆ 6.30

**ಎಂ.ಎಸ್. ಉಮೇಶ್ ಅವರಿಗೆ ನುಡಿ ನಮನ:** ಚಿಂದೋಡಿ ಬಂಗಾರೇಶ್, ಡಿಂಗ್ರಿ ನಾಗರಾಜ್, ಅಧ್ಯಕ್ಷತೆ: ಕೆ.ವಿ. ನಾಗರಾಜಮೂರ್ತಿ, ತಿಂಗಳ ನಾಟಕ: ಸಿರಿಗೇರಿಯ ಧಾತ್ರಿ ರಂಗಸಂಸ್ಥೆಯಿಂದ ‘ಸಂಸಾರದಲ್ಲಿ ಸನಿದಪ’ ನಾಟಕ ಪ್ರದರ್ಶನ, ನಿರ್ದೇಶನ: ಮಂಡ್ಯ ರಮೇಶ್, ಆಯೋಜನೆ: ಕರ್ನಾಟಕ ನಾಟಕ ಅಕಾಡೆಮಿ, ಸ್ಥಳ: ಕಲಾಗ್ರಾಮ ಸಮುಚ್ಚಯ, ಮಲ್ಲತ್ತಹಳ್ಳಿ, ಸಂಜೆ 6.30



ಎಂ.ಎಸ್. ಉಮೇಶ್

**ಕರ್ನಾಟಕ ಶಾಸ್ತ್ರೀಯ ಸಂಗೀತ ಕಛೇರಿ:** ಎಮನಿ ಲಲಿತಾ ಕೃಷ್ಣ, ಟಿ.ಎಸ್. ಕೃಷ್ಣಮೂರ್ತಿ, ಫಣೀಂದ್ರ ಭಾಸ್ಕರ್, ಎಸ್.ಎನ್. ನಾರಾಯಣಮೂರ್ತಿ, ಆಯೋಜನೆ: ಶಾರದಾ ಸಾಂಸ್ಕೃತಿಕ ಸಂಘ, ಸ್ಥಳ: ಎಸ್.ಬಿ.ಐ. ಆಫೀಸರ್ಸ್ ಕಾಲೊನಿ, ಗಣಪತಿ ಸೇವಾ ಟ್ರಸ್ಟ್, ಬಸವೇಶ್ವರ ನಗರ, ಸಂಜೆ 6.30

**‘ಮಾಯಾ ಬೇಟೆ’ ನಾಟಕ ಪ್ರದರ್ಶನ:** ನಿರ್ದೇಶನ: ನಂಜುಂಡೇಗೌಡ ಸಿ., ಆಯೋಜನೆ: ಒಡನಾಡಿ ಬಂದು ಸಿಜಿಕೆ 75, ದೃಶ್ಯ ಕಾವ್ಯ, ಸ್ಥಳ: ನಾಣಿ ಅಂಗಳ, ಸುಚಿತ್ರ ಸಿನಿಮಾ ಮತ್ತು ಸಾಂಸ್ಕೃತಿಕ ಅಕಾಡೆಮಿ, ಬನಶಂಕರಿ 2ನೇ ಹಂತ, ಸಂಜೆ 6.30



**‘ಅರವಿದ್ದ ದಿನ ‘ನುನು’ ಇರುವೆ’ ನಾಟಕ ಪ್ರದರ್ಶನ:** ನಿರ್ದೇಶನ: ಜಿ.ಕೆ. ಜಯರಾಮ್, ಆಯೋಜನೆ: ಏಕಲವ್ಯ ಪ್ಲೇಯರ್ಸ್, ಸ್ಥಳ: ನ್ಯಾಷನಲ್ ಕಾಲೇಜು, ಜಯನಗರ, ಸಂಜೆ 7

ಸಾಹಿತ್ಯಿಕ, ಸಾಂಸ್ಕೃತಿಕ ಸೇರಿದಂತೆ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ವಿವರಗಳನ್ನು ‘ನಗರದಲ್ಲಿ ಇಂದು’ ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ..
nagaradalli_indu@prajavani.co.in

# ನಿರ್ವಹಣೆ ಇಲ್ಲದೆ ಸೊರಗುತ್ತಿದೆ ಆರ್‌ಟಿಒ ಕಚೇರಿ

## ಪುಡಿ ಪುಡಿಯಾಗಿ ಬೀಳುತ್ತಿರುವ ಸಿಮೆಂಟ್, ಅಲ್ಲಲ್ಲಿ ಕಾಣುತ್ತಿರುವ ಕಬ್ಬಿಣದ ಕಂಬಿಗಳು, ಬಾಗಿದ ಕಿಟಕಿಗಳು

• ಬಾಲಕೃಷ್ಣ ಪಿ.ಎಚ್.

**ಬೆಂಗಳೂರು:** ಮಳೆ ನೀರು ಜಿನುಗಿ ತುಂಡು ತುಂಡಾಗಿ ಬೀಳುತ್ತಿರುವ ಚಾವಣಿಯ ಸಿಮೆಂಟ್, ಬೆಂಡಾಗಿರುವ ಕಿಟಕಿಗಳು, ಮುರಿದು ಹೋಗಿರುವ ಕಿಟಕಿಯ ಗಾಜುಗಳು, ಚಾವಣಿ ಮೇಲೆ ಬೆಳೆದಿರುವ ಹುಲ್ಲು. ಇದರ ನಡುವೆ ಕರ್ತವ್ಯ ನಿರ್ವಹಿಸಬೇಕಾದ ಅನಿವಾರ್ಯ ಪರಿಸ್ಥಿತಿ...

ಇದು ನಿತ್ಯ ನೂರಾರು ಜನರು ಭೇಟಿ ನೀಡುವ ಯಶವಂತಪುರ ಪ್ರಾದೇಶಿಕ ಸಾರಿಗೆ ಕಚೇರಿಯ ದುಃಸ್ಥಿತಿ.

ಬಿಬಿಎಂಪಿಗೆ (ಈಗ ಜಿಬಿಎಗೆ) ಸೇರಿದ ಈ ಕಟ್ಟಡವನ್ನು 45 ವರ್ಷಗಳ ಹಿಂದೆ ನಿರ್ಮಿಸಲಾಗಿತ್ತು. ನೆಲ ಮತ್ತು ಮೂರು ಮಹಡಿ ಹೊಂದಿರುವ ಕಟ್ಟಡವು ನಿರ್ವಹಣೆ ಇಲ್ಲದೇ ಸೊರಗುತ್ತಿದೆ. ಇದೇ ಕಟ್ಟಡದಲ್ಲಿದ್ದ ಅಬಕಾರಿ ಇಲಾಖೆ, ಕಾನೂನು ಮಾಪನಶಾಸ್ತ್ರ ಇಲಾಖೆಗಳು ಈಗಾಗಲೇ ಅಲ್ಲಿಂದ ಬೇರೆಡೆಗೆ ಸ್ಥಳಾಂತರಗೊಂಡಿವೆ. ಪ್ರಾದೇಶಿಕ ಸಾರಿಗೆ ಕಚೇರಿ ಮಾತ್ರವಲ್ಲ ಬಿಬಿಎಂಪಿ ಕಚೇರಿ, ಅಂಚೆ ಕಚೇರಿ, ಬೆಂಗಳೂರು-1 ಕಚೇರಿಗಳು ಇಲ್ಲೇ ಇವೆ.

ಕಟ್ಟಡವು ಸುಣ್ಣ ಬಣ್ಣ ಕಾಣದೆ ದಶಕಗಳೇ ಕಳೆದಿವೆ. ಆದರೆ ಮಹಡಿ ಹತ್ತುವ ಮೆಟ್ಟಿಲುಗಳ ಮೂಲೆ ಮೂಲೆಗಳು ಮಾತ್ರ ಕೆಂಪು ಬಣ್ಣದಿಂದ ಕಂಗೊಳಿಸುತ್ತಿವೆ. ಇದು ಕಚೇರಿಗಳಿರುವ ಕಟ್ಟಡ ಎಂದೂ ನೋಡದೇ ಪಾನ್ ಬೀಡಾ ತಿನ್ನುವವರು ಮೂಲೆಗಳಲ್ಲಿ ಉಗಿದಿರುವುದೇ ಇದಕ್ಕೆ ಕಾರಣ. ಮೇಲೆ ಶೌಚಾಲಯವಿದ್ದರೆ ಕೆಳಗಿನ ಮಹಡಿಯಲ್ಲಿ ಅದರ ನೀರು ಬೀಳುತ್ತಿರುತ್ತದೆ.

ಎರಡು ಲಿಫ್ಟ್‌ಗಳಿವೆಯಾದರೂ ಕೆಟ್ಟು ನಿಂತಿರುವುದೇ ಹೆಚ್ಚು. ಗುರುವಾರ ಒಂದು ಲಿಫ್ಟ್ ಮಾತ್ರ ಕಾರ್ಯ ನಿರ್ವಹಿಸುತ್ತಿತ್ತು. ಒಮ್ಮೆಗೆ ಐದು ಜನರಷ್ಟೇ ಹೋಗಲು ಸಾಧ್ಯ ಇರುವುದರಿಂದ ವಯಸ್ಸಾದವರು, ದುರ್ಬಲರು ಕೂಡ ಮೆಟ್ಟಿಲೇರಿಯೇ ಹೋಗುವುದು ಇಲ್ಲಿ ಸಾಮಾನ್ಯವಾಗಿದೆ.

'ಮಳೆ ಬಂದರೆ ನೀರು ಜಿನುಗಿ ಗೋಡೆಗಳೆಲ್ಲ ಒದ್ದೆಯಾಗಿರುತ್ತದೆ. ಬಿಸಿಲು ಬಂದಾಗ ನೀರು ಜಿನುಗಿದ ಜಾಗವೆಲ್ಲ ಸಣ್ಣ ತುಂಡುಗಳಾಗಿ ಬೀಳತೊಡಗುತ್ತವೆ' ಎಂದು ಸಾರಿಗೆ ಕಚೇರಿಯ ನೌಕರರು ಅಲವತ್ತುಕೊಂಡರು.

ಕಟ್ಟಡದ ಮೇಲೆ ಗಿಡಗಳು, ಹುಲ್ಲು ಬೆಳೆದಿದೆ. ಹುಲ್ಲು ಬಿಸಿಲಿಗೆ ಒಣಗಿ ಮಳೆ ಶುರುವಾದಾಗ ಚಿಗುರಿ ಕೊಳ್ಳುತ್ತದೆ. ಗಿಡಗಳನ್ನು ತುಂಡು ಮಾಡಿದರೂ ಅದರ ಬೇರು ಕಟ್ಟಡದ ಒಳಗೆ ಇಳಿದಿರುವುದರಿಂದ ಮತ್ತೆ ದೊಡ್ಡದಾಗುತ್ತದೆ. ಇದರಿಂದ ಕಟ್ಟಡ ದುರ್ಬಲಗೊಳ್ಳುತ್ತಿದೆ ಎಂದು ದೂರಿದರು.

ಹಲವು ಕಡೆಗಳಲ್ಲಿ ಸಿಮೆಂಟ್ ಕೆಳಗೆ ಬಿದ್ದು, ಒಳಗೆ ಇರುವ ಕಬ್ಬಿಣದ ಕಂಬಿಗಳು ಕಾಣುತ್ತಿವೆ. ದುರ್ಬಲಗೊಂಡಿರುವ ಕಿಟಕಿಗಳು ಭಾರ ತಾಳಲಾರದೇ ಬಾಗಿವೆ. ಇಲ್ಲಿನ ಸ್ಥಿತಿಯನ್ನು ನೋಡಿದರೆ ಕೆಲಸ ಮಾಡಲು ಹೆದರಿಕೆಯಾಗುತ್ತದೆ. ಆದರೆ, ಕಟ್ಟಡದ ಪಿಲ್ಲರ್‌ಗಳಲ್ಲಿರುವ ದಪ್ಪ ದಪ್ಪ ಕಂಬಿಗಳನ್ನು ನೋಡಿದರೆ ಏನೂ ಆಗಲ್ಲ ಎಂಬ ಧೈರ್ಯ ಬರುತ್ತದೆ ಎಂದು ಅಧಿಕಾರಿಯೊಬ್ಬರು ಹೇಳಿದರು.

### ಕಟ್ಟಡ ನೆಲಸಮ?

ಈ ಕಟ್ಟಡವನ್ನು ನೆಲಸಮಗೊಳಿಸಲು ವರ್ಷದ ಹಿಂದೆ ಬಿಬಿಎಂಪಿ ನಿರ್ಧರಿಸಿತ್ತು. ಕಚೇರಿಗಳನ್ನು ತೆರವುಗೊಳಿಸುವಂತೆ ಈ ಕಟ್ಟಡದಲ್ಲಿರುವ ವಿವಿಧ ಇಲಾಖೆಗಳಿಗೆ ಪತ್ರ ಬರೆದಿತ್ತು. ಕೆಲವು ಇಲಾಖೆಗಳು ಬೇರೆಡೆಗೆ ಸ್ಥಳಾಂತರಗೊಂಡವು. ಈ ಮಧ್ಯೆ ತಜ್ಞ ಎಂಜಿನಿಯರ್‌ಗಳ ತಂಡವು ಕಟ್ಟಡದ ಪರಿಶೀಲನೆ ನಡೆಸಿತು. ಕಟ್ಟಡವು ಗಟ್ಟಿ ಇದ್ದು, ದುರಸ್ತಿಪಡಿಸಬೇಕು ಎಂದು ಹೇಳಿತ್ತು ಎಂದು ಪ್ರಾದೇಶಿಕ ಸಾರಿಗೆ ಕಚೇರಿಯ ಸಿಬ್ಬಂದಿ ಮಾಹಿತಿ ನೀಡಿದರು.

ಪ್ರಾದೇಶಿಕ ಸಾರಿಗೆ ಕಚೇರಿಗೆ ಮಾತ್ರವಲ್ಲ, ಎರಡನೇ ಮಹಡಿಯಲ್ಲಿರುವ ಅಂಚೆ ಕಚೇರಿಗೆ ಬರುವವರ ಸಂಖ್ಯೆಯೂ ಹೆಚ್ಚಿದೆ. ಹಿರಿಯರು ಪಿಂಚಣಿಗಾಗಿ ಅಂಚೆ ಕಚೇರಿಗೆ ಬರುತ್ತಾರೆ. ಅಲ್ಲದೇ ಮೊದಲ ಮಹಡಿಯಲ್ಲಿ ಇರುವ ಬೆಂಗಳೂರು ಒನ್ ಕಚೇರಿ ನಿತ್ಯ ಗಿಜಿಗಿಡುತ್ತಿದೆ. ಅಗತ್ಯವಿರುವ ಮೂಲಸೌಕರ್ಯ ಈ ಕಟ್ಟಡದಲ್ಲಿಲ್ಲ ಎಂದು ದೂರಿದರು.

### ನಿರ್ವಹಣೆ ಮಾಡಬೇಕು: ಆರ್‌ಟಿಒ

ಕಟ್ಟಡವು ಗಟ್ಟಿ ಇದೆ. ಆದರೆ ನಿರ್ವಹಣೆ ಇಲ್ಲದ ಕಾರಣ ದುರ್ಬಲವಾಗಿರುವಂತೆ ಕಾಣುತ್ತಿದೆ. ಕಟ್ಟಡದಲ್ಲಿ ಬೆಳೆದಿರುವ ಗಿಡಗಂಟಿಗಳನ್ನು ತೆರವುಗೊಳಿಸಿ, ಅಗತ್ಯ ಇದ್ದಲ್ಲಿ ದುರಸ್ತಿ ಮಾಡಿ, ಬಣ್ಣ ಬಳಿದರೆ ಇನ್ನು ಹಲವು ವರ್ಷ ಇಲ್ಲಿ ಕೆಲಸ ಮಾಡಬಹುದು ಎಂದು ಯಶವಂತಪುರ (ಬೆಂಗಳೂರು ಉತ್ತರ) ಪ್ರಾದೇಶಿಕ ಸಾರಿಗೆ ಅಧಿಕಾರಿ ಬಿ. ಶ್ರೀನಿವಾಸ ಪ್ರಸಾದ್ ತಿಳಿಸಿದರು.

1984ರಿಂದ ಪ್ರಾದೇಶಿಕ ಸಾರಿಗೆ ಕಚೇರಿ ಇಲ್ಲಿ ಕಾರ್ಯನಿರ್ವಹಿಸುತ್ತಿದೆ. ನಿರ್ವಹಣೆ ಮಾಡಲು ಕ್ರಮ ಕೈಗೊಳ್ಳಬೇಕು ಎಂದು ವರ್ಷದ ಹಿಂದೆಯೇ ಬಿಬಿಎಂಪಿಗೆ ಪತ್ರ ಬರೆಯಲಾಗಿದೆ ಎಂದು ಮಾಹಿತಿ ನೀಡಿದರು.



ಯಶವಂತಪುರ ಆರ್‌ಟಿಒ ಕಚೇರಿ ಕಟ್ಟಡದಲ್ಲಿ ಹುಲ್ಲು ಬೆಳೆದಿದೆ ಮತ್ತು ಸಿಮೆಂಟ್ ಇಲ್ಲದೇ ಕಬ್ಬಿಣದ ಕಂಬಿಗಳಷ್ಟೇ ಕೆಲವು ಕಡೆ ಕಾಣುತ್ತಿವೆ —ಪ್ರಜಾವಾಣಿ ಚಿತ್ರ: ಪ್ರಶಾಂತ್ ಎಚ್‌.ಜಿ.

### ಜನ ಏನಂತಾರೆ?

#### 'ದುರಸ್ತಿಗೆ ಕ್ರಮ ಕೈಗೊಳ್ಳಲಿ'



ಇಲ್ಲಿ ಭದ್ರತಾ ಸಿಬ್ಬಂದಿ ಇಲ್ಲ. ಕಟ್ಟಡ ಅಲ್ಲಲ್ಲಿ ಬಿರುಕು ಬಿಟ್ಟಿದೆ. ಕೆಳಗೆ ಇರುವ ಅಂಗಡಿ, ಕಚೇರಿಗಳ ಷಟರ್‌ಗಳು ಹಾಳಾಗಿವೆ. ಈ ಕಟ್ಟಡವನ್ನು ನೆಲಸಮ ಮಾಡುತ್ತಾರೆ ಎಂಬ ಸುದ್ದಿ ಹರಡಿದೆ. ನೆಲಸಮ ಮಾಡುವ ಬದಲು ದುರಸ್ತಿ ಮಾಡಿದರೆ ಇನ್ನು 20 ವರ್ಷ ಕಟ್ಟಡ ಗಟ್ಟಿಯಾಗಿ ಇರಲಿದೆ. ಸಂಬಂಧಪಟ್ಟವರು ದುರಸ್ತಿಗೆ ಕ್ರಮ ಕೈಗೊಳ್ಳಬೇಕು.

**ಕಾಂತರಾಜ್,** ಇನ್ಶೂರೆನ್ಸ್ ಏಜೆಂಟ್, ಯಶವಂತಪುರ

#### 'ಲಿಫ್ಟ್ ಸರಿಪಡಿಸಲಿ'



ಪಾರ್ಕಿಂಗ್‌ಗೆ ಬೇಕಾದಷ್ಟು ಜಾಗ ಇದೆ. ಕಟ್ಟಡದಲ್ಲಿ ವಿಶಾಲವಾದ ಜಾಗಗಳಿವೆ. ಆದರೆ, ಲಿಫ್ಟ್ ಸರಿ ಇಲ್ಲ. ಜನರಿಗೆ ತೊಂದರೆಯಾಗುತ್ತದೆ. ಅವುಗಳನ್ನು ಸರಿಪಡಿಸಬೇಕು.

**ಶೇಖರ್,** ಸ್ಥಳೀಯ ನಿವಾಸಿ

---

### ಸುದ್ದಿ 2 ನಿಮಿಷ

#### ನಟಿ ರನ್ಯಾ ರಾವ್ ಬಂಧನ ಆದೇಶ ಎತ್ತಿಹಿಡಿದ ಹೈಕೋರ್ಟ್

**ಬೆಂಗಳೂರು:** ಚಿನ್ನ ಕಳ್ಳಸಾಗಣೆ ಪ್ರಕರಣಕ್ಕೆ ಸಂಬಂಧಿಸಿದಂತೆ ನಟಿ ಹರ್ಷವರ್ಧಿನಿ ಅಲಿಯಾಸ್ ರನ್ಯಾ ರಾವ್, ತರುಣ್ ಕೊಂಡೂರು ರಾಜು, ಸಾಹಿಲ್ ಜೈನ್ ಅವರನ್ನು ವಿದೇಶಿ ವಿನಿಮಯ ನಿಯಂತ್ರಣ ಮತ್ತು ಕಳ್ಳ ಸಾಗಣೆ ಚಟುವಟಿಕೆಗಳ ತಡೆ ಕಾಯ್ದೆ (ಕಾಫಿಪೋಸಾ) ಅಡಿ ಬಂಧಿಸಿರುವ ಕೇಂದ್ರ ಸರ್ಕಾರದ ಆದೇಶವನ್ನು ಹೈಕೋರ್ಟ್ ಎತ್ತಿ ಹಿಡಿದಿದೆ.

'ನಮ್ಮನ್ನು ಕಾಫಿಪೋಸಾ ಕಾಯ್ದೆ-1974ರ ಅಡಿಯಲ್ಲಿ ಬಂಧಿಸಿರುವ ಕ್ರಮ ಕಾನೂನುಬಾಹಿರ ಎಂದು ಘೋಷಿಸಬೇಕು' ಎಂದು ಕೋರಲಾಗಿದ್ದ ಅರ್ಜಿಗಳ ವಿಚಾರಣೆ ನಡೆಸಿ ಕಾಯ್ದಿರಿಸಿದ್ದ ತೀರ್ಪನ್ನು ನ್ಯಾಯಮೂರ್ತಿ ಅನು ಶಿವರಾಮನ್ ಹಾಗೂ ನ್ಯಾಯಮೂರ್ತಿ ವಿಜಯಕುಮಾರ್ ಎ. ಪಾಟೀಲ್ ಅವರಿದ್ದ ವಿಭಾಗೀಯ ನ್ಯಾಯಪೀಠ ಶುಕ್ರವಾರ ಪ್ರಕಟಿಸಿದೆ.



ರನ್ಯಾ ಮಲತಾಯಿ ಎಚ್‌.ಪಿ. ರೋಹಿಣಿ, ತರುಣ್ ತಾಯಿ ರಾಮರಾಜು ಮತ್ತು ಪ್ರಿಯಾಂಕಾ ಸರ್ಕಾರಿಯಾ ಸಲ್ಲಿಸಿದ್ದ ಮೂರು ಪ್ರತ್ಯೇಕ ಹೇಬಿಯಸ್ ಕಾರ್ಪಸ್ ಅರ್ಜಿಗಳನ್ನು ನ್ಯಾಯಪೀಠ ವಜಾಗೊಳಿಸಿದೆ. ವಿಸ್ತೃತ ಆದೇಶ ಇನ್ನಷ್ಟೇ ಪ್ರಕಟವಾಗಬೇಕಿದೆ.

#### ಮಹಿಳೆ ಕೊಲೆ ಆರೋಪ ಜೀವಾವಧಿ ಶಿಕ್ಷೆ ರದ್ದು

**ಬೆಂಗಳೂರು:** ಬಾಗಲೂರು ಪೊಲೀಸ್ ಠಾಣಾ ವ್ಯಾಪ್ತಿಯ ರಮ್ಯಾ ಎಂಬ ಮಹಿಳೆ ಕೊಲೆ ಪ್ರಕರಣದಲ್ಲಿ ಮೊದಲ ಆರೋಪಿಯಾಗಿದ್ದ ಆಕೆಯ ಪತಿಗೆ ದೇವನಹಳ್ಳಿಯ 5ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ಕೋರ್ಟ್ ವಿಧಿಸಿದ್ದ ಜೀವಾವಧಿ ಶಿಕ್ಷೆಯನ್ನು ಹೈಕೋರ್ಟ್ ರದ್ದುಗೊಳಿಸಿದೆ.

ಈ ಸಂಬಂಧ ಮೃತ ಮಹಿಳೆಯ ಪತಿ ಎಂ.ಅರುಣ್ ಕುಮಾರ್ (35) ಸಲ್ಲಿಸಿದ್ದ ಕ್ರಿಮಿನಲ್ ಮೇಲ್ಮನವಿ ವಿಚಾರಣೆ ನಡೆಸಿ ಕಾಯ್ದಿರಿಸಿದ್ದ ತೀರ್ಪನ್ನು ಹಿರಿಯ ನ್ಯಾಯಮೂರ್ತಿ ಕೆ.ಎಸ್.ಮುದಗಲ್ ನೇತೃತ್ವದ ವಿಭಾಗೀಯ ನ್ಯಾಯಪೀಠ ಪ್ರಕಟಿಸಿದೆ.

ಮೇಲ್ಮನವಿದಾರರ ಪರ ಹಿರಿಯ ವಕೀಲ ಸಿ.ಎಚ್.ಹನುಮಂತ ರಾಯ ಅವರು, 'ಪ್ರಕರಣದಲ್ಲಿ ಎಲ್ಲ ಆರೋಪಿಗಳ ವಿರುದ್ಧ ಒಂದೇ ತೆರನಾದ ಆಪಾದನೆ ಮಾಡಲಾಗಿತ್ತು. ಇದರಲ್ಲಿ ಉಳಿದ 11 ಆರೋಪಿಗಳನ್ನು ಈಗಾಗಲೇ ಖುಲಾಸೆಗೊಳಿಸಲಾಗಿದೆ. ಆದರೆ, ಅರ್ಜಿದಾರರನ್ನು ಮಾತ್ರ ಸಾಂದರ್ಭಿಕ ಸಾಕ್ಷ್ಯ ಆಧರಿಸಿ ಶಿಕ್ಷೆಗೆ ಗುರಿಪಡಿಸಿರುವುದು ದೋಷಪೂರಿತ ತೀರ್ಪು. ಹಾಗಾಗಿ, ಶಿಕ್ಷೆ ರದ್ದುಪಡಿಸಬೇಕು' ಎಂದು ಮನವಿ ಮಾಡಿದ್ದರು.

ಈ ವಾದವನ್ನು ಪುರಸ್ಕರಿಸಿರುವ ನ್ಯಾಯಪೀಠ, 'ಪ್ರಕರಣ ಎಷ್ಟೇ ಗಂಭೀರವಾಗಿದ್ದರೂ ಕೇವಲ ಸಂಶಯವು ಸಾಕ್ಷ್ಯದ ಪರ್ಯಾಯ ಆಗಲಾರದು. ಸಾಂದರ್ಭಿಕ ಸಾಕ್ಷ್ಯಗಳ ಆಧಾರದಡಿ ದೋಷಾರೋಪಣೆ ಹೊರಿಸಲು ವಿಶ್ವಾಸಾರ್ಹ ಹಾಗೂ ದೃಢವಾದ ಸಾಕ್ಷ್ಯಗಳಿರಬೇಕು ಎಂಬುದು ಸ್ಥಾಪಿತ ತತ್ತ್ವ. ಹಾಗೆ ಸಾಬೀತಾದ ಸಂದರ್ಭಗಳು ಬೇರೆ ಯಾವುದೇ ಪರಿಕಲ್ಪನೆಗೆ ಹೊಂದಿಕೊಳ್ಳುವಂತಿರಬಾರದು. ಆದ್ದರಿಂದ, ಸಾಂದರ್ಭಿಕ ಸಾಕ್ಷ್ಯಗಳನ್ನು ಮಾತ್ರವೇ ಆಧರಿಸಿ ಆರೋಪಿಯನ್ನು ದೋಷಿಯೆಂದು ನಿರ್ಧರಿಸುವಾಗ ವಿಚಾರಣಾ ನ್ಯಾಯಾಲಯ ಅತ್ಯಂತ ಎಚ್ಚರಿಕೆ ವಹಿಸಬೇಕು. ಈ ನಿಟ್ಟಿನಲ್ಲಿ ಅರ್ಜಿದಾರರನ್ನು ದೋಷಿಯೆಂದು ತೀರ್ಮಾನಿಸುವಲ್ಲಿ ವಿಚಾರಣಾ ನ್ಯಾಯಾಲಯ ತಪ್ಪು ಎಸಗಿದೆ' ಎಂದು ತೀರ್ಪಿನಲ್ಲಿ ವಿವರಿಸಲಾಗಿದೆ.

ಭಾರತೀಯ ದಂಡ ಸಂಹಿತೆ-1860ರ ಕಲಂ 498 ಎ, 302 ಮತ್ತು 201ರ ಅಡಿಯಲ್ಲಿ ದೇವನಹಳ್ಳಿಯ 5ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯದ ನ್ಯಾಯಾಧೀಶ ದೇವೇಂದ್ರಪ್ಪ ಎನ್. ಬಿರಾದಾರ ಅವರು ಅರುಣ್ ಕುಮಾರ್‌ಗೆ, 2024ರ ಮಾರ್ಚ್ 14ರಂದು ಜೀವಾವಧಿ ಶಿಕ್ಷೆ ಮತ್ತು ₹75 ಸಾವಿರ ದಂಡ ವಿಧಿಸಿದ್ದರು. ಅರುಣ್ ಕುಮಾರ್ 2015ರಿಂದ ನ್ಯಾಯಾಂಗ ಬಂಧನದಲ್ಲಿದ್ದರು.

---

### ಉರುಳಿದ ಕಾರು: ಇಬ್ಬರ ಸಾವು

**ಬೆಂಗಳೂರು:** ಚಿಕ್ಕಜಾಲ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯ ಸಾದಹಳ್ಳಿಯಲ್ಲಿ ಗುರುವಾರ ತಡರಾತ್ರಿ ಕಾರೊಂದು ರಸ್ತೆ ಬದಿಯ ತಡೆಗೋಡೆಗೆ ಡಿಕ್ಕಿ ಹೊಡೆದು, ಚರಂಡಿಗೆ ಉರುಳಿದ ಪರಿಣಾಮ ಕಾರಿನಲ್ಲಿದ್ದ ಇಬ್ಬರು ಯುವಕರು ಸ್ಥಳದಲ್ಲೇ ಮೃತಪಟ್ಟಿದ್ದಾರೆ.

ಆರ್‌.ಟಿ.ನಗರದ ಶಾಹಿದ್ ಅಹಮ್ಮದ್ ಖಾನ್ (22) ಮತ್ತು ಜೆ.ಸಿ.ನಗರದ ಸೈಯ್ಯದ್ ಅಬ್ದುಲ್ ರೆಹಮಾನ್ (24) ಮೃತಪಟ್ಟವರು.

ಮತ್ತೊಬ್ಬ ಯುವಕ ಬುರಾನ್ ಉದ್ದೀನ್ ಅವರಿಗೆ ಗಂಭೀರ ಗಾಯಗಳಾಗಿದ್ದು, ಆಸ್ಪತ್ರೆಗೆ ದಾಖಲಿಸಲಾಗಿದೆ ಎಂದು ಸಂಚಾರ ಪೊಲೀಸರು ಹೇಳಿದರು.

ಕಾಲ್‌ಸೆಂಟರ್ ಉದ್ಯೋಗಿಯಾಗಿದ್ದ ಶಾಹಿದ್ ಅಹಮದ್ ಖಾನ್ ಅವರು ಸ್ನೇಹಿತರಾದ ಸೈಯ್ಯದ್ ಅಬ್ದುಲ್ ರೆಹಮಾನ್ ಮತ್ತು ಬುರಾನ್ ಉದ್ದೀನ್ ಜತೆಗೆ ಊಟಕ್ಕೆಂದು ಹೋಟೆಲ್‌ಗೆ ಕಾರಿನಲ್ಲಿ ತೆರಳಿದ್ದರು. ಮನೆಗೆ ವಾಪಸ್ ಆಗುವಾಗ ದುರ್ಘಟನೆ ನಡೆದಿದೆ ಎಂದು ಪೊಲೀಸರು ಹೇಳಿದರು.

ಶಾಹಿದ್ ಅವರು ಕಾರು ಚಾಲನೆ ಮಾಡುತ್ತಿದ್ದರು. ವೇಗವಾಗಿ ಬಂದ ಕಾರು ರಸ್ತೆ ಬದಿಯ ತಡೆಗೋಡೆಗೆ ಮೊದಲು ಡಿಕ್ಕಿಯಾಗಿದೆ. ಆಗ ಚಾಲಕನ ನಿಯಂತ್ರಣ ತಪ್ಪಿ ಮೋರಿಗೆ ಡಿಕ್ಕಿಯಾಗಿ ಚರಂಡಿಗೆ ಉರುಳಿದೆ. ಸ್ಥಳದಲ್ಲೇ ಇಬ್ಬರು ಮೃತಪಟ್ಟಿದ್ದಾರೆ ಎಂದು ಪೊಲೀಸರು ಹೇಳಿದರು.

ಗುರುವಾರ ತಡರಾತ್ರಿ ಘಟನೆ ನಡೆದಿತ್ತು. ಕಿರಿದಾದ ಚರಂಡಿಯಲ್ಲಿ ಕಾರು ಸಿಲುಕಿಕೊಂಡಿದ್ದರಿಂದ ಕಾರ್ಯಾಚರಣೆ ನಡೆಸುವುದಕ್ಕೆ ಅಡ್ಡಿ ಆಗಿತ್ತು. ಸ್ಥಳಕ್ಕೆ ತೆರಳಿ ಜೆಸಿಬಿ ಯಂತ್ರ ಹಾಗೂ ಕ್ರೇನ್ ತರಿಸಿ ಕಾರನ್ನು ಮೇಲಕ್ಕೆ ಎತ್ತಲಾಯಿತು. ಶುಕ್ರವಾರ ಬೆಳಿಗ್ಗೆವರೆಗೂ ಕಾರ್ಯಾಚರಣೆ ನಡೆಸಲಾಯಿತು ಎಂದು ಸಂಚಾರ ಪೊಲೀಸರು ಹೇಳಿದರು.

ರಸ್ತೆಯ ತಿರುವಿನಲ್ಲಿ ಮೋರಿ ಇರುವುದನ್ನು ಗಮನಿಸದೇ ಕಾರು ಚಲಾಯಿಸಿರುವುದರಿಂದ ಕಾರು ತಡೆಗೋಡೆ ಹಾಗೂ ಮೋರಿಗೆ ಡಿಕ್ಕಿ ಹೊಡೆದಿರುವ ಸಾಧ್ಯತೆಗಳಿವೆ ಎಂಬುದು ಮೇಲ್ನೋಟಕ್ಕೆ ಕಂಡು ಬಂದಿದೆ. ಚಿಕ್ಕಜಾಲ ಸಂಚಾರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ

---

ಬನಶಂಕರಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲು

## ಆಟವಾಡುತ್ತಿದ್ದ ಮಗುವಿಗೆ ಒದ್ದಿದ್ದ ವ್ಯಕ್ತಿ ಸೆರೆ

ಪ್ರಜಾವಾಣಿ ವಾರ್ತೆ



ರಂಜನ್

**ಬೆಂಗಳೂರು:** ಮನೆಯ ಎದುರು ಸ್ನೇಹಿತರೊಂದಿಗೆ ಆಟವಾಡುತ್ತಿದ್ದ ಐದು ವರ್ಷದ ಮಗುವಿಗೆ ಕಾಲಿನಿಂದ ಒದ್ದಿದ್ದ ಆರೋಪಿಯನ್ನು ಬನಶಂಕರಿ ಠಾಣೆಯ ಪೊಲೀಸರು ಬಂಧಿಸಿದ್ದಾರೆ.

ರಂಜನ್ (35) ಬಂಧಿತ ಆರೋಪಿ.

ಠಾಣಾ ವ್ಯಾಪ್ತಿಯ ತ್ಯಾಗರಾಜ ನಗರದ ನಿವಾಸಿ ದೀಪಿಕಾ ಜೈನ್ ಅವರು ನೀಡಿದ ದೂರಿನ ಮೇರೆಗೆ ಬಿಎನ್‌ಎಸ್ ಸೆಕ್ಷನ್ 115(2)ರಡಿ ಪ್ರಕರಣ ದಾಖಲಿಸಿಕೊಂಡು ಆರೋಪಿಯನ್ನು ಬಂಧಿಸಲಾಗಿದೆ ಎಂದು ಪೊಲೀಸ್ ಮೂಲಗಳು ಹೇಳಿವೆ.

'ಭಾನುವಾರ ಮಧ್ಯಾಹ್ನ 1ರ ಸುಮಾರಿಗೆ ತ್ಯಾಗರಾಜನಗರದ ಹಳೇ ಅಂಚೆ ಕಚೇರಿಯ ರಸ್ತೆಯಲ್ಲಿರುವ ತಮ್ಮ ಅಣ್ಣನ ಮನೆಗೆ ದೀಪಿಕಾ ಜೈನ್ ಅವರು ಐದು ವರ್ಷದ ಪುತ್ರ ನೀವ್ ಜೈನ್ ಕರೆದುಕೊಂಡು ಬಂದಿದ್ದರು. ಮನೆಯ ಎದುರು ನೀವ್ ಜೈನ್ ಇತರೆ ಮಕ್ಕಳೊಂದಿಗೆ ಆಟವಾಡುತ್ತಿದ್ದ. ಪಕ್ಕದ ಮನೆಯ ನಿವಾಸಿ, ಆರೋಪಿ ರಂಜನ್ ಏಕಾಏಕಿ ಬಂದು ನೀವ್ ಜೈನ್‌ಗೆ ಒದ್ದಿದ್ದ. ಒದ್ದ ರಭಸಕ್ಕೆ ಕೆಳಕ್ಕೆ ಬಿದ್ದ ಮಗುವಿನ ಕಾಲು, ಮುಖಕ್ಕೆ ಗಾಯವಾಗಿತ್ತು. ರಕ್ತ ಬಂದಿತ್ತು' ಎಂದು ಪೊಲೀಸರು ಹೇಳಿದರು.



ಮಗುವಿಗೆ ಆರೋಪಿ ಒದ್ದಿದ್ದ ದೃಶ್ಯ ಸಿ.ಸಿ.ಟಿ.ವಿ ಕ್ಯಾಮೆರಾದಲ್ಲಿ ಸೆರೆಯಾಗಿದೆ

ಅಪರಾಧ ಸುದ್ದಿ

'ರಂಜನ್ ಬಂಧಿಸಿ ವಿಚಾರಣೆ ನಡೆಸಲಾಗಿದೆ. ಮಾನಸಿಕ ಅಸ್ವಸ್ಥನಂತೆ ವರ್ತಿಸುತ್ತಿದ್ದಾನೆ. ಆರೋಪಿ ಈ ಹಿಂದೆ ಜಿಮ್ ತರಬೇತುದಾರನಾಗಿ ಕೆಲಸ ಮಾಡುತ್ತಿದ್ದ ಎಂಬುದು ತನಿಖೆಯಿಂದ ಗೊತ್ತಾಗಿದೆ. ಆರೋಪಿಗೆ ಕೌನ್ಸೆಲಿಂಗ್ ನಡೆಸಲಾಗುವುದು. ಗಾಯಗೊಂಡ ಮಗುವಿಗೆ ಪೋಷಕರು ಚಿಕಿತ್ಸೆ ಕೊಡಿಸಿದ್ದಾರೆ' ಎಂದು ಪೊಲೀಸರು ಹೇಳಿದರು.

'ಆರೋಪಿ ರಂಜನ್ ಈ ಹಿಂದೆಯೂ ರಸ್ತೆಯಲ್ಲಿ ಆಟವಾಡುತ್ತಿದ್ದ ಮಕ್ಕಳ ಜತೆಗೆ ಇದೇ ರೀತಿಯಾಗಿ ವರ್ತಿಸಿದ್ದಾನೆ ಎಂಬುದು ಗೊತ್ತಾಗಿದೆ. ಆತನಿಗೆ ಶಿಕ್ಷೆ ಆಗಬೇಕು' ಎಂದು ಸ್ಥಳೀಯರು ಆಗ್ರಹಿಸಿದ್ದಾರೆ. ಬನಶಂಕರಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

#### ವರದಿ ಕೇಳಿದ ಆಯೋಗ

ಮಗುವಿಗೆ ಫುಟ್‌ಬಾಲ್‌ನಂತೆ ಒದೆಯುತ್ತಿರುವ ದೃಶ್ಯವು ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿದೆ. ಆರೋಪಿ ವಿರುದ್ಧ ಆಕ್ರೋಶ ವ್ಯಕ್ತವಾಗಿದೆ.

ಘಟನೆಗೆ ಸಂಬಂಧಿಸಿದಂತೆ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗವು ಪೊಲೀಸರಿಂದ ವರದಿ ಕೇಳಿದೆ ಎಂದು ಗೊತ್ತಾಗಿದೆ.

---

## ಕಬ್ಬಿಗೆ ಹೆಚ್ಚುವರಿ ಬೆಲೆ ನಿಗದಿ ಆದೇಶಕ್ಕೆ ತಡೆ ನೀಡಲು ನಕಾರ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ರಾಜ್ಯದಲ್ಲಿ ಟನ್ ಕಬ್ಬಿಗೆ ಎಫ್‌ಆರ್‌ಪಿ ಅಡಿಯಲ್ಲಿ ಹೆಚ್ಚುವರಿಯಾಗಿ ₹100 ನಿಗದಿಪಡಿಸಿರುವ ರಾಜ್ಯ ಸರ್ಕಾರದ ಆದೇಶಕ್ಕೆ ತಡೆ ನೀಡಲು ಹೈಕೋರ್ಟ್ ಶುಕ್ರವಾರ ನಿರಾಕರಿಸಿದೆ.

'ನ್ಯಾಯಸಮ್ಮತ, ಲಾಭದಾಯಕ ದರ ನಿಗದಿಪಡಿಸಿ ನ.8ರಂದು ಹೊರಡಿಸಿರುವ ಆದೇಶ ರದ್ದುಪಡಿಸಬೇಕು' ಎಂದು ಕೋರಿ 'ದಕ್ಷಿಣ ಭಾರತದ ಸಕ್ಕರೆ ಕಾರ್ಖಾನೆಗಳ ಸಂಘದ ಕಾರ್ಯದರ್ಶಿ ಎಲ್.ಸೋಮೇಶ್ ಸೇರಿ ಆರು ಸಕ್ಕರೆ ಕಾರ್ಖಾನೆಗಳ ಪರವಾಗಿ ಸಲ್ಲಿಸಿರುವ ರಿಟ್ ಅರ್ಜಿಗಳನ್ನು ನ್ಯಾಯಮೂರ್ತಿ ಸೂರಜ್ ಗೋವಿಂದರಾಜ್ ಅವರಿದ್ದ ನ್ಯಾಯಪೀಠವು ವಿಚಾರಣೆ ನಡೆಸಿತು.

ವಾದ ಆಲಿಸಿದ ನ್ಯಾಯಪೀಠ, 'ಸಕ್ಕರೆ ಕಾರ್ಖಾನೆಗಳವರು ಕಬ್ಬು ನಿಯಂತ್ರಣ ಮಂಡಳಿಗೆ ಹತ್ತು ದಿನಗಳಲ್ಲಿ ಮನವಿ ಸಲ್ಲಿಸಬೇಕು. ಇದನ್ನು 4 ವಾರಗಳಲ್ಲಿ ಇತ್ಯರ್ಥಗೊಳಿಸಬೇಕು' ಎಂದು ಆದೇಶಿಸಿ 2026ರ ಫೆಬ್ರುವರಿ ಮೊದಲ ವಾರಕ್ಕೆ ವಿಚಾರಣೆ ಮುಂದೂಡಿದೆ.

---

ಕೆಆರ್‌ಎಸ್ ಪಕ್ಷದ ಕಾರ್ಯಕರ್ತರ ಮೇಲೆ ಹಲ್ಲೆ

## ಅನ್ನಭಾಗ್ಯ ಅಕ್ಕಿ ಅಕ್ರಮ ಸಾಗಣೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಅನ್ನಭಾಗ್ಯ ಯೋಜನೆ ಅಕ್ಕಿಯ ಅಕ್ರಮ ಸಾಗಣೆಯನ್ನು ಪತ್ತೆಹಚ್ಚಲು ತೆರಳಿದ್ದ ಕರ್ನಾಟಕ ರಾಷ್ಟ್ರ ಸಮಿತಿ (ಕೆಆರ್‌ಎಸ್) ಪಕ್ಷದ ಕಾರ್ಯಕರ್ತರ ಮೇಲೆ ಹಲ್ಲೆ ನಡೆಸಿದ ಆರೋಪದಡಿ ನಾಲ್ವರ ವಿರುದ್ಧ ಕುಮಾರಸ್ವಾಮಿ ಲೇಔಟ್ ಪೊಲೀಸ್ ಠಾಣೆಯಲ್ಲಿ ಗುರುವಾರ ಎಫ್‌ಐಆರ್ ದಾಖಲಾಗಿದೆ.

ಅಲೀಂ, ಫಯಾಜ್, ನಯಾಜ್, ಸೋಹಿಲ್ ವಿರುದ್ಧ ಪ್ರಕರಣ ದಾಖಲಾಗಿದೆ.

ಪಕ್ಷದ ಕಾರ್ಯಕರ್ತರಾದ ಸೈಯದ್ ಪರ್ವೀಜ್ ಅವರ ದೂರಿನ ಮೇರೆಗೆ ಪ್ರಕರಣ ದಾಖಲು ಮಾಡಿಕೊಳ್ಳಲಾಗಿದೆ ಎಂದು ಪೊಲೀಸರು ಹೇಳಿದರು.

**ದೂರಿನಲ್ಲಿ ಏನಿದೆ?:** 'ಅನ್ನಭಾಗ್ಯ ಯೋಜನೆ ಅಕ್ಕಿ ಅಕ್ರಮ ಸಾಗಣೆಯ ಬಗ್ಗೆ ಮಾಹಿತಿ ಬಂದಿತ್ತು. ಇದನ್ನು ಆಧರಿಸಿ, ಅಕ್ಕಿಯ ಅಕ್ರಮ ಸಾಗಣೆ ತಡೆಯಲು ಅಣ್ಣಯ್ಯ ರೆಡ್ಡಿ ಪೋಸ್ಟ್ ಆಫೀಸ್ ರಸ್ತೆಗೆ ತೆರಳಿದ್ದೆವು. ಪರಿಶೀಲನೆ ನಡೆಸಿದಾಗ ಲಾರಿಯಲ್ಲಿ ಅಕ್ಕಿಯ ಅಕ್ರಮ ಸಾಗಣೆ ಕಂಡುಬಂತು. ಅಲ್ಲಿ ನಡೆಯುತ್ತಿರುವ ಅಕ್ರಮದ ಬಗ್ಗೆ ಪೊಲೀಸರಿಗೆ ಮಾಹಿತಿ ನೀಡಲು 112 ಸಂಖ್ಯೆಗೆ ಕರೆ ಮಾಡಿದ್ದೆವು. ಸ್ಥಳಕ್ಕೆ ಕೋಣನಕುಂಟೆ ಹಾಗೂ ಕುಮಾರಸ್ವಾಮಿ ಲೇಔಟ್ ಠಾಣೆಯ ಪೊಲೀಸರು ಬಂದರು. ಆಗ ಗಲಾಟೆ ಮಾಡುವ ಉದ್ದೇಶದಿಂದ ಆರೋಪಿಗಳು ಗುಂಪು ಕಟ್ಟಿಕೊಂಡು ಬಂದು ಪಕ್ಷದ ಕಾರ್ಯಕರ್ತ ಎಂ.ಧನಂಜಯ್, ಅಶೋಕ್, ಖಲಂದರ್, ಶರಣಪ್ಪ, ಜೀವನ್ ಅವರ ಮೇಲೆ ಹಲ್ಲೆ ನಡೆಸಿದ್ದರು' ಎಂದು ದೂರಿನಲ್ಲಿ ಉಲ್ಲೇಖಿಸಲಾಗಿದೆ.

'ಅಕ್ರಮ ಅಕ್ಕಿ ಸಾಗಣೆಯಲ್ಲಿ ಕಾಂಗ್ರೆಸ್ ಕಾರ್ಯಕರ್ತ ಅಲೀಂ ಅವರ ಕೈವಾಡ ಇದೆ. ಮಧ್ಯರಾತ್ರಿ ಫಯಾಜ್ ಎಂಬಾತ ಕರೆ ಮಾಡಿ ಬೆದರಿಕೆ ಹಾಕಿದ್ದಾನೆ' ಎಂದು ದೂರಿನಲ್ಲಿ ಉಲ್ಲೇಖಿಸಲಾಗಿದೆ.

---

## ವೈದ್ಯೆ ಮೈಕೈ ಮುಟ್ಟಿ ಅನುಚಿತ ವರ್ತನೆ

**ಬೆಂಗಳೂರು:** ಸೋಲದೇವನಹಳ್ಳಿ ಎಜಿಬಿ ಲೇಔಟ್‌ನ ಪೇಯಿಂಗ್ ಗೆಸ್ಟ್‌ವೊಂದಕ್ಕೆ ತೆರಳುತ್ತಿದ್ದ ವೈದ್ಯೆಯ ಮೈ-ಕೈ ಮುಟ್ಟಿ ಆರೋಪಿ ಅಸಭ್ಯವಾಗಿ ವರ್ತಿಸಿ, ಪರಾರಿ ಆಗಿದ್ದಾನೆ.

28 ವರ್ಷದ ವೈದ್ಯೆ ನೀಡಿದ ದೂರು ಆಧರಿಸಿ ಆರೋಪಿಯ ಪತ್ತೆಗೆ ವಿಶೇಷ ತಂಡ ರಚಿಸಲಾಗಿದೆ. ಘಟನೆ ನಡೆದ ಸ್ಥಳ ಹಾಗೂ ಸುತ್ತಮುತ್ತಲಿನ ಸಿ.ಸಿ.ಟಿ.ವಿ ಕ್ಯಾಮೆರಾಗಳಲ್ಲಿ ಸೆರೆಯಾದ ದೃಶ್ಯಾವಳಿ ಪರಿಶೀಲನೆ ನಡೆಸಲಾಗುತ್ತಿದೆ ಎಂದು ಪೊಲೀಸರು ಹೇಳಿದರು. ಬುಧವಾರ ತಡರಾತ್ರಿ ಈ ಘಟನೆ ನಡೆದಿದೆ.

'ರಾತ್ರಿ ಪಾಳಿ ಮುಗಿಸಿ ಆಸ್ಪತ್ರೆಯಿಂದ ಪಿ.ಜಿಯತ್ತ ವೈದ್ಯೆ ನಡೆದು ತೆರಳುತ್ತಿದ್ದರು. ಅದೇ ವೇಳೆ ಬಿಳಿ ಬಣ್ಣದ ಸ್ಕೂಟರ್‌ನಲ್ಲಿ ಬಂದಿದ್ದ ಆರೋಪಿ, ವಿಳಾಸ ಕೇಳುವ ನೆಪದಲ್ಲಿ ವೈದ್ಯೆಯನ್ನು ಮಾತನಾಡಿಸಿದ್ದ. ನಂತರ, ಸ್ಕೂಟರ್‌ನಿಂದ ಇಳಿದು ದೂರುದಾರೆಯ ಮೈ-ಕೈ ಮುಟ್ಟಿ ಅಸಭ್ಯವಾಗಿ ವರ್ತಿಸಿದ್ದ. ವೈದ್ಯೆ ಜೋರಾಗಿ ಕಿರುಚಾಟ ನಡೆಸಿದಾಗ ಅಲ್ಲಿಂದ ಆರೋಪಿ ಪರಾರಿ ಆಗಿದ್ದ' ಎಂದು ಪೊಲೀಸರು ಹೇಳಿದರು.

### ಪರಪ್ಪನ ಅಗ್ರಹಾರ ಕಾರಾಗೃಹ: 30 ಮೊಬೈಲ್ ಜಪ್ತಿ

**ಬೆಂಗಳೂರು:** ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದ ವಿವಿಧ ಬ್ಯಾರಕ್‌ಗಳಲ್ಲಿ ಗುರುವಾರ ರಾತ್ರಿ ನಡೆದ ತಪಾಸಣೆ ವೇಳೆ 30 ಮೊಬೈಲ್ ಫೋನ್‌ಗಳು ಪತ್ತೆಯಾಗಿವೆ ಎಂದು ಕಾರಾಗೃಹ ಮತ್ತು ಸುಧಾರಣಾ ಸೇವೆಗಳ ಇಲಾಖೆಯ ಮಹಾನಿರ್ದೇಶಕ ಅಲೋಕ್‌ಕುಮಾರ್ ತಿಳಿಸಿದ್ದಾರೆ.

ಕಳೆದ ಕೆಲವು ದಿನಗಳಿಂದ ಜೈಲಿನ ವಿವಿಧ ಬ್ಯಾರಕ್‌ಗಳಿಗೆ ದಿಢೀರ್ ಭೇಟಿ ನೀಡಿ ಪರಿಶೀಲನೆ ನಡೆಸಲಾಗುತ್ತಿದೆ. ಎಸ್‌ಪಿ ಅಂಶುಕುಮಾರ್ ಹಾಗೂ ಜೈಲರ್ ಶಿವಕುಮಾರ್ ನೇತೃತ್ವದ ತಂಡವು ಗುರುವಾರ ರಾತ್ರಿಯೂ ತಪಾಸಣೆ ನಡೆಸಿತು. ಮುಂದಿನ ದಿನಗಳಲ್ಲೂ ಇದೇ ರೀತಿಯ ಕಾರ್ಯಾಚರಣೆ ನಡೆಸಲಾಗುವುದು ಎಂದು ಅವರು ತಿಳಿಸಿದ್ದಾರೆ.

---

### ಮದುವೆಗೆ ಮುಂದಾದ ಮಗಳ ಪ್ರಿಯಕರನ ಕೊಂದ ತಂದೆ

**ಕುಣಿಗಲ್:** ಪ್ರೇಮ ವಿವಾಹಕ್ಕೆ ಮುಂದಾಗಿದ್ದ ಮಗಳ ಪ್ರಿಯಕರನನ್ನು ತಂದೆಯೇ ಅಪಹರಿಸಿ ಕೊಲೆ ಮಾಡಿರುವ ಘಟನೆ ತಾಲ್ಲೂಕಿನಲ್ಲಿ ನಡೆದಿದೆ.

ಕೊತ್ತಗೆರೆ ಗ್ರಾಮದ (ಮೂಲ ಕುಣಿಗಲ್ ತಾಲ್ಲೂಕು ಗಡಿ ಮಾಗಡಿ ತಾಲ್ಲೂಕು ಅಗಲಕೋಟೆ) ಚಲುವ (31) ಕೊಲೆಯಾದ ವ್ಯಕ್ತಿ.

ಪೂರ್ಣಿಮಾ ತನ್ನ ಸಂಬಂಧಿ ಚಲುವ ಎಂಬುವರನ್ನು ಆರು ವರ್ಷಗಳಿಂದ ಪ್ರೀತಿಸುತ್ತಿದ್ದು, ವಿವಾಹಕ್ಕೆ ಮುಂದಾಗಿದ್ದರು. ಇದಕ್ಕೆ ಯುವತಿ ಪೋಷಕರು ವಿರೋಧ ವ್ಯಕ್ತಪಡಿಸಿದ್ದರು.

ಯುವತಿ ತಂದೆ ಕೆಂಪಣ್ಣ, ಸಂಬಂಧಿಗಳಾದ ಕುಣಿಗಲ್ ಕೋಟೆ ಪ್ರದೇಶದ ರಾಮಕೃಷ್ಣ ಹಾಗೂ ಮಾಗಡಿ ಮಂಜುನಾಥ್ ಎಂಬುವರು ಬುಧವಾರ ಕಾರಿನಲ್ಲಿ ಬಂದು ಕುಣಿಗಲ್ ಬಸ್ ನಿಲ್ದಾಣದಲ್ಲಿದ್ದ ಚಲುವ ಅವರನ್ನು ಅಪಹರಿಸಿದ್ದರು. ಮಾಗಡಿ ತಾಲ್ಲೂಕಿನ ಗಟ್ಟಪುರದ ತೊರೆಹಳ್ಳಕ್ಕೆ ಕರೆದೊಯ್ದು ಕೊಲೆ ಮಾಡಿದ್ದರು. ನಂತರ ಮಾಗಡಿ ಠಾಣೆಗೆ ಶರಣಾಗಿದ್ದಾರೆ.

---

### ಕೋಲ್ಕತ್ತ ರೇಸ್

#### ಹಾರ್ಟ್ ಗೆಲ್ಲುವ ನಿರೀಕ್ಷೆ

ಉಷಾ ಸ್ಟಡ್ ಕಲ್ಕತ್ತ ಓಕ್ಸ್ ಶನಿವಾರದ ಕೋಲ್ಕತ್ತ ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಹಾರ್ಟ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 1:30ಕ್ಕೆ ಪ್ರಾರಂಭವಾಗಲಿರುವ ದಿನದ ಆರು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

**1ನೇ ರೇಸ್:** ಲೆಗಸಿ 2, ಕಾಂಟೆಸಿನ 8. ಓಷಿಕ 1
**2ನೇ ರೇಸ್:** ಹರ್ಮೋಡ್ 5, ಸೀಸ್ಮೋಕ್ 3, ಟ್ರೂಫೈತ್ 4
**3ನೇ ರೇಸ್:** ಮಲ್ಟಿ ಸಕ್ಸಸ್ 1, ಕ್ರೆಪಿಮ್ಯಾನ್ 3, ಗಾರ್ತ್ 5
**4ನೇ ರೇಸ್:** ಗೋಲ್ಡ್ ಎಂಪೈರ್ 4, ಜರಾಕ್ 3, ಸ್ಟಾರ್ಮಿ ಓಷನ್ 2
**5ನೇ ರೇಸ್:** ಹಾರ್ಟ್ 3, ಎಲೆನೋರ 2, ಕ್ವಾಂತೆ 6
**6ನೇ ರೇಸ್:** ಗಾಡ್‌ಸೆಂಡ್ ಡಿವೈನ್ 4, ಸಿಮ್ರನ್ಸ್ ಆಟಿಟ್ಯೂಡ್ 3, ಪಿರ್‌ಗಾಸ್ 7

**ಉತ್ತಮ ಬೆಟ್: ಹರ್ಮೋಡ್**

| ಜಾಕ್‌ಪಾಟ್‌ಗೆ | 1ನೇ ಟ್ರಿಬಲ್ | 2ನೇ ಟ್ರಿಬಲ್ |
|---|---|---|
| 2,3,4,5,6 | 1,2,3 | 4,5,6 |

---

ತೀರ್ಪು ಕಾಯ್ದಿರಿಸಿದ ದ್ವಿಸದಸ್ಯ ನ್ಯಾಯಪೀಠ • ತಮಿಳುನಾಡು ಸರ್ಕಾರ ಸಲ್ಲಿಸಿದ ಅರ್ಜಿ ವಿಚಾರಣೆ

## ದಕ್ಷಿಣ ಪಿನಾಕಿನಿ ನ್ಯಾಯಮಂಡಳಿ: 'ಸುಪ್ರೀಂ' ಇಂಗಿತ

ಪ್ರಜಾವಾಣಿ ವಾರ್ತೆ

**ನವದೆಹಲಿ:** ಕರ್ನಾಟಕ ಹಾಗೂ ತಮಿಳುನಾಡು ನಡುವಿನ ಪೆನ್ನಾರ್ (ದಕ್ಷಿಣ ಪಿನಾಕಿನಿ) ನದಿ ನೀರು ಹಂಚಿಕೆ ವಿವಾದಗಳನ್ನು ಬಗೆಹರಿಸಲು ನ್ಯಾಯ ಮಂಡಳಿ ರಚಿಸಲು ಸುಪ್ರೀಂ ಕೋರ್ಟ್ ಶುಕ್ರವಾರ ಇಂಗಿತ ವ್ಯಕ್ತಪಡಿಸಿದೆ.

ತಮಿಳುನಾಡು ಸರ್ಕಾರ ಸಲ್ಲಿಸಿದ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ವಿಕ್ರಮ್‌ನಾಥ್ ಹಾಗೂ ಎನ್‌.ವಿ.ಅಂಜಾರಿಯಾ ಪೀಠವು, 'ವಿವಾದ ಇತ್ಯರ್ಥಪಡಿಸಲು ನ್ಯಾಯ ಮಂಡಳಿ ರಚಿಸುವುದು ಸೂಕ್ತ. ಆಗ ಉಭಯ ರಾಜ್ಯಗಳು ತಮ್ಮ ವಾದಗಳನ್ನು ಅಲ್ಲಿ ಮಂಡಿಸುತ್ತವೆ' ಎಂದು ಅಭಿಪ್ರಾಯಪಟ್ಟಿತು. ಎರಡೂ ರಾಜ್ಯಗಳ ವಾದಗಳನ್ನು ಆಲಿಸಿದ ನ್ಯಾಯಪೀಠವು ತೀರ್ಪನ್ನು ಕಾಯ್ದಿರಿಸಿತು.

**ಜಲವಿವಾದವೇನು?:** ದಕ್ಷಿಣ ಪಿನಾಕಿನಿ ನದಿಯ ಕಣಿವೆಯಲ್ಲಿ ಕರ್ನಾಟಕ ಸರ್ಕಾರವು ಮಾರ್ಕಂಡೇಯ ನದಿಗೆ ಅಡ್ಡಲಾಗಿ ಅಣೆಕಟ್ಟೆ ನಿರ್ಮಿಸಿದೆ. ಬೆಂಗಳೂರಿನ ಎಲೆ ಮಲ್ಲಪ್ಪ ಚೆಟ್ಟಿ ಕೆರೆಯಿಂದ ಹೊಸಕೋಟೆಯವರೆಗೆ ನೀರು ಹರಿಸುವ ಕಾಮಗಾರಿ, ಬ್ಯಾಲಹಳ್ಳಿ ಹತ್ತಿರ ಪೆನ್ನಾರ್ ನದಿಯಿಂದ ನೀರು ಹರಿಸುವ ಕಾಮಗಾರಿಗಳನ್ನು ಕೈಗೆತ್ತಿಕೊಂಡಿದೆ. ಈ ಯೋಜನೆಗೆ ತಮಿಳುನಾಡು ಸರ್ಕಾರ ವಿರೋಧ ವ್ಯಕ್ತಪಡಿಸಿ ಸುಪ್ರೀಂ ಕೋರ್ಟ್‌ಗೆ 2018ರ ಮೇ 18ರಂದು ಅರ್ಜಿ ಸಲ್ಲಿಸಿತ್ತು. ಜಲವಿವಾದ ನ್ಯಾಯ ಮಂಡಳಿ ಸ್ಥಾಪಿಸುವಂತೆ ಒತ್ತಾಯಿಸಿ ತಮಿಳುನಾಡು ಸರ್ಕಾರವು ಕೇಂದ್ರ ಸರ್ಕಾರಕ್ಕೆ 2019ರ ನವೆಂಬರ್‌ನಲ್ಲಿ ಮನವಿ ಮಾಡಿತ್ತು.

ಜಲಶಕ್ತಿ ಸಚಿವಾಲಯವು 2020ರಲ್ಲಿ ಸಂಧಾನ ಸಭೆ ನಡೆಸಿತ್ತು. ಆದರೆ, ರಾಜ್ಯ ಸರ್ಕಾರಗಳು ಒಮ್ಮತಕ್ಕೆ ಬಂದಿರಲಿಲ್ಲ. ಹೊಸದಾಗಿ ಸಂಧಾನ ನಡೆಸುವಂತೆ ಕರ್ನಾಟಕ ಸರ್ಕಾರವು ಕೇಂದ್ರವನ್ನು 2024ರ ಜೂನ್‌ನಲ್ಲಿ ಒತ್ತಾಯಿಸಿತ್ತು.

ಈ ನಡುವೆ, ಸುಪ್ರೀಂ ಕೋರ್ಟ್ ನಿರ್ದೇಶನದ ಪ್ರಕಾರ, ಕೇಂದ್ರ ಜಲ ಆಯೋಗದ ಅಧ್ಯಕ್ಷರ ನೇತೃತ್ವದಲ್ಲಿ ಜಲಶಕ್ತಿ ಸಚಿವಾಲಯವು ಹೊಸ ಸಂಧಾನ ಸಮಿತಿ ರಚಿಸಿತ್ತು. ಈ ಸಮಿತಿಯು ಉಭಯ ರಾಜ್ಯಗಳ ನಡುವೆ 9 ಸಭೆಗಳನ್ನು ನಡೆಸಿತ್ತು. ಯೋಜನಾ ಪ್ರದೇಶಕ್ಕೆ ಭೇಟಿ ನೀಡಿ ಪರಿಶೀಲಿಸಿತ್ತು.

ಜಲ ವಿವಾದ ಬಗೆಹರಿಸಲು ನ್ಯಾಯಮಂಡಳಿ ರಚಿಸುವ ಕೇಂದ್ರ ಸರ್ಕಾರದ ಪ್ರಸ್ತಾವಕ್ಕೆ ಕರ್ನಾಟಕ ಸರ್ಕಾರ ವಿರೋಧ ವ್ಯಕ್ತಪಡಿಸಿತ್ತು. ಮಾತುಕತೆಯ ಮೂಲಕ ಈ ವಿವಾದವನ್ನು ಸೌಹಾರ್ದಯುತವಾಗಿ ಬಗೆಹರಿಸಬೇಕು ಎಂದು ಒತ್ತಾಯಿಸಿ ಕರ್ನಾಟಕ ಸರ್ಕಾರವು ಜಲಶಕ್ತಿ ಸಚಿವಾಲಯಕ್ಕೆ ಪತ್ರ ಬರೆದಿತ್ತು.

ಕರ್ನಾಟಕದ ಜಲಾನಯನ ಪ್ರದೇಶದಲ್ಲಿ ಒಟ್ಟು 11.77 ಟಿಎಂಸಿ ನೀರಿನಲ್ಲಿ 9.77 ಟಿಎಂಸಿ ನೀರನ್ನು ಬಳಸಲು ಯೋಜಿಸಲಾಗಿದೆ. ಇದರಲ್ಲಿ 2 ಟಿಎಂಸಿ ಮತ್ತು ಹೆಚ್ಚುವರಿ ನೀರು ತಮಿಳುನಾಡಿಗೆ ಉಳಿದಿದೆ. ಇದು ತಮಿಳುನಾಡಿನ ಅವಶ್ಯಕತೆಗಳನ್ನು ಪೂರೈಸಲು ಸಾಕಾಗುತ್ತದೆ ಎಂದು ರಾಜ್ಯ ಸರ್ಕಾರ ಸ್ಪಷ್ಟಪಡಿಸಿತ್ತು.

> **ನದಿ ತೀರದ ರಾಜ್ಯಗಳು ಮಾತುಕತೆ ನಡೆಸಲು ನಿರಾಕರಿಸಿದರೆ, ಕೇಂದ್ರ ಸರ್ಕಾರವು ಸಭೆ ಕರೆಯಲು ಸಾಧ್ಯವಿಲ್ಲ**
> **ಐಶ್ವರ್ಯ ಭಾಟಿ,** ಹೆಚ್ಚುವರಿ ಸಾಲಿಸಿಟರ್ ಜನರಲ್

#### 'ನ್ಯಾಯಮಂಡಳಿ ರಚಿಸುವ ಅಗತ್ಯವಿಲ್ಲ'

ಕೇಂದ್ರ ಸರ್ಕಾರವು 2025ರ ಜನವರಿ 2ರಂದು ಸಲ್ಲಿಸಿದ ಪ್ರಮಾಣಪತ್ರದ ಪ್ರಕಾರ, ಸಚಿವರ ಸಭೆ ನಡೆಸುವ ಮೂಲಕ ಮಾತುಕತೆಯಿಂದಲೇ ಜಲ ವಿವಾದ ಪರಿಹರಿಸಲು ರಾಜ್ಯಗಳಿಗೆ ಇನ್ನೊಂದು ಅವಕಾಶ ನೀಡಬೇಕು. ಇದೊಂದು ಸಣ್ಣ ವಿವಾದ. ನ್ಯಾಯಮಂಡಳಿ ರಚಿಸುವ ಅಗತ್ಯವೇ ಇಲ್ಲ.

**ಮೋಹನ್ ವಿ.ಕಾತರಕಿ,** ಕರ್ನಾಟಕ ಸರ್ಕಾರದ ಪರ ಹಿರಿಯ ವಕೀಲ

#### 'ಸಂಧಾನದ ಹೆಸರಿನಲ್ಲಿ ಕಾಲಹರಣ'

ರಾಜ್ಯವು ನ್ಯಾಯಪೀಠಕ್ಕೆ ಅರ್ಜಿ ಸಲ್ಲಿಸಿ ಆರು ವರ್ಷಗಳು ಕಳೆದಿವೆ. ಸಂಧಾನದ ಹೆಸರಿನಲ್ಲಿ ಕಾಲಹರಣ ಮಾಡಲಾಗುತ್ತಿದೆ. ಸೌಹಾರ್ದಯುತವಾಗಿ ವಿವಾದ ಬಗೆಹರಿಸಲು ಎರಡು ಸಂಧಾನ ಸಮಿತಿಗಳು ಪ್ರಯತ್ನ ನಡೆಸಿದ್ದವು. ಮಾತುಕತೆ ವಿಫಲವಾಗಿರುವುದರಿಂದ ನ್ಯಾಯಮಂಡಳಿ ರಚನೆಯ ಆದೇಶ ಹೊರಡಿಸಲು ಸಮಯ ಕೂಡಿ ಬಂದಿದೆ.

**ವಿ.ಕೃಷ್ಣಮೂರ್ತಿ,** ತಮಿಳುನಾಡು ಪರ ವಕೀಲ

---

## 'ಐಪಿಎಲ್: ಮಾರ್ಗಸೂಚಿ ಪಾಲಿಸಿದರೆ ಅನುಮತಿ'

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಐಪಿಎಲ್ ಪಂದ್ಯಗಳನ್ನು ಆಯೋಜಿಸಬೇಕಿದ್ದರೆ ಭದ್ರತೆಗೆ ಸಂಬಂಧಿಸಿದ ಕೆಲವು ಮಾರ್ಗಸೂಚಿಗಳನ್ನು ಆಯೋಜಕರು ಪಾಲಿಸಬೇಕು ಎಂದು ಪೊಲೀಸರು ಸೂಚಿಸಿದ್ದಾರೆ.

ಐಪಿಎಲ್ ಸೇರಿ ಮುಂದೆ ನಡೆಯುವ ಎಲ್ಲ ಮಾದರಿಯ ಕ್ರಿಕೆಟ್ ಟೂರ್ನಿಗೂ ಅನ್ವಯ ಆಗುವಂತೆ 17 ಮಾರ್ಗಸೂಚಿಗಳನ್ನು ನಗರ ಪೊಲೀಸರು ಸಿದ್ಧಪಡಿಸಿದ್ದಾರೆ. ಮಾರ್ಗಸೂಚಿಗೆ ಸಂಬಂಧಿಸಿದ ಪತ್ರವನ್ನು ಕೆಎಸ್‌ಸಿಎಯ ನೂತನ ಆಡಳಿತ ಮಂಡಳಿಗೆ ನೀಡಲಾಗುವುದು ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'ಕಳೆದ ಜೂನ್‌ನಲ್ಲಿ ಕಾಲ್ತುಳಿತ ಘಟನೆ ಸಂಭವಿಸಿದಾಗ ಕ್ರೀಡಾಂಗಣದಲ್ಲಿ ಪರಿಶೀಲನೆ ನಡೆಸಲಾಗಿತ್ತು. ಇತ್ತೀಚೆಗೆ ಪರಿಶೀಲನೆ ನಡೆಸಿ, ಕ್ರೀಡಾಂಗಣದಲ್ಲಿ ಇರುವ ಸಮಸ್ಯೆಗಳನ್ನು ಯಾವ ರೀತಿಯಲ್ಲಿ ಸರಿಪಡಿಸಬೇಕೆಂದು ಮಾರ್ಗಸೂಚಿ ಸಿದ್ಧಪಡಿಸಲಾಗಿದೆ. ಆಯೋಜಕರು ಲೋಪದೋಷಗಳನ್ನು ಸರಿಪಡಿಸಿದರೆ ಅನುಮತಿ ನೀಡುವ ಬಗ್ಗೆ ಹಿರಿಯ ಅಧಿಕಾರಿಗಳ ಜತೆಗೆ ಚರ್ಚಿಸಲಾಗುವುದು' ಎಂದು ಮೂಲಗಳು ಹೇಳಿವೆ.

'ಸದ್ಯಕ್ಕೆ 17 ಮಾರ್ಗಸೂಚಿಗಳನ್ನು ಸಿದ್ಧಪಡಿಸಲಾಗಿದೆ. ಕ್ರಿಕೆಟ್ ಪಂದ್ಯಾವಳಿ ಆಯೋಜಿಸಲು ಅನುಮತಿ ಕೋರಿ ಪತ್ರ ಬಂದರೆ ಮತ್ತೆ ಕ್ರೀಡಾಂಗಣ ಪರಿಶೀಲನೆ ನಡೆಸಲಾಗುತ್ತದೆ' ಎಂದು ಹೇಳಿವೆ.

**ಪೊಲೀಸರ ಸೂಚನೆಗಳು ಏನೇನು?**

- ಕ್ರಿಕೆಟ್ ಪಂದ್ಯ ವೀಕ್ಷಣೆಗೆ ಬರುವವರಿಗೆ ವಾಹನ ನಿಲುಗಡೆಗೆ ವ್ಯವಸ್ಥೆ ಮಾಡಬೇಕು
- ಕ್ರೀಡಾಂಗಣದ ಪ್ರವೇಶ ದ್ವಾರಗಳು ಪಾದಚಾರಿ ಮಾರ್ಗದಲ್ಲಿಯೇ ಇವೆ. ಪ್ರೇಕ್ಷಕರು ಸರದಿಯಲ್ಲಿ ನಿಲುವುದಕ್ಕೆ ಕೆಎಸ್‌ಸಿಎ ಸ್ವತ್ತಿನಲ್ಲಿ ಪ್ರತ್ಯೇಕ ವ್ಯವಸ್ಥೆ ಮಾಡಬೇಕು
- ಗೇಟ್‌ಗಳನ್ನು ದುರಸ್ತಿ ಮಾಡಬೇಕು
- ಅಂತರರಾಷ್ಟ್ರೀಯ ಪಂದ್ಯಾವಳಿಗಳ ವೇಳೆ ಮಹಿಳೆಯರು, ಮಕ್ಕಳ ಪ್ರವೇಶ-ನಿರ್ಗಮನಕ್ಕೆ ಪ್ರತ್ಯೇಕ ವ್ಯವಸ್ಥೆ ಕಲ್ಪಿಸಬೇಕು
- ಆಂಬುಲೆನ್ಸ್ ಪ್ರವೇಶಕ್ಕೆ ಪ್ರತ್ಯೇಕ ಮಾರ್ಗ ಇರಬೇಕು
- ಅಗ್ನಿಶಾಮಕ ದಳ ಹಾಗೂ ಬೆಸ್ಕಾಂನಿಂದ ಪರಿಶೋಧನೆ ನಡೆಸಿ ವರದಿ ಪಡೆಯಬೇಕು
- ಆಟಗಾರರಿಗೆ ಪ್ರತ್ಯೇಕವಾಗಿ ಪ್ರವೇಶ-ನಿರ್ಗಮನ ಮಾರ್ಗ ಕಾಯ್ದಿರಿಸಬೇಕು
- ಪ್ರವೇಶ ದ್ವಾರಗಳ ಬಳಿ ಬ್ಯಾಗೇಜ್ ಸ್ಕ್ಯಾನರ್ ಅಳವಡಿಸಬೇಕು. ಸಿ.ಸಿ.ಟಿ.ವಿ ಕಣ್ಗಾವಲಿನಲ್ಲಿ ದೀರ್ಘಾವಧಿ ಸ್ಟೋರೇಜ್ ವ್ಯವಸ್ಥೆ ಮಾಡಬೇಕು
- ಪ್ರೇಕ್ಷಕರ ಪ್ರವೇಶ ಸಂಖ್ಯೆ ನಿಖರತೆಗಾಗಿ ಅತ್ಯಾಧುನಿಕ ತಂತ್ರಜ್ಞಾನ ಅಳವಡಿಕೆ ಮಾಡಿಕೊಳ್ಳಬೇಕು
- ಟಿಕೆಟ್ ವಿಚಾರಣೆ, ಮಾರಾಟ ಹಾಗೂ ಟಿಕೆಟ್‌ಗಾಗಿ ಕಾಯುವವರಿಗೆ ಪ್ರತ್ಯೇಕ ಸ್ಥಳ ವ್ಯವಸ್ಥೆ ಮಾಡಬೇಕು

# ಪ್ರಧಾನಿ ವಿರುದ್ಧ ಪೋಸ್ಟ್: ಅರ್ಜಿ ವಜಾ

## ಎಫ್ಐಆರ್ ರದ್ದುಪಡಿಸಲು ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದ ಬೆಂಗಳೂರಿನ ಯುವಕ ಗುರುದತ್ತ ಶೆಟ್ಟಿ

**ನವದೆಹಲಿ (ಪಿಟಿಐ):** 'ತಾವು ನಿಂದಿಸಿದ ವ್ಯಕ್ತಿಗಳ ಬಗ್ಗೆ ಅವರಿಗೆ ಯಾವುದೇ ಪಶ್ಚಾತ್ತಾಪ ಭಾವನೆಯಾಗಲೀ, ಮಾಡಿದ ತಪ್ಪಿಗೆ ಮರುಗುವ ಅಂತಃಕರಣವಾಗಲೀ ಇಲ್ಲ' ಎಂದು ಪ್ರಧಾನಿ ನರೇಂದ್ರ ಮೋದಿ ವಿರುದ್ಧ ಸಾಮಾಜಿಕ ಜಾಲತಾಣದಲ್ಲಿ ಪೋಸ್ಟ್ ಮಾಡಿದ್ದ, ಬೆಂಗಳೂರಿನ 24 ವರ್ಷದ ಯುವಕನ ವಿರುದ್ಧ ದಾಖಲಾಗಿದ್ದ ಎಫ್ಐಆರ್ ರದ್ದುಪಡಿಸಲು ಸುಪ್ರೀಂಕೋರ್ಟ್ ಶುಕ್ರವಾರ ನಿರಾಕರಿಸಿದೆ.

ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್, ನ್ಯಾಯಮೂರ್ತಿಗಳಾದ ಜಾಯ್‌ಮಾಲ್ಯ ಬಾಗ್ಚಿ ಹಾಗೂ ವಿಪುಲ್ ಎಂ.ಪಾಂಚೋಲಿ ಅವರನ್ನೊಳಗೊಂಡ ನ್ಯಾಯಪೀಠವು, ಬೆಂಗಳೂರು ನಿವಾಸಿ, ಗುರುದತ್ತ ಶೆಟ್ಟಿ ವಿರುದ್ಧ ದಾಖಲಾಗಿದ್ದ ಎಫ್ಐಆರ್ ಪ್ರಶ್ನಿಸಿ ಸಲ್ಲಿಸಲಾಗಿದ್ದ ಅರ್ಜಿಯನ್ನು ವಜಾಗೊಳಿಸಿತು.

'ಅರ್ಜಿದಾರರು ವಾಕ್ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯದ ಮೂಲಭೂತ ಹಕ್ಕನ್ನು ನಿರ್ಲಜ್ಜೆಯಿಂದ ನಿಂದಿಸಿದ್ದಾರೆ. ಈ ಹಂತದಲ್ಲಿ ನಾವು ಯಾವುದೇ ಎಚ್ಚರಿಕೆ ನೀಡಲು ಅಥವಾ ಪರಿಹಾರವನ್ನು ವಿಸ್ತರಿಸಲು ಸಾಧ್ಯವಿಲ್ಲ. ಆದಾಗ್ಯೂ, ಅರ್ಜಿದಾರರು, ತಮ್ಮ ವ್ಯಾಪ್ತಿಯ ಹೈಕೋರ್ಟ್ ಮೂಲಕ ಕಾನೂನಾತ್ಮಕವಾದ ಪರಿಹಾರ ಪಡೆಯಲು ಸ್ವತಂತ್ರರು' ಎಂದು ನ್ಯಾಯಪೀಠ ಅಭಿಪ್ರಾಯ ಪಟ್ಟಿತು.

ಗುರುದತ್ತ ಶೆಟ್ಟಿ ಪರವಾಗಿ ಹಾಜರಿದ್ದ ವಕೀಲ, 'ಅರ್ಜಿದಾರರಿಗೆ ಕನಿಷ್ಠ ಒಂದು ವಾರ ರಕ್ಷಣೆ ಕೊಡಿ. ನಾವು ಹೈಕೋರ್ಟ್ ಮೊರೆಹೋಗುತ್ತೇವೆ' ಎಂದು ಮನವಿ ಮಾಡಿದರು. ಇದನ್ನು ಸ್ಪಷ್ಟವಾಗಿ ಅಲ್ಲಗಳೆದ ಮುಖ್ಯ ನ್ಯಾಯಮೂರ್ತಿ (ಸಿಜೆಐ), 'ಇದರಲ್ಲಿ ರಕ್ಷಣೆಯ ಪ್ರಶ್ನೆಯೇ ಇಲ್ಲ' ಎಂದು ಅರ್ಜಿಯನ್ನು ತಿರಸ್ಕರಿಸಿದರು.

'ಶೆಟ್ಟಿ ವಿರುದ್ಧ ದಾಖಲಾಗಿರುವುವು ಜಾಮೀನು ನೀಡಬಹುದಾದ ಅಪರಾಧ ಪ್ರಕರಣಗಳಾಗಿವೆ. ನಮಗೆ ಕೆಲವೇ ದಿನಗಳು ಮಾತ್ರ ಸಾಕು, ನಾವು ಹೈಕೋರ್ಟ್ ಸಂಪರ್ಕಿಸಿ ಪರಿಹಾರ ಪಡೆಯುತ್ತೇವೆ. ಆದರೆ, ಅರ್ಜಿದಾರರು ವಿಚಾರಣೆಗಾಗಿ ಗುಜರಾತ್‌ಗೆ ಹೋಗುವಷ್ಟರಲ್ಲಿ ಅಲ್ಲಿನ ಪೊಲೀಸರು ಕೆಲವು ಜಾಮೀನುರಹಿತ ಅಪರಾಧಗಳನ್ನೂ ಇದಕ್ಕೆ ಸೇರಿಸಿ, ನನ್ನ ಕಕ್ಷಿದಾರರನ್ನು ಬಂಧಿಸುತ್ತಾರೆ ಎನ್ನುವ ಆತಂಕವಿದೆ' ಎಂದು ಶೆಟ್ಟಿ ಪರ ವಕೀಲರು ವಾದಿಸಿದರು.

ಪ್ರಧಾನಿ ವಿರುದ್ಧದ ಆನ್‌ಲೈನ್ ಪೋಸ್ಟ್‌ನ ಮೂಲ ಬರಹಗಾರ ಗುರುದತ್ತ ಶೆಟ್ಟಿ ಅಲ್ಲ, ಅವರು ಈ ಪೋಸ್ಟ್ ಅನ್ನು ಪ್ರಶ್ನಾರ್ಥಕ ಚಿಹ್ನೆಯೊಂದಿಗೆ ಮರು ಪೋಸ್ಟ್ ಮಾಡಿದ್ದಾರಷ್ಟೆ ಎಂದು ಅವರು ಪೀಠದ ಗಮನ ಸೆಳೆಯಲು ಪ್ರಯತ್ನಿಸಿದರು. ಆದರೆ, ವಕೀಲರಿಗೆ ಎಚ್ಚರಿಕೆ ನೀಡಿದ ಸಿಜೆಐ, 'ಮುಕ್ತ ಕೋರ್ಟ್‌ನಲ್ಲಿ ಈ ಪೋಸ್ಟ್ ಅನ್ನು ನಾವು ಓದಬೇಕು ಎಂದು ನಿಮ್ಮ ಅರ್ಜಿದಾರರು ಬಯಸುತ್ತಿದ್ದಾರೆಯೇ' ಎಂದು ಪ್ರಶ್ನಿದರು.

ಶೆಟ್ಟಿ ವಿರುದ್ಧ ಭಾರತೀಯ ನ್ಯಾಯ ಸಂಹಿತೆ (ಬಿಎನ್‌ಎಸ್) ಸೆಕ್ಷನ್ 336 (4) ಮತ್ತು ಸೆಕ್ಷನ್ 79ರ ಅಡಿ ಸಂಜ್ಞೇಯ ಮತ್ತು ಜಾಮೀನು ನೀಡಬಹುದಾದ ಅಪರಾಧ ಪ್ರಕರಣ ದಾಖಲಾಗಿದೆ. 'ಈ ಪೋಸ್ಟ್‌ನ ಉದ್ದೇಶವು ಪ್ರಧಾನಿ ಅವರ ಘನತೆಗೆ ಧಕ್ಕೆ ತರುವಂತೆ ಇತ್ತು' ಎಂದು ಎಫ್ಐಆರ್‌ನಲ್ಲಿ ಉಲ್ಲೇಖಿಸಲಾಗಿದೆ.

### 'ಬೇಷರತ್ ಕ್ಷಮೆ ಯಾಚಿಸಲು ಸಿದ್ಧ'

'ಈ ಪ್ರಕರಣದಲ್ಲಿ ತಮ್ಮ ಕಕ್ಷಿದಾರರು ಬೇಷರತ್ ಕ್ಷಮೆ ಯಾಚಿಸಲು ಸಿದ್ಧರಿದ್ದಾರೆ. ಅವರು ತಮ್ಮ ವ್ಯಾಪ್ತಿಯ ಹೈಕೋರ್ಟ್ ಮೊರೆ ಹೋಗುವವರೆಗೆ ಕೆಲವೇ ಕೆಲವು ದಿನ ರಕ್ಷಣೆ ಒದಗಿಸುವಂತೆ ಸುಪ್ರೀಂಕೋರ್ಟ್‌ಗೆ ಮನವಿ ಸಲ್ಲಿಸುತ್ತೇವೆ' ಎಂದು ಗುರುದತ್ತ ಶೆಟ್ಟಿ ಪರವಾಗಿ ಹಾಜರಿದ್ದ ವಕೀಲ ವಿಚಾರಣೆಗೂ ಮುನ್ನ ಮಾಧ್ಯಮದ ಎದುರು ಹೇಳಿದ್ದರು.

### 'ವಾರಂಟ್ ಜಾರಿ ಮಾಡಿಲ್ಲ'

'ಪೋಸ್ಟ್‌ಗೆ ಸಂಬಂಧಿಸಿದಂತೆ ಯಾವುದೇ ವಾರಂಟ್ ಜಾರಿ ಮಾಡಿಲ್ಲ. ಗುಜರಾತ್ ಪೊಲೀಸರು ನವೆಂಬರ್ 10ರಂದು ಬೆಂಗಳೂರಿನ ನನ್ನ ನಿವಾಸಕ್ಕೆ ಬಂದು ಬಲವಂತವಾಗಿ ನನ್ನನ್ನು ಕಾರಿಗೆ ಹತ್ತಿಸಿಕೊಂಡರು. ವಿಚಾರಣೆ ನಡೆಸಿ ಅಂದು ಮಧ್ಯರಾತ್ರಿ ಬಿಡುಗಡೆ ಮಾಡಿದರು. ಅದರ ಬೆನ್ನಲ್ಲೇ, ಬಿಎನ್‌ಎಸ್‌ಎಸ್ ಸೆಕ್ಷನ್ 35ರ ಅಡಿ ನೋಟಿಸ್ ನೀಡಿ, ಗುಜರಾತ್‌ನಲ್ಲಿ ಪೊಲೀಸ್ ತನಿಖಾಧಿಕಾರಿ ಎದುರು ಹಾಜರಾಗುವಂತೆ ಸೂಚಿಸಿದರು. ನನ್ನ ವಿರುದ್ಧ ಕಾನೂನುಬಾಹಿರವಾಗಿ ದಾಖಲಾಗಿರುವ ಎಫ್ಐಆರ್ ರದ್ದುಪಡಿಸಬೇಕು' ಎಂದು ಗುರುದತ್ತ ಶೆಟ್ಟಿ ಸುಪ್ರೀಂ ಕೋರ್ಟ್‌ಗೆ ಮನವಿ ಮಾಡಿದ್ದರು.

## ಹರಸಾಹಸ...

ಪಿಟಿಐ ಚಿತ್ರ:



ದಟ್ಟವಾದ ಮಂಜಿನಿಂದಾಗಿ ಉತ್ತರ ಭಾರತದಲ್ಲಿ ಹಲವು ರೈಲುಗಳ ಸಂಚಾರದಲ್ಲಿ ವ್ಯತ್ಯಯವಾಗಿದ್ದು, ಪ್ರಯಾಣಿಕರ ದಟ್ಟಣೆ ಹೆಚ್ಚುತ್ತಿದೆ. ಶುಕ್ರವಾರ ಪಟ್ನಾ ರೈಲು ನಿಲ್ದಾಣದಲ್ಲಿ ರೈಲು ಹತ್ತಲು ಪ್ರಯಾಣಿಕರು ಮುಗಿಬಿದ್ದ ದೃಶ್ಯ — ಪಿಟಿಐ ಚಿತ್ರ

# ಶಿಕ್ಷೆ ಎತ್ತಿ ಹಿಡಿದ ಸುಪ್ರೀಂ ಕೋರ್ಟ್

ಪ್ರಜಾವಾಣಿ ವಾರ್ತೆ

**ನವದೆಹಲಿ:** ಮಾನವ ಕಳ್ಳಸಾಗಾಟ ಪ್ರಕರಣವೊಂದರ ವಿಚಾರಣೆ ಸಂದರ್ಭದಲ್ಲಿ ಸುಪ್ರೀಂಕೋರ್ಟ್, 'ಸಂತ್ರಸ್ತೆ ಬಾಲಕಿಯು ಘಟನೆಯ ಸಂದರ್ಭದಲ್ಲಿ ಏಕಾಂಗಿಯಾಗಿದ್ದು, ಆಕೆಯ ಹೇಳಿಕೆಯನ್ನು ಓರ್ವ ಗಾಯಾಳುವಿನ ಸಾಕ್ಷಿಯಂತೆ ಪರಿಗಣಿಸಬೇಕು' ಎಂದು ಶುಕ್ರವಾರ ಹೇಳಿದೆ.

ಬೆಂಗಳೂರಿನ ಕೆ.ಪಿ.ಕಿರಣ್‌ಕುಮಾರ್ ಅಲಿಯಾಸ್ ಕಿರಣ್ ಎಂಬಾತನ ಸಜೆಯನ್ನು ಎತ್ತಿಹಿಡಿದಿರುವ ನ್ಯಾಯಮೂರ್ತಿಗಳಾದ ಮನೋಜ್ ಮಿಶ್ರಾ ಮತ್ತು ಜೊಯ್‌ಮಲ್ಯ ಬಾಗ್ಚಿ ಅವರಿದ್ದ ನ್ಯಾಯಪೀಠ, 'ಸಂತ್ರಸ್ತೆಯ ಹೇಳಿಕೆಗಳು ವಿಶ್ವಾಸಾರ್ಹ, ಸೂಕ್ತವೆನಿಸಿದಲ್ಲಿ, ಆಕೆಯ ಏಕೈಕ ಹೇಳಿಕೆಯ ಆಧಾರದ ಮೇಲೆಯೇ ಶಿಕ್ಷೆಯ ಆದೇಶವನ್ನು ಮುಂದುವರಿಸಬಹುದು' ಎಂದು ಹೇಳಿದೆ.

ಮಕ್ಕಳ ಕಳ್ಳಸಾಗಣೆ ಪ್ರಕರಣಗಳು ಕಾನೂನುಗಳು, ಸುರಕ್ಷತಾ ನಿಯಮಗಳ ಹೊರತಾಗಿಯೂ ಮುಂದುವರಿಯುತ್ತಿರುವ ಸಂಘಟಿತ ಶೋಷಣೆಯ ಭದ್ರವಾದ ಮಾದರಿಯ ಭಾಗವಾಗಿದೆ. ಇಂತಹ ಪ್ರಕರಣಗಳ ಸೂಕ್ಷ್ಮತೆಗಳನ್ನು ಸಂತ್ರಸ್ತರ ಕುಟುಂಬ ಸದಸ್ಯರು, ಸಂಬಂಧಿಕರಿಗೆ ಅರಿವು ಮೂಡಿಸುವ ಅಗತ್ಯವಿದೆ ಎಂದು ನ್ಯಾಯಪೀಠ ಅಭಿಪ್ರಾಯಪಟ್ಟಿದೆ.

ಈ ಪ್ರಕರಣದಲ್ಲಿ, ಸಂತ್ರಸ್ತೆಯ ಸಾಕ್ಷ್ಯವು ಅತ್ಯಂತ ವಿಶ್ವಾಸಾರ್ಹವಾಗಿದೆ. ಆರೋಪಿಯು ಆಕೆಯನ್ನು ಲೈಂಗಿಕವಾಗಿ ಶೋಷಿಸಿದ್ದಲ್ಲದೆ, ಅನೈತಿಕ ಉದ್ದೇಶಗಳಿಗಾಗಿ ಬಳಸಿಕೊಂಡಿದ್ದಾನೆ ಎಂದು ನ್ಯಾಯಾಲಯವು ತಿಳಿಸಿದೆ.

ಸಂತ್ರಸ್ತೆ ಬಾಲಕಿಯ ಹೇಳಿಕೆ, ದಾಖಲೆಯಲ್ಲಿರುವ ಇತರ ಪುರಾವೆಗಳಿಂದ ಆರೋಪಿಯು ತನ್ನ ಬಾಡಿಗೆ ಮನೆಯಲ್ಲಿ ವೇಶ್ಯಾವಾಟಿಕೆ ನಡೆಸುತ್ತಿದ್ದನು ಎಂದು ಪೊಲೀಸರಿಗೆ ದೂರು ನೀಡಿರುವ ಸ್ವಯಂಸೇವಾ ಸಂಘಟನೆಯ ಪದಾಧಿಕಾರಿಗಳು ಕೂಡ ಹೇಳಿಕೆ ನೀಡಿದ್ದಾರೆ. ಪೊಲೀಸರು ಆರೋಪಿಯಿಂದ ನಗದು, ಕಾಂಡೋಮ್ ಇತ್ಯಾದಿಗಳನ್ನು ವಶಪಡಿಸಿಕೊಂಡಿದ್ದಾರೆ ಎಂಬ ಅಂಶವನ್ನು ನ್ಯಾಯಾಲಯವು ಪರಿಗಣಿಸಿದೆ.

# ರಜಾ ದಿನವೂ ವಿಚಾರಣೆ: ಸಿಜೆಐ

**ನವದೆಹಲಿ (ಪಿಟಿಐ):** ಕ್ರಿಸ್‌ಮಸ್ ರಜಾ ಆರಂಭವಾಗುವ ಡಿ. 22ರಂದು ಮತ್ತು ಹೊಸ ವರ್ಷದ ರಜಾ ದಿನಗಳಂದೂ ತುರ್ತು ಅರ್ಜಿಗಳ ವಿಚಾರಣೆ ನಡೆಸಲು ಸಿದ್ಧ ಎಂದು ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ (ಸಿಜೆಐ) ಸೂರ್ಯಕಾಂತ್ ಶುಕ್ರವಾರ ತಿಳಿಸಿದರು.

ಸಿಜೆಐ ಸೂರ್ಯಕಾಂತ್ ಮತ್ತು ನ್ಯಾಯಮೂರ್ತಿಗಳಾದ ಜಾಯ್‌ಮಾಲ್ಯ ಬಾಗ್ಚಿ ಮತ್ತು ವಿಪುಲ್ ಎಂ ಪಾಂಚೋಲಿ ಅವರ ನೇತೃತ್ವದ ನ್ಯಾಯಪೀಠವು, 'ಅರ್ಜಿಗಳ ತುರ್ತು ವಿಚಾರಣೆಯ ಅಗತ್ಯವನ್ನು ಸುಪ್ರೀಂ ಕೋರ್ಟ್ ರಿಜಿಸ್ಟ್ರಿಯು ಪರಿಶೀಲಿಸಿ, ಪಟ್ಟಿ ಮಾಡಲಿದೆ' ಎಂದು ತಿಳಿಸಿತು.

'ನಾವು ಸೋಮವಾರವೂ ನ್ಯಾಯಪೀಠದಲ್ಲಿ ಕುಳಿತು ಅರ್ಜಿಗಳ ವಿಚಾರಣೆ ನಡೆಸುತ್ತೇವೆ. ಸುಪ್ರೀಂ ಕೋರ್ಟ್‌ನ ಇತರ ನ್ಯಾಯಮೂರ್ತಿಗಳಿಗೆ ಹೆಚ್ಚಿನ ಹೊರೆ ಹೇರಲು ಇಚ್ಛಿಸುವುದಿಲ್ಲ. ಇತರೆ ನ್ಯಾಯಪೀಠಗಳಿಗೆ ತೊಂದರೆ ನೀಡುವುದಿಲ್ಲ' ಎಂದು ಸಿಜೆಐ ಹೇಳಿದರು.

'ರಜಾ ದಿನದಂದು ಒಂದು ಅಥವಾ ಎರಡು ನ್ಯಾಯಪೀಠಗಳು ಅರ್ಜಿಗಳನ್ನು ವಿಚಾರಣೆ ನಡೆಸಬಹುದು. ತುರ್ತು ವಿಚಾರಣೆ ಅಗತ್ಯವಿರುವ ಪ್ರಕರಣಗಳನ್ನು ಆಧರಿಸಿ ಅದನ್ನು ನಿರ್ಧರಿಸಲಾಗುವುದು' ಎಂದು ತಿಳಿಸಿದರು.

ಕ್ರಿಸ್‌ಮಸ್ ಮತ್ತು ಹೊಸ ವರ್ಷದ ಅಂಗವಾಗಿ ಡಿಸೆಂಬರ್ 22ರಿಂದ ಜನವರಿ 2ರವರೆಗೆ ಸುಪ್ರೀಂಕೋರ್ಟ್‌ಗೆ ರಜೆ ಇರಲಿದೆ.

# ಶಬರಿಮಲೆ ಚಿನ್ನ ಕಳವು ಶೀಘ್ರದಲ್ಲೇ ಇ.ಡಿ ಪ್ರಕರಣ

**ಕೊಲ್ಲಂ/ಕೇರಳ (ಪಿಟಿಐ):** ಶಬರಿಮಲೆ ದೇವಸ್ಥಾನದ ಚಿನ್ನ ಕಳವು ಪ್ರಕರಣಕ್ಕೆ ಸಂಬಂಧಿಸಿದಂತೆ ಜಾರಿ ನಿರ್ದೇಶನಾಲಯವು (ಇ.ಡಿ) ಶೀಘ್ರದಲ್ಲೇ ಹಣ ಅಕ್ರಮ ವಹಿವಾಟು ತಡೆ ಕಾಯ್ದೆಯಡಿ (ಪಿಎಂಎಲ್ಎ) ಪ್ರಕರಣ ದಾಖಲಿಸಲಿದೆ. ಪ್ರಕರಣದ ತನಿಖೆ ನಡೆಸುತ್ತಿರುವ ವಿಶೇಷ ತನಿಖಾ ತಂಡವು (ಎಸ್ಐಟಿ) ಸಲ್ಲಿಸಿರುವ ದಾಖಲೆಗಳ ಪ್ರತಿಗಳನ್ನು ಪಡೆಯಲು ಕೊಲ್ಲಂ ವಿಚಕ್ಷಣಾ ನ್ಯಾಯಾಲಯ ಶುಕ್ರವಾರ ಇ.ಡಿಗೆ ಅನುಮತಿ ನೀಡಿದೆ.

ದೇವಸ್ಥಾನದ ದ್ವಾರಪಾಲಕ ಮೂರ್ತಿಗಳ ತಾಮ್ರದ ಕವಚಕ್ಕೆ ಲೇಪಿಸಿದ್ದ ಚಿನ್ನ ಹಾಗೂ ಶ್ರೀಕೋವಿಲ್‌ನ ಬಾಗಿಲ ಚೌಕಟ್ಟಿನ ಚಿನ್ನದ ತೂಕ ಕಡಿಮೆಯಾಗಿರುವ ಬಗ್ಗೆ ಎಸ್ಐಟಿ ತನಿಖೆ ನಡೆಸುತ್ತಿದ್ದು, ಇದುವರೆಗೆ ತಿರುವಾಂಕೂರು ದೇವಸ್ವಂ ಮಂಡಳಿಯ (ಟಿಡಿಬಿ) ಇಬ್ಬರು ಮಾಜಿ ಅಧ್ಯಕ್ಷರು ಸೇರಿ 7 ಆರೋಪಿಗಳನ್ನು ಬಂಧಿಸಿದೆ. ಎರಡು ಎಫ್ಐಆರ್‌ಗಳು ದಾಖಲಾಗಿವೆ. ಕೊಲ್ಲಂ ನ್ಯಾಯಾಲಯದಿಂದ ಎಫ್ಐಆರ್ ಮತ್ತು ಬಂಧಿತ ಆರೋಪಿಗಳ ರಿಮ್ಯಾಂಡ್ ವರದಿ ಪ್ರತಿಗಳನ್ನು ಇ.ಡಿ ಪಡೆದುಕೊಳ್ಳಲಿದೆ ಎಂದು ಮೂಲಗಳು ತಿಳಿಸಿವೆ.

'ಪಿಎಂಎಲ್' ಕಾಯ್ದೆಯಡಿ ಪ್ರಕರಣ ದಾಖಲಿಸಿ, ಪ್ರಕರಣದ ಮಾಹಿತಿ ವರದಿ (ಇಸಿಐಆರ್) ಸಲ್ಲಿಸಲು ಇ.ಡಿಗೆ ಈ ದಾಖಲೆಗಳು ಅತ್ಯಗತ್ಯವಾಗಿವೆ.

ಎಸ್ಐಟಿ ತನಿಖೆ ನಡೆಸುತ್ತಿರುವ ಎರಡೂ ಪ್ರಕರಣಗಳಲ್ಲಿ ಬೆಂಗಳೂರಿನ ಉದ್ಯಮಿ ಉಣ್ಣಿಕೃಷ್ಣನ್ ಪೋಟಿ ಪ್ರಮುಖ ಆರೋಪಿಯಾಗಿದ್ದಾರೆ.

### ಜಾಮೀನು ನಿರಾಕರಿಸಿದ ಹೈಕೋರ್ಟ್

**ಕೊಚ್ಚಿ (ಪಿಟಿಐ):** ಶಬರಿಮಲೆ ಚಿನ್ನ ಕಳವು ಪ್ರಕರಣದಲ್ಲಿ 'ಟಿಡಿಬಿ'ಯ ಮಾಜಿ ಅಧ್ಯಕ್ಷ ಎನ್.ವಾಸು, ಇಬ್ಬರು ಮಾಜಿ ಅಧಿಕಾರಿಗಳು ಸೇರಿ ಮೂವರು ಆರೋಪಿಗಳಿಗೆ ಕೇರಳ ಹೈಕೋರ್ಟ್ ಶುಕ್ರವಾರ ಜಾಮೀನು ನಿರಾಕರಿಸಿದೆ. ವಾಸು ಅವರೊಂದಿಗೆ ಟಿಡಿಬಿಯ ತಿರುವಾಭರಣಂ ಮಾಜಿ ಕಮಿಷನರ್ ಕೆ.ಎಸ್. ಬೈಜು ಮತ್ತು ಮಾಜಿ ಆಡಳಿತಾಧಿಕಾರಿ ಬಿ. ಮುರುಳಿ ಬಾಬು ಅವರಿಗೆ, ಹೈಕೋರ್ಟ್ ನ್ಯಾಯಮೂರ್ತಿ ಎ. ಬದರುದ್ದೀನ್ ಜಾಮೀನು ನಿರಾಕರಿಸಿದರು.

## ಸಂಕ್ಷಿಪ್ತ ಸುದ್ದಿ

### ನೀರಿನ ಟ್ಯಾಂಕ್ ಕುಸಿದು ಆರು ಸಾವು

**ನಾಗ್ಪುರ (ಪಿಟಿಐ):** ನಗರದ ಹೊರವಲಯದಲ್ಲಿರುವ ಕೈಗಾರಿಕಾ ಪ್ರದೇಶದಲ್ಲಿನ ಕಾರ್ಖಾನೆಯೊಂದರ ನೀರಿನ ಟ್ಯಾಂಕ್ ಶುಕ್ರವಾರ ಕುಸಿದು ಬಿದ್ದಿದ್ದು, ಆರು ಮಂದಿ ಮೃತಪಟ್ಟಿದ್ದಾರೆ.

ಎಂಐಡಿಸಿ ಬುಟಿಬೋರಿ ಪ್ರದೇಶದಲ್ಲಿರುವ ಸೌರಫಲಕ ತಯಾರಿಕಾ ಕಾರ್ಖಾನೆ ಅವಾಡಾ ಎಲೆಕ್ಟ್ರೋ ಪ್ರೈವೇಟ್ ಲಿಮಿಟೆಡ್‌ನಲ್ಲಿ ಬೆಳಿಗ್ಗೆ 9.30ರ ವೇಳೆಯಲ್ಲಿ ಈ ಅವಘಡ ನಡೆದಿದೆ ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಟ್ಯಾಂಕ್‌ನ ಅವಶೇಷದಡಿ ಸಿಲುಕಿ ಮೂವರು ಮೃತಪಟ್ಟಿದ್ದು, ಮೂವರು ಚಿಕಿತ್ಸೆಗೆ ಸ್ಪಂದಿಸದೆ ಆಸ್ಪತ್ರೆಯಲ್ಲಿ ಮೃತಪಟ್ಟಿದ್ದಾರೆ ಎಂದು ಮಾಹಿತಿ ನೀಡಿದ್ದಾರೆ.

### ಬಿಲಾಲ್ ಕಸ್ಟಡಿ ಅವಧಿ ವಿಸ್ತರಣೆ

**ನವದೆಹಲಿ (ಪಿಟಿಐ):** ಕೆಂಪುಕೋಟೆ ಸಮೀಪ ಸಂಭವಿಸಿದ ಸ್ಫೋಟ ಪ್ರಕರಣದ ಆರೋಪಿ ಡಾ.ಬಿಲಾಲ್ ನಸೀರ್ ಮಲ್ಲಾ ಎನ್ಐಎ ಕಸ್ಟಡಿ ಅವಧಿಯನ್ನು ಏಳು ದಿನ ವಿಸ್ತರಿಸಿ ದೆಹಲಿಯ ನ್ಯಾಯಾಲಯವೊಂದು ಆದೇಶಿಸಿದೆ.

ದಾಳಿಕೋರ ಉಮರ್–ಉನ್–ನಬಿಗೆ ಆಶ್ರಯ ನೀಡಿದ್ದ ಆರೋಪಕ್ಕೆ ಸಂಬಂಧಿಸಿದಂತೆ ಸೋಯಬ್‌ನನ್ನು ಡಿಸೆಂಬರ್ 24ರವರೆಗೆ ನ್ಯಾಯಾಂಗ ವಶಕ್ಕೆ ಒಪ್ಪಿಸಿದೆ. ಸೋಯಬ್ ಮತ್ತು ಬಿಲಾಲ್‌ನನ್ನು ಪಟಿಯಾಲಾ ಹೌಸ್ ನ್ಯಾಯಾಲಯದ ಎದುರು ಶುಕ್ರವಾರ ಎನ್ಐಎ ಹಾಜರುಪಡಿಸಿತ್ತು. ವಿಚಾರಣೆ ವೇಳೆ ಮಾಧ್ಯಮ ಪ್ರತಿನಿಧಿಗಳಿಗೆ ಪ್ರವೇಶ ನಿರಾಕರಿಸಲಾಗಿತ್ತು.



# ರ್‍ಯಾಲಿ: ಎಸ್‌ಒಪಿಗೆ ಗಡುವು

**ಚೆನ್ನೈ:** ರಾಜಕೀಯ ಸಭೆ ಮತ್ತು ರ್‍ಯಾಲಿಗಳ ನಿಯಂತ್ರಣಕ್ಕೆ ಸಂಬಂಧಿಸಿದಂತೆ 2026ರ ಜ. 5ರ ಒಳಗಾಗಿ ಅಂತಿಮ ಪ್ರಮಾಣೀಕೃತ ಕಾರ್ಯಾಚರಣೆ ವಿಧಾನ (ಎಸ್‌ಒಪಿ) ನಿಗದಿಪಡಿಸುವಂತೆ ತೆಲಂಗಾಣ ಸರ್ಕಾರಕ್ಕೆ ಮದ್ರಾಸ್ ಹೈಕೋರ್ಟ್ ನಿರ್ದೇಶನ ನೀಡಿದೆ. ರಾಜಕೀಯ ಪಕ್ಷಗಳಿಂದ ಆಕ್ಷೇಪಗಳು ಮತ್ತು ಸಲಹೆಗಳನ್ನು ಪಡೆದು ಎಸ್‌ಒಪಿ ನಿಗದಿಪಡಿಸಿವಂತೆ ನ್ಯಾಯಾಲಯವು ಶುಕ್ರವಾರ ತಿಳಿಸಿದೆ.

ಮುಖ್ಯ ನ್ಯಾಯಮೂರ್ತಿ ಎಂ.ಎಂ.ಶ್ರೀವಾತ್ಸವ ಮತ್ತು ನ್ಯಾಯಮೂರ್ತಿ ಜಿ. ಆರುಳ್ ಮುರುಗನ್ ನೇತೃತ್ವದ ನ್ಯಾಯಪೀಠವು, 'ತಮಿಳುನಾಡು ಸರ್ಕಾರ ಸಿದ್ಧಪಡಿಸಿದ್ದ ಕರಡು ಎಸ್‌ಒಪಿಯಲ್ಲಿ ಯಾವುದೇ ಬದಲಾವಣೆ ಮಾಡಲು ಆದೇಶಿಸಿಲ್ಲ. ಆದರೆ ಅಂತಿಮ ಎಸ್‌ಒಪಿಯು ನ್ಯಾಯಾಂಗದ ಪರಿಶೀಲನೆಗೆ ಒಳಪಟ್ಟಿರುತ್ತದೆ' ಎಂದು ತಿಳಿಸಿದೆ. ಎಸ್‌ಒಪಿ ರಚನೆಗೆ ಸಂಬಂಧಿಸಿದಂತೆ ಚರ್ಚೆ ನಡೆಸಲು ತಮಿಳುನಾಡು ಸರ್ಕಾರವು ನವೆಂಬರ್ 6ರಂದು ಸರ್ವ ಪಕ್ಷಗಳ ಸಭೆಯನ್ನು ಕರೆದಿತ್ತು.

**ಉದ್ವಿಗ್ನತೆಗೆ ಕಾರಣವಾಗಿರುವ ಯುವ ನಾಯಕನ ಹತ್ಯೆಯಿಂದ ಬಾಂಗ್ಲಾ ಮತ್ತೆ ಅಸ್ಥಿರತೆಗೆ ಜಾರಲಿದೆಯೇ?**


ಹೌದು ● ಇಲ್ಲ ● ಗೊತ್ತಿಲ್ಲ

ಪ್ರತಿಕ್ರಿಯಿಸಲು ಕೋಡ್ ಸ್ಕ್ಯಾನ್ ಮಾಡಿ

# ಶಾಸಕ ಚಂದ್ರಪ್ಪರಿಂದ ಭೂಕಬಳಿಕೆ ಎಚ್. ಆಂಜನೇಯ ಆರೋಪ

ಪ್ರಜಾವಾಣಿ ವಾರ್ತೆ

ಚಿತ್ರದುರ್ಗ: 'ಹೊಳಲ್ಕೆರೆ ಶಾಸಕ ಎಂ.ಚಂದ್ರಪ್ಪ ಅವರು ಬಿ.ದುರ್ಗ ಹೋಬಳಿಯ ಹಿರೇಕಂದವಾಡಿ ಗ್ರಾಮದಲ್ಲಿ ಪರಿಶಿಷ್ಟ ಜಾತಿಯವರಿಗೆ ಸೇರಿದ 12 ಎಕರೆ ಭೂಮಿ ಕಬಳಿಸಿದ್ದಾರೆ. ಅದಕ್ಕೆ ಹೊಂದಿಕೊಂಡಿರುವ ಗುಡ್ಡದಲ್ಲಿ ಅಕ್ರಮವಾಗಿ ಕಬ್ಬಿಣದ ಅದಿರು ತೆಗೆದಿದ್ದಾರೆ' ಎಂದು ಕೆಪಿಸಿಸಿ ಉಪಾಧ್ಯಕ್ಷ ಎಚ್.ಆಂಜನೇಯ ಆರೋಪಿಸಿದರು.



ಆಂಜನೇಯ

'ಎಸ್‌ಸಿ ಸಮುದಾಯಕ್ಕೆ ಮಂಜೂರಾಗಿದ್ದ ಜಮೀನು ಖರೀದಿ ಮಾಡುವುದು ಪರಿಶಿಷ್ಟ ಜಾತಿ–ಪಂಗಡಗಳ ಭೂಮಿ ವರ್ಗಾವಣೆ ನಿಷೇಧ (ಪಿಟಿಸಿಎಲ್) ಕಾಯ್ದೆಯ ಸ್ಪಷ್ಟ ಉಲ್ಲಂಘನೆಯಾಗಿದೆ. ವ್ಯಕ್ತಿಯೊಬ್ಬರ ಹೆಸರಿಗೆ ಮೊದಲು ನೋಂದಣಿ ಮಾಡಿಸಿ, ಖಾತೆ, ಪಹಣಿ ಪಡೆದು, ಅವರಿಂದ ತಮ್ಮ ಪುತ್ರ ಎಂ.ಸಿ.ದೀಪ್‌ಚಂದನ್ ಹೆಸರಿಗೆ ಈಚೆಗೆ ಪರಭಾರೆ ಮಾಡಿಸಿಕೊಂಡಿದ್ದಾರೆ' ಎಂದು ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ದೂರಿದರು.

'ಜಮೀನು ವಾಪಸು ಕೊಡಿಸುವಂತೆ ಮೂಲ ಮಂಜೂರಾತಿದಾರರ ಕುಟುಂಬದ ಸದಸ್ಯರು ತಹಶೀಲ್ದಾರ್, ಉಪ ವಿಭಾಗಾಧಿಕಾರಿ, ಜಿಲ್ಲಾಧಿಕಾರಿಗೆ ಮನವಿ ಸಲ್ಲಿಸಿದ್ದಾರೆ. ದೂರು ಸಲ್ಲಿಸಿ ವರ್ಷವಾದರೂ ಅಧಿಕಾರಿಗಳು ಕ್ರಮ ಕೈಗೊಂಡಿಲ್ಲ. ಬಾಬು ಜಗಜೀವನರಾಂ ಚರ್ಮ ಕೈಗಾರಿಕಾ ಅಭಿವೃದ್ಧಿ ನಿಗಮದ (ಲಿಡ್ಕರ್) ಮಾಜಿ ಅಧ್ಯಕ್ಷ ಒ.ಶಂಕರ್ ಅವರು ಮುಖ್ಯಮಂತ್ರಿ, ಕೃಷಿ ಸಚಿವರು, ಸರ್ಕಾರದ ಮುಖ್ಯ ಕಾರ್ಯದರ್ಶಿಗೂ ದೂರು ನೀಡಿದ್ದಾರೆ. ಆದರೂ ಕ್ರಮ ಆಗಿಲ್ಲ' ಎಂದು ದೂರಿದರು.

'ಸರ್ಕಾರಿ ಗುಡ್ಡದ ತಟದಲ್ಲಿ ಮನೆ, ಶೆಡ್, ತೊಟ್ಟಿ, ರಸ್ತೆ ನಿರ್ಮಿಸಿ ಅಕ್ರಮವಾಗಿ ಕಬ್ಬಿಣದ ಅದಿರು ತೆಗೆಯುತ್ತಿದ್ದಾರೆ. ಪ್ರಾಕೃತಿಕ ಸಂಪನ್ಮೂಲ ಲೂಟಿ ಮಾಡುತ್ತಿದ್ದಾರೆ. ಜಿಲ್ಲಾಧಿಕಾರಿ ಈ ಬಗ್ಗೆ ತನಿಖೆ ನಡೆಸಿ ಗಣಿ ಚಟುವಟಿಕೆ ಸ್ಥಗಿತಗೊಳಿಸಬೇಕು. ಪರಿಶಿಷ್ಟ ಜಾತಿ ವ್ಯಕ್ತಿಯ ಹಕ್ಕು ರಕ್ಷಿಸಬೇಕು' ಎಂದು ಒತ್ತಾಯಿಸಿದರು.

'ಹಿರೇಕಂದವಾಡಿ ಗ್ರಾಮ ವ್ಯಾಪ್ತಿಯ ಸರ್ವೆ ನಂಬರ್ 98ರ ಗುಡ್ಡ ಪ್ರದೇಶದಲ್ಲಿ ಉತ್ಕೃಷ್ಟ ಕಬ್ಬಿಣದ ಅದಿರು ದೊರೆಯುತ್ತಿದೆ. ಇಲ್ಲಿ ಅಕ್ರಮ ಗಣಿಗಾರಿಕೆ ನಡೆದಿರುವ ಬಗ್ಗೆ ತಹಶೀಲ್ದಾರ್ ವರದಿ ಕೊಟ್ಟಿದ್ದಾರೆ. ಕಬ್ಬಿಣದ ಅದಿರು ತೆಗೆಯುವ ಉದ್ದೇಶದಿಂದಲೇ ಪರಿಶಿಷ್ಟ ಜಾತಿಯವರಿಗೆ ಸೇರಿದ ಜಮೀನು ಖರೀದಿ ಮಾಡಿದ್ದಾರೆ. ಜಿಲ್ಲಾಡಳಿತ ಕೂಡಲೇ ಜಮೀನಿನ ಖಾತೆ, ಪಹಣಿ ರದ್ದು ಪಡಿಸಿ ಬಡವರಿಗೆ ಜಮೀನು ಕೊಡಿಸಬೇಕು. ಇಲ್ಲದಿದ್ದರೆ ನ್ಯಾಯಾಲಯದ ಮೊರೆ ಹೋಗುತ್ತೇವೆ' ಎಂದು ಲಿಡ್ಕರ್ ಮಾಜಿ ಅಧ್ಯಕ್ಷ ಒ.ಶಂಕರ್ ಅವರು ಎಚ್ಚರಿಸಿದರು.









# ಅಧಿವೇಶನ: ಉಳಿದದ್ದು ಭರವಸೆಗಳಷ್ಟೆ

## ಒಟ್ಟು 118 ಸಂಘಟನೆಗಳಿಂದ ಪ್ರತಿಭಟನೆ ತಾರ್ಕಿಕ ಅಂತ್ಯ ಕಾಣದ ಬೇಡಿಕೆಗಳು

• ಇಮಾಮ್‌ಹುಸೇನ್ ಗೂಡುನವರ

ಬೆಳಗಾವಿ: ವಿಧಾನಮಂಡಲ ಚಳಿಗಾಲದ ಅಧಿವೇಶನ ಸಂದರ್ಭದಲ್ಲಿ ಈ ಬಾರಿ ಮೈ ಕೊರೆಯುವ ಚಳಿ ಮಧ್ಯೆಯೂ 118 ಪ್ರತಿಭಟನೆ ನಡೆದವು. ಪ್ರತಿಭಟನಕಾರರಿಗೆ ಎಂದಿನಂತೆ ಭರವಸೆಗಳಷ್ಟೇ ಉಳಿದವು. ಸಂಘಟನೆಗಳ ಬೇಡಿಕೆಗಳಿಗೆ ಸ್ಪಷ್ಟ ಪರಿಹಾರ ಸಿಗಲಿಲ್ಲ, ತಾರ್ಕಿಕ ಅಂತ್ಯ ಕಾಣಲಿಲ್ಲ.

ಸುವರ್ಣ ವಿಧಾನಸೌಧದ ಬಳಿ ಹಾಗೂ ನಗರದ ಬಿ.ಎಸ್. ಯಡಿಯೂರಪ್ಪ ಮಾರ್ಗದ ಬಳಿ ಈ ಬಾರಿ ಪ್ರತಿಭಟನೆಗಳಿಗಾಗಿಯೇ ವೇದಿಕೆ ನಿರ್ಮಿಸಲಾಗಿತ್ತು. ಡಿಸೆಂಬರ್ 8ರಿಂದ 19ರವರೆಗೆ (10 ದಿನ) ಇವೆರಡೂ ವೇದಿಕೆಗಳು ಪ್ರತಿಭಟನಕಾರರಿಂದ ಕಿಕ್ಕಿರಿದು ತುಂಬಿದ್ದವು. ನಿರಂತರ ಘೋಷಣೆಗಳು ಕಿವಿಗೆ ಬಿದ್ದವು.

'ಬೆಳಗಾವಿ ಅಧಿವೇಶನ ಪ್ರತಿಭಟನೆಗೆ ಸೀಮಿತ' ಎಂಬ ಆರೋಪವಿದೆ. ಹಾಗಾಗಿ ಅಧಿವೇಶನಕ್ಕೂ ಮೊದಲೇ ವಿವಿಧ ಸಂಘಟನೆಯವರ ಜತೆ ಸಭೆ ನಡೆಸಿ, ಪ್ರತಿಭಟನೆಗಳ ಅಬ್ಬರ ತಗ್ಗಿಸಲು ಜಿಲ್ಲಾಡಳಿತ ಯೋಜಿಸಿತ್ತು.

ಇದರ ಮಧ್ಯೆಯೂ, ರೈತರು, ಅಂಗವಿಕಲರು, ಸ್ವಾತಂತ್ರ್ಯ ಯೋಧರ ಉತ್ತರಾಧಿಕಾರಿಗಳು, ಕಾರ್ಮಿಕರು, ಆಶಾ ಕಾರ್ಯಕರ್ತೆಯರು, ಪ್ರಥಮದರ್ಜೆ ಕಾಲೇಜು ಅತಿಥಿ ಉಪನ್ಯಾಸಕರು, ಅನುದಾನಿತ ಶಿಕ್ಷಣ ಸಂಸ್ಥೆಗಳ ನೌಕರರು, ನಿವೃತ್ತ ನೌಕರರು, ವಿವಿಧ ಸಮುದಾಯಗಳ ಸಂಘಟನೆಗಳವರು ಧರಣಿ ಮಾಡಿ ತಮ್ಮ ಹಕ್ಕೊತ್ತಾಯ ಮಂಡಿಸಿದರು.

'ಈ ಬಾರಿ 118 ಪ್ರತಿಭಟನೆ ನಡೆದಿವೆ' ಎಂದು ನಗರ ಪೊಲೀಸ್ ಕಮಿಷನರ್ ಭೂಷಣ ಬೊರಸೆ 'ಪ್ರಜಾವಾಣಿ'ಗೆ ತಿಳಿಸಿದರು.

ದಿನಕ್ಕೆ ಒಬ್ಬರು ಅಥವಾ ಇಬ್ಬರು ಸಚಿವರು ಪ್ರತಿಭಟನಾ ವೇದಿಕೆಗಳತ್ತ ಬಂದು, ಎಲ್ಲ ಟೆಂಟುಗಳನ್ನು ಸುತ್ತಾಡಿ ಮನವಿ ಸ್ವೀಕರಿಸಿದರು. ಹೆಚ್ಚಿನ ಬೇಡಿಕೆಗಳಿಗೆ ಖಚಿತ ಸ್ಪಂದನೆ ಸಿಗಲಿಲ್ಲ.

'ನಿಮ್ಮ ಬೇಡಿಕೆ ಈಡೇರಿಸಲು ಪ್ರಯತ್ನಿಸುತ್ತೇನೆ. ಮುಖ್ಯಮಂತ್ರಿ ಮತ್ತು ಸಂಬಂಧಿತ ಸಚಿವರ ಗಮನಕ್ಕೆ ತರುತ್ತೇನೆ' ಎಂದು ಸಚಿವರು ಆಶ್ವಾಸನೆ ನೀಡಿದರು. ಇಷ್ಟಕ್ಕೆ ಪ್ರತಿಭಟನಕಾರರು ತೃಪ್ತರಾಗಬೇಕಾಯಿತು.



ಬೆಳಗಾವಿಯಲ್ಲಿ ಶುಕ್ರವಾರ ಪರಿಶಿಷ್ಟ ಜಾತಿ ಸೂಕ್ಷ್ಮ ಮತ್ತು ಅತಿ ಸೂಕ್ಷ್ಮ ಅಲೆಮಾರಿ ಸಮುದಾಯಗಳ ಒಳಮೀಸಲಾತಿ ಹೋರಾಟ ಸಮಿತಿಯವರು ಧರಣಿ ನಡೆಸಿದರು ಪ್ರಜಾವಾಣಿ ಚಿತ್ರ

**ಸಂಘಟನೆಗಳು ಪ್ರತಿಭಟನೆ ನಡೆಸಿದವು. ಸಂಬಂಧಿತ ಸಚಿವರು ವೇದಿಕೆಗಳತ್ತ ಬರಲಿಲ್ಲ. ಕೆಲವರು ಕಾಟಾಚಾರಕ್ಕೆ ಎಂಬಂತೆ ಮನವಿ ಪಡೆದುಹೋದರು**
**ಶಿವಲಿಂಗ ಟಿರಕಿ,** ಅಧ್ಯಕ್ಷ, ಕರ್ನಾಟಕ ರಾಜ್ಯ ನೇಕಾರ ಸೇವಾಸಂಘ

**ಅಧಿವೇಶನ ವೇಳೆ ಪ್ರತಿಭಟಿಸಿದವರ ಪೈಕಿ ನಮ್ಮ ಹಂತದಲ್ಲಿ ಬಗೆಹರಿಸಬೇಕಿರುವ ಬೇಡಿಕೆ ಈಡೇರಿಸುತ್ತೇವೆ. ಉಳಿದವನ್ನು ಆಯಾ ಇಲಾಖೆ ಸಚಿವರ ಗಮನಕ್ಕೆ ತರುತ್ತೇವೆ**
**ಮೊಹಮ್ಮದ್ ರೋಷನ್,** ಜಿಲ್ಲಾಧಿಕಾರಿ

## ಪಿಜಿ/ಯುಜಿ ಆಯುಷ್ ಫಲಿತಾಂಶ ಪ್ರಕಟ

ಬೆಂಗಳೂರು: ಯುಜಿ ಆಯುಷ್ ಸ್ಟ್ರೇ ವೇಕೆನ್ಸಿ ನಾಲ್ಕನೇ ಸುತ್ತಿನ ಸೀಟು ಹಂಚಿಕೆಯನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಶುಕ್ರವಾರ ಪ್ರಕಟಿಸಿದೆ.

ಸೀಟು ಹಂಚಿಕೆಯಾದವರು ಡಿ. 20ರೊಳಗೆ ಸೀಟು ಖಾತರಿ ಚೀಟಿ ಡೌನ್‌ಲೋಡ್ ಮಾಡಿಕೊಂಡು ಸಂಬಂಧಿಸಿದ ಕಾಲೇಜುಗಳಲ್ಲಿ ವರದಿ ಮಾಡಿಕೊಳ್ಳಬೇಕು ಎಂದು ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕ ಎಚ್.ಪ್ರಸನ್ನ ತಿಳಿಸಿದ್ದಾರೆ.

**ಪಿಜಿ ಆಯುಷ್ ಫಲಿತಾಂಶ ಪ್ರಕಟ:** ಪಿಜಿ ಆಯುಷ್ ಸ್ಟ್ರೇ ವೇಕೆನ್ಸಿ ಸುತ್ತಿನ ಸೀಟು ಹಂಚಿಕೆ ಪ್ರಕಟಿಸಿದ್ದು, ಪಟ್ಟಿಯಲ್ಲಿ ಇರುವವರು ಡಿ.22ರಂದು ಮಧ್ಯಾಹ್ನ 3 ಗಂಟೆ ಒಳಗೆ ಶುಲ್ಕ ಪಾವತಿಸಿ, ಅಂದೇ ಸಂಜೆ 6 ಗಂಟೆಯೊಳಗೆ ಕಾಲೇಜುಗಳಲ್ಲಿ ವರದಿ ಮಾಡಿಕೊಳ್ಳಬೇಕು ಎಂದು ಹೇಳಿದ್ದಾರೆ.

## ಕ್ರಿಸ್‌ಮಸ್: 1000 ವಿಶೇಷ ಬಸ್

ಬೆಂಗಳೂರು: ಕ್ರಿಸ್‌ಮಸ್ ಪ್ರಯುಕ್ತ ಪ್ರಯಾಣಿಕರ ಅನುಕೂಲಕ್ಕಾಗಿ ಕೆಎಸ್‌ಆರ್‌ಟಿಸಿ 1000 ವಿಶೇಷ ಬಸ್‌ಗಳನ್ನು ರಸ್ತೆಗಿಳಿಸಲು ನಿರ್ಧರಿಸಿದೆ. ಡಿ.19, 20 ಮತ್ತು 24ರಂದು ಬೆಂಗಳೂರಿನಿಂದ ವಿವಿಧ ಪ್ರದೇಶಗಳಿಗೆ ಹಾಗೂ ಡಿ.26 ಮತ್ತು 28ರಂದು ವಿವಿಧೆಡೆಯಿಂದ ಬೆಂಗಳೂರಿಗೆ ವಿಶೇಷ ಬಸ್‌ಗಳ ವ್ಯವಸ್ಥೆ ಇರಲಿದೆ.

ಕೆಂಪೇಗೌಡ ಬಸ್ ನಿಲ್ದಾಣ, ಮೈಸೂರು ರಸ್ತೆ ಬಸ್ ನಿಲ್ದಾಣಗಳಿಂದ ಬಸ್‌ಗಳು ಸಂಚರಿಸಲಿವೆ.

ಧರ್ಮಸ್ಥಳ, ಕುಕ್ಕೆ ಸುಬ್ರಹ್ಮಣ್ಯ, ಶಿವಮೊಗ್ಗ, ಹಾಸನ, ಮಂಗಳೂರು, ಕುಂದಾಪುರ, ಶೃಂಗೇರಿ, ಹೊರನಾಡು, ದಾವಣಗೆರೆ, ಹುಬ್ಬಳ್ಳಿ, ಧಾರವಾಡ, ಬೆಳಗಾವಿ, ವಿಜಯಪುರ, ಗೋಕರ್ಣ, ಶಿರಸಿ, ಕಾರವಾರ, ರಾಯಚೂರು, ಕಲಬುರಗಿ, ಬಳ್ಳಾರಿ, ಕೊಪ್ಪಳ, ಯಾದಗಿರಿ, ಬೀದರ್, ಮೈಸೂರು, ಹುಣಸೂರು, ಪಿರಿಯಾಪಟ್ಟಣ, ವಿರಾಜಪೇಟೆ, ಕುಶಾಲನಗರ, ಮಡಿಕೇರಿ, ತಿರುಪತಿ, ವಿಜಯವಾಡ, ಹೈದರಾಬಾದ್ ಸಹಿತ ವಿವಿಧೆಡೆಗೆ ವಿಶೇಷ ಬಸ್‌ಗಳು ಸಂಚರಿಸಲಿವೆ.

ಪ್ರಯಾಣಿಕರ ಅನುಕೂಲಕ್ಕಾಗಿ ಮುಂಗಡವಾಗಿ ಆಸನಗಳನ್ನು ಕಾಯ್ದಿರಿಸುವ ಸೌಲಭ್ಯಗಳನ್ನು ಕಲ್ಪಿಸಲಾಗಿದೆ. www.ksrtc.karnataka.gov.in ವೆಬ್‌ಸೈಟ್ ಮೂಲಕ ಇ-ಟಿಕೆಟ್ ಬುಕಿಂಗ್ ಮಾಡಬಹುದು. ನಾಲ್ಕು ಅಥವಾ ಹೆಚ್ಚು ಪ್ರಯಾಣಿಕರು ಒಟ್ಟಾಗಿ ಮುಂಗಡವಾಗಿ ಕಾಯ್ದಿರಿಸಿದಲ್ಲಿ ಶೇ 5ರಷ್ಟು ರಿಯಾಯಿತಿ ಸಿಗಲಿದೆ. ಹೋಗುವ ಮತ್ತು ಬರುವ ಪ್ರಯಾಣದ ಟಿಕೆಟ್ ಒಟ್ಟಿಗೆ ಕಾಯ್ದಿರಿಸಿದರೆ ವಾಪಸ್ಸಾಗುವ ದರದಲ್ಲಿ ಶೇ 10ರಷ್ಟು ರಿಯಾಯಿತಿ ಸಿಗಲಿದೆ ಎಂದು ಕೆಎಸ್‌ಆರ್‌ಟಿಸಿ ಮುಖ್ಯ ಸಂಚಾರ ವ್ಯವಸ್ಥಾಪಕರು ತಿಳಿಸಿದ್ದಾರೆ.

## ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದ ಹಗರಣ

# ₹8 ಕೋಟಿ ಮೌಲ್ಯದ ಆಸ್ತಿ ಜಪ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದ (ಕೆಎಂವಿಎಸ್‌ಟಿಡಿಸಿಎಲ್) ಬ್ಯಾಂಕ್ ಖಾತೆಯಿಂದ ಹಣ ಅಕ್ರಮ ವರ್ಗಾವಣೆ ಹಾಗೂ ಹಣ ದುರುಪಯೋಗ ಆರೋಪಕ್ಕೆ ಸಂಬಂಧಿಸಿದಂತೆ ಮಾಜಿ ಸಚಿವ ಬಿ.ನಾಗೇಂದ್ರಗೆ ಸೇರಿದ ಅಂದಾಜು ₹8.07 ಕೋಟಿ ಮೌಲ್ಯದ ಆಸ್ತಿಯನ್ನು ಜಾರಿ ನಿರ್ದೇಶನಾಲಯ ಜಪ್ತಿ ಮಾಡಿದೆ. ಈ ಪ್ರಕರಣದಲ್ಲಿ ಈವರೆಗೆ ಜಪ್ತಿ ಮಾಡಿದ ಒಟ್ಟು ಮೊತ್ತ ₹13.01 ಕೋಟಿಯಾಗಿದೆ.

2002ರ ಹಣ ಅಕ್ರಮ ವರ್ಗಾವಣೆ ತಡೆ ಕಾಯ್ದೆ (ಪಿಎಂಎಲ್‌ಎ) ಅಡಿ ನಾಗೇಂದ್ರ ಅವರಿಗೆ ಸೇರಿದ ವಸತಿ, ವಾಣಿಜ್ಯ ಭೂಮಿ ಮತ್ತು ಕಟ್ಟಡ ಸೇರಿ ನಾಲ್ಕು ಸ್ಥಿರ ಆಸ್ತಿಗಳನ್ನು ತಾತ್ಕಾಲಿಕವಾಗಿ ಜಪ್ತಿ ಮಾಡಲಾಗಿದೆ ಎಂದು ಜಾರಿ ನಿರ್ದೇಶನಾಲಯ (ಇ.ಡಿ.) ತಿಳಿಸಿದೆ.



ಬಿ. ನಾಗೇಂದ್ರ

ಕೆಎಂವಿಎಸ್‌ಟಿಡಿಸಿಎಲ್ ಹಣ ದುರುಪಯೋಗ ಹಾಗೂ ಹಣ ಅಕ್ರಮ ವರ್ಗಾವಣೆಗೆ ಸಂಬಂಧಿಸಿದಂತೆ ಕೇಂದ್ರ ತನಿಖಾ ದಳ (ಸಿಬಿಐ) ಮತ್ತು ರಾಜ್ಯದ ಪೊಲೀಸರು ದಾಖಲಿಸಿದ್ದ ಎಫ್‌ಐಆರ್ ಆಧಾರದ ಮೇಲೆ ಇ.ಡಿ ತನಿಖೆ ಆರಂಭಿಸಿತ್ತು. ಮೊದಲು ಕರ್ನಾಟಕ ಹಾಗೂ ಇತರೆ ರಾಜ್ಯಗಳ ವಿವಿಧ ಸ್ಥಳಗಳಲ್ಲಿ ಶೋಧ ಕಾರ್ಯಾಚರಣೆ ನಡೆಸಿತ್ತು.

ಪ್ರಕರಣದಲ್ಲಿ ಬಿ.ನಾಗೇಂದ್ರ ಸೇರಿ 6 ಮಂದಿಯನ್ನು ಬಂಧಿಸಿತ್ತು. ನಂತರ ನಾಗೇಂದ್ರ ಸೇರಿ 25 ಮಂದಿ ವಿರುದ್ಧ 2024ರ ಸೆಪ್ಟೆಂಬರ್ 9ರಂದು ನಗರ ಪ್ರಧಾನ ಸಿವಿಲ್ ಮತ್ತು ಸೆಷನ್ಸ್ ನ್ಯಾಯಾಲಯದಲ್ಲಿ ದೂರು ದಾಖಲಿಸಲಾಗಿತ್ತು.

2025ರ ಆಗಸ್ಟ್ 26ರಂದು ಆರೋಪಿಗಳಿಗೆ ಸೇರಿದ ₹4.94 ಕೋಟಿ ಮೌಲ್ಯದ ಚರ ಹಾಗೂ ಸ್ಥಿರ ಆಸ್ತಿಗಳನ್ನು ಜಪ್ತಿ ಮಾಡಲಾಗಿತ್ತು.

ನಾಗೇಂದ್ರ ಅವರು ಅಕ್ರಮವಾಗಿ ಗಳಿಸಿರುವ ಹಣವನ್ನು ಪತ್ತೆ ಮಾಡಲು ಎಲ್ಲ ರೀತಿಯ ಪ್ರಯತ್ನ ಮಾಡಲಾಯಿತು. ಅವರು ಬಹುತೇಕ ಹಣವನ್ನು ಖರ್ಚು ಮಾಡಿರಬಹುದು ಅಥವಾ ಬಚ್ಚಿಟ್ಟಿರಬಹುದು. ಹಾಗಾಗಿ ಅಪರಾಧ ಕೃತ್ಯದಿಂದ ಸಂಪಾದಿಸಿದ್ದ ಅಷ್ಟೇ ಮೊತ್ತದ ಇತರೆ ಸ್ವತ್ತುಗಳನ್ನು ಮುಟ್ಟುಗೋಲು ಹಾಕಿಕೊಳ್ಳಲಾಗಿದ್ದು, ತನಿಖೆ ಮುಂದುವರಿದಿದೆ ಎಂದು ಹೇಳಿದೆ.

## ವ್ಯಾಘ್ರ ನೋಟ...

ಪ್ರಜಾವಾಣಿ ಚಿತ್ರ: ಫಕ್ರುದ್ದೀನ್ ಎಚ್



**ಮಂಗಳೂರಿನ ಪಿಲಿಕುಳ ನಿಸರ್ಗಧಾಮದಲ್ಲಿಯ ಹುಲಿಗೆ ಕಳೆದ ವರ್ಷ ಜನಿಸಿರುವ ಎರಡು ಮರಿಗಳ ವಯ್ಯಾರ ಇದು. ಕರಾವಳಿ ಉತ್ಸವ ಅಂಗವಾಗಿ ಈ ಎರಡು ಹುಲಿ ಮರಿಗಳನ್ನು ಸಾರ್ವಜನಿಕರು ನೋಡಲು ಶನಿವಾರದಿಂದ ಅವಕಾಶ ಕಲ್ಪಿಸಲಾಗಿದೆ**

## ಸ್ವಚ್ಛ ವಿಧಾನಸಭೆ: ಏಕಾಂಗಿ ಆಂದೋಲನ

ಪ್ರಜಾವಾಣಿ ವಾರ್ತೆ

ಬೆಳಗಾವಿ: 'ಭ್ರಷ್ಟಾಚಾರ ಮುಕ್ತ ಆಡಳಿತಕ್ಕಾಗಿ ಸ್ವಚ್ಛ ವಿಧಾನಸಭೆ ಆಂದೋಲನ' ಕೈಗೊಂಡಿರುವ ಐ.ಟಿ ಉದ್ಯೋಗಿ ನಾಗರಾಜ ಕಲಕುಟಗರ, ಸುವರ್ಣ ವಿಧಾನಸೌಧದ ಬಳಿ ಶುಕ್ರವಾರ ಧರಣಿ ನಡೆಸಿದರು.

ಹೆಗಲ ಮೇಲೆ ರಾಷ್ಟ್ರಧ್ವಜ ಮತ್ತು ಕರ್ನಾಟಕ ಧ್ವಜ ಏರಿಸಿಕೊಂಡಿದ್ದರು. ಪ್ರಜಾಪ್ರಭುತ್ವ ಉಳಿವಿಗಾಗಿ ಭ್ರಷ್ಟರಲ್ಲದ ಪ್ರಬುದ್ಧ– ಜನಪರ– ಸುಸಂಸ್ಕೃತ ವ್ಯಕ್ತಿತ್ವವುಳ್ಳವರು ಬೇಕಾಗಿದ್ದಾರೆ. ಸ್ವಚ್ಛ ವಿಧಾನಸಭೆ ಅಭಿಯಾನ; ನನ್ನ ಮತ ಮಾರಾಟಕ್ಕೆ ಇಲ್ಲ' ಎಂಬ ಭಿತ್ತಿಪತ್ರ ಪ್ರದರ್ಶಿಸಿದರು.

ಬಾಗಲಕೋಟೆಯವರಾದ ನಾಗರಾಜ ಎಂ. ಎಸ್ಸಿ, ಎಂ.ಟೆಕ್ ಪದವೀಧರ. ಏರೋಸ್ಪೇಸ್ ಎಂಜಿನಿಯರ್ ಆಗಿರುವ ಅವರು, ಐ.ಟಿ ಕಂಪನಿಗಳಲ್ಲಿ ನೌಕರಿ ಗಿಟ್ಟಿಸಿ ಲಕ್ಷಗಟ್ಟಲೇ ಸಂಬಳ ಪಡೆದವರು. ಜರ್ಮನಿಯಲ್ಲೂ ಕೆಲಸ ಮಾಡಿದ್ದಾರೆ. ಭ್ರಷ್ಟಾಚಾರದ ವಿರುದ್ಧ ಹೋರಾಟ ಮಾಡಿದ್ದ ಅಣ್ಣಾ ಹಜಾರೆ ಅವರಿಂದ ಪ್ರಭಾವಿತರಾದರು. ನೌಕರಿ ಬಿಟ್ಟು ಆಂದೋಲನ ಶುರು ಮಾಡಿದರು. ನಾಗರಾಜ ಅವರೊಂದಿಗೆ ಇತರ ಎಂಟು ಎಂಜಿನಿಯರ್‌ಗಳೂ ಕೈ ಜೋಡಿಸಿದ್ದಾರೆ.

'ಫೆ.16ರಂದು ಬೆಂಗಳೂರು ವಿಧಾನಸೌಧದಿಂದ ಪಾದಯಾತ್ರೆ ಆರಂಭಿಸಿದ್ದೇನೆ. ಈಗಾಗಲೇ 18 ಜಿಲ್ಲಾ ಕೇಂದ್ರಗಳಿಗೆ 2,300 ಕಿ.ಮೀ. ಪಾದಯಾತ್ರೆ ಮಾಡಿ, ಈಗ ಬೆಳಗಾವಿ ನಗರ ತಲುಪಿದ್ದೇನೆ. ಎಲ್ಲ ಕ್ಷೇತ್ರಗಳಿಗೆ ಭೇಟಿ ನೀಡುತ್ತೇನೆ. ಜನರಲ್ಲಿ ಮತದಾನದ ಮಹತ್ವದ ಕುರಿತು ಅರಿವು ಮೂಡಿಸುತ್ತೇನೆ' ಎಂದು ನಾಗರಾಜ ಹೇಳಿದರು.




ಸ್ವಚ್ಛ ವಿಧಾನಸಭೆ ಆಂದೋಲನಕ್ಕಾಗಿ ಪಾದಯಾತ್ರೆ ಆರಂಭಿಸಿದ ನಾಗರಾಜ ಕಲಕುಟಗರ

## ಪರೀಕ್ಷೆ ಬರೆಯಲಿರುವ 24,800 ಮಂದಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಡಿಎ, ಜಲಮಂಡಳಿ, ತಾಂತ್ರಿಕ ಶಿಕ್ಷಣ ಇಲಾಖೆ ಸೇರಿದಂತೆ ವಿವಿಧ ಇಲಾಖೆಗಳಲ್ಲಿನ ಖಾಲಿ ಹುದ್ದೆಗಳ ನೇಮಕಾತಿಗೆ ಕಲ್ಯಾಣ ಕರ್ನಾಟಕದ ಅಭ್ಯರ್ಥಿಗಳಿಗೆ ಡಿಸೆಂಬರ್ 20ರಿಂದ 22ರವರೆಗೆ ಲಿಖಿತ ಪರೀಕ್ಷೆ ನಡೆಸಲು ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಬಿಗಿ ಕ್ರಮಗಳನ್ನು ಕೈಗೊಂಡಿದೆ.

ವಿವಿಧ ಹುದ್ದೆಗಳಿಗೆ ಕಲ್ಯಾಣ ಕರ್ನಾಟಕದ ಒಟ್ಟು 24,800 ಅಭ್ಯರ್ಥಿಗಳು ಅರ್ಜಿ ಸಲ್ಲಿಸಿದ್ದು, ಅಷ್ಟೂ ಮಂದಿಗೆ ಮೂರು ದಿನ ಪರೀಕ್ಷೆ ನಡೆಸಲಾಗುತ್ತದೆ ಎಂದು ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕ ಎಚ್.ಪ್ರಸನ್ನ ತಿಳಿಸಿದರು.

ಪರೀಕ್ಷಾ ಕೊಠಡಿಯಲ್ಲಿ ಸಿ.ಸಿ.ಟಿ.ವಿ ಕ್ಯಾಮೆರಾ ಜತೆಗೆ ಜಾಮರ್ ಕೂಡ ಹಾಕಿದ್ದು, ಎಲೆಕ್ಟ್ರಾನಿಕ್ ವಸ್ತುಗಳ ಬಳಕೆಗೆ ನಿರ್ಬಂಧ ವಿಧಿಸಲಾಗಿದೆ. ಮುಖಚಹರೆ ಪತ್ತೆ ತಂತ್ರಜ್ಞಾನ ಬಳಸಿಯೇ ಅಭ್ಯರ್ಥಿಗಳನ್ನು ಪರೀಕ್ಷಾ ಕೇಂದ್ರದ ಒಳಗೆ ಬಿಡಲಾಗುತ್ತದೆ. ವಸ್ತ್ರ ಸಂಹಿತೆ ಇದ್ದು, ಕಟ್ಟುನಿಟ್ಟಾಗಿ ಪಾಲಿಸಬೇಕು ಎಂದು ಹೇಳಿದ್ದಾರೆ.

ಡಿಸೆಂಬರ್ 20ರಂದು ಬೆಂಗಳೂರಿನ ಏಳು ಕೇಂದ್ರಗಳಲ್ಲಿ ಒಟ್ಟು 3,486 ಮಂದಿ ಪರೀಕ್ಷೆ ಬರೆಯಲಿದ್ದಾರೆ. ಬೆಂಗಳೂರು, ಬಳ್ಳಾರಿ, ದಾವಣಗೆರೆ, ಧಾರವಾಡ, ಕಲಬುರಗಿ ಮತ್ತು ಕೊಪ್ಪಳ ಜಿಲ್ಲೆಗಳ 51 ಕೇಂದ್ರಗಳಲ್ಲಿ ಡಿಸೆಂಬರ್ 21ರಂದು ನಡೆಯುವ ಪರೀಕ್ಷೆಯನ್ನು 21,198 ಮಂದಿ ಹಾಗೂ ಡಿಸೆಂಬರ್ 22ರಂದು ಬೆಂಗಳೂರಿನಲ್ಲಿ ಮಾತ್ರ ನಡೆಯುವ ಪರೀಕ್ಷೆಯನ್ನು 1,166 ಮಂದಿ ತೆಗೆದುಕೊಂಡಿದ್ದಾರೆ ಎಂದು ಅವರು ವಿವರಿಸಿದ್ದಾರೆ.

**ಎಲ್ಲರಿಗೂ ಕನ್ನಡ ಪರೀಕ್ಷೆ:** ಕಲ್ಯಾಣ ಕರ್ನಾಟಕ ಸೇರಿದಂತೆ ಇತರ ಎಲ್ಲರಿಗೂ ಡಿಸೆಂಬರ್ 28ರಂದು ಕನ್ನಡ ಕಡ್ಡಾಯ ಪರೀಕ್ಷೆ ನಡೆಯಲಿದೆ ಎಂದು ಅವರು ವಿವರಿಸಿದರು.

## ಬಿ.ಎಲ್.ಡಿ.ಇ ಘಟಿಕೋತ್ಸವ 502 ವಿದ್ಯಾರ್ಥಿಗಳಿಗೆ ಪದವಿ

ಪ್ರಜಾವಾಣಿ ವಾರ್ತೆ

ವಿಜಯಪುರ: ಇಲ್ಲಿನ ಬಿ.ಎಲ್.ಡಿ.ಇ ಡೀಮ್ಡ್ ವಿಶ್ವವಿದ್ಯಾಲಯದಲ್ಲಿ ಶುಕ್ರವಾರ ನಡೆದ 13ನೇ ಘಟಿಕೋತ್ಸವದಲ್ಲಿ ಒಟ್ಟು 502 ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಲಾಯಿತು. ಪ್ರತಿಭಾವಂತ ವಿದ್ಯಾರ್ಥಿಗಳಿಗೆ 28 ಚಿನ್ನದ ಪದಕಗಳು ಮತ್ತು 3 ನಗದು ಬಹುಮಾನಗಳನ್ನು ಪ್ರದಾನ ಮಾಡಲಾಯಿತು.

11 ಪಿಎಚ್.ಡಿ, 3 ಎಂ.ಸಿಎಚ್ (ಯುರಾಲಜಿ), 2 ಡಿ.ಎಂ. (ಕಾರ್ಡಿಯಾಲಜಿ), 239 ವೈದ್ಯಕೀಯ ಸ್ನಾತಕೋತ್ತರ ಪದವಿಗಳು, 3 ಫೆಲೋಶಿಪ್‌ಗಳು, 156 ಎಂಬಿಬಿಎಸ್ ಪದವಿ ಇದರಲ್ಲಿ ಸೇರಿದ್ದವು.

ನವದೆಹಲಿಯ ರಾಷ್ಟ್ರೀಯ ವೈದ್ಯಕೀಯ ಆಯೋಗದ ವೈದ್ಯಕೀಯ ಮೌಲ್ಯಮಾಪನ ಮತ್ತು ಶ್ರೇಯಾಂಕ ಮಂಡಳಿ ಅಧ್ಯಕ್ಷ ಡಾ.ಎಂ.ಕೆ.ರಮೇಶ ಘಟಿಕೋತ್ಸವ ಭಾಷಣ ಮಾಡಿದರು.

'ವೈದ್ಯಕೀಯ ಸೇವೆ ಹೊಸ ಮಜಲು ತಲುಪಿದೆ. ಗುಣಮಟ್ಟದ ಸೇವೆ ನೀಡಲು ಆಧುನಿಕ ತಂತ್ರಜ್ಞಾನದ ಸದ್ಬಳಕೆ ಆಗುತ್ತಿದೆ. ಟೆಲಿಮೆಡಿಸಿನ್ ಮೂಲಕವೂ ಚಿಕಿತ್ಸೆ ನೀಡಬಹುದಾಗಿದೆ' ಎಂದರು.



ವಿಜಯಪುರದ ಬಿ. ಎಲ್. ಡಿ. ಇ ಡೀಮ್ಡ್ ವಿಶ್ವವಿದ್ಯಾಲಯದ 13ನೇ ಘಟಿಕೋತ್ಸವದಲ್ಲಿ ಡಾ. ಯಶ ಆರ್ಯ ಅವರಿಗೆ ಐದು ಚಿನ್ನದ ಪದಕ ಮತ್ತು ನಗದು ಪುರಸ್ಕಾರವನ್ನು ನವದೆಹಲಿ ರಾಷ್ಟ್ರೀಯ ವೈದ್ಯಕೀಯ ಆಯೋಗದ ವೈದ್ಯಕೀಯ ಮೌಲ್ಯಮಾಪನ ಮತ್ತು ಶ್ರೇಯಾಂಕ ಮಂಡಳಿಯ ಅಧ್ಯಕ್ಷ ಡಾ. ಎಂ. ಕೆ. ರಮೇಶ ಪ್ರದಾನ ಮಾಡಿದರು. ಸಚಿವ ಎಂ. ಬಿ. ಪಾಟೀಲ, ಡೀಮ್ಡ್ ವಿ.ವಿ. ಕುಲಾಧಿಪತಿ ಬಿ. ಎಂ. ಪಾಟೀಲ, ಡಾ. ವೈ. ಎಂ. ಜಯರಾಜ, ಡಾ. ಅರುಣ ಚಂ. ಇನಾಮದಾರ ಇದ್ದರು ಪ್ರಜಾವಾಣಿ ಚಿತ್ರ

## ಪೌರಕಾರ್ಮಿಕರಿಗೆ ಸೇವಾ ಕಾಯಮಾತಿ ಆದೇಶ- ಮನೆಗಳ ಹಕ್ಕುಪತ್ರ ವಿತರಣೆ

# ಇ–ಖಾತಾ ಲೋಕಾರ್ಪಣೆ ಮಾಡಿದ ಸಿ.ಎಂ

ಪ್ರಜಾವಾಣಿ ವಾರ್ತೆ

ಬೆಳಗಾವಿ: ಪೌರಾಡಳಿತ ಇಲಾಖೆ ಜಾರಿಗೆ ತಂದಿರುವ 'ಇ-ಖಾತಾ' ಸೌಲಭ್ಯಕ್ಕೆ ಇಲ್ಲಿನ ಸುವರ್ಣ ವಿಧಾನಸೌಧದ ಸಭಾಂಗಣದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಗುರುವಾರ ಚಾಲನೆ ನೀಡಿ, ಕೈಪಿಡಿ ಬಿಡುಗಡೆ ಮಾಡಿದರು.

ನಗರಾಭಿವೃದ್ಧಿ ಇಲಾಖೆ, ಪೌರಾಡಳಿತ ನಿರ್ದೇಶನಾಲಯ, ಬೆಳಗಾವಿ ಮಹಾನಗರ ಪಾಲಿಕೆ ಆಶ್ರಯದಲ್ಲಿ ನಡೆದ ಕಾರ್ಯಕ್ರಮದಲ್ಲಿ ಪೌರಕಾರ್ಮಿಕರಿಗೆ ನೇಮಕಾತಿ ಪತ್ರಗಳು ಮತ್ತು ಮನೆಯ ಹಕ್ಕುಪತ್ರಗಳ ವಿತರಣೆಗೂ ಚಾಲನೆ ನೀಡಿದರು.

ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವ ಬೈರತಿ ಸುರೇಶ್ ಮಾತನಾಡಿ, 'ಇ-ಆಸ್ತಿ ತಂತ್ರಾಂಶ ಸರಳೀಕರಣ ಮಾಡಲಾಗಿದೆ. ಆಸ್ತಿ ಮಾಲೀಕರು ಮಧ್ಯವರ್ತಿಗಳಿಲ್ಲದೇ, ಅಧಿಕಾರಿಗಳನ್ನು ಸಂಪರ್ಕಿಸದೇ ತಮ್ಮ ಮನೆಯಲ್ಲಿ ಕುಳಿತೇ ಇ-ಖಾತಾ ಪಡೆಯಬಹುದು' ಎಂದರು.



ಬೆಳಗಾವಿಯ ಸುವರ್ಣ ವಿಧಾನಸೌಧದಲ್ಲಿ ಗುರುವಾರ 'ಇಖಾತಾ' ಸೌಕರ್ಯ ಹಾಗೂ ಹಕ್ಕುಪತ್ರ ವಿತರಣಾ ಕಾರ್ಯಕ್ರಮದಲ್ಲಿ ಬೆಳಗಾವಿ ಹಾಗೂ ವಿಜಯಪುರ ಜಿಲ್ಲೆಗಳ ಪೌರಕಾರ್ಮಿಕ ಮಹಿಳೆಯರು ಪಾಲ್ಗೊಂಡರು

'ಸಾರ್ವಜನಿಕ ಸೇವೆಯಲ್ಲಿರುವ ನಿಖರತೆಯನ್ನು ನಗರ ಸ್ಥಳೀಯ ಸಂಸ್ಥೆಗಳು ಪರಿಶೀಲಿಸುತ್ತವೆ' ಎಂದು ಪೌರಾಡಳಿತ ಸಚಿವ ರಹೀಂ ಖಾನ್ ತಿಳಿಸಿದರು.

6 ಸಾವಿರಕ್ಕೂ ಹೆಚ್ಚು ಕಾರ್ಮಿಕರಿಗೆ ಮನೆ ನಿರ್ಮಿಸಲಾಗುತ್ತಿದೆ. ಗೃಹಭಾಗ್ಯ ಯೋಜನೆಯಡಿ 6,119 ಫಲಾನುಭವಿಗಳನ್ನು ಗುರುತಿಸಲಾಗಿದೆ. ಸರ್ಕಾರ ₹326 ಕೋಟಿ ಅನುದಾನ ಬಿಡುಗಡೆ ಮಾಡಿದೆ. ಈವರೆಗೆ 4,159 ಮನೆಗಳ ನಿರ್ಮಾಣ ಪೂರ್ಣಗೊಂಡಿವೆ' ಎಂದರು.

'ಆಸ್ತಿ ಕಣಜದಲ್ಲಿನ ಮಾಹಿತಿ ಆಧಾರದಲ್ಲಿ ಕರಡು ಇ-ಖಾತಾ ಪ್ರಕಟಿಸಲಾಗಿದೆ. ಮಾಹಿತಿಯ

ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಮಾತನಾಡಿದರು. ಸಚಿವರಾದ ಎಂ.ಬಿ.ಪಾಟೀಲ, ಎಂ.ಸಿ.ಸುಧಾಕರ, ಶಾಸಕ ಆಸಿಫ್ ಸೇಠ್, ಬೆಳಗಾವಿ ಮೇಯರ್ ಮಂಗೇಶ ಪವಾರ, ಉಪಮೇಯರ್ ವಾಣಿ ಜೋಶಿ, ಸರ್ಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್, ನಗರಾಭಿವೃದ್ಧಿ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ತುಷಾರ ಗಿರಿನಾಥ್, ಸರ್ಕಾರದ ಕಾರ್ಯದರ್ಶಿ ದೀಪಾ ಚೋಳನ್, ಪೌರಾಡಳಿತ ನಿರ್ದೇಶನಾಲಯದ ನಿರ್ದೇಶಕ ಪ್ರಭುಲಿಂಗ ಕವಳಿಕಟ್ಟಿ, ಮಿಷನ್ ಡೈರೆಕ್ಟರ್ ಡಾ.ಸೆಲ್ವಮನಿ ಆರ್. ಇದ್ದರು.

ಇದೇ ವೇಳೆ, ಬೆಳಗಾವಿ ನಗರಪಾಲಿಕೆಯ 127 ಪೌರಕಾರ್ಮಿಕರಿಗೆ ಕಾಯಂ ನೇಮಕಾತಿ ಆದೇಶ ಪತ್ರ ಹಾಗೂ ವಿಜಯಪುರ ನಗರದ ಪೌರಕಾರ್ಮಿಕರಿಗೆ ಕಾಯಂ ನೇಮಕಾತಿ ಆದೇಶ ಪತ್ರ, ಗೃಹಭಾಗ್ಯ ಯೋಜನೆಯಡಿ 60 ಪೌರ ಕಾರ್ಮಿಕರಿಗೆ ಮನೆಯ ಸ್ವಾಧೀನ ಪ್ರಮಾಣಪತ್ರವನ್ನು ವಿತರಿಸಲಾಯಿತು.

**320 ನಗರ ಸ್ಥಳೀಯ ಸಂಸ್ಥೆಗಳಲ್ಲಿ ಈವರೆಗೆ ಆಸ್ತಿ ಮಾಲೀಕರು ಇ-ಆಸ್ತಿ ತಂತ್ರಾಂಶದ ಮೂಲಕ ಅಂದಾಜು 29 ಲಕ್ಷ ಆಸ್ತಿಗಳಿಗೆ ಇ-ಖಾತಾ ಪಡೆದಿದ್ದಾರೆ**
**ಬೈರತಿ ಸುರೇಶ್,** ಸಚಿವ, ನಗರಾಭಿವೃದ್ಧಿ ಮತ್ತು ನಗರ ಯೋಜನೆ

**ಸಿದ್ದರಾಮಯ್ಯ ಪೌರಕಾರ್ಮಿಕರ ಬಗ್ಗೆ ಕಾಳಜಿ ಹೊಂದಿದ್ದಾರೆ. ಫಲಾನುಭವಿಗಳಿಗೆ ಮನೆ ಕೊಡುತ್ತಿದ್ದಾರೆ. 180 ಹೊಸ ಇಂದಿರಾ ಕ್ಯಾಂಟೀನ್ ನೀಡಿದ್ದಾರೆ**
**ರಹೀಂ ಖಾನ್,** ಸಚಿವ, ಪೌರಾಡಳಿತ ಮತ್ತು ಹಜ್

**ಸಾರ್ವಜನಿಕರ ಆಸ್ತಿ ದಾಖಲೆಯನ್ನು ಮತ್ತಷ್ಟು ಸುರಕ್ಷಿತಗೊಳಿಸುವ ನಿಟ್ಟಿನಲ್ಲಿ ಇ-ಖಾತಾ ಸೇವೆ ಒದಗಿಸಿದ ಸರ್ಕಾರಕ್ಕೆ ಅಭಿನಂದಿಸುತ್ತೇನೆ**
**ಬಸವರಾಜ ಹೊರಟ್ಟಿ**, ಸಭಾಪತಿ, ವಿಧಾನ ಪರಿಷತ್ತು

# ‘ಜಿ ರಾಮ್ ಜಿ: ಗ್ರಾಮ ವಿರೋಧಿ’

## ಗ್ರಾಮೀಣ ಭಾರತವನ್ನು ದುರ್ಬಲಗೊಳಿಸುವ ಹುನ್ನಾರ: ಆರೋಪ

ನವದೆಹಲಿ (ಪಿಟಿಐ): ಗ್ರಾಮೀಣ ಜನರ ಆರ್ಥಿಕ ಸಬಲೀಕರಣಕ್ಕೆ ಇಪ್ಪತ್ತು ವರ್ಷಗಳಿಂದ ಕಾರ್ಯನಿರ್ವಹಿಸುತ್ತಿರುವ ‘ನರೇಗಾ’ವನ್ನು ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಸರ್ಕಾರ ಒಂದೇ ದಿನದಲ್ಲಿ ನಾಶಮಾಡಿದೆ ಎಂದು ಆರೋಪಿಸಿರುವ ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ, ‘ನರೇಗಾ’ಕ್ಕೆ ಪರ್ಯಾಯವಾಗಿ ರೂಪಿಸಿರುವ ‘ವಿಬಿ–ಜಿ ರಾಮ್ ಜಿ’ ಮಸೂದೆ ‘ಗ್ರಾಮ ವಿರೋಧಿ’ಯಾಗಿದೆ ಎಂದು ಆರೋಪಿಸಿದ್ದಾರೆ.

‘ವಿಕಸಿತ ಭಾರತ– ಉದ್ಯೋಗ ಖಾತರಿ ಮತ್ತು ಜೀವನೋಪಾಯ ಮಿಷನ್ (ಗ್ರಾಮೀಣ) (ವಿಬಿ–ಜಿ ರಾಮ್ ಜಿ) ಮಸೂದೆಯು ವಿರೋಧ ಪಕ್ಷಗಳ ತೀವ್ರ ಪ್ರತಿರೋಧದ ನಡುವೆಯೂ ಲೋಕಸಭೆ ಮತ್ತು ರಾಜ್ಯಸಭೆಯಲ್ಲಿ ಗುರುವಾರವಷ್ಟೇ ಅಂಗೀಕಾರ ಪಡೆದಿದೆ.

ಈ ಕುರಿತು ಶುಕ್ರವಾರ ‘ಎಕ್ಸ್’ನಲ್ಲಿ ಪೋಸ್ಟ್ ಮಾಡಿರುವ ರಾಹುಲ್ ಗಾಂಧಿ, ‘ಬೇಡಿಕೆ ಮತ್ತು ಹಕ್ಕು ಆಧಾರಿತ ಖಾತರಿ ಯೋಜನೆಯನ್ನು ಮೋದಿ ಸರ್ಕಾರ ನಾಶ ಮಾಡಿದೆ. ಈ ಯೋಜನೆಯನ್ನು ದೆಹಲಿಯಿಂದ ನಿಯಂತ್ರಿಸುವ ಪಡಿತರ ಯೋಜನೆಯಾಗಿ ಪರಿವರ್ತಿಸುತ್ತಿದೆ. ಇದು ದೇಶ ವಿರೋಧಿ ಮತ್ತು ಗ್ರಾಮ ವಿರೋಧಿಯಾಗಿದೆ’ ಎಂದು ಕಿಡಿಕಾರಿದ್ದಾರೆ.

‘ನರೇಗಾ ಯೋಜನೆಯು ಗ್ರಾಮೀಣ ಜನರಿಗೆ ಆರ್ಥಿಕ ಶಕ್ತಿಯನ್ನು ನೀಡಿತ್ತು. ಶೋಷಣೆ, ಸಂಕಷ್ಟ ಮತ್ತು ವಲಸೆಯನ್ನು ಕಡಿಮೆಗೊಳಿಸಿತ್ತು. ಮೂಲಸೌಕರ್ಯ ವೃದ್ಧಿಗೂ ನೆರವಾಗಿತ್ತು. ಇದೀಗ ಕೇಂದ್ರ ಸರ್ಕಾರ ಇದನ್ನೆಲ್ಲ ಮುರಿಯಲು ಮುಂದಾಗಿದೆ’ ಎಂದು ದೂರಿದ್ದಾರೆ.

**‘ಕಾರ್ಮಿಕ, ಬಡವರ ವಿರೋಧಿ’:** ಕೆಲಸಕ್ಕೆ ಮಿತಿ ಹೇರುವ ಮತ್ತು ಕೆಲಸವನ್ನು ನಿರಾಕರಿಸಲು ಹಲವು ಮಾರ್ಗಗಳನ್ನು ಸೃಷ್ಟಿಸುವ ಮೂಲಕ ‘ವಿಬಿ–ಜಿ ರಾಮ್ ಜಿ’ ಮಸೂದೆಯು ಗ್ರಾಮೀಣ ಬಡವರನ್ನು ದುರ್ಬಲಗೊಳಿಸುತ್ತದೆ ಎಂದು ರಾಹುಲ್ ಅವರು ಕಳವಳ ವ್ಯಕ್ತಪಡಿಸಿದ್ದಾರೆ.

‘ಕೋವಿಡ್ ಸಮಯದಲ್ಲಿ ನರೇಗಾ ಹೇಗೆಲ್ಲ ಜನರಿಗೆ ಉಪಯುಕ್ತವಾಯಿತು ಎಂಬುದನ್ನು ಕಂಡಿದ್ದೇವೆ. ಆರ್ಥಿಕತೆ ಸ್ಥಗಿತಗೊಂಡು ಜೀವನೋಪಾಯ ಕುಸಿದಿದ್ದಾಗ, ಕೋಟ್ಯಂತರ ಜನರ ಹಸಿವು ನೀಗಿಸಿದೆ. ಮಹಿಳೆಯರ ಆರ್ಥಿಕ ಸಬಲೀಕರಣಕ್ಕೂ ನೆರವಾಗಿದೆ’ ಎಂದು ಅವರು ವಿವರಿಸಿದ್ದಾರೆ.

ಈ ಮಸೂದೆಯನ್ನು ಸ್ಥಾಯಿ ಸಮಿತಿಯ ಪರಿಶೀಲನೆಗೆ ಒಪ್ಪಿಸಬೇಕು ಎಂಬ ವಿರೋಧ ಪಕ್ಷಗಳ ಬೇಡಿಕೆಯನ್ನು ಸರ್ಕಾರ ತಿರಸ್ಕರಿಸಿದೆ ಎಂದು ಅವರು ಬೇಸರ ವ್ಯಕ್ತಪಡಿಸಿದ್ದಾರೆ.

**ತಜ್ಞರ ಪರಿಶೀಲನೆ ಅಗತ್ಯ:** ‘ಮಸೂದೆಯನ್ನು ಸ್ಥಾಯಿ ಸಮಿತಿಯ ಪರಿಶೀಲನೆ, ತಜ್ಞರ ಸಮಾಲೋಚನೆ, ಸಾರ್ವಜನಿಕರ ಸಲಹೆ, ಸೂಚನೆ, ಮಾರ್ಗದರ್ಶನಗಳಿಲ್ಲದೆ ಎಂದಿಗೂ ಜಾರಿಗೆ ತರಬಾರದು’ ಎಂದು ಅವರು ಪ್ರತಿಪಾದಿಸಿದ್ದಾರೆ.

‘ನರೇಗಾ ನಾಶಪಡಿಸಲು ಕೇಂದ್ರ ಸರ್ಕಾರ ಮಾಡುತ್ತಿರುವ ಯತ್ನ ಯಶಸ್ವಿಯಾಗಲು ಬಿಡುವುದಿಲ್ಲ. ಕೇಂದ್ರದ ಈ ಕ್ರಮದ ವಿರುದ್ಧ ರಾಷ್ಟ್ರಮಟ್ಟದಲ್ಲಿ ಹೋರಾಟಗಳನ್ನು ರೂಪಿಸುತ್ತೇವೆ’ ಎಂದು ಅವರು ಹೇಳಿದ್ದಾರೆ.



ವಿರೋಧ ಪಕ್ಷಗಳ ನಾಯಕರು ಸಂಸತ್ ಭವನದ ಆವರಣದಲ್ಲಿ ಗುರುವಾರ ಅಹೋರಾತ್ರಿ ಧರಣಿ ನಡೆಸಿದರು —ಪಿಟಿಐ ಚಿತ್ರ

### ಸಂಸತ್ತಿನ ಆವರಣದಲ್ಲಿ ಅಹೋರಾತ್ರಿ ಧರಣಿ

‘ನರೇಗಾ’ಕ್ಕೆ ಪರ್ಯಾಯವಾಗಿ ತಂದಿರುವ ‘ವಿಬಿ–ಜಿ ರಾಮ್ ಜಿ’ ಮಸೂದೆ ವಿರೋಧಿಸಿ ವಿರೋಧ ಪಕ್ಷಗಳ ನಾಯಕರು ಸಂಸತ್ತಿನ ಆವರಣದಲ್ಲಿ ಗುರುವಾರ ಅಹೋರಾತ್ರಿ ಧರಣಿ ನಡೆಸಿದರು. ಕಾಂಗ್ರೆಸ್, ತೃಣಮೂಲ ಕಾಂಗ್ರೆಸ್, ಡಿಎಂಕೆ ಸೇರಿದಂತೆ ಹಲವು ಪಕ್ಷಗಳ ನಾಯಕರು ಪಾಲ್ಗೊಂಡಿದ್ದರು.

ಈ ಮಸೂದೆಯನ್ನು ವಿರೋಧಿಸಿ ದೇಶದಾದ್ಯಂತ ಬೀದಿಗಿಳಿದು ಹೋರಾಡುವುದಾಗಿ ಪ್ರತಿಪಕ್ಷ ನಾಯಕರು ಆಕ್ರೋಶ ವ್ಯಕ್ತಪಡಿಸಿದರು.

‘ಕೇಂದ್ರ ಸರ್ಕಾರದ ಈ ಕ್ರಮವನ್ನು ವಿರೋಧಿಸಿ ಅಹೋರಾತ್ರಿ ಧರಣಿ ನಡೆಸಿದ್ದೇವೆ’ ಎಂದು ಟಿಎಂಸಿ ಸಂಸದೆ ಸಾಗರಿಕಾ ಘೋಷ್ ಪ್ರತಿಕ್ರಿಯಿಸಿದರು.

ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ರಣದೀಪ್ ಸಿಂಗ್ ಸುರ್ಜೇವಾಲಾ ಮಾತನಾಡಿ, ‘ಈ ಮಸೂದೆ ಅಂಗೀಕಾರವು ದೇಶದ ಕಾರ್ಮಿಕರಿಗೆ ಅತ್ಯಂತ ದುಃಖ ತರಿಸಿದೆ. ನರೇಗಾ ಅನ್ನು ರದ್ದುಗೊಳಿಸುವ ಮೂಲಕ ಬಿಜೆಪಿಯು ದೇಶದ 12 ಕೋಟಿ ಜನರ ಜೀವನೋಪಾಯದ ಮೇಲೆ ದಾಳಿ ಮಾಡಿದೆ’ ಎಂದು ಕಿಡಿಕಾರಿದರು.

### ‘ಸಂಕ್ಷಿಪ್ತಾಕ್ಷರ ತೇಲಿಬಿಡುವ ವ್ಯಾಧಿ’

ಪ್ರಧಾನಿ ನರೇಂದ್ರ ಮೋದಿ ಅವರು ಸಂಕ್ಷಿಪ್ತಾಕ್ಷರಗಳನ್ನು ತೇಲಿಬಿಡುವ ವ್ಯಾಧಿಯಿಂದ ಬಳಲುತ್ತಿದ್ದಾರೆ ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ (ಸಂವಹನ) ಜೈರಾಮ್ ರಮೇಶ್ ಅವರು ಆರೋಪಿಸಿದ್ದಾರೆ.

ನರೇಗಾಕ್ಕೆ ಪರ್ಯಾಯವಾಗಿ ಕೇಂದ್ರ ಸರ್ಕಾರ ತಂದ ‘ವಿಬಿ–ಜಿ ರಾಮ್ ಜಿ’ ಮಸೂದೆ ಸಂಸತ್ತಿನ ಉಭಯ ಸದನಗಳಲ್ಲಿ ಅಂಗೀಕಾರ ಪಡೆದ ಮರು ದಿನವಾದ ಶುಕ್ರವಾರ ಅವರು ‘ಎಕ್ಸ್’ನಲ್ಲಿ ಪೋಸ್ಟ್ ಮಾಡಿದ್ದಾರೆ.

‘ಪ್ರಧಾನಿ ಮೋದಿ ಅವರ ಬಳಿ A.C.R.O.N.Y.M ಸಚಿವಾಲಯ ಅಂದರೆ, ಹಳೆಯ ಯೋಜನೆಗಳ ಮರುನಾಮಕರಣ ಮಾಡುವ ಆಡಳಿತದ ಆಯೋಗ ಇದೆ. ಆ ಆಯೋಗವು ಹಳೆ ಯೋಜನೆ, ಕಾರ್ಯಕ್ರಮಗಳ ಹೆಸರನ್ನು ಬದಲಾವಣೆ ಮಾಡುವ ಕಾರ್ಯವನ್ನು ನಿರ್ವಹಿಸುತ್ತಿದೆ’ ಎಂದು ವ್ಯಂಗ್ಯವಾಡಿದ್ದಾರೆ.

# ಪ್ರಜಾಪ್ರಭುತ್ವ: ನಿರಂತರ ಹೊಣೆಗಾರಿಕೆ

## ಜರ್ಮನ್ ತಜ್ಞರೊಂದಿಗೆ ರಾಹುಲ್ ಗಾಂಧಿ ಮಾತುಕತೆ

ನವದೆಹಲಿ (ಪಿಟಿಐ): ಜರ್ಮನಿಯ ಪ್ರವಾಸದಲ್ಲಿರುವ ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರು ಶುಕ್ರವಾರ ಅಲ್ಲಿನ ಚಿಂತಕರು, ತಜ್ಞರೊಂದಿಗೆ ಸಂವಾದ ನಡೆಸಿದರು. ವೇಗವಾಗಿ ಬದಲಾಗುತ್ತಿರುವ ಜಾಗತಿಕ ಸನ್ನಿವೇಶದಲ್ಲಿ ಭಾರತದ ಪಥದ ಬಗ್ಗೆ ಮಾತನಾಡಿದರು.

ಬರ್ಲಿನ್‌ನ ಹರ್ಟೀ ಶಾಲೆಯಲ್ಲಿ ವಿದ್ಯಾರ್ಥಿಗಳು, ವಿದ್ವಾಂಸರು ಮತ್ತು ಶಿಕ್ಷಣ ತಜ್ಞರನ್ನು ಉದ್ದೇಶಿಸಿ ಮಾತನಾಡಿದ ರಾಹುಲ್ ಗಾಂಧಿ, ‘ಪ್ರಜಾಪ್ರಭುತ್ವವು ಕೇವಲ ಸರ್ಕಾರಿ ವ್ಯವಸ್ಥೆಯಲ್ಲ, ಅದು ತೊಡಗಿಸಿಕೊಳ್ಳುವಿಕೆ, ಜವಾಬ್ದಾರಿ ಮತ್ತು ಹೊಣೆಗಾರಿಕೆಯ ನಿರಂತರ ಪ್ರಕ್ರಿಯೆಯಾಗಿದೆ’ ಎಂದು ಹೇಳಿದರು.

ಸದ್ಯದ ಜಾಗತಿಕ ಸನ್ನಿವೇಶದಲ್ಲಿ ನಾಯಕತ್ವ ಮತ್ತು ಪ್ರಜಾಪ್ರಭುತ್ವದ ಪ್ರಾಮುಖ್ಯದ ಬಗ್ಗೆ ತಮ್ಮ ಅನಿಸಿಕೆಗಳನ್ನು ವ್ಯಕ್ತಪಡಿಸಿದರು. ಸಮಗ್ರ ಮತ್ತು ಸಮಾನ ಶಿಕ್ಷಣದ ಮಹತ್ವ ಹಾಗೂ ಆಳವಾಗಿ ಬೇರೂರಿರುವ ಅಸಮಾನತೆಗಳನ್ನು ಪರಿಹರಿಸಲು ಜಾಗತಿಕ ಸಹಕಾರದ ಅಗತ್ಯವನ್ನು ಒತ್ತಿ ಹೇಳಿದರು.

ಬರ್ಲಿನ್‌ನಲ್ಲಿ ಸಾಗರೋತ್ತರ ಭಾರತೀಯ ಕಾಂಗ್ರೆಸ್ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಭಾರತೀಯ ಸಮುದಾಯವನ್ನು ಉದ್ದೇಶಿಸಿ ಮಾತನಾಡಿದ ಅವರು, ‘ಪಕ್ಷವು ಸತ್ಯದ ಪರವಾಗಿ ನಿಂತಿದೆ. ಭಾರತದ ಸತ್ಯವನ್ನು ಸಮರ್ಥಿಸಿಕೊಂಡಿದೆ’ ಎಂದರು.

‘ಸಂಸ್ಕೃತಿಗಳ ಬೆಸುಗೆ’ ಕಾರ್ಯಕ್ರಮದಲ್ಲಿ ಭಾರತೀಯರನ್ನು ಉದ್ದೇಶಿಸಿ ಮಾತನಾಡಿದ ಅವರು, ಸತ್ಯ ಮತ್ತು ಪ್ರಜಾಪ್ರಭುತ್ವ ಮೌಲ್ಯಗಳಿಗೆ ತಮ್ಮ ಪಕ್ಷಕ್ಕಿರುವ ಬದ್ಧತೆಯನ್ನು ಪುನರುಚ್ಚರಿಸಿದರು.

ರಾಹುಲ್ ಅವರು ಜರ್ಮನಿಯ ಮಾಜಿ ಚಾನ್ಸೆಲರ್ ಒಲಾಫ್ ಶೋಲ್ಜ್ ಅವರೊಂದಿಗೆ ಔತಣಕೂಟದ ಬಳಿಕ ಚರ್ಚೆ ನಡೆಸಿದರು.

ಇಬ್ಬರು ನಾಯಕರು ಜಾಗತಿಕ ವ್ಯವಹಾರಗಳು, ವ್ಯಾಪಾರ ಮತ್ತು ಬದಲಾಗುತ್ತಿರುವ ಜಗತ್ತಿನಲ್ಲಿ ಭಾರತ– ಜರ್ಮನಿ ಸಂಬಂಧಗಳನ್ನು ಬಲಪಡಿಸುವ ಬಗ್ಗೆ ಸುದೀರ್ಘವಾಗಿ ಮಾತನಾಡಿದರು ಎಂದು ಸಾಗರೋತ್ತರ ಭಾರತೀಯ ಕಾಂಗ್ರೆಸ್ ‘ಎಕ್ಸ್’ನಲ್ಲಿ ತಿಳಿಸಿದೆ.

ಜರ್ಮನಿಯ ಪರಿಸರ ಮತ್ತು ಹವಾಮಾನ ಸಂರಕ್ಷಣಾ ಸಚಿವ ಕರ್ಸ್ಟನ್ ಶ್ನೇಯ್ಡರ್ ಅವರೊಂದಿಗೂ ಚರ್ಚಿಸಿದರು. ಹವಾಮಾನ ಬದಲಾವಣೆ ಸವಾಲುಗಳನ್ನು ಮತ್ತು ಭವಿಷ್ಯಕ್ಕೆ ಸುಸ್ಥಿರ, ಜನ–ಕೇಂದ್ರಿತ ಪರಿಹಾರಗಳು ಎಷ್ಟು ನಿರ್ಣಾಯಕವಾಗಿವೆ ಎಂಬುದರ ಕುರಿತು ಚರ್ಚಿಸಿದರು ಎಂದು ಹೇಳಿದೆ.



ಜರ್ಮನಿಯ ಬರ್ಲಿನ್‌ನ ಹರ್ಟೀ ಶಾಲೆಗೆ ಭೇಟಿ ನೀಡಿದ್ದ ರಾಹುಲ್ ಗಾಂಧಿ ವಿದ್ಯಾರ್ಥಿಗಳೊಂದಿಗೆ ಚರ್ಚಿಸಿದರು — ಪಿಟಿಐ ಚಿತ್ರ

**ಮುಖ್ಯಾಂಶಗಳು**

- ಬರ್ಲಿನ್‌ನ ಹರ್ಟೀ ಶಾಲೆಗೆ ರಾಹುಲ್ ಭೇಟಿ
- ಸಮಗ್ರ, ಸಮಾನ ಶಿಕ್ಷಣದ ಮಹತ್ವವನ್ನು ಒತ್ತಿ ಹೇಳಿದ ರಾಹುಲ್
- ಅಸಮಾನತೆ ಪರಿಹರಿಸಲು ಜಾಗತಿಕ ಸಹಕಾರ ಅಗತ್ಯ

# ‘ಟ್ಯಾಗೋರ್, ಗಾಂಧಿಗೆ ಅವಮಾನ’



ನವದೆಹಲಿ: ‘ರವೀಂದ್ರನಾಥ ಟ್ಯಾಗೋರ್ ಅವರನ್ನು ಅವಮಾನಿಸುವ ಮೂಲಕ ಅಧಿವೇಶನ ಆರಂಭಿಸಿದ ಸರ್ಕಾರವು, ಮಹಾತ್ಮ ಗಾಂಧಿ ಅವರನ್ನು ಅಪಮಾನಗೊಳಿಸುವ ಮೂಲಕ ಅಧಿವೇಶನ ಅಂತ್ಯಗೊಳಿಸಿತು’ ಎಂದು ಕಾಂಗ್ರೆಸ್ ಆರೋಪ ಮಾಡಿದೆ.

ರವೀಂದ್ರನಾಥ ಟ್ಯಾಗೋರ್, ಜವಾಹರಲಾಲ್ ನೆಹರೂ ಅವರನ್ನು ಅವಮಾನಿಸುವ ಮತ್ತು ಇತಿಹಾಸವನ್ನು ತಿರುಚುವ ಉದ್ದೇಶದಿಂದ ‘ವಂದೇ ಮಾತರಂ’ ಕುರಿತು ಚರ್ಚೆ ಆರಂಭಿಸಿದ ಸರ್ಕಾರ, ಅಧಿವೇಶನದ ಕೊನೆಯಲ್ಲಿ ‘ವಿಬಿ– ಜಿ ರಾಮ್ ಜಿ’ ಮಸೂದೆ ಮೂಲಕ ಮಹಾತ್ಮ ಗಾಂಧಿ ಅವರಿಗೆ ಅಪಮಾನ ಮಾಡಿತು ಎಂದು ರಾಜ್ಯಸಭೆಯಲ್ಲಿ ಕಾಂಗ್ರೆಸ್‌ನ ವಿಪ್ ಆಗಿರುವ ಜೈರಾಮ್ ರಮೇಶ್ ಸುದ್ದಿಗೋಷ್ಠಿಯಲ್ಲಿ ದೂರಿದರು.

‘ವಿಬಿ–ಜಿ ರಾಮ್ ಜಿ’ ಮಸೂದೆಯನ್ನು ಸ್ಥಾಯಿ ಸಮಿತಿಯ ಪರಿಶೀಲನೆಗೆ ಒಪ್ಪಿಸಬೇಕು ಎಂಬ ವಿಪಕ್ಷಗಳ ಬೇಡಿಕೆಯನ್ನು ಸರ್ಕಾರ ನಿರ್ಲಕ್ಷಿಸಿತು. ದೆಹಲಿ ವಾಯುಮಾಲಿನ್ಯ ಕುರಿತು ಚರ್ಚೆ ನಡೆಸಲು ಕಾಂಗ್ರೆಸ್ ಸಿದ್ಧವಾಗಿತ್ತು. ಆದರೆ ಸರ್ಕಾರ ಪಲಾಯನ ಮಾಡಿತು ಎಂದರು.

### ಚಳಿಗಾಲದ ಅಧಿವೇಶನ ಅಂತ್ಯ

ಸಂಸತ್ತಿನ ಚಳಿಗಾಲದ ಅಧಿವೇಶನವು ಶುಕ್ರವಾರ ಅಂತ್ಯಗೊಂಡಿದ್ದು, ಅನಿರ್ದಿಷ್ಟಾವಧಿಗೆ ಮುಂದೂಡಲಾಯಿತು. ‘ವಿಬಿ– ಜಿ ರಾಮ್ ಜಿ’, ಅಣುಶಕ್ತಿ ಕ್ಷೇತ್ರದಲ್ಲಿ ಖಾಸಗಿ ಬಂಡವಾಳ ಹೂಡಿಕೆಗೆ ಅವಕಾಶ ಕಲ್ಪಿಸುವ ಮಸೂದೆ ಸೇರಿದಂತೆ ಪ್ರಮುಖ ಮಸೂದೆಗಳು ಅಂಗೀಕಾರ ಪಡೆದವು.

‘ವಂದೇ ಮಾತರಂ’ನ 150ನೇ ವರ್ಷಾಚರಣೆ ಸಂದರ್ಭದಲ್ಲಿ ಉಭಯ ಸದನಗಳಲ್ಲಿ ತೀವ್ರ ಚರ್ಚೆ ನಡೆಯಿತು. ಚುನಾವಣಾ ಸುಧಾರಣೆ ಕುರಿತು ವಿರೋಧ ಪಕ್ಷಗಳು ಮತ್ತು ಆಡಳಿತ ಪಕ್ಷದ ನಡುವೆ ವಾಕ್ಸಮರ ನಡೆಯಿತು.

ಉನ್ನತ ಶಿಕ್ಷಣವನ್ನು ಒಂದೇ ಸಂಸ್ಥೆಯ ವ್ಯಾಪ್ತಿಯಡಿ ತರುವ ಉದ್ದೇಶ ಹೊಂದಿರುವ ‘ವಿಕಸಿತ ಭಾರತ ಶಿಕ್ಷಣ ಅಧಿಷ್ಠಾನ ಮಸೂದೆ–2025’ ಅನ್ನು ಜಂಟಿ ಸಂಸದೀಯ ಸಮಿತಿಗೆ ಒಪ್ಪಿಸುವ ನಿರ್ಣಯವನ್ನೂ ಅಂಗೀಕರಿಸಲಾಯಿತು.

# ತೆಲಂಗಾಣ: 41 ನಕ್ಸಲರು ಶರಣು

ಹೈದರಾಬಾದ್ (ಪಿಟಿಐ): ಸಿಪಿಎಂನ ಆರು ಮಂದಿ ಹಿರಿಯ ಪದಾಧಿಕಾರಿಗಳು ಸೇರಿದಂತೆ 41 ಮಂದಿ ಕಾರ್ಯಕರ್ತರು ತೆಲಂಗಾಣ ಪೊಲೀಸರ ಎದುರು ಶರಣಾಗಿದ್ದಾರೆ. ಈ ಬೆಳವಣಿಗೆಯು ನಿಷೇಧಿತ ಸಿಪಿಎಂ ಸಂಘಟನೆಗೆ ತೀವ್ರ ಹಿನ್ನಡೆಯನ್ನು ತಂದಿದೆ.

‘ಸಿಪಿಎಂ ಕಾರ್ಯಕರ್ತರು ಶಸ್ತ್ರತ್ಯಾಗ ಮಾಡಿ ಮುಖ್ಯವಾಹಿನಿಗೆ ಸೇರ್ಪಡೆಯಾಗಿದ್ದಾರೆ’ ಎಂದು ರಾಜ್ಯ ಪೊಲೀಸ್ ಮಹಾ ನಿರ್ದೇಶಕ ಬಿ.ಶಿವಧರ್ ರೆಡ್ಡಿ ಶುಕ್ರವಾರ ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದ್ದಾರೆ.

‘ಶರಣಾದ ನಕ್ಸಲರು 24 ಬಂದೂಕುಗಳು ಮತ್ತು 733 ಜೀವಂತ ಗುಂಡುಗಳನ್ನು ಪೊಲೀಸರಿಗೆ ಹಸ್ತಾಂತರಿಸಿದ್ದಾರೆ’ ಎಂದಿದ್ದಾರೆ.


‘ಸಿಪಿಎಂ ಸಂಘಟನೆಯು ತನ್ನ ಸದಸ್ಯರನ್ನು ಎಲ್ಲೆಂದರಲ್ಲಿ ಮನಬಂದಂತೆ ನಿಯೋಜಿಸುತ್ತಿತ್ತು. ಸದಸ್ಯರ ಅಭಿಪ್ರಾಯವನ್ನೇ ಕೇಳುತ್ತಿರಲಿಲ್ಲ. ಇದರಿಂದ ಬೇಸತ್ತ ಸದಸ್ಯರು ಶರಣಾಗತಿ ನಿರ್ಧಾರ ಕೈಗೊಂಡಿದ್ದಾರೆ’ ಎಂದು ತಿಳಿಸಿದ್ದಾರೆ.

### ಛತ್ತೀಸಗಢ: ನಕ್ಸಲ್ ಹತ್ಯೆ

ಬಿಜಾಪುರ (ಪಿಟಿಐ): ಛತ್ತೀಸಗಢದ ಬಿಜಾಪುರ ಜಿಲ್ಲೆಯಲ್ಲಿ ಭದ್ರತಾ ಸಿಬ್ಬಂದಿ ಮತ್ತು ನಕ್ಸಲರ ನಡುವೆ ನಡೆದ ಗುಂಡಿನ ಚಕಮಕಿಯಲ್ಲಿ ಒಬ್ಬ ನಕ್ಸಲ್ ಮೃತಪಟ್ಟಿದ್ದಾನೆ.

ಮೃತನನ್ನು ಘಗ್ಗು ಮಾಡ್ವಿ (35) ಎಂದು ಗುರುತಿಸಲಾಗಿದ್ದು, ಈತನ ಸುಳಿವು ನೀಡಿದವರಿಗೆ ₹5 ಲಕ್ಷ ಬಹುಮಾನವನ್ನು ಘೋಷಿಸಲಾಗಿತ್ತು. ಘಟನಾ ಸ್ಥಳದಿಂದ ಕೆಲವು ಸ್ಫೋಟಕ, ಶಸ್ತ್ರಾಸ್ತ್ರಗಳನ್ನು ವಶಪಡಿಸಿಕೊಳ್ಳಲಾಗಿದೆ.

### ಟ್ಯಾಗೋರ್ ಕಲಾಕೃತಿ ₹10.73 ಕೋಟಿಗೆ ಮಾರಾಟ



ನವದೆಹಲಿ (ಪಿಟಿಐ): ರವೀಂದ್ರನಾಥ ಟ್ಯಾಗೋರ್ ಅವರ ಕಲಾಕೃತಿ ‘ಫ್ರಮ್ ಅಕ್ರಾಸ್ ದ ಡಾರ್ಕ್’ ಹರಾಜೊಂದರಲ್ಲಿ ₹10.73 ಕೋಟಿಗೆ ಮಾರಾಟವಾಗಿದೆ.

ಡಿಸೆಂಬರ್ 14ರಿಂದ 17ರವರೆಗೆ ‘ಅಸ್ತಗುರು’ ಆಯೋಜಿಸಿದ್ದ ಹರಾಜಿನಲ್ಲಿ ₹163.65 ಕೋಟಿ ಮೌಲ್ಯದ 87 ವಸ್ತುಗಳು ಮಾರಾಟವಾಗಿವೆ. ತಯ್ಯಬ್ ಮೆಹ್ತಾ ಅವರ, ‘ಅನ್‌ಟೈಟಲ್ಡ್ (ಗೆಸ್ಚರ್)’ ಕಲಾಕೃತಿ ₹53.54 ಕೋಟಿಗೆ ಮಾರಾಟವಾಗಿದೆ.

‘ಟ್ಯಾಗೋರ್ ಅವರು 1937ರಲ್ಲಿ ರಚಿಸಿದ್ದ ಕಲಾಕೃತಿಯು ಕತ್ತಲೆ–ಬೆಳಕು ಮತ್ತು ನೋವು ನಲಿವುಗಳ ಅದ್ಭುತ ಸಮ್ಮಿಲನವಾಗಿದೆ’ ಎಂದು ಹರಾಜು ಸಮಿತಿ ತಿಳಿಸಿದೆ.

# ಕ್ರಿಕೆಟಿಗ ಯುವಿ, ಉತ್ತಪ್ಪ ಆಸ್ತಿ ಜಪ್ತಿ

ನವದೆಹಲಿ (ಪಿಟಿಐ): ಬೆಟ್ಟಿಂಗ್ ಆ್ಯಪ್‌ಗೆ ಸಂಬಂಧಿಸಿದ ₹1000 ಕೋಟಿ ಮೌಲ್ಯದ ಹಣ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ಮಾಜಿ ಕ್ರಿಕೆಟಿಗರಾದ ಯುವರಾಜ್ ಸಿಂಗ್, ರಾಬಿನ್ ಉತ್ತಪ್ಪ ಹಾಗೂ ಟಿಎಂಸಿ ಮಾಜಿ ಸಂಸದೆ ಮಿಮಿ ಚಕ್ರವರ್ತಿ ಮತ್ತು ನಟ ಸೋನು ಸೂದ್ ಅವರಿಗೆ ಸೇರಿದ ಆಸ್ತಿಯನ್ನು ಜಾರಿ ನಿರ್ದೇಶನಾಲಯ (ಇ.ಡಿ) ಮುಟ್ಟುಗೋಲು ಹಾಕಿಕೊಂಡಿದೆ.

# ಅರಣ್ಯ ಗುತ್ತಿಗೆ ಕಾನೂನುಬಾಹಿರ

ಒಂದನೇ ಪುಟದಿಂದ...

ಹೈಕೋರ್ಟ್‌ನ 2009ರ ತೀರ್ಪನ್ನು ಪ್ರಶ್ನಿಸಿ ಕರ್ನಾಟಕ ಅರಣ್ಯ ಇಲಾಖೆ ಸಲ್ಲಿಸಿದ ಸಿವಿಲ್ ಮೇಲ್ಮನವಿ ಅರ್ಜಿಯನ್ನು ನ್ಯಾಯಪೀಠ ಪುರಸ್ಕರಿಸಿದೆ.


ಈ ಜಾಗವು ಅರಣ್ಯ ಇಲಾಖೆಯ ಸ್ವಾಧೀನದಲ್ಲಿದ್ದು, ಯಾವುದೇ ಸಾಗುವಳಿ ಇಲ್ಲ ಎಂದು ಅರಣ್ಯ ಇಲಾಖೆಯು ಸುಪ್ರೀಂ ಕೋರ್ಟ್‌ನಲ್ಲಿ ವಾದ ಮಂಡಿಸಿತು. ಕೇಂದ್ರ ಸರ್ಕಾರದ ಪೂರ್ವಾನುಮತಿ ಇಲ್ಲದೆಯೇ ಅರಣ್ಯ ಭೂಮಿಯನ್ನು ಅರಣ್ಯೇತರ ಉದ್ದೇಶಕ್ಕೆ ಬಳಸುವಂತಿಲ್ಲ ಎಂದು ಸುಪ್ರೀಂ ಕೋರ್ಟ್ 1996 ಹಾಗೂ 2000ರಲ್ಲಿ ತೀರ್ಪು ನೀಡಿದೆ ಎಂದೂ ವಾದಿಸಿತು.

ಈ ವಾದಗಳನ್ನು ಅಂಗೀಕರಿಸಿದ ನ್ಯಾಯಪೀಠವು, ‘ದೊಡ್ಡ ಪ್ರಮಾಣದಲ್ಲಿ ಅರಣ್ಯನಾಶಕ್ಕೆ ಕಾರಣ ಆಗಿರುವುದರಿಂದ ಅರಣ್ಯ ಭೂಮಿಯನ್ನು ಗುತ್ತಿಗೆ ನೀಡುವುದೇ ಅನಪೇಕ್ಷಿತ. ಗುತ್ತಿಗೆ ನೀಡುವ ಹಂತದಲ್ಲಿ ನಡೆದ ಅಕ್ರಮವನ್ನು ಶಾಶ್ವತಗೊಳಿಸಲು ಅನುಮತಿಯನ್ನು ಮುಂದುವರಿಸುವುದು ಸರಿಯಲ್ಲ ಎಂದಿದೆ.

ಅರಣ್ಯ ಇಲಾಖೆಯು 2007ರಲ್ಲೇ ಭೂಮಿಯನ್ನು ಸ್ವಾಧೀನಕ್ಕೆ ಪಡೆದಿರುವುದರಿಂದ, ಸಂಘಕ್ಕೆ ಗುತ್ತಿಗೆ ಮುಂದುವರಿಸಲು ಅವಕಾಶ ನೀಡುವ ಹೈಕೋರ್ಟ್ ನಿರ್ದೇಶನವು ಕಾನೂನಿನಲ್ಲಿ ಸಮರ್ಥನೀಯವಲ್ಲ ಎಂದು ನ್ಯಾಯಪೀಠ ಸ್ಪಷ್ಟಪಡಿಸಿದೆ.

ಪ್ರಜಾವಾಣಿ ಶನಿವಾರ ● ಡಿಸೆಂಬರ್ 20, 2025
**ಅಭಿಮತದ ವಿಳಾಸ:** ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75 ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-01 **editpage@prajavani.co.in**
ಅಭಿಮತ

## ಸುಭಾಷಿತ



ಕಟ್ಟುಪಾಡಿಲ್ಲದವರು ಬದುಕಿನಲ್ಲಿ ಕೆಟ್ಟ ಪಾಡುಗಳನ್ನು ಅನುಭವಿಸಬೇಕಾಗುತ್ತದೆ.

**–ಕೆ.ಎಸ್. ನಿಸಾರ್ ಅಹಮದ್**

### ಸಂಪಾದಕೀಯ

# ಅಣುಶಕ್ತಿ: ಖಾಸಗಿ ಸಹಭಾಗಿತ್ವ ಕೇಂದ್ರ ಸರ್ಕಾರದ ಹುಲಿಸವಾರಿ

**ಅಣುಶಕ್ತಿ** ಕ್ಷೇತ್ರದಲ್ಲಿ ಖಾಸಗಿ ಬಂಡವಾಳ ಹೂಡಿಕೆಗೆ ಅವಕಾಶ ಕಲ್ಪಿಸುವ ಮಸೂದೆಗೆ ಸಂಸತ್ತು ಅಂಗೀಕಾರ ನೀಡಿದ್ದು, ಈ ಮಸೂದೆ ದೇಶದ ಒಟ್ಟಾರೆ ಅಣುಶಕ್ತಿ ನೀತಿಗೆ ಸಂಬಂಧಿಸಿದಂತೆ ಹೊಸ ಸಾಧ್ಯತೆ ಮತ್ತು ಸವಾಲುಗಳಿಗೆ ಅವಕಾಶ ಕಲ್ಪಿಸಲಿದೆ. 'ಭಾರತದ ಪ್ರಗತಿಗಾಗಿ ಅಣುಶಕ್ತಿ ಸುಸ್ಥಿರ ಉತ್ಪಾದನೆ' (ಎಸ್‌ಎಚ್‌ಎಎನ್‌ಟಿಐ- ಶಾಂತಿ ಮಸೂದೆ) ಹೆಸರಿನ ಮಸೂದೆಯು, ಅಣುಶಕ್ತಿ ಕ್ಷೇತ್ರದಲ್ಲಿ ಖಾಸಗಿ ಸಹಭಾಗಿತ್ವದ ಜೊತೆಗೆ ವಿದೇಶಿ ಹೂಡಿಕೆಗೂ ಅವಕಾಶ ಕಲ್ಪಿಸಲಿದೆ. 1962ರ 'ಅಣುಶಕ್ತಿ ಕಾಯ್ದೆ' ಹಾಗೂ ಪರಮಾಣು ಹಾನಿಗೆ ಸಂಬಂಧಿಸಿದ 2010ರ ನಾಗರಿಕ ಹೊಣೆಗಾರಿಕೆ ಕಾಯ್ದೆಯನ್ನು ಬದಲಾವಣೆ ಮಾಡಿ ಈ ಮಸೂದೆ ಮಂಡಿಸಲಾಗಿದೆ. ಈ ಎರಡೂ ಕಾಯ್ದೆಗಳು ಪರಮಾಣು ನೀತಿಗೆ ಸಂಬಂಧಿಸಿದಂತೆ ಕಠಿಣ ನಿಬಂಧನೆಗಳನ್ನು ಹೊಂದಿದ್ದವು. ದೇಶದ ಒಟ್ಟು ವಿದ್ಯುತ್ ಉತ್ಪಾದನೆಯಲ್ಲಿ ಅಣು ವಿದ್ಯುತ್ ಉತ್ಪಾದನೆಯ ಪಾಲು ಶೇ 3ರಷ್ಟಿದೆ. 2047ರ ವೇಳೆಗೆ 100 ಗಿಗಾವಾಟ್‌ನಷ್ಟು ಅಣು ವಿದ್ಯುತ್ ಉತ್ಪಾದಿಸುವ ಗುರಿ ಹೊಂದಲಾಗಿದೆ. ಈ ಗುರಿ ಸಾಧನೆಗೆ ಅಗತ್ಯವಾಗಿರುವ ಉದಾರ ಆಡಳಿತ ನೀತಿಗೆ ಹೊಸ ಮಸೂದೆಯು ಅವಕಾಶ ಕಲ್ಪಿಸಲಿದೆ ಎಂದು ಹೇಳಲಾಗಿದೆ. ತೀವ್ರಗೊಳ್ಳುತ್ತಿರುವ ಹವಾಮಾನ ಬದಲಾವಣೆಯ ಹಿನ್ನೆಲೆಯಲ್ಲಿ, ಕಲ್ಲಿದ್ದಲು ಆಧರಿತ ವಿದ್ಯುತ್ ಉತ್ಪಾದನೆಯನ್ನು ನಿಯಂತ್ರಣದಲ್ಲಿ ಇರಿಸುವುದು ಹಾಗೂ ನವೀಕರಿಸಬಹುದಾದ ಇಂಧನ ಉತ್ಪಾದನೆಯ ಮಾರ್ಗಗಳನ್ನು ಬಲಪಡಿಸುವುದು ಅನಿವಾರ್ಯ. ಆದರೆ ಜಲಶಕ್ತಿ, ಸೌರಶಕ್ತಿ ಹಾಗೂ ಪವನಶಕ್ತಿ ಬಳಸಿಕೊಂಡು ವಿದ್ಯುತ್ ಉತ್ಪಾದಿಸುವುದಕ್ಕೆ ಸಾಕಷ್ಟು ಮಿತಿಗಳಿವೆ. ಹಾಗಾಗಿಯೇ, ಅಣು ವಿದ್ಯುತ್ ಉತ್ಪಾದನೆ ಹೆಚ್ಚಿಸಬೇಕಾದ ಅನಿವಾರ್ಯತೆ ಉಂಟಾಗಿದೆ.




ಅಣುಶಕ್ತಿ ನೀತಿಗೆ ಸಂಬಂಧಿಸಿದಂತೆ ಉದಾರೀಕರಣ ಅಗತ್ಯವಾಗಿದ್ದರೂ, ಅದು ಅಪಾಯಗಳಿಗೆ ಆಹ್ವಾನ ನೀಡುವಂತೆ ಇರಬಾರದು ಹಾಗೂ ಹೊಣೆಗಾರಿಕೆಯನ್ನು ಹಗುರಗೊಳಿಸಬಾರದು.

ಅಣು ವಿದ್ಯುತ್ ಉತ್ಪಾದನೆಯಲ್ಲಿ ಸರ್ಕಾರಿ ಸಂಸ್ಥೆಗಳು ಮಾತ್ರವಲ್ಲದೆ, ದೇಶೀಯ ಹಾಗೂ ವಿದೇಶಿ ಖಾಸಗಿ ಸಂಸ್ಥೆಗಳ ಭಾಗವಹಿಸುವಿಕೆಯನ್ನು ಉತ್ತೇಜಿಸುವುದು ಈ ಮಸೂದೆಯ ಉದ್ದೇಶವಾಗಿದೆ ಎಂದು ಕೇಂದ್ರ ಸರ್ಕಾರ ಹೇಳಿದೆ. ಈ ಸಂಸ್ಥೆಗಳಿಗೆ ಪರವಾನಗಿ ನೀಡುವ ಅವಕಾಶವನ್ನು ಹೊಸ ಮಸೂದೆ ಕೇಂದ್ರಕ್ಕೆ ಒದಗಿಸಲಿದೆ. ಇಲ್ಲಿಯವರೆಗೆ, ಅಣು ವಿದ್ಯುತ್ ಕ್ಷೇತ್ರದಲ್ಲಿ ಕಾರ್ಯ ನಿರ್ವಹಿಸಲು ಭಾರತೀಯ ಅಣು ವಿದ್ಯುತ್ ನಿಗಮ (ಎನ್‌ಪಿಸಿಐಎಲ್) ಮಾತ್ರ ಅಧಿಕಾರ ಹೊಂದಿತ್ತು. ಪರಮಾಣು ಸ್ಥಾವರದ ನಿರ್ವಹಣೆ ಮತ್ತು ಪೂರೈಕೆ ನಿರ್ವಹಣೆಗೆ ಸಂಬಂಧಿಸಿದ ಕೆಲವು ಕ್ಷೇತ್ರಗಳಲ್ಲಿ ಖಾಸಗಿ ಭಾಗವಹಿಸುವಿಕೆ ಇದ್ದರೂ, ಮುಖ್ಯ ಹಾಗೂ ಬಹುಸೂಕ್ಷ್ಮ ಕ್ಷೇತ್ರಗಳ ನಿರ್ವಹಣೆ ಸರ್ಕಾರದ ಅಧೀನದಲ್ಲೇ ಇತ್ತು. ಈ ನಿರ್ಬಂಧಗಳನ್ನು ಮಸೂದೆಯು ತೆರವುಗೊಳಿಸಲಿದ್ದು, ಉತ್ಪಾದನಾ ಸಾಮರ್ಥ್ಯಕ್ಕೆ ಅನುಗುಣವಾಗಿ ಶ್ರೇಣೀಕೃತ ಹೊಣೆಗಾರಿಕೆ ವ್ಯವಸ್ಥೆಗೆ ಅವಕಾಶ ಕಲ್ಪಿಸಲಿದೆ. ಕಾನೂನು ಚೌಕಟ್ಟಿನ ಸರಳೀಕರಣ ಹಾಗೂ ವಹಿವಾಟು ವೆಚ್ಚಗಳ ಕಡಿತ ಸಾಧ್ಯವಾಗಲಿದ್ದು, ಆಡಳಿತಾತ್ಮಕ ಅನುಮೋದನೆಗಳಿಗೆ ಸಂಬಂಧಿಸಿದ ವಿಳಂಬವನ್ನೂ ಕಡಿಮೆ ಮಾಡುವ ಗುರಿಯನ್ನು ಮಸೂದೆ ಹೊಂದಿದೆ. ಪೇಟೆಂಟ್ ನಿಯಮಗಳಿಗೆ ತಿದ್ದುಪಡಿ ತರುವ ಮೂಲಕ ಸಂಶೋಧನೆಗಳನ್ನು ಉತ್ತೇಜಿಸುವ ಗುರಿಯನ್ನೂ ಹೊಂದಿದೆ.

ಅಣುಶಕ್ತಿ ಕ್ಷೇತ್ರದಲ್ಲಿ ಖಾಸಗಿಯವರಿಗೆ ಅವಕಾಶ ಕಲ್ಪಿಸುವ ಚಿಂತನೆ ವಿದ್ಯುತ್ ಉತ್ಪಾದನೆ ಹೆಚ್ಚಳಕ್ಕೆ ಪೂರಕವಾಗಿದ್ದರೂ, ಮಸೂದೆಯಲ್ಲಿನ ಕೆಲವು ಅಂಶಗಳು ಆತಂಕಕ್ಕೆ ಕಾರಣ ಆಗುವಂತಿವೆ. ಯುಪಿಎ ಸರ್ಕಾರದ ಮೈಲಿಗಲ್ಲುಗಳಲ್ಲಿ ಒಂದಾದ ಭಾರತ-ಅಮೆರಿಕ ಪರಮಾಣು ಒಪ್ಪಂದ ಮತ್ತು 2010ರ ಕಾಯ್ದೆಯೂ ಖಾಸಗಿ ಸಹಭಾಗಿತ್ವಕ್ಕೆ ಅವಕಾಶ ಕಲ್ಪಿಸಿತ್ತು. ಆದರೆ, ಅಮೆರಿಕದ ಪೂರೈಕೆದಾರರು ಭಾರತೀಯ ಕಾನೂನು ನಿರ್ಬಂಧಗಳ ಬಗ್ಗೆ, ವಿಶೇಷವಾಗಿ ಉತ್ತರದಾಯಿತ್ವದ ಕಾನೂನುಗಳ ಬಗ್ಗೆ ಎಚ್ಚರದಿಂದಿದ್ದರು. ಈ ಹೊಣೆಗಾರಿಕೆಗೆ ವಿಧಿಸಿದ್ದ ನಿಬಂಧನೆಗಳನ್ನು ಪ್ರಸ್ತಾವಿತ ಮಸೂದೆಯು ತೆಗೆದುಹಾಕಿದೆ. ಪರಮಾಣು ಸ್ಥಾವರಗಳಲ್ಲಿ ದುರಂತ ಸಂಭವಿಸಿದರೆ ಸ್ಥಾವರದ ನಿರ್ವಹಣೆ ಹೊತ್ತ ಸಂಸ್ಥೆಯು ಪಾವತಿಸಬೇಕಾದ ಗರಿಷ್ಠ ಹೊಣೆಗಾರಿಕೆಯ ಮೊತ್ತವು, ಆ ಸಂಸ್ಥೆ ಬಳಕೆ ಮಾಡುವ ಪರಮಾಣು ಸ್ಥಾವರದ ಸಾಮರ್ಥ್ಯದ ಮೇಲೆ ಅವಲಂಬಿತವಾಗಿರುತ್ತದೆ. ಈ ಹೊಣೆಗಾರಿಕೆ ಮೊತ್ತವನ್ನು ₹3 ಸಾವಿರ ಕೋಟಿಗೆ ಮಿತಿಗೊಳಿಸಿದೆ. ಜೊತೆಗೆ ಪರಿಹಾರ ನೀಡಬೇಕಾದ ಜವಾಬ್ದಾರಿಯನ್ನೂ ಮಿತಗೊಳಿಸಲಿದೆ. ಬಹು ಸಂಕೀರ್ಣವಾದ ಅಣುಶಕ್ತಿ ಕ್ಷೇತ್ರದಲ್ಲಿ ಬಂಡವಾಳ ಹೂಡಲು ಖಾಸಗಿಯವರಿಗೆ ಅವಕಾಶ ಕಲ್ಪಿಸುವ ಹಾಗೂ ಅವರಿಗೆ ಶಾಸನಬದ್ಧ ಸುರಕ್ಷತೆ ಒದಗಿಸುವ ನಿರ್ಧಾರ ಪ್ರತಿ ಪಕ್ಷಗಳ ಟೀಕೆಗೆ ಸಹಜವಾಗಿಯೇ ಒಳಗಾಗಿದೆ. ಪರಿಹಾರಕ್ಕೆ ಸಂಬಂಧಿಸಿದಂತೆ ನ್ಯಾಯಾಂಗದ ವ್ಯಾಪ್ತಿಯನ್ನು ಕಿರಿದುಗೊಳಿಸುವುದರ ಜೊತೆಗೆ, ಅಣುಶಕ್ತಿ ಕ್ಷೇತ್ರಕ್ಕೆ ಸಂಬಂಧಿಸಿದ ಸ್ವತಂತ್ರ ನಿಯಂತ್ರಕಗಳನ್ನು ಇಲ್ಲವಾಗಿಸಿರುವುದರ ಬಗ್ಗೆಯೂ ಟೀಕೆಗಳಿವೆ. ಅಣು ವಿದ್ಯುತ್ ಸ್ವಾವಲಂಬನೆ ಹೆಸರಿನಲ್ಲಿ ಅಸುರಕ್ಷತೆ, ಅಪಾಯ ಕಲ್ಪಿಸುವ ಸಾಧ್ಯತೆ ಇರುವುದರಿಂದಲೇ, 'ಎಸ್‌ಎಚ್‌ಎಎನ್‌ಟಿಐ-ಶಾಂತಿ ಮಸೂದೆ' ಸರ್ಕಾರದ ಪಾಲಿಗೆ ಮುಂದಿನ ದಿನಗಳಲ್ಲಿ ಹುಲಿಸವಾರಿಯಾಗಿ ಪರಿಣಮಿಸಿದರೆ ಅಚ್ಚರಿಯೇನಿಲ್ಲ.

### ಜಾಲಗಾಣ

## ಕನ್ನಡಿಗರ ಹಕ್ಕಿಗೆ ಧಕ್ಕೆ



ಸರ್ಕಾರ 'ದ್ವೇಷ ಭಾಷಣ ಮತ್ತು ದ್ವೇಷ ಅಪರಾಧಗಳ ವಿಧೇಯಕ-2025'ರಲ್ಲಿ ಭಾಷೆ ಸೇರಿಸುವ ಮೂಲಕ ಕನ್ನಡಿಗರ ಪ್ರತಿರೋಧದ ಹಕ್ಕನ್ನು ಕಸಿದುಕೊಳ್ಳಲು ಹೊರಟಿದೆ. ಕನ್ನಡಿಗರು ಕನ್ನಡದ ಬಗ್ಗೆ ಇನ್ನು ಮುಂದೆ ಮಾತಾಡುವ ಮುಂಚೆ ಯೋಚನೆ ಮಾಡಬೇಕಾದ ಪರಿಸ್ಥಿತಿ ಬರುವುದು ಖಂಡಿತ.

**ಪ್ರತಾಪ್ ಕಣಗಾಲ್,** 'ಎಕ್ಸ್'ನಿಂದ

### ಕಿಡಿನುಡಿ



ಸರ್ಕಾರಕ್ಕೆ ಇಚ್ಛಾಶಕ್ತಿ ಇದ್ದಿದ್ದರೆ ಉತ್ತರ ಕರ್ನಾಟಕದ ಸಮಗ್ರ ಅಭಿವೃದ್ಧಿಗೆ ವಿಶೇಷ ಯೋಜನೆಗಳನ್ನು ಜಾರಿಗೊಳಿಸಬಹುದಾಗಿತ್ತು. ಆದರೆ, ಮುಖ್ಯಮಂತ್ರಿಯವರು ಸದನದಲ್ಲಿ ತಮ್ಮ ಹಳೆಯ ಕಥೆ ಹೇಳುತ್ತಾ, ಮತ್ತೊಮ್ಮೆ ಈ ಭಾಗದ ಜನತೆಗೆ ನಿರಾಸೆ ಮೂಡಿಸಿದ್ದಾರೆ.

**ಬಸನಗೌಡ ಪಾಟೀಲ ಯತ್ನಾಳ,** ಶಾಸಕ

## 25 ವರ್ಷಗಳ ಹಿಂದೆ

ಬುಧವಾರ, 20-12-2000

● **ರಾಜ್ಯದ ಆರ್ಥಿಕ ಸ್ಥಿತಿ ಗಂಭೀರ: ಎಸ್.ಎಂ. ಕೃಷ್ಣ**

**ವಿಜಾಪುರ, ಡಿ. 19**– ರಾಜ್ಯದ ಹಣಕಾಸು ಸ್ಥಿತಿ ಗಂಭೀರವಾಗಿದ್ದು, ರಾಜ್ಯ ಸರ್ಕಾರ ಇದನ್ನು ಹೇಗೋ ನಿಭಾಯಿಸುತ್ತಿದೆ ಎಂದು ಹಣಕಾಸು ಖಾತೆಯ ಹೊಣೆಗಾರಿಕೆಯನ್ನೂ ಹೊತ್ತಿರುವ ಮುಖ್ಯಮಂತ್ರಿ ಎಸ್.ಎಂ. ಕೃಷ್ಣ ಇಂದು ಹೇಳಿದರು.

ಇಲ್ಲಿಗೆ ಸಮೀಪದ ಕೊರ್ತಿ ಗ್ರಾಮದ ಬಳಿ ಕೊರ್ತಿ–ಕೊಲ್ಹಾರ ಸೇತುವೆ ಕಾಮಗಾರಿಗೆ ಶಂಕುಸ್ಥಾಪನೆ ನೆರವೇರಿಸಿ ಮಾತನಾಡಿದ ಅವರು, ಯುಕೆಪಿ ಸಂತ್ರಸ್ತರಿಗೆ ನೀಡಿರುವ ಪರಿಹಾರ ಧನ ಹೆಚ್ಚಿಸಬೇಕೆಂಬ ಬೇಡಿಕೆ ಕುರಿತು ಮೇಲಿನಂತೆ ಪ್ರತಿಕ್ರಿಯಿಸಿದರು.

ರಾಜ್ಯ ಸರ್ಕಾರ ಯಾವುದೇ ಪರಿಸ್ಥಿತಿಯಲ್ಲಿ ರೈತರ ಹಿತ ಕಡೆಗಣಿಸುವುದಿಲ್ಲ. ಈಗಾಗಲೇ, ಸಂತ್ರಸ್ತರ ಸಮಸ್ಯೆ ಕುರಿತು ಈ ಭಾಗದ ಜನಪ್ರತಿನಿಧಿಗಳ ಜತೆ ಎರಡು ಬಾರಿ ಸಮಾಲೋಚನೆ ನಡೆಸಿದೆ ಎಂದು ಹೇಳಿದರು.

## 75 ವರ್ಷಗಳ ಹಿಂದೆ

ಬುಧವಾರ, 20-12-1950

● **ಕಿಲಕೋಟಗಿರಿಯಲ್ಲಿ ಪುಡಿಯಾದ ವಿಮಾನ ಪತ್ತೆ**

**ಬೆಂಗಳೂರು, ಡಿ. 19**– ಕಳೆದ ಒಂದು ವಾರದಿಂದ ನಾಪತ್ತೆಯಾಗಿದ್ದ ಏರಿಂಡಿಯಾ ಡಕೋಟ ವಿಮಾನ ಬಿದ್ದಿದ್ದ ಸ್ಥಳಕ್ಕೆ ಸೈನಿಕ ಶೋಧನೆ ಪಡೆಯವರು ಈ ಸಂಜೆ ಹೋದಾಗ ಪುಡಿ ಪುಡಿಯಾಗಿದ್ದ ವಿಮಾನದ ಚೂರುಗಳ ರಾಶಿ, ಪ್ರಯಾಣಿಕರ ಮತ್ತು ಚಾಲಕ ಪಡೆಯವರ ಶವಸಮೂಹ ಕಣ್ಣಿಗೆ ಬಿತ್ತು. ಈ ದುರಂತದ ಪ್ರದೇಶ ಕಿಲಕೋಟಗಿರಿಗೆ 4 ಮೈಲಿ ದೂರದ ಕಾಡು.

ವಿಮಾನ ಬಿದ್ದಾಗ ಬೆಂಕಿ ಹೊತ್ತಿದಂತಿಲ್ಲ; ಒಂದು ತರಹ ಆಸ್ಫೋಟನೆಯಾಗಿರಬೇಕು. ವಿಮಾನದಲ್ಲಿದ್ದ ಅಂಚೆ ಯಥಾವತ್ತು ಹಾಗೇ ಇದೆ.

ವಿಮಾನದಲ್ಲಿದ್ದವರೆಲ್ಲ ಸತ್ತು ಹೋಗಿದ್ದಾರೆ.

# ಮೆಕಾಲೆ ಅಪ್ರಸ್ತುತ, ಏಕೆಂದರೆ...



**ಸೂರ್ಯ– ನಮಸ್ಕಾರ**

**ಎ. ಸೂರ್ಯ ಪ್ರಕಾಶ್**

ಪೂರ್ಣ ಪ್ರಮಾಣದಲ್ಲಿ ಅಭಿವೃದ್ಧಿ ಹೊಂದಿದ, ಜೀವನದ ಎಲ್ಲ ಆಯಾಮಗಳಲ್ಲಿಯೂ ಆತ್ಮವಿಶ್ವಾಸದಿಂದ ಕೂಡಿದ 'ವಿಕಸಿತ ಭಾರತ'ವನ್ನು ನಿರ್ಮಿಸಲು ಪ್ರಧಾನಿ ನರೇಂದ್ರ ಮೋದಿ ಅವರು, 2047ರ ಗಡುವನ್ನು ನಿಗದಿ ಮಾಡಿದ್ದಾರೆ. ಈಗ ಅವರು ಭಾರತದ ಜನರಿಗೆ ಹೊಸದೊಂದು ಗುರಿ ನೀಡಿದ್ದಾರೆ. ಮುಂದಿನ ಹತ್ತು ವರ್ಷಗಳಲ್ಲಿ, ಅಂದರೆ 2035ಕ್ಕೆ ಮೊದಲು, ಥಾಮಸ್ ಬಾಬಿಂಗ್ಟನ್ ಮೆಕಾಲೆಯ ಹೆಜ್ಜೆಗುರುತುಗಳನ್ನು ಅಳಿಸಿಹಾಕಬೇಕು ಎಂದು ಕರೆ ನೀಡಿದ್ದಾರೆ.

ನವದೆಹಲಿಯಲ್ಲಿ ಕಳೆದ ತಿಂಗಳು ಕಾರ್ಯಕ್ರಮವೊಂದರಲ್ಲಿ ಮಾತನಾಡುವ ಸಂದರ್ಭದಲ್ಲಿ ಪ್ರಧಾನಿಯವರು, ಮೆಕಾಲೆಯಿಂದಾಗಿ ಆಗಿರುವ ಹಾನಿಗಳ ಬಗ್ಗೆ ಹೇಳಿದ್ದಾರೆ. ಅಲ್ಲದೆ, ನವೆಂಬರ್ 25ರಂದು ಅಯೋಧ್ಯೆಯಲ್ಲಿ ಧರ್ಮಧ್ವಜದ ಆರೋಹಣದ ಸಂದರ್ಭದಲ್ಲಿ ಈ ಮಾತುಗಳನ್ನು ಇನ್ನಷ್ಟು ಒತ್ತು ನೀಡಿ ಪುನರುಚ್ಚರಿಸಿದ್ದಾರೆ.

ಸಾರ್ವಜನಿಕ ಶಿಕ್ಷಣ ಪದ್ಧತಿಯ ರೂವಾರಿಯಾದ ಮೆಕಾಲೆ 1835ರಲ್ಲಿ ಇಂಗ್ಲಿಷ್ ಶಿಕ್ಷಣವನ್ನು ಪಸರಿಸಲು ಹಾಗೂ ಭಾರತದ ಭಾಷೆಗಳನ್ನು ನಾಶಮಾಡಲು, ಭಾರತದ ಸಂಸ್ಕೃತಿ ಮತ್ತು ನಾಗರಿಕತೆಯ ಶಕ್ತಿ ನಾಶಮಾಡಲು ವಿಸ್ತೃತವಾದ ಯೋಜನೆಯೊಂದನ್ನು ರೂಪಿಸಿಕೊಟ್ಟ. ಅದನ್ನು ಅಂದಿನ ಬ್ರಿಟಿಷ್ ಸರ್ಕಾರವು ಒಪ್ಪಿಕೊಂಡಿತು. ಪರಿಣಾಮವಾಗಿ 'ಕಾನ್ವೆಂಟ್ ಶಾಲೆಗಳು' ದೇಶದ ಎಲ್ಲೆಡೆ ನಾಯಿಕೊಡೆಗಳಂತೆ ಹುಟ್ಟಿಕೊಂಡವು, ಪ್ರಾದೇಶಿಕ ಭಾಷೆಗಳಲ್ಲಿ ಬೋಧಿಸುವ ಶಾಲೆಗಳ ನಿರ್ಲಕ್ಷ್ಯಕ್ಕೆ ಇದು ದಾರಿ ಮಾಡಿಕೊಟ್ಟಿತು.

ಮೆಕಾಲೆ ಪ್ರತಿಪಾದಿಸಿದ ವಿಚಾರಗಳು ಈ ಕೆಳಗಿನ ಅಂಶಗಳನ್ನು ಒಳಗೊಂಡಿದ್ದವು:

ಸಂಸ್ಕೃತವು 'ನಿಷ್ಪ್ರಯೋಜಕ' ಭಾಷೆ, ಅದನ್ನು ಕೈಬಿಡಬೇಕು. ಅದರ ಬದಲಿಗೆ ಭಾರತೀಯರಿಗೆ ಇಂಗ್ಲಿಷ್ ಕಲಿಸಬೇಕು. ಏಕೆಂದರೆ, ಇಂಗ್ಲಿಷ್ ಭಾಷೆಯು ಹೆಚ್ಚು ಉತ್ತಮವಾದ ನಾಗರಿಕತೆಯ ಭಾಷೆ, ಅದು ವಿಜ್ಞಾನ, ಇತಿಹಾಸ, ತತ್ತ್ವಶಾಸ್ತ್ರದಂತಹ ವಿಷಯಗಳಲ್ಲಿನ ಆಧುನಿಕ ಜ್ಞಾನಕ್ಕೆ ಕೀಲಿಕೈ ಇದ್ದಂತೆ.

ಭಾರತದ ಭಾಷೆಗಳಲ್ಲಿ ಸಾಹಿತ್ಯಿಕ ಮಾಹಿತಿಯೂ ಇಲ್ಲ, ವೈಜ್ಞಾನಿಕ ಮಾಹಿತಿಯೂ ಇಲ್ಲ ಮತ್ತು ಆ ಭಾಷೆಗಳು ಬಹಳ ಬಡವಾಗಿಯೂ, ಒರಟಾಗಿಯೂ ಇವೆ ಎಂದು ಮೆಕಾಲೆ ಹೇಳಿದ್ದ. ಸಂಸ್ಕೃತ, ಅರೇಬಿಕ್ ಮತ್ತು ಭಾರತದ ಇತರ ಭಾಷೆಗಳಲ್ಲಿನ ಸಾಹಿತ್ಯವನ್ನು ಅಧ್ಯಯನ ಮಾಡಿದ ನಂತರ ಆತ, 'ಯುರೋಪಿನ ಒಳ್ಳೆಯ ಗ್ರಂಥಾಲಯವೊಂದರ ಕಪಾಟಿನ ಒಂದು ಹಲಗೆಯ ಮೇಲಿರುವ ಪುಸ್ತಕಗಳು ಭಾರತ ಮತ್ತು ಅರೇಬಿಯಾದ ಮೂಲ ಸಾಹಿತ್ಯಕ್ಕೆ ಸಮ' ಎಂದು ಕೂಡ ಹೇಳಿದ್ದ.

ಸಂಸ್ಕೃತದಲ್ಲಿ ಬರೆಯಲಾದ ಎಲ್ಲ ಪುಸ್ತಕಗಳಿಂದ ಸಂಗ್ರಹಿಸಲಾದ ಐತಿಹಾಸಿಕ ಮಾಹಿತಿಗಳು ಇಂಗ್ಲೆಂಡಿನ ಪ್ರಾಥಮಿಕ ಶಾಲೆಗಳಲ್ಲಿ ಬಳಕೆಯಲ್ಲಿ ಇರಬಹುದಾದ ಬಹುತೇಕ ಕಿರುಪುಸ್ತಕಗಳಲ್ಲಿ ಸಿಗುವುದಕ್ಕಿಂತ ಕಡಿಮೆ ಮೌಲ್ಯದವು ಎಂದು ಮೆಕಾಲೆ ಹೇಳಿದ್ದುದು ಸಂಸ್ಕೃತದ ಬಗ್ಗೆ ಆತ ಹೊಂದಿದ್ದ ತಿರಸ್ಕಾರವನ್ನು ತೋರಿಸುತ್ತದೆ. ಆತನ ಈ ಹೇಳಿಕೆಯು ಪೂರ್ವಗ್ರಹದಿಂದ ಕೂಡಿತ್ತು. ಎಲ್ಲ ಜ್ಞಾನಶಾಖೆಗಳಲ್ಲಿಯೂ ಪರಿಸ್ಥಿತಿ ಇದೇ ಆಗಿದೆ ಎಂದು ಆತ ಹೇಳಿದ್ದ.

ಭಾರತದ ಖಗೋಳಶಾಸ್ತ್ರದ ಬಗ್ಗೆ ಕೇಳಿದರೆ ಇಂಗ್ಲೆಂಡಿನ ಶಾಲೆಗಳಲ್ಲಿನ ಹೆಣ್ಣುಮಕ್ಕಳು ಜೋರಾಗಿ ನಗುತ್ತಾರೆ ಎಂದು ಹೇಳುವ ಮೂಲಕ ಮೆಕಾಲೆ ಭಾರತದ ಗಣಿತಶಾಸ್ತ್ರ, ಸಾಹಿತ್ಯ, ಖಗೋಳಶಾಸ್ತ್ರ, ವೈದ್ಯವಿಜ್ಞಾನ, ಇತಿಹಾಸ ಮತ್ತು ಭೂಗೋಳಶಾಸ್ತ್ರ ಬಗ್ಗೆ ತನಗಿರುವ ಅಜ್ಞಾನವನ್ನು ತೋರಿಸಿದ್ದ. ಬ್ರಿಟಿಷರು ಇನ್ನೂ ಗುಹೆಗಳಲ್ಲಿ ಜೀವನ ಸಾಗಿಸುತ್ತಿದ್ದಾಗ, ಕಾಡುಪ್ರಾಣಿಗಳನ್ನು ಬೇಟೆಯಾಡಿಕೊಂಡು ಇದ್ದಾಗ 'ಶೂನ್ಯ'ವನ್ನು ಆವಿಷ್ಕರಿಸಿದ್ದು ಭಾರತ ಎಂಬುದಾಗಲಿ, ಭಾರತದಲ್ಲಿ ಆರ್ಯಭಟ, ಭಾಸ್ಕರಾಚಾರ್ಯ ಅವರಂತಹ ಗಣಿತಶಾಸ್ತ್ರಜ್ಞರು, ಖಗೋಳಶಾಸ್ತ್ರಜ್ಞರು ಇದ್ದರು ಎಂಬುದಾಗಲಿ ಮೆಕಾಲೆಗೆ ಗೊತ್ತಿರಲಿಲ್ಲ.

> ಮೆಕಾಲೆ ಶಿಕ್ಷಣ ಪದ್ಧತಿಯು ಭಾರತದ ಸಾಂಸ್ಕೃತಿಕ ಮಹತ್ವವನ್ನು ಮಾತ್ರವಲ್ಲ, ವೈಚಾರಿಕ ಹಾಗೂ ವೈಜ್ಞಾನಿಕ ಸಾಧನೆಗಳನ್ನೂ ಅಲ್ಲಗಳೆಯುವಂತಹದ್ದು. ಭಾರತದ ಬೌದ್ಧಿಕ ಅನನ್ಯತೆಯ ಬಗ್ಗೆ ತಿರಸ್ಕಾರವನ್ನು ಹೊಂದಿರುವ ಮೆಕಾಲೆ ಶಿಕ್ಷಣ ಪದ್ಧತಿಯಿಂದ ಹೊರಬರುವ ಕಾಲ ಈಗ ಸನ್ನಿಹಿತವಾಗಿದೆ.

ರೇಖಾಗಣಿತ, ತ್ರಿಕೋನಮಿತಿಗೆ ಆರ್ಯಭಟ ನೀಡಿರುವ ಕೊಡುಗೆ ಬಹಳ ದೊಡ್ಡದು. 1,500 ವರ್ಷಗಳಿಗೂ ಮೊದಲೇ ಆತ ಭೂಮಿಯ ವ್ಯಾಸವನ್ನು, ಚಂದ್ರನ ವ್ಯಾಸವನ್ನು ಮತ್ತು ಗ್ರಹಗಳು ಹಾಗೂ ಅವುಗಳ ನಡುವಿನ ಅಂತರವನ್ನು ನಿಖರವಾಗಿ ಲೆಕ್ಕಹಾಕಿದ್ದ. ಸೂರ್ಯಗ್ರಹಣ ಮತ್ತು ಚಂದ್ರಗ್ರಹಣ ಏಕಾಗುತ್ತದೆ ಎಂಬುದನ್ನು ಆತ ವಿವರಿಸಿದ್ದ. ಒಂದು ವರ್ಷದಲ್ಲಿ ಇರುವ ದಿನಗಳ ನಿಖರ ಸಂಖ್ಯೆ 365 ಎಂಬುದನ್ನೂ ಆತ ಹೇಳಿದ್ದ. ಭಾಸ್ಕರಾಚಾರ್ಯ ಬಹಳ ಮೇಧಾವಿ ಗಣಿತ ತಜ್ಞನಾಗಿದ್ದ. ಕಲನವಿಜ್ಞಾನ (ಕ್ಯಾಲ್ಕ್ಯುಲಸ್) ಆತನ ಸಂಶೋಧನೆ, ಗ್ರಹಗಳು ಅಂಡಾಕೃತಿಯ ಕಕ್ಷೆಯನ್ನು ಹೊಂದಿವೆ ಎಂಬುದನ್ನು ಆತ 900ಕ್ಕೂ ಹೆಚ್ಚು ವರ್ಷಗಳ ಹಿಂದೆ ಕಂಡುಕೊಂಡಿದ್ದ.

ಆದರೆ, ಪೂರ್ವಗ್ರಹದಿಂದ ಕೂಡಿದ್ದ ಮೆಕಾಲೆ ಮಾತ್ರ ಇವೆಲ್ಲವನ್ನೂ ಅಲ್ಲಗಳೆಯಬಲ್ಲ. ಹೀಗಾಗಿ ಆತ 'ಈಗಿನ ಸಂದರ್ಭದಲ್ಲಿ ತಮ್ಮ ಮಾತೃಭಾಷೆಯ ಮೂಲಕ ಶಿಕ್ಷಿತರನ್ನಾಗಿ ಮಾಡಲು ಆಗದಿರುವ ಜನರನ್ನು ನಾವು ಶಿಕ್ಷಿತರನ್ನಾಗಿ ಮಾಡಬೇಕಾಗಿದೆ' ಎಂದು ಪ್ರತಿಪಾದಿಸಿದ್ದ. ಇದನ್ನು ಸಾಧ್ಯವಾಗಿಸಲು ಆತ ಯಾವ ಪ್ರಸ್ತಾವ ಮುಂದಿಟ್ಟ? 'ಇಂಗ್ಲಿಷ್ ಭಾಷೆಯು ಅತ್ಯಂತ ಹೆಚ್ಚು ಉಪಯುಕ್ತವಾಗುತ್ತದೆ' ಎಂಬ ತೀರ್ಮಾನಕ್ಕೆ ಆತ ಬಂದ.

ಭಾರತೀಯರ ನಡುವೆ ಇಂಗ್ಲಿಷ್ ಭಾಷೆಯನ್ನು ಬೆಳೆಸುವುದು ಭಾರತದಲ್ಲಿ ಬ್ರಿಟಿಷ್ ಸಾಮ್ರಾಜ್ಯದ ಬೇರುಗಳನ್ನು ಇನ್ನಷ್ಟು ಆಳವಾಗಿಸಲು ಅಗತ್ಯ ಎಂದು ಕೂಡ ಆತ ಹೇಳಿದ್ದ. ಹೀಗಾಗಿ ಆತ ತನ್ನ ಕೊನೆಯ ಶಿಫಾರಸಿನಲ್ಲಿ 'ರಕ್ತ ಮತ್ತು ಮೈಬಣ್ಣದಲ್ಲಿ ಭಾರತೀಯರಾಗಿರುವ; ಆದರೆ, ಅಭಿರುಚಿಯಲ್ಲಿ, ಅಭಿಪ್ರಾಯಗಳಲ್ಲಿ, ನೈತಿಕತೆಯಲ್ಲಿ ಮತ್ತು ಪ್ರಜ್ಞೆಯಲ್ಲಿ ಇಂಗ್ಲಿಷರಂತೆ ಇರುವ ಜನರ ವರ್ಗವೊಂದನ್ನು ನಾವು ರೂಪಿಸಬೇಕು' ಎಂದು ಹೇಳಿದ್ದ, ಅಂದರೆ, ಇಂಗ್ಲಿಷ್ ಭಾಷೆಯನ್ನು ಮಾತ್ರವೇ ಅಲ್ಲದೆ, ಭಾರತೀಯರು ಇಂಗ್ಲಿಷರ ಅಭಿರುಚಿಗಳನ್ನು ಹಾಗೂ ಅವರ ನೈತಿಕತೆಯನ್ನು ಹೊಂದುವಂತೆ ಮಾಡುವುದು ಆತನ ಗುರಿಯಾಗಿತ್ತು.


ಆಗಿನ ಗವರ್ನರ್ ಜನರಲ್ ಲಾರ್ಡ್ ವಿಲಿಯಂ ಬೆಂಟಿಂಕ್, ಮೆಕಾಲೆಯ ಯೋಜನೆಯನ್ನು ಪೂರ್ತಿಯಾಗಿ ಬೆಂಬಲಿಸಿದ. 1835ರಲ್ಲಿ ಒಂದು ಆದೇಶ ಹೊರಡಿಸಿ ಸರ್ಕಾರದ ಹಣವನ್ನು ಇಂಗ್ಲಿಷ್ ಭಾಷೆಯ ಮೂಲಕ ಪಾಶ್ಚಿಮಾತ್ಯ ಶಿಕ್ಷಣವನ್ನು ಪಸರಿಸಲು ಮಾತ್ರ ಬಳಸಲಾಗುವುದು ಎಂದು ಹೇಳಿದ. ಇಂತಹ ಶಾಲೆಗಳಲ್ಲಿ ಓದಿದ ಲಕ್ಷಾಂತರ ವಿದ್ಯಾರ್ಥಿಗಳಿಗೆ ತಮ್ಮ ಮನಸ್ಸಿನ ಮೇಲೆ ಅಲ್ಲಿನ ಪಠ್ಯಕ್ರಮವು ಹೇಗೆ ನಾಜೂಕಾಗಿ ಪರಿಣಾಮ ಬೀರಿತು ಎಂಬುದು ಅರಿವಾಗಲೇ ಇಲ್ಲ. ಕರ್ನಾಟಕದ 'ಕಾನ್ವೆಂಟ್ ಶಾಲೆ'ಯೊಂದರಲ್ಲಿ ಕಲಿತ ಕಾರಣದಿಂದಾಗಿ ಈ ಲೇಖಕ ತನ್ನ ಶಾಲಾ ದಿನಗಳಲ್ಲಿ ಮೆಕಾಲೆಯ ಯೋಜನೆಯ ಸಂತ್ರಸ್ತ ಆಗಿದ್ದ.

ಉದಾಹರಣೆಗೆ ಹೇಳುವುದಾದರೆ, ಶಾಲೆಯ ಇಡೀ ಪಠ್ಯಕ್ರಮವು ಇಂಗ್ಲಿಷ್ ಕಡೆ ವಾಲಿಕೊಂಡಿತ್ತು. ಶಾಲೆಯಲ್ಲಿನ ವಾತಾವರಣವು ಇಂಗ್ಲೆಂಡಿನ ಶಾಲೆಯೊಂದರ ವಾತಾವರಣಕ್ಕೆ ಹೋಲುತ್ತಿತ್ತು. ವಾರ್ಷಿಕ ಪರೀಕ್ಷೆಗಳನ್ನು ಡಿಸೆಂಬರ್‌ನಲ್ಲಿ ನಡೆಸಲಾಗುತ್ತಿತ್ತು, ಅದಾದ ನಂತರ ತಿಂಗಳ ಕಾಲ ಕ್ರಿಸ್‌ಮಸ್ ಆಚರಣೆ ಮತ್ತು ಹೊಸ ವರ್ಷದ ರಜೆ ಇರುತ್ತಿತ್ತು.

ಮಾತೃಭಾಷೆ ಕನ್ನಡವಾಗಿದ್ದರೂ ಯಾರೂ ಶಾಲೆಯಲ್ಲಿ ಕನ್ನಡ ಮಾತನಾಡುತ್ತಿರಲಿಲ್ಲ. ನಮ್ಮ ಇತಿಹಾಸ ಮತ್ತು ಸಮಾಜ ವಿಜ್ಞಾನದ ತರಗತಿಗಳಲ್ಲಿ ರಾಮಾಯಣ ಅಥವಾ ಮಹಾಭಾರತದ ಬಗ್ಗೆ ಉಲ್ಲೇಖ ಇರುತ್ತಿರಲಿಲ್ಲ. ಭಾರತದ ಯಾವುದೇ ಮಹಾಕಾವ್ಯದ ಬಗ್ಗೆ ಉಲ್ಲೇಖವಿರುತ್ತಿರಲಿಲ್ಲ. ಕೃಷ್ಣದೇವರಾಯನ ಬಗ್ಗೆ, ವಿಜಯನಗರ ಸಾಮ್ರಾಜ್ಯದ ಬಗ್ಗೆ, ರಾಣಿ ಚನ್ನಮ್ಮಳ ಬಗ್ಗೆ, ರಾಣಿ ಅಬ್ಬಕ್ಕಳ ಬಗ್ಗೆ, ಒನಕೆ ಓಬವ್ವಳ ಬಗ್ಗೆ ಕೂಡ ಪಾಠಗಳು ಇರುತ್ತಿರಲಿಲ್ಲ. ಅದರ ಬದಲಿಗೆ, ನಮಗೆ ರೋಮ್ ಸಾಮ್ರಾಜ್ಯವನ್ನು ಹೇಗೆ ಕಟ್ಟಲಾಯಿತು ಎಂಬ ಬಗ್ಗೆ, ರೊಮುಲಸ್ ಮತ್ತು ರೆಮುಸ್ ಅವಳಿ ಸಹೋದರರ ಬಗ್ಗೆ ಕಲಿಸಲಾಗುತ್ತಿತ್ತು. ಅರ್ಜುನನ ಬಗ್ಗೆ ಮತ್ತು ಅವನ ಗಾಂಡೀವದ ಬಗ್ಗೆ ಅಥವಾ ಭೀಮನ ಕೌಶಲಗಳ ಬಗ್ಗೆ ಪಾಠವನ್ನಾಗಲಿ, ಕಥೆಯನ್ನಾಗಲಿ ಹೇಳುತ್ತಿರಲಿಲ್ಲ. ನಮಗೆ ಕಿಂಗ್ ಆರ್ಥರ್ ಬಗ್ಗೆ, ಆತನ ಬಳಿಯಿದ್ದ ಮಾಯಾ ಖಡ್ಗ 'ಎಕ್ಸ್‌ಕ್ಯಾಲಿಬರ್' ಬಗ್ಗೆ ಪಾಠ ಮಾಡಲಾಗುತ್ತಿತ್ತು.

ಇಂತಹ ಶಾಲೆಗಳಿಂದ ಹೊರಬರುವ ಲಕ್ಷಾಂತರ ಮಂದಿ ವಿದ್ಯಾರ್ಥಿಗಳು ಭಾರತದ ಪರಿಸ್ಥಿತಿಗೆ ಹೇಗೆ ಹೊಂದಿಕೆ ಆಗಬಹುದು ಎಂಬುದನ್ನು ಊಹಿಸಿಕೊಳ್ಳಿ. ಅವರಲ್ಲಿ ಬಹುತೇಕರು ಇಲ್ಲಿಗೆ ಹೊಂದಿಕೆ ಆಗುವುದಿಲ್ಲ. ಆದರೆ, ಮೆಕಾಲೆಯ ಯೋಜನೆಯ ಪ್ರಕಾರ ಅವರು– ಮೆಕಾಲೆಯ ಮಕ್ಕಳು– ಭಾರತವನ್ನು ಆಳುವವರಾಗುತ್ತಾರೆ. ಈ ಲೇಖಕ ನಂತರದ ದಿನಗಳಲ್ಲಿ 'ಭಾರತೀಯ' ಶಾಲೆಯೊಂದಕ್ಕೆ ಸೇರಿಕೊಳ್ಳುವ ಅದೃಷ್ಟ ಪಡೆದಿದ್ದ. ಅಲ್ಲಿ ಈ ಲೇಖಕನಿಗೆ ಸ್ವಾಮಿ ವಿವೇಕಾನಂದ, ಅರವಿಂದರು, ಮಹಾಭಾರತ, ರಾಮಾಯಣ ಮತ್ತು ಕರ್ನಾಟಕದ ಇತಿಹಾಸದ ಬಗ್ಗೆ ಮೊದಲ ಬಾರಿಗೆ ತಿಳಿಯಿತು. ಆದರೆ ಕೆಲವು ಅದೃಷ್ಟವಂತರಿಗೆ ಮಾತ್ರ ಮೆಕಾಲೆಯ ಬಲೆಯಿಂದ ಬಿಡಿಸಿಕೊಳ್ಳುವ ಇಂತಹ ಅವಕಾಶ ಸಿಗುತ್ತದೆ. ಇನ್ನುಳಿದವರಿಗೆ ಸಿಗುವುದಿಲ್ಲ.

ಭಾರತದ ಪುರಾತನ ಸಂಸ್ಕೃತಿ ಮತ್ತು ನಾಗರಿಕತೆಯ ಮರುಸ್ಥಾಪನೆಯ ಕೆಲಸ ಆರಂಭವಾಗಲು ಭಾರತೀಯರು ನರೇಂದ್ರ ಮೋದಿ ಅವರು 2014ರಲ್ಲಿ ಅಧಿಕಾರ ಹಿಡಿಯುವವರೆಗೆ ಕಾಯಬೇಕಾಗಿತ್ತು. ಭಾರತವನ್ನು ಪ್ರೀತಿಸುವ ಎಲ್ಲರೂ, ಇಲ್ಲಿನ ಅಸಾಮಾನ್ಯ ನಾಗರಿಕತೆಯನ್ನು ಗೌರವಿಸುವ ಎಲ್ಲರೂ ಪ್ರಧಾನಿಯವರು ಸಲಹೆಯ ರೂಪದಲ್ಲಿ ನೀಡಿರುವ ಸಂಕಲ್ಪ ಕೈಗೊಳ್ಳಬೇಕು. ಮೆಕಾಲೆಯ ಭೂತವನ್ನು 2035ರೊಳಗೆ ಹೊರದಬ್ಬಬೇಕು. ಭಾರತದ ಭಾಷೆಗಳು, ಇಲ್ಲಿನ ಸಂಸ್ಕೃತಿ ಮತ್ತು ಇತಿಹಾಸದ ವೈಭವ ಮರಳುವಂತೆ ಮಾಡಬೇಕು.



## ವಾಚಕರ ವಾಣಿ

### ಗುತ್ತಿಗೆ ನೌಕರರು ಮತ್ತು ಘನತೆಯ ಬದುಕು

**ರಾಜ್ಯದ** ವಿವಿಧ ಇಲಾಖೆಗಳಲ್ಲಿ ಸುಮಾರು ಮೂರು ಲಕ್ಷದಷ್ಟು ಹೊರಗುತ್ತಿಗೆ ನೌಕರರಿದ್ದಾರೆ. ಸರ್ಕಾರಿ ಯಂತ್ರ ಸಾಂಗವಾಗಿ ಸಾಗಲು ಇವರ ಕೊಡುಗೆಯೂ ಇದೆ. ಆದರೆ, ಉದ್ಯೋಗ ಭದ್ರತೆ ಇಲ್ಲದೆ ತೊಂದರೆಗೆ ಸಿಲುಕಿದ್ದಾರೆ. ಕಡಿಮೆ ವೇತನದಿಂದ ಜೀವನ ನಿರ್ವಹಣೆ ಕಷ್ಟಕರವಾಗಿದೆ. ಬಹಳಷ್ಟು ನೌಕರರಿಗೆ ಮಧ್ಯವಯಸ್ಸು ದಾಟಿದ್ದರೆ, ಕೆಲವರು ನಿವೃತ್ತಿ ಅಂಚಿನಲ್ಲಿದ್ದು, ಅನಾರೋಗ್ಯಕ್ಕೆ ತುತ್ತಾಗಿದ್ದಾರೆ. ಕೆಲಸದ ಒತ್ತಡದ ನಡುವೆ ಘನತೆಯ ಬದುಕು ಕಟ್ಟಿಕೊಳ್ಳಲು ಪರದಾಡುತ್ತಿದ್ದಾರೆ. ಈಗಲಾದರೂ ರಾಜ್ಯ ಸರ್ಕಾರ ಈ ನೌಕರರಿಗೆ ಸೇವಾಭದ್ರತೆ ನೀಡಲು ಕ್ರಮವಹಿಸಬೇಕಿದೆ.

**ಅನಿತಾ ಎಂ.ಬಿ.,** ಶಿವಮೊಗ್ಗ

### ಅತ್ಯಲ್ಪ ಪಿಂಚಣಿಯಿಂದ ಅಶಕ್ತರು ಕಂಗಾಲು

**ಇಪಿಎಸ್–95** ಯೋಜನೆ ವ್ಯಾಪ್ತಿಗೆ ಬರುವ ಬಹುತೇಕ ಪಿಂಚಣಿದಾರರು ಈಗಾಗಲೇ ಎಪ್ಪತ್ತರ ಗಡಿ ದಾಟಿದ್ದಾರೆ. ಅವರಿಗೆ ಕನಿಷ್ಠ ₹1,000 ಪಿಂಚಣಿ ನೀಡಲಾಗುತ್ತಿದೆ. ಈ ಮೊತ್ತದಲ್ಲಿ ಜೀವನ ನಿರ್ವಹಣೆ ಸಾಧ್ಯವೆ? ಇನ್ನೊಂದು ದಶಕದೊಳಗೆ ಈ ಪಿಂಚಣಿದಾರರ ಸಂಖ್ಯೆಯೇ ಕಡಿಮೆಯಾಗಲಿದೆ. ಗೌರವಯುತ ಬದುಕಿಗೆ ಮಾಸಿಕ ಕನಿಷ್ಠ ₹7,500 ಪಿಂಚಣಿ ಮತ್ತು ತುಟ್ಟಿಭತ್ಯೆ ನಿಗದಿ ಮಾಡುವಂತೆ ಕೇಂದ್ರ ಸರ್ಕಾರಕ್ಕೆ ಹಲವು ಬಾರಿ ಒತ್ತಾಯಿಸಲಾಗಿದೆ. ಆದರೆ, ಕೇಂದ್ರ ಕಾರ್ಮಿಕ ಸಚಿವರು ಈ ಬಗ್ಗೆ ಅಂತಿಮ ನಿರ್ಧಾರಕ್ಕೆಗೊಂಡಿಲ್ಲ. ನೌಕರರ ಭವಿಷ್ಯ ನಿಧಿ ಸಂಘಟನೆಯು ಹಿರಿಯರ ಭವಿಷ್ಯವನ್ನು ಕತ್ತಲಿಗೆ ದೂಡದೆ ಪಿಂಚಣಿ ಮೊತ್ತ ಹೆಚ್ಚಳಕ್ಕೆ ಕ್ರಮವಹಿಸಬೇಕಿದೆ.

**ಕೆ.ಟಿ. ಸೋಮಶೇಖರ್,** ಬೆಂಗಳೂರು

### ಅಜ್ಞಾನದ ಕತ್ತಲಿಗೆ ಅಕ್ಷರವೇ ದೀಪ

**ಶಾಲೆಯೆಂದರೆ** ನಾಲ್ಕು ಗೋಡೆಗಳ ಕಟ್ಟಡವಲ್ಲ; ಅದು ಸಾವಿರಾರು ಕನಸುಗಳು ಮೊಳಕೆಯೊಡೆಯುವ ಪವಿತ್ರ ತಾಣ. 'ಒಬ್ಬ ವಿದ್ಯಾರ್ಥಿ ಇದ್ದರೂ ಶಾಲೆ ಮುಚ್ಚಲ್ಲ' ಎನ್ನುವ ಸರ್ಕಾರದ ನಿರ್ಧಾರ ಕೇವಲ ಆಡಳಿತಾತ್ಮಕ ಘೋಷಣೆಯಾಗಬಾರದು. ವಿಶೇಷವಾಗಿ ಗಡಿಭಾಗದ ಕನ್ನಡ ಶಾಲೆಗಳು ನಮ್ಮ ಭಾಷೆ ಮತ್ತು ಸಂಸ್ಕೃತಿಯ ಜೀವಂತ ಸ್ಮಾರಕಗಳು. ಅಲ್ಲಿ ಒಂದು ಮಗುವಿದ್ದರೂ, ಅದರ ಕಣ್ಣಲ್ಲಿ ಜ್ಞಾನದ ದೀಪ ಹಚ್ಚುವ ಜವಾಬ್ದಾರಿಯನ್ನು ಸರ್ಕಾರ ಹೊರಬೇಕಿದೆ. ಪ್ರತಿ ಮಗುವಿಗೂ ಕಲಿಯುವ ಹಕ್ಕಿದೆ; ಆ ಹಕ್ಕನ್ನು ರಕ್ಷಿಸುವುದು ನಾಡಿನ ಕರ್ತವ್ಯ. ಅಕ್ಷರ ಕಲಿಸುವ ಮಂದಿರಗಳು ಮುಚ್ಚಬಾರದು; ಅಲ್ಲಿ ಜ್ಞಾನದ ಗಂಟೆ ಸದಾ ಮೊಳಗುತ್ತಿರಬೇಕು. ಸರ್ಕಾರ ವಚನ ನೀಡಿದರೆ ಸಾಲದು; ಅದರ ಪರಿಪಾಲನೆಯನ್ನೂ ಮಾಡಬೇಕು.

**ಬಸವಚೇತನ ಎಂ.ಎಚ್.,** ಬೀದರ್

### ಕರಾವಳಿ ಉತ್ಸವ: ಕನ್ನಡ ಪ್ರತಿಭೆ ಉಪೇಕ್ಷೆ

**ಉತ್ತರ** ಕನ್ನಡ ಜಿಲ್ಲೆಯಲ್ಲಿ ಇದೇ 22ರಿಂದ 27ರವರೆಗೆ 'ಕರಾವಳಿ ಉತ್ಸವ'ಕ್ಕೆ ಸಿದ್ಧತೆ ನಡೆದಿದೆ. ಇದಕ್ಕಾಗಿ ಕರಾವಳಿ ಅಭಿವೃದ್ಧಿ ಪ್ರಾಧಿಕಾರ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ₹6 ಕೋಟಿ ವೆಚ್ಚ ಮಾಡಲಾಗುತ್ತಿದೆ. ಇವೆಂಟ್ ಮ್ಯಾನೇಜ್‌ಮೆಂಟ್‌ನವರು ನಡೆಸಿಕೊಡುವ ಈ ಕಾರ್ಯಕ್ರಮದಲ್ಲಿ ಬಾಲಿವುಡ್ ಗಾಯಕರಾದ ಶಂಕರ್ ಮಹದೇವನ್, ಮೀಕಾ ಸಿಂಗ್, ಸೋನು ನಿಗಮ್, ರಫ್ತಾರ್, ಮಹಮ್ಮದ್ ದಾನೀಶ್, ದಲೇರ್ ಮೆಹಂದಿ ಭಾಗವಹಿಸಲಿದ್ದಾರೆ. ಇವರನ್ನು ನೋಡಿದರೆ ಕಾರವಾರವು ಕರ್ನಾಟಕದಲ್ಲಿದೆಯೇ ಎನ್ನುವ ಅನುಮಾನ ಮೂಡುತ್ತದೆ. ಜಿಲ್ಲಾಡಳಿತ ಮತ್ತು ಜಿಲ್ಲಾ ಉಸ್ತುವಾರಿ ಸಚಿವರಿಗೆ, ರಾಜ್ಯದಲ್ಲಿರುವ ಸ್ಥಳೀಯ ಗಾಯಕರು ಮತ್ತು ಸಂಗೀತಗಾರರು ಕಾಣದಿರುವುದು ಸೋಜಿಗವೇ ಸರಿ. ಇದು ಅನ್ಯಾಯದ ಪರಮಾವಧಿಯಲ್ಲದೆ ಬೇರೇನೂ ಅಲ್ಲ.

**ಚಂದ್ರಕಾಂತ ನಾಮಧಾರಿ,** ಅಂಕೋಲಾ

### ಅಪರಾಧಿಗೆ ಬೆಂಬಲ: ಸಮಾಜಕ್ಕೆ ಕಂಟಕ

**ನ್ಯಾಯಾಲಯದ** ಪರಿಭಾಷೆಯಲ್ಲಿ ಅಪರಾಧಗಳನ್ನು ಅಲ್ಪ, ಗಂಭೀರ ಮತ್ತು ಹೀನ ಎಂದು ವರ್ಗೀಕರಿಸಲಾಗಿದೆ. ಹೀನ ಅಪರಾಧಗಳೆಂದರೆ ಕೊಲೆ, ಅತ್ಯಾಚಾರ ಇತ್ಯಾದಿ. ಇಂತಹ ಅಪರಾಧ ಎಸಗಿದವರಲ್ಲಿ ರಾಜಕೀಯ ಮತ್ತು ಧಾರ್ಮಿಕ ನಾಯಕರಿದ್ದಾರೆ. ಇವರು ಒಬ್ಬರಿಗೊಬ್ಬರು ಬೆಂಬಲವಾಗಿದ್ದಾರೆ. ಇವರಿಂದ ಯಾರು ನೇರವಾಗಿ ಬಲಿಯಾಗಿದ್ದಾರೋ ಅವರಷ್ಟೆ ಇವರ ವಿರುದ್ಧ ಹೋರಾಡುತ್ತಾರೆ. ಉಳಿದವರು ತಮಗೆ ಸಂಬಂಧವಿಲ್ಲದಂತೆ ತಟಸ್ಥರಾಗಿರುತ್ತಾರೆ. ಇನ್ನೂ ದೌರ್ಭಾಗ್ಯ ಎಂದರೆ, ಇಂತಹ ಅಪರಾಧಿಗಳ ಹಿಂದೆ ಮುಂದೆ ಕುಣಿದಾಡುವ ಲಕ್ಷಾಂತರ ಆರಾಧಕರಿದ್ದಾರೆ. ಸಾಮಾನ್ಯ ಜನರು ಇವರನ್ನು ಸಮಾಜಕ್ಕೆ ಅಪಾಯಕಾರಿ ಎಂದು ಪರಿಗಣಿಸುವುದಿಲ್ಲ. ಆದರೆ, ಸಮಾಜ, ದೇವರ ಹೆಸರಿನಲ್ಲಿ ನಡೆಯುವ ಮೋಸ ಮತ್ತು ಧಾರ್ಮಿಕ ಆಚರಣೆಗಳನ್ನು ಮಾನವೀಯ ಕಳಕಳಿಯಿಂದ ಪ್ರಶ್ನಿಸುವವರನ್ನು ಅಪಾಯಕಾರಿ ಎಂದು ಪರಿಗಣಿಸುವುದು ದುರದೃಷ್ಟಕರ.

**ಶಶಿಧರ ಪಾಟೀಲ,** ಬಾಗಲಕೋಟೆ

### ಸಾಮಾಜಿಕ ಬಹಿಷ್ಕಾರ ಮಸೂದೆಗೆ ಸ್ವಾಗತ

**ಬೆಳಗಾವಿಯಲ್ಲಿ** ನಡೆದ ವಿಧಾನಮಂಡಲದ ಚಳಿಗಾಲದ ಅಧಿವೇಶನದಲ್ಲಿ ರಾಜ್ಯ ಸರ್ಕಾರ, ಕರ್ನಾಟಕ ಸಾಮಾಜಿಕ ಬಹಿಷ್ಕಾರ (ಪ್ರತಿಬಂಧ, ನಿಷೇಧ ಮತ್ತು ಪರಿಹಾರ) ಮಸೂದೆ ಮಂಡಿಸಿರುವುದು ಸ್ವಾಗತಾರ್ಹ. ಬಹುತೇಕವಾಗಿ ಪರಿಶಿಷ್ಟ ಜಾತಿ ಮತ್ತು ಪಂಗಡ, ಹಿಂದುಳಿದ ಜನಾಂಗದ ಜನರೇ ಸಾಮಾಜಿಕ ಬಹಿಷ್ಕಾರಕ್ಕೆ ತುತ್ತಾಗುತ್ತಾರೆ. ಅಂತರ್ಜಾತಿ ವಿವಾಹ, ಧಾರ್ಮಿಕ ಮತ್ತು ಸಾಂಸ್ಕೃತಿಕ ಆಚರಣೆ, ದೇವಸ್ಥಾನ ಪ್ರವೇಶ ಇತ್ಯಾದಿ ಪ್ರಕರಣಗಳಲ್ಲಿ ಬಲಾಢ್ಯರು, ಕೆಳಸ್ತರದ ಜನರ ಮೇಲೆ ಅಮಾನವೀಯವಾಗಿ ವರ್ತಿಸುತ್ತಾರೆ. ಮಸೂದೆಯು ಕಾನೂನು ರೂಪ ಪಡೆದು ನ್ಯಾಯಸಮ್ಮತವಾಗಿ ಜಾರಿಗೊಂಡರೆ ಸಂವಿಧಾನದ ಆಶಯ ಈಡೇರಿದಂತಾಗುತ್ತದೆ.

**ಪ್ರಜ್ವಲ್ ಜಿ.ಟಿ.,** ಕೆರಿಬೋಸಗಾ

### ಚುರುಮುರಿ



## ಟೂರಿಂಗ್ ಸಂಡಾಸು!

● ತುರುವೇಕೆರೆ ಪ್ರಸಾದ್

'ನಿಮ್ ಕೇರಿಯೋರೆಲ್ಲ ಟೂರ್ ಹೋದ್ರಂತೆ. ನೀನು ಹೋಗ್ಲಿಲ್ವಾ?' ಕೇಳಿದ ಗುದ್ಲಿಂಗ.

'ಇಲ್ಲ ಕಣಲೇ, ಶಕ್ತಿ ಯೋಜನೇಲೆ ಕರುನಾಡು ಇಂಚಿಂಚೂ ಬಿಡ್ದಂಗೆ ಪುಕ್ಕಟೆ ಟೂರ್ ಒಡ್ದು ಆಗೈತೆ. ಫಾರಿನ್ಗೆ ಕರ್ಕೊಂಡ್ ಹೋಗದಾದ್ರೆ ಬಂದೇನು ಅಂತ ನನ್ ಎಂಡ್ರು ಹಟ ಹಿಡ್ದವ್ಳೆ. ಇಯರ್ ಎಂಡ್‌ನಾಗೆ ಏರ್‌ಟ್ರಾಫಿಕ್ ಜಾಸ್ತಿ, ಇಂಡಿಗೊ ತರ ಹಾಲ್ಟ್ ಆಗ್ಬುಟ್ರೆ ಗಣಪತಿ ಅಂಗೆ ಇಮಾನನೇ ಸುತ್ತಿ ಕೈ ಮುಗಿಬೇಕಾಯ್ತದೆ. ಅದ್ಕೇ ಈ ವರ್ಷ ಟೂರೇ ಬ್ಯಾಡ ಅಂತ ಸುಮ್ಕಾದ್ವಿ' ಎಂದ ಮಾಲಿಂಗ.

'ಈ ವರ್ಷ ಭಾರೀ ಚಳಿ ಬಿದ್ದು ಟೂರ್ ಮೂಡು ಕಮ್ಮಿ ಆಗೈತೆ. ಎಲ್ಲಾ ಮನೇಲೇ ಕಂಬಳಿ ಗುಬರಾಕ್ಕಂಡು ಕುಂತವ್ರೆ' ಎಂದ ಕಲ್ಲೇಶಿ.

'ಆದ್ರೂ ಇಸ್ಕೂಲ್ ಹೈಕ್ಳನೆಲ್ಲಾ ಬಸ್ಸಿಗೆ ತುಂಬ್ಕಂಡ್ ಓಯ್ತಾವ್ರೆ. ಟೆಕ್‌ಪಾರ್ಕು ಬಿಟ್ಟು 'ಟ್ರಿಕ್‌ಪಾರ್ಕು' ವಿಧಾನಸೌಧ ತೋರ್ಸುದ್ರೆ ಆ ಗಾಳಿ ಬೀಸಿ ಮಕ್ಕಳೂ ಕೆಟ್ ರಾಜಕೀಯ ಶುರು ಹಚ್ಕತಾವೆ'.

'ರಾಜಕೀಯದೋರಿಗೂ ಡೆಲ್ಲಿ ಟೂರ್ ಒಡ್ದೂ ಒಡ್ದೂ ಸಾಕಾಗೈತೆ. ಹಾಕಿದ್ ಟವಲ್ ಬಿಟ್ಟು ಬೇರೆ ಕಡೆ ಓಗೋ ಅಂಗಿಲ್ಲ, ಇಲ್ ಇರೋ ಅಂಗಿಲ್ಲ, ತ್ರಿಶಂಕು ಸ್ಥಿತಿ ಆಗೈತೆ'.

'ಡೆಲ್ಲಿಗೆ ಹೋಗಿ ಏನ್ ಮಾಡೀಯೇ? 'ರಾಗಾ' ಜರ್ಮನಿಗೆ ಟೂರ್ ಹೋಗವ್ರಲ್ಲ'.

'ಟೂರ್ಗಿಂತ ಎಚ್ಚಾಗಿ ಯಾವ ಬಣಕ್ಕೆ ತೂರುದ್ರೆ ಲಾಭ ಆಯ್ತದೆ ಅನ್ನೋ ಲೆಕ್ಕಾಚಾರಕ್ಕೆ ಬಿದ್ದವ್ರೆ. 'ಜಾಗ ಇದ್ ಕಡೆ ತೂರು, ರಾಗಾ ಇದ್ ಕಡೆ ದೂರು!'

'ಎಲ್ಲಾ ಪಕ್ಷಗಳೂ ಟೂರಿಂಗ್ ಟಾಕೀಸೇ! ವಿಶ್ವಗುರು ಮೋದಿ ಮಾಮನೇ ಇಯರ್ ಎಂಡ್ ಟೂರ್ ಓಗಿಲ್ವಲ್ಲ?'

'ವಿಶ್ವಗುರು ಅಂತೆಲ್ಲಾ ಸುಮ್‌ಸುಮ್ಕೆ ಕರೀಬಾರ್ದು... ಟೂರಿಂಗ್ ಟಾಕೀಸಲ್ಲ, ಪುಟಿನ್ ತರ 'ಟೂರಿಂಗ್ ಸಂಡಾಸು' ಇದ್ದೋರೇ ಸುಪ್ರೀಮು' ಎಂದ ಪರ್ಮೇಶಿ.

ಎಲ್ಲಾ ಗೊಳ್ಳೆಂದು ನಕ್ಕರು.

### ಸಂಗತ

# ಗ್ರಾಮೀಣರಿಗಿನ್ನು ಗಾಂಧಿಯಲ್ಲ, ದೇವರೇ ದಿಕ್ಕು!

**ಗ್ರಾಮಭಾರತದ ಜೀವನಾಡಿಯಂತಿದ್ದ ಯೋಜನೆ ಹೆಸರು, ಸ್ವರೂಪ ಬದಲಾಗಿದೆ. ಇದು, ರಾಜಕೀಯ ನಿರ್ಧಾರವಷ್ಟೇ ಅಲ್ಲ; ಮೌಲ್ಯಗಳ ಪಲ್ಲಟವೂ ಹೌದು.**

● ರಾಘವೇಂದ್ರ ಕೆ. ತೊಗರ್ಸಿ

**ಭಾರತೀಯ** ರಿಸರ್ವ್ ಬ್ಯಾಂಕ್ ಮುದ್ರಿಸುವ ರೂಪಾಯಿ ನೋಟುಗಳಿಗೆ ಆಪ್ತತೆ ಮತ್ತು ಅನನ್ಯ ಸ್ವರೂಪ ದೊರಕಿದ್ದು 1996ರ ನಂತರ. ಅದಕ್ಕೆ ಕಾರಣ, ನೋಟುಗಳಲ್ಲಿ ಕಾಣಿಸಿಕೊಂಡ ಮಹಾತ್ಮ ಗಾಂಧಿ ಚಿತ್ರ. ರೂಪಾಯಿ ನೋಟು ಕೂಡ ಜನಸಾಮಾನ್ಯರ ಪಾಲಿಗೆ ರಾಷ್ಟ್ರೀಯತೆಯನ್ನು ಬಿಂಬಿಸುವ ಸಂಕೇತವಾಯಿತು. ಕಾಣಿಸಿಕೊಂಡಲ್ಲೆಲ್ಲ ಏಕತೆ–ಸಮಾನತೆ ಮೂಡಿಸಿ, ರಾಷ್ಟ್ರೀಯಪ್ರಜ್ಞೆಯನ್ನು ವಿಕಾಸಗೊಳಿಸಿದ ಯುಗಪುರುಷ ಮಹಾತ್ಮ ಗಾಂಧೀಜಿ. ಅವರ ಹೆಸರು ಈಗ ವಿವಾದದ ಕೇಂದ್ರ ಆಗಿರುವುದು ಬದಲಾದ ಯುಗಧರ್ಮವನ್ನು ಸೂಚಿಸುತ್ತಿದೆಯೆ ಅಥವಾ ಮೌಲ್ಯಗಳ ಪಲ್ಲಟದ ಸಂಕೇತವೆ?

'ನನ್ನ ಜೀವನವೇ ನನ್ನ ಸಂದೇಶ' ಎನ್ನುವ ಮಾತನ್ನು ಗಾಂಧೀಜಿ ಹೊರತು ಮತ್ತೊಬ್ಬ ದಾರ್ಶನಿಕ ಜಗತ್ತಿನಲ್ಲಿ ಎಲ್ಲೂ ಹೇಳಿರಲಾರರು. ಈ ವಾಕ್ಯ ಅವರ ಸತ್ಯಾನ್ವೇಷಣೆಯ ಬದುಕಿನ ಪಾರದರ್ಶಕತೆಗೆ ಕನ್ನಡಿಯಂತಿದೆ. ಆಲ್ಬರ್ಟ್ ಐನ್‌ಸ್ಟೈನ್ 'ರಕ್ತ ಮಾಂಸ ತುಂಬಿದ ಇಂತಹ ಮನುಷ್ಯ ಈ ಲೋಕದಲ್ಲಿ ನಡೆದಾಡಿದ್ದ ಎಂದರೆ ಮುಂಬರುವ ಜನಾಂಗಗಳು ಅಚ್ಚರಿಪಡುತ್ತವೆ' ಎಂದು ಗಾಂಧಿಯ ಮಹೋನ್ನತ ಬದುಕನ್ನು ಕುರಿತು ಹೇಳಿದ್ದರು. ವಿಪರ್ಯಾಸವೆಂದರೆ, ಅಚ್ಚರಿಪಡುವ ಶಕ್ತಿಯನ್ನೂ ಕಳೆದುಕೊಂಡಿರುವ ನಾವು ತಿರಸ್ಕಾರದ ಮನೋಭಾವ ಬೆಳೆಸಿಕೊಳ್ಳುತ್ತಿದ್ದೇವೆ.

ಇತಿಹಾಸದಲ್ಲಿ ರಾರಾಜಿಸುವ ಗುರುತುಗಳ ಬಣ್ಣ ಬದಲಿಸಿದರೂ ಮಹಾಸಾಧನೆಯ ಹೆಗ್ಗುರುತಾಗುತ್ತದೆ ಎಂದು ಭಾರತ ಸರ್ಕಾರ ಭಾವಿಸಿದಂತಿದೆ. ಹಾಗಾಗಿ, ಬಣ್ಣ ಬದಲಿಸುವ ಸಾಧನೆಯನ್ನು ಮಾಡುತ್ತಿದೆ. 'ಯೋಜನಾ ಆಯೋಗ'ವನ್ನು 'ನೀತಿ ಆಯೋಗ' ಎಂದು ಸೃಷ್ಟಿಸಿತು. 'ಕೇಂದ್ರೀಯ ವಿದ್ಯಾಲಯ'ವನ್ನು 'ಪಿಎಂಶ್ರೀ ಕೇಂದ್ರೀಯ ವಿದ್ಯಾಲಯ' ಎಂದುಫಲಕ ಬದಲಿಸಿದ್ದೂ ಆಯಿತು. 'ಭಾರತೀಯ ದಂಡ ಸಂಹಿತೆ' (ಐಪಿಸಿ)ಯನ್ನು 'ಭಾರತೀಯ ನ್ಯಾಯ ಸಂಹಿತಾ' (ಬಿಎನ್‌ಎಸ್) ಎಂದು ಮರುನಾಮಕರಣ ಮಾಡಿದ್ದಾಯಿತು.

ದೆಹಲಿಯ ರಾಜಪಥವನ್ನು 'ಕರ್ತವ್ಯ ಪಥ' ಎಂದು ಬದಲಿಸಿದ ಕೇಂದ್ರ ಸರ್ಕಾರ, ಪ್ರಧಾನ ಮಂತ್ರಿ ಕಚೇರಿಗೆ 'ಸೇವಾ ತೀರ್ಥ' ಎಂಬ ಹೆಗ್ಗುರುತನ್ನು ಮೂಡಿಸಿತು. ಕೇಂದ್ರ ಸಚಿವಾಲಯಕ್ಕೆ 'ಕರ್ತವ್ಯ ಭವನ' ಎಂಬ ನಾಮಬಲವನ್ನೂ ದಯಪಾಲಿಸಿತು. ರಾಜ್ಯಪಾಲರ ಕಾರ್ಯಾಲಯಗಳ 'ರಾಜಭವನ'ಕ್ಕೆ 'ಲೋಕಭವನ' ಎಂದು ಹೆಸರು ಬದಲಿಸುವ ಪ್ರಯತ್ನವೂ ನಡೆದಿದೆ. 'ರಾಜಭವನ' ಎಂಬ ಹೆಸರು ವಸಾಹತುಶಾಹಿ ಪ್ರತೀಕ ಎಂದು ಕೇಂದ್ರ ಹೇಳಿದೆ. ತರ್ಕಬದ್ಧವಾಗಿ ಯೋಚಿಸಿದರೆ, ರಾಜ್ಯಪಾಲರಂತಹ ನೆಪಮಾತ್ರದ ಹುದ್ದೆಗಳೇ ಅಗತ್ಯವಿಲ್ಲ. ರಾಜಕೀಯ ಕಾರಣಗಳಿಗಾಗಿ ರೂಪುಗೊಳ್ಳುತ್ತಿರುವ ರಾಜ್ಯಪಾಲ ಹುದ್ದೆಗಳು, ಕೆಲವು ರಾಜ್ಯಗಳಲ್ಲಿ ಸೃಷ್ಟಿಸುತ್ತಿರುವ ಬಿಕ್ಕಟ್ಟುಗಳನ್ನು ಗಮನಿಸಿದರೆ, ಆಲಂಕಾರಿಕ ಹುದ್ದೆ ರಾಜ್ಯಗಳಿಗೆ ಹೇಗೆ ಭಾರವಾಗಬಲ್ಲದು ಎನ್ನುವುದು ಸ್ಪಷ್ಟವಾಗುತ್ತದೆ.



ಗಾಂಧೀಜಿ ಜನ್ಮಶತಾಬ್ದಿಯ ನೆನಪಿಗಾಗಿ 1969ರಲ್ಲಿ 'ರಾಷ್ಟ್ರೀಯ ಸೇವಾ ಯೋಜನೆ' ಸ್ಥಾಪಿಸಲಾಯಿತು. ಅವರ ತತ್ತ್ವ ಆದರ್ಶಗಳ ಬುನಾದಿಯ ಮೇಲೆ ನಮ್ಮ ಶಿಕ್ಷಣ ವ್ಯವಸ್ಥೆ 'ಎನ್‌ಎಸ್‌ಎಸ್' ಯೋಜನೆಯನ್ನು ಅನುಷ್ಠಾನಗೊಳಿಸಿತು. 'ಎನ್‌ಎಸ್‌ಎಸ್' ಗೀತೆ– 'ಗ್ರಾಮಗಳ ಉದ್ಧಾರ ನಮ್ಮ ಉದ್ದೇಶ, ಗ್ರಾಮಗಳ ಬೆಳೆಯೇ ಬೆಳೆಯುವುದು ದೇಶ' ಎಂದು ಹೇಳುತ್ತದೆ. ಒಟ್ಟಾರೆ 'ಎನ್‌ಎಸ್‌ಎಸ್' ಗಾಂಧಿ ಭಾವ ಬಿಂಬವನ್ನೇ ಭೌತಿಕವಾಗಿ ಮತ್ತು ಭಾವನಾತ್ಮಕವಾಗಿ ಪ್ರತಿಫಲಿಸುತ್ತದೆ.

ಕೇಂದ್ರ ಸಚಿವ ಸಂಪುಟ 'ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ'ಗೆ 'ಪೂಜ್ಯ ಬಾಪು ಗ್ರಾಮೀಣ ಉದ್ಯೋಗ ಯೋಜನೆ' ಎಂದು ಮರುನಾಮಕರಣ ಮಾಡಲು ಉದ್ದೇಶಿಸಿತ್ತು. ಆದರೆ, ಈಗ 'ದಿ ವಿಕಸಿತ ಭಾರತ್ ಗ್ಯಾರಂಟಿ ಫಾರ್ ರೋಜ್‌ಗಾರ್ ಅಂಡ್ ಅಜೀವಿಕಾ ಮಿಷನ್' ಹೆಸರನ್ನು ಯೋಜನೆ ಪಡೆದಿದೆ. 'ಮನರೇಗಾ' ಎಂಬ ಸರಳ ಆಕರ್ಷಕ ಹೆಸರು 'ವಿಬಿ– ಜಿ ರಾಮ್ ಜಿ' ಎಂದಾಗಿದೆ.

ಯುಪಿಎ ಸರ್ಕಾರ 2005ರಲ್ಲಿ ಉದ್ಯೋಗ ಖಾತರಿ ಯೋಜನೆಯನ್ನು ಅನುಷ್ಠಾನಗೊಳಿಸಿತು. ಆಗ 'ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಕಾಯ್ದೆ' ಆಗಿತ್ತು. 2009ರ ಅಕ್ಟೋಬರ್ 2ರಂದು ಆ ಯೋಜನೆಗೆ 'ಮಹಾತ್ಮ ಗಾಂಧಿ' ಸೇರಿಸಿ 'ಮನರೇಗಾ' ಎಂದು ವಿಸ್ತರಿಸಲಾಯಿತು. ಗ್ರಾಮೀಣ ಪ್ರದೇಶದ ಕೂಲಿ ಕಾರ್ಮಿಕರಿಗೆ ಆರ್ಥಿಕ ಭದ್ರತೆ ಒದಗಿಸುವ ನಿಟ್ಟಿನಲ್ಲಿ ಜಾರಿಗೊಂಡ ಯೋಜನೆ, ಕನಿಷ್ಠ 100 ದಿನಗಳ ಉದ್ಯೋಗಾವಕಾಶ ಕಲ್ಪಿಸುತ್ತಿತ್ತು. ಈ ಹಿನ್ನೆಲೆಯಲ್ಲಿ ಆಹಾರ ಭದ್ರತಾ ಕಾಯ್ದೆಯಷ್ಟೇ ಮಹತ್ವವನ್ನು ಇದು ಪಡೆದಿತ್ತು. ಕ್ರಮೇಣ ಉದ್ದೇಶಿತ ದಿನಗಳ ಉದ್ಯೋಗ ಖಾತರಿ ದುಡಿಯುವ ಕೈಗಳಿಗೆ ಸಿಗಲಿಲ್ಲ.

ಬಡತನ ನಿರ್ಮೂಲನೆ ಮತ್ತು ಸಮಾನ ವೇತನವನ್ನು ಉತ್ತೇಜಿಸುವ ದೃಷ್ಟಿಯಲ್ಲಿ ರೂಪಿಸಿರುವ ಉದ್ಯೋಗ ಖಾತರಿ ಯೋಜನೆಗೆ ಗಾಂಧಿ ಮಹಾತ್ಮನ ಹೆಸರು ಅರ್ಥಪೂರ್ಣವಾಗಿತ್ತು. ಈಗ ಯೋಜನೆಯ ಸ್ವರೂಪದ ಜೊತೆಗೆ ಹೆಸರನ್ನೂ ಸರ್ಕಾರ ಬದಲಿಸಿದೆ. ಈ ಮೂಲಕ ಗ್ರಾಮೀಣ ಅಭಿವೃದ್ಧಿಗೆ ಬಲವಾದ ಹೊಡೆತ ಬೀಳಲಿದೆ. ಜೊತೆಗೆ, ಹೆಸರು ಬದಲಾವಣೆ ನೈಜ ಸಮಸ್ಯೆಯನ್ನು ಮರೆಮಾಚುವ ಪ್ರಯತ್ನದಂತಿದೆ.

ನಗರ ಪ್ರದೇಶಗಳ ಅಭಿವೃದ್ಧಿಯನ್ನೇ ದೇಶದ ಅಭಿವೃದ್ಧಿ ಎಂದು ಬಿಂಬಿಸಲಾಗುತ್ತಿರುವ ಸಂದರ್ಭದಲ್ಲಿ, ಗ್ರಾಮೀಣ ಭಾಗದ ಜೀವನಾಡಿಯಂತಿದ್ದ ಯೋಜನೆಯ ಹೆಸರು ಮತ್ತು ಸ್ವರೂಪದಲ್ಲಿನ ಬದಲಾವಣೆ ಮಾರ್ಮಿಕವಾಗಿದೆ. ಗಾಂಧೀಜಿ ಜಾಗದಲ್ಲಿ ಈಗ ರಾಮ್‌ಜಿ ಬಂದಿದ್ದಾರೆ. ಅಂದರೆ, ಗ್ರಾಮೀಣ ಜನರಿಗೆ 'ದೇವರೇ ದಿಕ್ಕು' ಎನ್ನುವುದನ್ನು ಸರ್ಕಾರ ಸಾಂಕೇತಿಕವಾಗಿ ಹೇಳುತ್ತಿದೆಯೆ?

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಸಾಮಾಜಿಕ ಜಾಲತಾಣ, ಆನ್‌ಲೈನ್ ಪೋರ್ಟಲ್ ಮೂಲಕ ಚಿಕಿತ್ಸಾ ಸಲಹೆ ನೀಡುವ ಪ್ರವೃತ್ತಿ

# ಪುಕ್ಕಟೆ ಆರೋಗ್ಯ ಸಲಹೆಯೆಂಬ ಡಿಜಿಟಲ್ ವ್ಯಾಧಿ

'ಮೊಟ್ಟೆಯಲ್ಲಿ ಕ್ಯಾನ್ಸರ್‌ಕಾರಕ ಅಂಶವಿದೆ' ಎಂಬ ಸುಳ್ಳು ಸುದ್ದಿಯೊಂದು ಸಾಮಾಜಿಕ ಜಾಲತಾಣಗಳಲ್ಲಿ ಸದ್ದು ಮಾಡುತ್ತಿದೆ. ಆರೋಗ್ಯಕ್ಕೆ ಸಂಬಂಧಿಸಿದ ಇಂಥವೇ ನೂರಾರು ಸುದ್ದಿ, ವಿಡಿಯೊಗಳು ಸಾಮಾಜಿಕ ಜಾಲತಾಣಗಳಲ್ಲಿ ನಿತ್ಯವೂ ಹರಿದಾಡುತ್ತಿರುತ್ತವೆ. ಇವು ಜನರ ಮೇಲೆ ಯಾವ ರೀತಿಯ ಪರಿಣಾಮ ಬೀರುತ್ತಿವೆ, ಇದಕ್ಕೆ ಪರಿಹಾರವೇನು, ಸುದ್ದಿಗಳ ಖಾತರಿಗೆ ಏನು ಮಾಡಬೇಕು ಎನ್ನುವ ಹಲವು ಪ್ರಶ್ನೆಗಳು ಕಾಡುತ್ತವೆ. ತಜ್ಞರು ಹೇಳುವಂತೆ, ಇಂಥ ಸಲಹೆಗಳು ಆರೋಗ್ಯಕ್ಕೆ ಅಪಾಯಕಾರಿ




ಎಐ ಚಿತ್ರ

## ತಜ್ಞರ ಸಲಹೆಗಳು

- ಯಾರೇ ಆರೋಗ್ಯ ಸಲಹೆ ಪ್ರಕಟಿಸುವಾಗ ತಜ್ಞವೈದ್ಯರ ಮಾರ್ಗದರ್ಶನವಿರಬೇಕು. ಪ್ರಕಟಿಸುವ ಸಲಹೆಗಳು, ನಿಗದಿತ ಆರೋಗ್ಯ ವಿಷಯ, ವಯಸ್ಸು, ಔಷಧದ ಪ್ರಮಾಣ, ಎಚ್ಚರಿಕೆ ಸಂದೇಶಗಳಂತಹ ಮಾಹಿತಿಯ ಉಲ್ಲೇಖವಿರಬೇಕು. ಸಾಧ್ಯವಾದರೆ ವೈದ್ಯರ ಸಂಪರ್ಕ ಸಂಖ್ಯೆ ಪ್ರಕಟಿಸಿದರೆ ಉತ್ತಮ
- ಪ್ರಕಟವಾಗುವ 'ಸಲಹೆ'ಗಳನ್ನು ನಮ್ಮ ಸಂಬಂಧಿಕರು, ಅಕ್ಕಪಕ್ಕದವರು, ಸ್ನೇಹಿತರೂ ಓದಿ, ಅಳವಡಿಸಿಕೊಳ್ಳುತ್ತಾರೆ ಎಂಬ ಎಚ್ಚರಿಕೆ ಮಾಹಿತಿ ಹಂಚುವವರಿಗೆ ಇರಬೇಕು
- ತಜ್ಞರ ಅನುಮೋದನೆ, ಅಭಿಪ್ರಾಯವಿಲ್ಲದೇ ಕೇವಲ ಊಹೆಯೊಂದಿಗೆ ಯಾವುದೇ ಜಾಲತಾಣಗಳಲ್ಲಿ ಆರೋಗ್ಯ ಸಲಹೆಗಳನ್ನು ಪ್ರಕಟಿಸಬಾರದು. ಇಂಥದ್ದೊಂದು ಪಾಲಿಸಿ/ನಿಯಮವನ್ನು ಸರ್ಕಾರವೇ ಜಾರಿಗೆ ತಂದರೆ ಒಳ್ಳೆಯದು
- ನಾಗರಿಕರೂ ಸಾಮಾನ್ಯ ಆರೋಗ್ಯ ಸಲಹೆಗಳ ಬಗ್ಗೆ ಎಚ್ಚರ ವಹಿಸುವುದು ಮುಖ್ಯ. ಅಂತರ್ಜಾಲ ಮತ್ತು ಇತರೆ ಮೂಲಗಳಿಂದ ಸಿಗುವ ಸಲಹೆಗಳು ವ್ಯಕ್ತಿಗತ ಆರೋಗ್ಯಕ್ಕೆ ಸರಿಹೋಗದಿರಬಹುದು. ಹಾಗಾಗಿ ವೈದ್ಯರನ್ನು ಸಂಪರ್ಕಿಸುವುದು ಉತ್ತಮ
- ಸುಳ್ಳು ಮಾಹಿತಿಯಿಂದ ದೂರವಿರಿ. ವೈದ್ಯಕೀಯ ಸಲಹೆಗಾಗಿ ಯಾವಾಗಲೂ ಅಧಿಕೃತ ಮೂಲಗಳನ್ನು ಅವಲಂಬಿಸಿ

• ಗಾಣಧಾಳು ಶ್ರೀಕಂಠ

ಹಿರಿಯರೊಬ್ಬರು ಮಧುಮೇಹ ನಿಯಂತ್ರಣಕ್ಕಾಗಿ ಔಷಧ ತೆಗೆದುಕೊಳ್ಳುತ್ತಿದ್ದರು. ಒಮ್ಮೆ ಫೇಸ್‌ಬುಕ್‌ನಲ್ಲಿ 'ಈ ಎಲೆಗಳ ಕಷಾಯ ಕುಡಿಯಿರಿ, ರಕ್ತದಲ್ಲಿ ಸಕ್ಕರೆ ನಿಯಂತ್ರಣಕ್ಕೆ ಬರುತ್ತದೆ' ಎಂಬ ಮಾಹಿತಿ ಗಮನಿಸಿದರು. ಅವರು ಆ ಎಲೆಗಳ ಕಷಾಯ ಮಾಡಿ ಕುಡಿದರು. ಆರಂಭದಲ್ಲಿ ಆರೋಗ್ಯ ಸ್ವಲ್ಪ ಸುಧಾರಿಸಿದಂತೆ ಕಂಡಿತು. ಕಷಾಯ ತಗೊಂಡು, ನಿತ್ಯದ ಔಷಧ ನಿಲ್ಲಿಸಿದರು. ಆದರೆ, ದಿನ ಕಳೆದಂತೆ ಆರೋಗ್ಯದಲ್ಲಿ ವ್ಯತ್ಯಾಸ ಕಾಣಿಸಿತು. ಆಗ ವೈದ್ಯರ ಬಳಿಗೆ ತೆರಳಿದರು. ಪರೀಕ್ಷೆ ಮಾಡಿಸಿದಾಗ, ಅವರಲ್ಲಿ ಸಕ್ಕರೆ ಅಂಶ ಹೆಚ್ಚಾಗಿತ್ತು. ಬೇರೆ ಬೇರೆ ಆರೋಗ್ಯ ಸಮಸ್ಯೆಗಳೂ ಕಾಣಿಸಿಕೊಂಡಿದ್ದವು. ಅವರು ತಮ್ಮ ಆರೋಗ್ಯ ಸುಧಾರಣೆಗೆ ಹರಸಾಹಸ ಮಾಡಬೇಕಾಯಿತು.

ಅಂಥದ್ದೇ ಇನ್ನೊಂದು ಘಟನೆ; ಕೋವಿಡ್ ಸಮಯದಲ್ಲಿ ಮಹಿಳೆಯೊಬ್ಬರು ದೇಹದಲ್ಲಿನ ರೋಗ ನಿರೋಧಕ ಶಕ್ತಿ ಹೆಚ್ಚಿಸಿಕೊಳ್ಳಲು ಯಾವುದೋ ವಾಟ್ಸ್‌ಆ್ಯಪ್ ಗುಂಪಿನಲ್ಲಿ ಕಂಡ ಔಷಧವನ್ನು ತೆಗೆದುಕೊಂಡರು. ದಿನ ಕಳೆಯುವುದರಲ್ಲಿ ದೇಹದ ಉಷ್ಣತೆ ತೀವ್ರವಾಯಿತು. ವೈದ್ಯರನ್ನು ಸಂಪರ್ಕಿಸಿದರು. ನಿಗದಿತ ಪ್ರಮಾಣ ಮೀರಿ ಔಷಧ ಸೇವಿಸಿದ್ದು, ಅದು ಇತರೆ ಅನಾರೋಗ್ಯಕ್ಕೂ ಕಾರಣವಾಗಿದ್ದನ್ನು ವೈದ್ಯರು ಗುರುತಿಸಿದರು.

ಜಾಲತಾಣದಲ್ಲಿ ಹರಡುವ ಇಂಥ ಅನಾಮಿಕ ವೈದ್ಯರ 'ಆರೋಗ್ಯ ಸಲಹೆ' ಅನುಸರಿಸಿ ಆರೋಗ್ಯ ಕೆಡಿಸಿಕೊಂಡು, ಪ್ರಾಣಕ್ಕೆ ಅಪಾಯ ತಂದುಕೊಂಡಿರುವಂತಹ ಪ್ರಕರಣಗಳು ತಜ್ಞವೈದ್ಯರ ಬಳಿ ಸಾಕಷ್ಟಿವೆ. ಮೇಲೆ ಹೇಳಿದ ಈ ಎರಡೂ ಘಟನೆಗಳು ಅಂತಹ ಪ್ರಕರಣಗಳ ಸ್ಯಾಂಪಲ್ ಅಷ್ಟೇ.

ಹಿಂದೆಲ್ಲಾ ಬಾಯಿಂದ ಬಾಯಿಗೆ ನಿಧಾನವಾಗಿ ಹರಡುತ್ತಿದ್ದ ಇಂಥ ಆರೋಗ್ಯ ಸಲಹೆಗಳು, ವಾಟ್ಸ್‌ಆ್ಯಪ್, ಫೇಸ್‌ಬುಕ್‌ನಂತಹ ಸಾಮಾಜಿಕ ಮಾಧ್ಯಮಗಳು ಶುರುವಾದ ಮೇಲೆ ವೇಗವಾಗಿ ಹರಡತೊಡಗಿವೆ. ಕೋವಿಡ್ ನಂತರ ಇದು ಇನ್ನೂ ಹೆಚ್ಚಾಗಿದೆ. ಈಗೀಗ ಸಾಮಾಜಿಕ ಮಾಧ್ಯಮ ತೆರೆದರೆ ಸಾಕು ಇಂಥ ಆರೋಗ್ಯ ಸಲಹೆಗಳ ನೂರಾರು ವಿಡಿಯೊ, ಪೋಸ್ಟ್‌ಗಳು ಹರಿದಾಡುತ್ತಿರುತ್ತವೆ. ವಾಟ್ಸ್‌ಆ್ಯಪ್ ತೆಗೆದರೆ ಶುಭೋದಯದ ಜೊತೆಗೆ 'ಮಧುಮೇಹಕ್ಕೆ ರಾಮಬಾಣ ಈ ಎಲೆ.. ಇದನ್ನು ಮೂಸಿದ್ರೆ ಸಾಕು ರಕ್ತದಲ್ಲಿನ ಸಕ್ಕರೆ ಮಟ್ಟ ಕಡಿಮೆಯಾಗುತ್ತದೆ' ಎಂಬ ಟಿಪ್ಸ್ ಕಾಣುತ್ತದೆ. 'ಈ ಎಲೆಗಳನ್ನು ಪ್ರತಿದಿನ ಬೆಳಿಗ್ಗೆ ನೀರಿನಲ್ಲಿ ಕುದಿಸಿ ಆ ನೀರನ್ನು ಖಾಲಿ ಹೊಟ್ಟೆಯಲ್ಲಿ ಸೇವಿಸಿ ಅಜೀರ್ಣ ಸಮಸ್ಯೆ ನಿವಾರಣೆಯಾಗುತ್ತದೆ' ಎಂಬ ಮಾಹಿತಿಯ ಪೋಸ್ಟರ್ ಇರುತ್ತದೆ.

ವಿಚಿತ್ರವೆಂದರೆ, ಇಂಥ ಮಾಹಿತಿಯ ಕೊನೆಯಲ್ಲಿ ಯಾವುದೇ ವೈದ್ಯರು, ತಜ್ಞರ ಹೆಸರು, ಸಂಸ್ಥೆಯ ಮುದ್ರೆ ಏನೂ ಇರುವುದಿಲ್ಲ. ಆದರೂ ಇಂತಹ ವಿಡಿಯೊಗಳಿಗೆ, ಪೋಸ್ಟರ್‌ಗಳಿಗೆ, ಪೋಸ್ಟ್‌ಗಳಿಗೆ ಸಾವಿರ, ಲಕ್ಷಗಳ ಲೆಕ್ಕದಲ್ಲಿ ವ್ಯೂಸ್, ಲೈಕ್ಸ್, ಕಾಮೆಂಟ್ಸ್ ಇರುತ್ತವೆ. ಅಷ್ಟೇ ವೇಗವಾಗಿ ಹಂಚಿಕೆಯೂ ಆಗುತ್ತಿರುತ್ತವೆ. ಜೊತೆಗೆ ಪ್ರಶ್ನೆಗಳೂ ಇರುತ್ತವೆ. ಅಂದರೆ, ಅಷ್ಟು ಮಂದಿ ಇಂಥ ಆರೋಗ್ಯ ಸಲಹೆಯನ್ನು ವೀಕ್ಷಿಸಿರುತ್ತಾರೆ.

ಸಾಮಾಜಿಕ ಜಾಲತಾಣಗಳು ಹೆಚ್ಚು ಪ್ರವರ್ಧಮಾನಕ್ಕೆ ಬಂದ ಮೇಲೆ ಇಂಥ ಆರೋಗ್ಯ ಸಲಹೆಗಳು ಹೆಚ್ಚು ಪ್ರಚಾರದಲ್ಲಿವೆ. ಯಾವುದೋ ಒಂದು ಔಷಧ/ ಮದ್ದಿನಿಂದ ಯಾರೋ ಒಬ್ಬರಿಗೆ ರೋಗ ನಿಯಂತ್ರಣಕ್ಕೆ ಬಂತೆಂದರೆ, ಕೆಲವರು ಅದನ್ನೇ ವಾಟ್ಸ್ ಆ್ಯಪ್ ಮತ್ತಿತರ ಜಾಲತಾಣಗಳ ಮೂಲಕ ಹಂಚಿಕೊಳ್ಳುತ್ತಾರೆ.

**'ಅನಧಿಕೃತ ಮಾಹಿತಿ' ಪರಿಣಾಮ:** 'ಎಲ್ಲ ರೋಗಕ್ಕೂ, ಎಲ್ಲ ವಯೋಮಾನದ ವ್ಯಕ್ತಿಗಳಿಗೂ ಒಂದೇ ರೀತಿಯ ಔಷಧ, ಚಿಕಿತ್ಸೆಗಳಿರುವುದಿಲ್ಲ. ವ್ಯಕ್ತಿಯಿಂದ ವ್ಯಕ್ತಿಗೆ, ರೋಗದಿಂದ ರೋಗಕ್ಕೆ ವ್ಯತ್ಯಾಸವಾಗುತ್ತದೆ. ಈ ಜಾಲತಾಣಗಳಲ್ಲಿ ಬರುವ ಆರೋಗ್ಯ ಸಲಹೆಯನ್ನು ಈ ನಿಟ್ಟಿನಲ್ಲಿ ಪರಿಶೀಲಿಸದೇ, ವೈದ್ಯರ ಸಲಹೆ ಪಡೆಯದೇ ಅನುಸರಿಸಿದಾಗ ರೋಗ ಗುಣವಾಗುವ ಬದಲಿಗೆ, ಬೇರೆ ಸಮಸ್ಯೆಗೂ ಕಾರಣವಾಗಬಹುದು'– ಇದು ವೈದ್ಯರ ಸಾಮಾನ್ಯ ಅಭಿಪ್ರಾಯ.

'ಆಯುರ್ವೇದದಲ್ಲಿ ವ್ಯಕ್ತಿಯ (ರೋಗಿಯ) ದೇಹ ಪ್ರಕೃತಿ ಮತ್ತು ಅವರಲ್ಲಿರುವ ವಾತ, ಪಿತ್ತ, ಕಫ– ಈ ತ್ರಿದೋಷಗಳನ್ನು ಆಧರಿಸಿ ಚಿಕಿತ್ಸೆ, ಔಷಧ, ಪಥ್ಯ ಸಲಹೆ ನೀಡಲಾಗುತ್ತದೆ. ವಯಸ್ಸಿನ ಆಧಾರದಲ್ಲಿ ಔಷಧ ತೆಗೆದುಕೊಳ್ಳುವ ಅವಧಿ, ಪ್ರಮಾಣವನ್ನೂ (ಡೋಸೇಜ್) ಸೂಚಿಸಲಾಗುತ್ತದೆ. ಯಾರೋ ಹೇಳಿದ ಔಷಧ ಎಲ್ಲರಿಗೂ ಅನ್ವಯವಾಗುವುದಿಲ್ಲ' ಎಂದು ಹೇಳುತ್ತಾರೆ ಆಯುರ್ವೇದ ವೈದ್ಯೆ ಡಾ. ವಸುಂಧರಾ ಭೂಪತಿ.

ಉದಾಹರಣೆಗೆ, 'ನಿತ್ಯ ಬಿಸಿನೀರಿಗೆ ಜೇನುತುಪ್ಪ ಹಾಕಿ ಕುಡಿಯಿರಿ, ಸಣ್ಣಗಾಗುತ್ತೀರಿ' ಎಂಬುದು ವಾಟ್ಸ್‌ಆ್ಯಪ್‌ಗಳಲ್ಲಿ ಹರಿದಾಡುವ ಸಾಮಾನ್ಯ ಆರೋಗ್ಯ ಸಲಹೆ. ಒಂದೊಮ್ಮೆ ಇದನ್ನು 'ಮಧುಮೇಹಿ'ಗಳು ಅನುಸರಿಸಿದರೆ, ಅವರು ಸಣ್ಣಗಾಗುವ ಬದಲಿಗೆ ಅವರ ರಕ್ತದಲ್ಲಿ ಸಕ್ಕರೆ ಅಂಶ ಹೆಚ್ಚಾಗುತ್ತದೆ (ಅಸಲಿಗೆ ಬಿಸಿನೀರಿಗೆ ಜೇನುತುಪ್ಪ ಬೆರೆಸಿ ಕುಡಿಯುವುದು ಸೂಕ್ತವೇ ಅಲ್ಲ). ಬೆಳಿಗ್ಗೆ ವಾಯುವಿಹಾರ ಮಾಡಿದರೆ ಆರೋಗ್ಯಕ್ಕೆ ಒಳ್ಳೆಯದು ಎಂಬ ಸಲಹೆ ಕೊಡುತ್ತಾರೆ. ಆದರೆ, ಅಸ್ತಮಾ ಇರುವವರಿಗೆ ಬೆಳಗಿನ ವಾಯುವಿಹಾರ ಒಳ್ಳೆಯದಲ್ಲ. ಇಂಥ ಸಲಹೆಗಳಿಂದ ಉಪಯೋಗಕ್ಕಿಂತ ಅಪಾಯವೇ ಹೆಚ್ಚಾಗುತ್ತದೆ ಎಂದು ಉದಾಹರಿಸುತ್ತಾರೆ ವಸುಂಧರಾ.

ಇಂಥ ಅವೈಜ್ಞಾನಿಕ ಆರೋಗ್ಯ ಸಲಹೆಗಳಿಂದ ಸಣ್ಣ ಮಕ್ಕಳಿಗೂ ಅಪಾಯವಾಗುತ್ತದೆ ಎಂಬುದರ ಬಗ್ಗೆ ಮಡಿಕೇರಿಯ ಮಕ್ಕಳ ತಜ್ಞ ಡಾ. ಕುಶವಂತ್ ಕೋಳಿಬೈಲು ಉದಾಹರಿಸುತ್ತಾರೆ. 'ರಾಷ್ಟ್ರೀಯ, ಅಂತರರಾಷ್ಟ್ರೀಯ ವೈದ್ಯಕೀಯ ಶಿಷ್ಟಾಚಾರದ ಪ್ರಕಾರ ಆರು ತಿಂಗಳು ಒಳಗಿನ ಮಕ್ಕಳಿಗೆ ಯಾವ್ಯಾವುದೋ ಔಷಧ ಕೊಡುವಂತಿಲ್ಲ. ಆದರೆ, ಎಲ್ಲೋ ಸಲಹೆ ರೂಪದಲ್ಲಿ ಸಿಗುವ ಮನೆಮದ್ದನ್ನು ಮಕ್ಕಳಿಗೆ ನೀಡಿ, ಅವರ ಆರೋಗ್ಯ ತೀರಾ ಹದಗೆಟ್ಟಿರುವ ಉದಾಹರಣೆಗಳನ್ನು ಗಮನಿಸಿದ್ದೇನೆ' ಎಂದು ಅವರು ವಿವರಿಸುತ್ತಾರೆ.

'ಜಾಲತಾಣದ ಆರೋಗ್ಯ ಸಲಹೆಗೆ ಬೇಗ ಮರುಳಾಗುವವರಲ್ಲಿ ಮಧುಮೇಹಿಗಳೇ ಹೆಚ್ಚು. ಹೇಗಾದರೂ ಮಾಡಿ ಶುಗರ್ ಕಡಿಮೆ ಮಾಡಿಕೊಳ್ಳಬೇಕೆಂಬ ಪ್ರಯತ್ನದಲ್ಲಿರುವವರು ಎಂಥದ್ದೇ ಸಲಹೆ ಸಿಕ್ಕರೂ ಅನುಸರಿಸಲು ಸಿದ್ಧವಾಗುತ್ತಾರೆ. ಹೀಗೆ ಮಾಡುವ ಮೂಲಕ ಜೀವಕ್ಕೆ ಅಪಾಯ ತಂದುಕೊಂಡ, ಗಾಲಿ ಕುರ್ಚಿಯಲ್ಲಿ ಬದುಕು ಕಳೆಯುತ್ತಿರುವ ಪ್ರಕರಣಗಳು ಸಾಕಷ್ಟಿವೆ' ಎಂದು ಮತ್ತೊಬ್ಬ ತಜ್ಞರು ಹೇಳುತ್ತಾರೆ.

**ಮಾಹಿತಿ ಖಾತರಿ ಹೇಗೆ?:** ಮೊದಲಿಗೆ, ಯಾವುದೇ ಮೆಡಿಕಲ್ ಅಥವಾ ಕ್ಲಿನಿಕಲ್ ಸಾಕ್ಷ್ಯಗಳಿಲ್ಲದ ಔಷಧಗಳನ್ನು ಜನರು ತೆಗೆದುಕೊಳ್ಳಬಾರದು. ಸಾಮಾಜಿಕ ಮಾಧ್ಯಮಗಳಲ್ಲಾಗಲಿ, ಯಾರೇ ಆಗಲಿ, ವೈದ್ಯಕೀಯ ಆಧಾರವಿಲ್ಲದ ಔಷಧಗಳ ಕುರಿತು ಮಾಹಿತಿ ಪ್ರಚಾರವನ್ನೂ ಮಾಡಬಾರದು ಎನ್ನುತ್ತಾರೆ ಮಧುಮೇಹ ತಜ್ಞ ಡಾ. ಗುರುಪ್ರಸಾದ್ ಉಡುಪಿ.

ಯಾವುದೇ ಜಾಲತಾಣ/ಯೂಟ್ಯೂಬ್‌ಗಳಲ್ಲಿ ಬರುವಂತಹ ಮಾಹಿತಿಗಳನ್ನು ತಿಳಿವಳಿಕೆಗಾಗಿ ಓದಿಕೊಳ್ಳಬಹುದು, ನೋಡಬಹುದು. ಆದರೆ ಅದನ್ನು ಅಳವಡಿಸಿಕೊಳ್ಳುವ ಮುನ್ನ ತಜ್ಞ ವೈದ್ಯರನ್ನು ಸಂಪರ್ಕಿಸುವುದು ಸರಿಯಾದ ಕ್ರಮ. ಒಂದೊಮ್ಮೆ ಅದು ತುಂಬಾ ಪರಿಣಾಮಕಾರಿಯಾದ ಆರೋಗ್ಯ ಸಲಹೆ ಎನ್ನಿಸಿದ್ದರೆ, ಅದು ಯಾವ ಜಾಲತಾಣದಲ್ಲಿ ಪ್ರಕಟವಾಗಿರುತ್ತದೋ, ಅವರನ್ನೇ ಸಂಪರ್ಕಿಸಿ, ಮಾಹಿತಿಯ ಸತ್ಯಾಸತ್ಯತೆ ಖಚಿತಪಡಿಸಿಕೊಳ್ಳಬೇಕು ಎನ್ನುತ್ತಾರೆ ವಸುಂಧರಾ ಭೂಪತಿ.

ನೆಗಡಿ, ಕೆಮ್ಮಿನಂತಹ ಸಣ್ಣಪುಟ್ಟ ಕಾಯಿಲೆಗಳಿಗೆ ಪ್ರಥಮ ಚಿಕಿತ್ಸೆಯಾಗಿ ಮನೆ ಮದ್ದಿನಂತಹ ಸಲಹೆಗಳನ್ನು ಸ್ವೀಕರಿಸಬಹುದು. ಆದರೆ, ಮಧುಮೇಹ, ರಕ್ತದೊತ್ತಡ, ಪಾರ್ಶ್ವವಾಯುನಂತಹ ಗಂಭೀರ ಕಾಯಿಲೆಗಳಿಗೆ ಯಾವುದೇ ಜಾಲತಾಣದ ಅನಧಿಕೃತ ಆರೋಗ್ಯ ಸಲಹೆಗಳನ್ನು ಪಾಲಿಸುವುದು ಸರಿಯಲ್ಲ ಎನ್ನುವುದು ವೈದ್ಯರ ಸಲಹೆ.

ಈವರೆಗೆ ಸಾಮಾಜಿಕ ಜಾಲತಾಣಗಳಲ್ಲಿ ಪೋಸ್ಟರ್, ಯೂಟ್ಯೂಬ್ ಮೂಲಕವಷ್ಟೇ 'ಆರೋಗ್ಯ ಮಾಹಿತಿ' ಹರಿದಾಡುತ್ತಿತ್ತು. ಆ ಮಾಹಿತಿಯನ್ನು ವೈದ್ಯರ ಬಳಿ ಪರಿಶೀಲಿಸಬಹುದಿತ್ತು. ಈಗ 'ಕೃತಕ ಬುದ್ಧಿಮತ್ತೆ' (ಎಐ) ಕಾಲ. ಮುಂದೆ ಎಐ ವೈದ್ಯರನ್ನೇ ಸೃಷ್ಟಿಸಿ, ಅವರಿಂದಲೇ ಆರೋಗ್ಯ ಸಲಹೆ ಕೊಡಿಸುವ ಸಾಧ್ಯತೆಗಳಿವೆ. ಇಂಥ ಪರಿಸ್ಥಿತಿಯಲ್ಲಿ ಅರೆಬರೆ ಆರೋಗ್ಯ ಮಾಹಿತಿ ಬಿತ್ತರಕ್ಕೆ ಕಡಿವಾಣ ಹಾಕುವಂತಹ ಕಾಯ್ದೆಗಳನ್ನು ಸರ್ಕಾರ ರೂಪಿಸುವ ಅಗತ್ಯವಿದೆ ಎಂದು ವೈದ್ಯಕೀಯ ಕ್ಷೇತ್ರದ ತಜ್ಞರು ಅಭಿಪ್ರಾಯಪಡುತ್ತಾರೆ.

> ಇತ್ತೀಚಿನ ದಿನಗಳಲ್ಲಿ ಯೂಟ್ಯೂಬ್ ವೈದ್ಯರು ಹೆಚ್ಚಾಗಿದ್ದಾರೆ. ಸಾಮಾಜಿಕ ಜಾಲತಾಣಗಳಲ್ಲಿ ಕೆಲವರು ರೋಗಗಳ ಬಗ್ಗೆ ಮಾಹಿತಿ ಕೊಟ್ಟು ಸಲಹೆ ನೀಡುತ್ತಾರೆ. ಆದರೆ, ಈ ಸಲಹೆಗಳ ಆಧಾರದಲ್ಲಿಯೇ ಔಷಧಿಗಳನ್ನು ಸೇವಿಸಬಾರದು. ತಜ್ಞವೈದ್ಯರನ್ನು ಭೇಟಿ ಮಾಡಿ ಔಷಧಿ ಪಡೆಯಬೇಕು. ಇದೇ ರೀತಿ ಕೆಲವೊಂದು ಗಿಡಮೂಲಿಕೆಗಳ ಬಗ್ಗೆಯೂ ಮಾಹಿತಿ ನೀಡಿ ಸೇವಿಸಲು ಸಲಹೆ ನೀಡುತ್ತಾರೆ. ಇವುಗಳ ಬಗ್ಗೆ ವೈಜ್ಞಾನಿಕ ಸಂಶೋಧನೆ ನಡೆದಿರುವುದಿಲ್ಲ. ಇಂತಹ ವಿಷಯಗಳಿಗೆ ಜನರು ಕಿವಿಗೊಡಬಾರದು.
> ವೈದ್ಯಕೀಯದಲ್ಲಿ ಮೂರು 'ಟಿ' ಗಳು (ಟಾಕ್, ಟಚ್, ಟ್ರೀಟ್) ಬಹಳ ಮುಖ್ಯ. ಆಗ ರೋಗಿ ಮತ್ತು ವೈದ್ಯರ ನಡುವೆ ವಿಶ್ವಾಸ ಬೆಳೆಯುತ್ತದೆ. ಚಿಕಿತ್ಸೆಯೇ ರೋಗಕ್ಕಿಂತ ಅಪಾಯಕಾರಿ ಆಗಬಾರದು. ತಂತ್ರಜ್ಞಾನ ಎಷ್ಟೇ ಮುಂದುವರಿದಿದ್ದರೂ ರೋಗದ ಹಿನ್ನೆಲೆ ಪರಿಶೀಲಿಸಿಯೇ ನಾವು ಚಿಕಿತ್ಸೆ ನೀಡಬೇಕು
>
> **ಡಾ.ಸಿ.ಎನ್.ಮಂಜುನಾಥ್,** ಸಂಸದ ಹಾಗೂ ಹೃದ್ರೋಗ ತಜ್ಞ

> ಯಾವುದೇ ವೈದ್ಯಕೀಯ ಜ್ಞಾನ, ಅನುಭವವಿಲ್ಲದೇ ಪ್ರಸಾರ ಮಾಡುವಂತಹ ಆರೋಗ್ಯ ಸಲಹೆಗೆ ಕಡಿವಾಣ ಹಾಕಬೇಕು. ಇದಕ್ಕಾಗಿ ಸರ್ಕಾರ ಒಂದು ನೀತಿ ಅಥವಾ ಕಾಯ್ದೆ ರೂಪಿಸಬೇಕು. ತಪ್ಪು ಮಾಹಿತಿ ನೀಡುವವರ ವಿರುದ್ಧ ಕ್ರಮ ಕೈಗೊಳ್ಳುವಂತಾಗಬೇಕು
>
> **ಡಾ. ರಾಜು ಕೃಷ್ಣಮೂರ್ತಿ,** ವೈದ್ಯ, ಬೆಂಗಳೂರು.

> ಕಾಯ್ದೆ–ಕಾನೂನುಗಳ ಮೂಲಕ ಅವೈಜ್ಞಾನಿಕ ಆರೋಗ್ಯ ಸಲಹೆ, ವೈದ್ಯಕೀಯ ಮಾಹಿತಿ ಹಂಚುವುದನ್ನು ತಡೆಯುವುದು ಕಷ್ಟ. ಆದರೆ, ಜನರಲ್ಲಿ ಈ ಬಗ್ಗೆ ಹೆಚ್ಚು ಹೆಚ್ಚು ಜಾಗೃತಿ ಮೂಡಿಸುವುದೊಂದೇ ಪರಿಹಾರ
>
> **ಡಾ. ಕುಶವಂತ್ ಕೋಳಿಬೈಲು,** ಮಕ್ಕಳ ತಜ್ಞ, ಮಡಿಕೇರಿ

# ಗುಮ್ಮಡಿ ನರಸಯ್ಯ: ಕಗ್ಗತ್ತಲಲ್ಲೊಂದು ಕೋಲ್ಮಿಂಚು



• ಬಿ.ವಿ.ಶ್ರೀನಾಥ್

ವ್ಯಕ್ತಿ ವಿಶೇಷ

**ತೆಲುಗಿನ** ಪ್ರಮುಖ ನಟ ನಂದಮೂರಿ ಬಾಲಕೃಷ್ಣ ನಟನೆಯ 'ಅಖಂಡ 2' ಚಿತ್ರ ಬಿಡುಗಡೆಯಾಗಿ ಚಿತ್ರಮಂದಿರಗಳಲ್ಲಿ ಪ್ರದರ್ಶನಗೊಳ್ಳುತ್ತಿದೆ. ಅರ್ಥಹೀನ ಕಥೆ, ಅನರ್ಥಕಾರಿ ಶೈಲಿ, ಅತಿಮಾನುಷ ಸಾಹಸ ದೃಶ್ಯಗಳಿರುವ ಆ ಚಿತ್ರವು ಸಾಮಾಜಿಕ ಜಾಲತಾಣಗಳಲ್ಲಿ ಗೇಲಿಗೊಳಗಾಗುತ್ತಿದೆ. ಇದೇ ವೇಳೆ, ತೆಲುಗಿನಲ್ಲಿ ಹೊಸ ಚಿತ್ರವೊಂದು ಆರಂಭವಾಗಿದೆ. ಆ ಚಿತ್ರದ ವಸ್ತು ಮತ್ತು ಅದರ ಮಹತ್ವದ ಬಗ್ಗೆ ವ್ಯಾಪಕವಾಗಿ ಚರ್ಚೆಯಾಗುತ್ತಿದೆ. ಆ ಚಿತ್ರ ಗುಮ್ಮಡಿ ನರಸಯ್ಯ. ಗುಮ್ಮಡಿ ನರಸಯ್ಯ ಆಗಿ ಕನ್ನಡದ ಶಿವರಾಜ್‌ಕುಮಾರ್ ಅವರು ನಟಿಸುತ್ತಿರುವುದರಿಂದ ಚಿತ್ರದ ಬಗ್ಗೆ ಕನ್ನಡಿಗರಲ್ಲೂ ಕುತೂಹಲ ಮೂಡಿದೆ.

ಗುಮ್ಮಡಿ ನರಸಯ್ಯ ಅವರು ಭದ್ರಾದಿ ಕೊತ್ತಗೂಡೆಂ ಜಿಲ್ಲೆಯ ಇಲ್ಲಂದು ವಿಧಾನಸಭಾ ಕ್ಷೇತ್ರದಿಂದ ಐದು ಬಾರಿ ಶಾಸಕರಾಗಿದ್ದವರು. ಜನರ ನಡುವಿನಿಂದಲೇ ನಾಯಕನಾಗಿ ರೂಪುಗೊಂಡ ನರಸಯ್ಯ, ಶಾಸಕರಾಗಿ, ಬುಡಕಟ್ಟು ಮುಖಂಡರಾಗಿ ಮಾಡಿದ ಕೆಲಸ, ಅವರು ಬದುಕಿದ, ಬದುಕುತ್ತಿರುವ ರೀತಿಯೇ ಸಿನಿಮಾ ನಿರ್ಮಾಣವಾಗಲು ಕಾರಣವಾಗಿದೆ.

ಸ್ವಾತಂತ್ರ್ಯಪೂರ್ವದಲ್ಲಿ ತೆಲಂಗಾಣ ಮತ್ತು ಆಂಧ್ರಪ್ರದೇಶದ ಅನೇಕ ಭಾಗಗಳಲ್ಲಿ ದೊಡ್ಡ ಭೂಮಾಲೀಕರು ಗೇಣಿದಾರರನ್ನು, ರೈತರನ್ನು, ಕೂಲಿ ಕಾರ್ಮಿಕರನ್ನು ಶೋಷಣೆ ಮಾಡುವುದು ಸಾಮಾನ್ಯವಾಗಿತ್ತು. ಸಹಜವಾಗಿಯೇ ಅವರ ವಿರುದ್ಧ ಹಲವು ರೀತಿಯ ಹೋರಾಟಗಳು ಹುಟ್ಟುಪಡೆದಿದ್ದವು. ಅವುಗಳಲ್ಲಿ ಸಿಪಿಐ (ಎಂಎಲ್) ಹೋರಾಟ ಪ್ರಮುಖವಾದುದು. ಸಶಸ್ತ್ರ ಹೋರಾಟಗಾರರನ್ನು ಮಣಿಸಲು ಪೊಲೀಸರು ಎನ್‌ಕೌಂಟರ್‌ಗಳನ್ನು ಮಾಡುತ್ತಿದ್ದರು. 1978ರಲ್ಲಿ ಕಾಡಿಗೆ ಕಟ್ಟಿಗೆ ತರಲು ಹೋಗಿದ್ದ ಆಗ ಯುವಕನಾಗಿದ್ದ ನರಸಯ್ಯ ಹಾಗೆ ನಡೆದ 'ಎನ್‌ಕೌಂಟರ್' ಒಂದನ್ನು ಆಕಸ್ಮಿಕವಾಗಿ ನೋಡಿದರು. ತಮ್ಮ ಜೀವನವನ್ನು ಹೋರಾಟಕ್ಕಾಗಿ ಮುಡಿಪಿಡಲು ಅವರು ಅಂದೇ ನಿರ್ಧರಿಸಿದರು.

ಖಮ್ಮಂ ಜಿಲ್ಲೆಯ ಸಿಂಗರೇಣಿ ಮಂಡಲ್‌ನ ಟೇಕುಲಗೂಡೆಂ ಗ್ರಾಮದ ನರಸಯ್ಯ, ಕೋಯಾ (ಎಸ್‌ಟಿ) ಬುಡಕಟ್ಟಿಗೆ ಸೇರಿದವರು. ಅಲ್ಪಸ್ವಲ್ಪ ಭೂಮಿ ಇದ್ದ ಬಡ ಕುಟುಂಬ ಅವರದ್ದು. ಸುತ್ತಲಿನ ಬದುಕೇ ಅವರನ್ನು ಹೋರಾಟಗಾರನನ್ನಾಗಿ ರೂಪಿಸಿತು. ಆದಿವಾಸಿ ಹಕ್ಕುಗಳಿಗಾಗಿ, ರೈತರ ಸಮಸ್ಯೆಗಳಿಗಾಗಿ ಹೋರಾಡತೊಡಗಿದ ನರಸಯ್ಯ ಚುನಾವಣೆಗೂ ಸ್ಪರ್ಧಿಸಿ ಗೆದ್ದರು; ಟೇಕುಲಗೂಡೆಂ ಮಂಡಲ್‌ನ ಸರಪಂಚ್ (ಅಧ್ಯಕ್ಷ) ಕೂಡ ಆದರು (1981).

ನರಸಯ್ಯ ಅವರದ್ದು ಸರಳ ಬದುಕು. ಜನರಿಗೆ ಮಿಡಿಯುವ ಮನಸ್ಸು. ಇದರಿಂದ ರಾಜಕಾರಣದಲ್ಲಿ ಅವರು ಬಹುಬೇಗ ಜನಪ್ರಿಯತೆ ಗಳಿಸಿದರು. 1983ರಲ್ಲಿ ಅವಿಭಜಿತ ಆಂಧ್ರಪ್ರದೇಶದ ಇಲ್ಲಂದು ವಿಧಾನಸಭಾ ಕ್ಷೇತ್ರದಿಂದ ಚುನಾವಣೆಗೆ ಸ್ಪರ್ಧಿಸಿದರು. ಪ್ರಥಮ ಪ್ರಯತ್ನದಲ್ಲಿಯೇ ಜನ ಅವರನ್ನು ಗೆಲ್ಲಿಸಿದರು. 1985, 1989ರ ಚುನಾವಣೆಗಳಲ್ಲಿಯೂ ಗೆಲ್ಲುವ ಮೂಲಕ ಹ್ಯಾಟ್ರಿಕ್ ಸಾಧಿಸಿದರು. ನಂತರ 1999, 2004ರ ಚುನಾವಣೆಗಳಲ್ಲಿಯೂ ಜಯ ಗಳಿಸಿದರು. ಕ್ಷೇತ್ರ ಪುನರ್‌ವಿಂಗಡಣೆಯ ನಂತರ ಎರಡು ಚುನಾವಣೆಗಳಲ್ಲಿ ಸೋಲನುಭವಿಸಿದರು.

ಪುಟ್ಟ, ಹಳೆಯ ಮನೆಯಲ್ಲಿ ವಾಸ. ಸಾಮಾನ್ಯರಲ್ಲಿ ಸಾಮಾನ್ಯನಂತಹ ಉಡುಪು. ಸಾಮಾನ್ಯರು ಆಡುವಂಥದ್ದೇ ಭಾಷೆ. ಸೈಕಲ್, ಆಟೊ, ಬಸ್‌ಗಳಲ್ಲಿಯೇ ಹೆಚ್ಚಾಗಿ ಓಡಾಟ. 20ಕ್ಕೂ ಹೆಚ್ಚು ವರ್ಷ ಶಾಸಕರಾಗಿದ್ದರೂ ಅವರು ಬದಲಾಗಲಿಲ್ಲ. ಕ್ಷೇತ್ರದ ಜನ ನರಸಯ್ಯ ಅವರನ್ನು 'ಪ್ರಜೆಗಳ ಪ್ರತಿನಿಧಿ' ಎಂದೇ ಕರೆಯುತ್ತಿದ್ದರು. ಶಾಸಕರಾಗಿ ಇರಲಿ, ಇಲ್ಲದಿರಲಿ ಅವರ ದಿನಚರಿ, ಸ್ವಭಾವ, ಕೆಲಸ ಯಾವುದೂ ಬದಲಾಗಲಿಲ್ಲ. ಸುತ್ತಲಿನ ಜನರ ಸಮಸ್ಯೆಯನ್ನು ಹೊತ್ತು ಸರ್ಕಾರಿ ಕಚೇರಿಗಳ ಬಾಗಿಲಲ್ಲಿ ಹೋಗಿ ನಿಲ್ಲುತ್ತಿದ್ದರು.

ಆದಿವಾಸಿ ಹಕ್ಕುಗಳಿಗಾಗಿ, ರೈತರ ಪರವಾಗಿ, ಪೊಲೀಸ್ ದೌರ್ಜನ್ಯದ ವಿರುದ್ಧ ದಶಕಗಳಿಂದಲೂ ಹೋರಾಡುತ್ತಲೇ ಇರುವ ಗುಮ್ಮಡಿ ನರಸಯ್ಯ ಅವರಿಗೆ ಈಗ ಸುಮಾರು 68ರ ಪ್ರಾಯ. ಅವರ ಮೂವರು ಮಕ್ಕಳಲ್ಲಿ ಮಗಳು ಗುಮ್ಮಡಿ ಅನುರಾಧ ತೆಲಂಗಾಣದ ಮೊದಲ ಆದಿವಾಸಿ ಮಹಿಳಾ ಸಹಾಯಕ ಪ್ರಾಧ್ಯಾಪಕಿ (ಕಾನೂನು ಅಧ್ಯಯನ). ಅವರು ಕೂಡ 2023ರಲ್ಲಿ ವಿಧಾನಸಭಾ ಚುನಾವಣೆಗೆ ಪಕ್ಷೇತರ ಅಭ್ಯರ್ಥಿಯಾಗಿ ಸ್ಪರ್ಧಿಸಿ ಸೋಲುಂಡರು.

ಎದೆಗೆ ಬಿದ್ದ ಅಕ್ಷರ, ಭೂಮಿಗೆ ಬಿದ್ದ ಬೀಜದಂತೆ ಗುಮ್ಮಡಿ ನರಸಯ್ಯ ಅವರಂಥ ಬದುಕುಗಳನ್ನು ಆಧರಿಸಿ ಪರದೆ ಮೇಲೆ ಮೂಡುವ ಬಿಂಬಗಳು ಭವಿಷ್ಯದ ತಲೆಮಾರುಗಳಲ್ಲಿ ಬದಲಾವಣೆಗೆ ಪ್ರೇರಣೆ ಆಗಬಲ್ಲವು.

## ರಾಜ್ ಪರಂಪರೆಯ ಪ್ರತಿನಿಧಿ



ಶಿವರಾಜ್‌ಕುಮಾರ್ ಅವರೊಂದಿಗೆ ಗುಮ್ಮಡಿ ನರಸಯ್ಯ

ರೀಮೇಕ್ ಚಿತ್ರಗಳಲ್ಲಿ, ಪರಭಾಷಾ ಚಿತ್ರಗಳಲ್ಲಿ ನಟಿಸುವುದನ್ನು ಇಷ್ಟಪಡದ ನಟ ಶಿವರಾಜ್‌ಕುಮಾರ್ ಈ ಚಿತ್ರ ಒಪ್ಪಿಕೊಳ್ಳಲು ಕಾರಣವಿದೆ. ಜನರಿಗಾಗಿ ನರಸಯ್ಯ ಅವರು ಮಾಡಿರುವ ತ್ಯಾಗ, ಸಲ್ಲಿಸುತ್ತಿರುವ ಸೇವೆ, ಸರಳ ಬದುಕು ಕಂಡಾಗ ಅವರಿಗೆ ಅವರ ತಂದೆ ರಾಜ್‌ಕುಮಾರ್ ಅವರೇ ನೆನಪಾದರಂತೆ. 'ನರಸಯ್ಯ ಅಪ್ಪನ ಪರಂಪರೆಯ ಪ್ರತಿನಿಧಿ. ಹಾಗಾಗಿಯೇ ನಾನು ಈ ಚಿತ್ರ ಮಾಡಲು ಒಪ್ಪಿಕೊಂಡೆ' ಎಂದಿದ್ದಾರೆ.

ರಾಜ್‌ಕುಮಾರ್ ತಮ್ಮ ಸರಳತೆ, ಮೌಲ್ಯಗಳನ್ನು ಎಂದೂ ಬಿಟ್ಟುಕೊಡದವರು. ಅಪಾರ ಜನಪ್ರಿಯತೆ, ಹಣ ಬಂದರೂ ಅವರು ತಮ್ಮ ವಿನಯವನ್ನು ಬಿಡದವರು. ಆ ಕಾರಣಕ್ಕಾಗಿ ಅವರು ಯಾವತ್ತೂ ಆದರ್ಶಪ್ರಾಯರಾಗಿದ್ದಾರೆ. ರಾಜಕಾರಣದಲ್ಲಿ ಅಂಥವೇ ಮೌಲ್ಯಗಳನ್ನು ಅಳವಡಿಸಿಕೊಂಡಿರುವ ನರಸಯ್ಯ ಅವರ ಬದುಕು ಶಿವರಾಜ್‌ಕುಮಾರ್ ಅವರನ್ನು ಸೆಳೆದಿರುವುದು ಸಹಜವೇ ಆಗಿದೆ. ಪ್ರೇಕ್ಷಕರನ್ನು ಅಭಿಮಾನಿ ದೇವರು ಎನ್ನುತ್ತಿದ್ದ ರಾಜ್‌ಕುಮಾರ್, ಪ್ರಜೆಗಳನ್ನು ದೊರೆಗಳಂತೆ ಕಾಣುವ ನರಸಯ್ಯ– ಇವರೆಲ್ಲ ರಾಜಕಾರಣ, ಸಿನಿಮಾ, ಸಾರ್ವಜನಿಕ ಜೀವನಕ್ಕೆ ಅಗತ್ಯವಾದ– ಆದರೆ ಪ್ರಸ್ತುತ ಅಪರೂಪವಾಗಿರುವ– ಸಂದೇಶವನ್ನು ಬಿತ್ತರಿಸುತ್ತಿದ್ದಾರೆ.

## ಅಪರೂಪದ ಮಾದರಿ

ರಾಜಕಾರಣಿಗಳ ಬಯೋಪಿಕ್‌ಗಳು ಯಶಸ್ವಿಯಾಗುವುದು ಕಡಿಮೆ. ಭಾರತದಲ್ಲಿ ಪ್ರಧಾನಿ ನರೇಂದ್ರ ಮೋದಿ, ಮಾಜಿ ಪ್ರಧಾನಿಗಳಾದ ಇಂದಿರಾ ಗಾಂಧಿ, ಮನಮೋಹನ್‌ಸಿಂಗ್, ತಮಿಳಿನ ಕರುಣಾನಿಧಿ, ಎಂಜಿಆರ್, ತೆಲುಗಿನಲ್ಲಿ ಎನ್‌ಟಿಆರ್, ವೈಎಸ್‌ಆರ್, ನಟಿ ಸಾವಿತ್ರಿ ಮುಂತಾದವರ ಜೀವನ ಆಧರಿಸಿ ಚಿತ್ರಗಳು ಬಂದಿವೆ. ಈ ಪೈಕಿ ಸಾವಿತ್ರಿ ಅವರನ್ನು ಕುರಿತ 'ಮಹಾನಟಿ' ಯಶಸ್ಸು ಗಳಿಸುವ ಜತೆಗೆ ಹಲವು ಪ್ರಶಸ್ತಿಗಳನ್ನೂ ಪಡೆಯಿತು.

ರಾಜಕಾರಣಿಗಳ ಬಯೋಪಿಕ್‌ಗಳ ನಡುವೆ ಗುಮ್ಮಡಿ ನರಸಯ್ಯ ಚಿತ್ರಕ್ಕೆ ವಿಶೇಷ ಸ್ಥಾನವಿದೆ. ಅವರು ಶಾಸಕರಾಗಿದ್ದನ್ನು ಹೊರತುಪಡಿಸಿದರೆ ಇತರೆ ಅಧಿಕಾರ ಪಡೆದವರಲ್ಲ.ಆದರೆ, ರಾಜಕಾರಣಕ್ಕೆ ಅತ್ಯಗತ್ಯವಾದ ಜನಪರ ಮಾದರಿಯನ್ನು ಕಟ್ಟಿಕೊಟ್ಟವರು. ಹೀಗಾಗಿ ವ್ಯಾಪಾರಿ ದೃಷ್ಟಿಯಿಂದಲ್ಲವಾದರೂ ವಸ್ತುವಿಷಯದ ದೃಷ್ಟಿಯಿಂದ ಗಮನಾರ್ಹ ಸಿನಿಮಾ ಆಗಬಹುದು ಎನ್ನುವ ನಿರೀಕ್ಷೆ ಇದೆ.

## ಗುಂಡಣ್ಣ




## ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

**20 ಡಿಸೆಂಬರ್ 2025 ಶನಿವಾರ, ಶ್ರೀ ವಿಶ್ವಾವಸು ನಾಮ ಸಂವತ್ಸರ ದಕ್ಷಿಣಾಯನ ಹೇಮಂತ ಋತು ತಿಥಿ:** ಮಾರ್ಗಶಿರ ಕೃಷ್ಣ ಅಮಾವಾಸ್ಯೆ ಗಂ 7-13 ನಕ್ಷತ್ರ: ಮೂಲ ಗಂ. 25-22 ಯೋಗ: ಗಂಡ ಗಂ. 16-17 ಕರಣ: ನಾಗ ಗಂ. 7-13 ಧನು ಮಾಸದ 05 ನೇ ದಿನ. ಮಳೆ ನಕ್ಷತ್ರ : ಮೂಲ 2 ನೇ ಪಾದ. ರಾಹುಕಾಲ : ಬೆಳಿಗ್ಗೆ 09-00 - 10-30 ,ಸೂರ್ಯೋದಯ : 06-52 ಸೂರ್ಯಾಸ್ತ: 06-05, ಮುಸ್ಲಿಂ ದಿನಾಂಕ : 28 ಜುಮಾದುಸ್ಸಾನಿ , ಅದೃಷ್ಟ ಸಂಖ್ಯೆ : 5, 1

**ಮೇಷ:** ಈವರೆಗೂ ಹೆಚ್ಚುವರಿಯಾಗಿ ಮಾಡುತ್ತಿದ್ದ ಖರ್ಚುಗಳನ್ನು ಕಡಿಮೆ ಮಾಡಿಕೊಳ್ಳುವ ದಾರಿಯನ್ನು ಹುಡುಕುವಿರಿ. ಶಾಂತವಾಗಿ ವರ್ತಿಸಿದಷ್ಟು ಏಳಿಗೆಯಾಗಲಿದೆ. ಕ್ರೋಧವನ್ನು ಕಡಿಮೆ ಮಾಡಿಕೊಳ್ಳಿ.

**ವೃಷಭ:** ಖರ್ಚು ವೆಚ್ಚಗಳು ಅಂದಾಜಿನ ಗಡಿ ದಾಟುವವು. ಕುಟುಂಬದ ವ್ಯಕ್ತಿಗಳ ಜೊತೆಯ ಮಾತುಕತೆಗಳು ಹಿತವಾಗುವ ರೀತಿಯಲ್ಲಿ ಇರುವವು. ಆರೋಗ್ಯವನ್ನು ಸ್ಥಿರವಾಗಿ ಇಟ್ಟುಕೊಳ್ಳಿ.

**ಮಿಥುನ:** ಜನರೊಂದಿಗೆ ಬೆರೆತು ಮಾತನಾಡುವುದರಿಂದ ವ್ಯವಹಾರಕ್ಕೆ ಹೊಸ ಅವಕಾಶಗಳು ದೊರೆಯಲಿವೆ. ವ್ಯಾವಹಾರಿಕ ಚರ್ಚೆ ಅಥವಾ ವೃತ್ತಿ ಸಂದರ್ಶನದಲ್ಲಿ ಶುಭ ಫಲ. ಹೊಸ ಕೆಲಸಗಳ ಆರಂಭವನ್ನು ಮುಂದೂಡಿರಿ.

**ಕರ್ಕಾಟಕ:** ದೇಹಕ್ಕೆ ಅಗತ್ಯವಾದ ಪೋಷಕಾಂಶ, ವಿಶ್ರಾಂತಿಯನ್ನು ಕೊಡುವ ಮೂಲಕ ಆರೋಗ್ಯದಲ್ಲಿ ಸುಧಾರಣೆ ಕಾಣುವಿರಿ. ಅಸಾಧ್ಯವಾದುದನ್ನೂ ದೇವರ ಪ್ರಾರ್ಥನೆಯಿಂದ ಪಡೆದುಕೊಳ್ಳುವಿರಿ.

**ಸಿಂಹ:** ಕೆಲಸದಲ್ಲಿ ಹೊಸ ಆಲೋಚನೆಗಳನ್ನು ಅಳವಡಿಸಿಕೊಳ್ಳುವಿರಿ. ಜನರಿಗೆ ಆರ್ಥಿಕವಾಗಿ ಸಹಾಯ ಮಾಡುವುದರಲ್ಲಿ ಖುಷಿ ಕಾಣುವಿರಿ. ಮನಸ್ಸಿನ ಮಾತಿಗೆ ಆದ್ಯತೆ ಕೊಡಿ.

**ಕನ್ಯಾ:** ಮಾಡುವ ಕೆಲಸಕ್ಕೆ ಇಂದೇ ಫಲವನ್ನು ಅಪೇಕ್ಷಿಸಬೇಡಿ. ನಿರುದ್ಯೋಗಿಗಳು ಈ ತಕ್ಷಣದಲ್ಲಿ ನೀವಂದುಕೊಂಡ ರೀತಿಯ ವೃತ್ತಿ ದೊರಕದಿರುವುದರಿಂದ ತಾಳ್ಮೆಯನ್ನು ಕಳೆದುಕೊಳ್ಳದೇ ಕಾಯಿರಿ.

**ತುಲಾ:** ಅದೃಷ್ಟವು ಕೈ ಹಿಡಿಯುವುದರಿಂದ ಎಲ್ಲಾ ವಿಷಯಗಳಲ್ಲೂ ಏಳಿಗೆಯನ್ನು ಕಾಣುವಿರಿ. ಉತ್ತಮ ಕೆಲಸಗಳಿಗೂ ಶೀಘ್ರ ಫಲವನ್ನು ಕಾಣುವಿರಿ. ವಿವಾಹ ವಿಚಾರದಲ್ಲಿ ಸ್ಪಷ್ಟವಾದ ನಿರ್ಧಾರ ಅಗತ್ಯ.

**ವೃಶ್ಚಿಕ:** ದೈನಂದಿನ ಬದುಕಿನ ವಿಚಾರಗಳಲ್ಲಿ ನಡೆದಿರುವ ಸಣ್ಣಪುಟ್ಟ ಬದಲಾವಣೆಯಿಂದ ಮಾನಸಿಕ ನೆಮ್ಮದಿ ಕಳೆದುಕೊಳ್ಳುವಿರಿ. ವೃತ್ತಿರಂಗದ ಕೆಲವೊಂದು ಸೂಕ್ಷ್ಮ ವಿಚಾರಗಳನ್ನು ಅರ್ಥಮಾಡಿಕೊಂಡರೆ ಉತ್ತಮ.

**ಧನು:** ಸರಿಯಾದ ಪರಿಶೀಲನೆ ಇಲ್ಲದೆ ಯಾವ ಕೆಲಸಗಳಲ್ಲೂ ಹೂಡಿಕೆ ಮಾಡಬೇಡಿ. ವೃತ್ತಿಯಲ್ಲಿ ಪರಿಸ್ಥಿತಿಯನ್ನು ಹತೋಟಿಗೆ ತರಲು ನಾಯಕನನ್ನು ಜಾಗೃತಗೊಳಿಸಿ.

**ಮಕರ:** ಸಾಮರ್ಥ್ಯ, ದಕ್ಷತೆ ಹಾಗೂ ಸೇವಾ ಮನೋಭಾವಗಳಿಂದಾಗಿ ಸಂಸ್ಥೆಯಲ್ಲಿ ಜವಾಬ್ದಾರಿಯುತ ಹುದ್ದೆಯನ್ನು ನಿಮ್ಮದಾಗಿಸಿಕೊಳ್ಳುವಿರಿ. ಕುಟುಂಬ ವರ್ಗದಲ್ಲಿ ಸಲಹೆಗಳಿಗೆ ಆದ್ಯತೆ ದೊರೆಯಲಿದೆ.

**ಕುಂಭ:** ಕೆಲಸದ ಒತ್ತಡದಿಂದ ದೇಹಾಯಾಸ ಎದುರಾಗಿ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರಲಿದೆ. ಚಿಲ್ಲರೆ ವ್ಯಾಪಾರಿಗಳಿಗೆ ಹಾಗೂ ಸಿಹಿ ತಿನಿಸು ಮಾರಾಟಗಾರರಿಗೆ, ವಾಹನದ ವಹಿವಾಟುಗಳನ್ನು ನಡೆಸುವವರಿಗೆ ಲಾಭ.

**ಮೀನ:** ವಿದ್ಯಾರ್ಥಿ ವರ್ಗಕ್ಕೆ ಬಂದಿರುವ ಜವಾಬ್ದಾರಿಯುಕ್ತ ನಡವಳಿಕೆ ಮತ್ತು ಉತ್ಸಾಹದಿಂದ ಏಳಿಗೆಯ ಸೂಚನೆ ಇರುವುದು. ಹೊಸ ವ್ಯವಹಾರಗಳ ಚಾಲನೆಗೆ ಉತ್ತಮ ಮಾರ್ಗದರ್ಶನವನ್ನು ಹೊಂದುವಿರಿ.

## ಪದಬಂಧ 6259

ವಿದ್ಯಾ ವಿನಯ್

**ಎಡದಿಂದ ಬಲಕ್ಕೆ**

1.ನೇರವಾಗಿರುವ ಗುಣ (3)
3.ವಿದ್ಯೆಯನ್ನು ಹೇಳಿಕೊಡುವವನ ನಖ! (3)
5.ಸಮಯ ಸೂಚಕ ಯಂತ್ರ (4)
7.ಕನ್ನಡಿಗನು ಮಾಡಿಕೊಂಡಿರುವ ಎಕ್ಸ್‌ಚೇಂಜ್! (4)
9.ಮಣ್ಣು ಮಿಶ್ರಿತ ನೀರು (3)
12.ಈತ ವಯಸ್ಸಾದವನು (3)
14.ಶ್ರೇಷ್ಠವಾದ ನೆಲೆಯಿದು (4)
18.ತಟದಲ್ಲಿದ್ದವನು ಮಾಡಿರುವ ಮೋಸ (4)
19.ಗಿಲಿಗಿಲಿ ಸದ್ದು ಮಾಡುವ ಮಕ್ಕಳ ಆಟಿಕೆ (3)
20.ಅಂಗೈ ಹುಣ್ಣಿಗೆ ಈ ದರ್ಪಣ ಬೇಕೇ? (3)

**ಮೇಲಿಂದ ಕೆಳಕ್ಕೆ**

1.ಯಜ್ಞ ಪುರೋಹಿತನಿವನು (3)
2.ಗಳಿಕೆಯಿದ್ದರೂ ನಿಂದೆ! (4)
4.ಮಲಗುವಾಗ ಕಾಣಿಸಿದ ಆಳು (3)
6.ವಿರಮಿಸುತ್ತಿದ್ದಾಗ ಮೂಡಿದ ಸೂರ್ಯ (2)
8.ಈತ ಗ್ರೀಸ್ ದೇಶದವನು (3)
10.ಕೊಡತಕ್ಕ ಹಣ (3)
11. ಜನರ ಹತ್ತಿರವಿರುವ ರಾಜ (3)
13.ಕನ್ನಡಿಗರ ಹೆಮ್ಮೆಯ ನಾಡು (4)
15.ರಂಗನ್ನು ತುಂಬಿ ಬರೆದ ಹಸೆ (3)
16.ಮಡಿವಂತನು ನೀಡಿರುವ ಓಟು (2)
17.ದಡಿಯನ ಬಳಿಯಿರುವ ಬಿಡಿಗಾಸು (3)



### 6258ನೇ ಪದಬಂಧದ ಉತ್ತರ

**ಎಡದಿಂದ ಬಲಕ್ಕೆ:**

1.ಹಸು 3.ಪ್ರಾಕೃತಿಕ
4.ಮರಣ 6.ಮಟ್ಟಸ
8.ಪಣ 9.ಯುವರಾಜ
12.ಮಧುಕರಿ 14.ಜನ
15.ಮಶಕ 17.ಹರಾಮ
18.ಅಸ್ತವ್ಯಸ್ತ 19.ನಸ್ಯ

**ಮೇಲಿಂದ ಕೆಳಕ್ಕೆ:**

2.ಸುಮಬಾಣ 3.ಪ್ರಾಣವಾಯು
5.ಅಟ್ಟ 6.ಮಜಲು
7.ಸಮಾಧಾನ 8.ಪರಂಧಾಮ
10.ವರ್ತಕ 11.ಗಮಕ
13.ರಿಕ್ತಹಸ್ತ 14.ಜನಮನ
16. ಶಮ

## ಸುಡೊಕು 6643


**ಆಡುವುದು ಹೀಗೆ:** ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

| | | | | | | | | |
|---|---|---|---|---|---|---|---|---|
| 2 | | | | 9 | | 7 | | |
| | 1 | | 4 | | 7 | | 5 | 2 |
| | | 9 | | 5 | | | 6 | |
| | 9 | | | 2 | | 8 | | 6 |
| 3 | | 7 | 1 | | 6 | | | |
| | 2 | | | 7 | | 1 | | 4 |
| 1 | | | 9 | 8 | | | 4 | |
| | 7 | | | | | 2 | | 8 |
| 8 | | 2 | | 1 | | | | |

### 6642 ಸುಡೊಕು

| | | | | | | | | |
|---|---|---|---|---|---|---|---|---|
| 9 | 6 | 4 | 1 | 3 | 8 | 7 | 2 | 5 |
| 1 | 5 | 3 | 7 | 6 | 2 | 8 | 9 | 4 |
| 2 | 8 | 7 | 5 | 4 | 9 | 1 | 6 | 3 |
| 3 | 9 | 1 | 2 | 7 | 4 | 6 | 5 | 8 |
| 6 | 2 | 5 | 9 | 8 | 3 | 4 | 7 | 1 |
| 7 | 4 | 8 | 6 | 1 | 5 | 2 | 3 | 9 |
| 5 | 7 | 2 | 8 | 9 | 1 | 3 | 4 | 6 |
| 4 | 1 | 9 | 3 | 2 | 6 | 5 | 8 | 7 |
| 8 | 3 | 6 | 4 | 5 | 7 | 9 | 1 | 2 |

**ಷೇರುಪೇಟೆ ವಹಿವಾಟು**




**ಎನ್‌ಎಸ್‌ಇ ನಿಫ್ಟಿ**

| | |
|---|---|
| ಹಿಂದಿನ ಅಂತ್ಯ: | 25,815 |
| ಇಂದಿನ ಅಂತ್ಯ: | 25,966 |
| ದಿನದ ಗರಿಷ್ಠ: | 25,993 |
| | 150 |

**ಮೊಟ್ಟೆ ಧಾರಣೆ (ಎನ್‌ಇಸಿಸಿ)**

| ಬೆಂಗಳೂರು | |
|---|---|
| 100 ಕ್ಕೆ | ₹690 |
| 12 ಕ್ಕೆ | ₹96 |
| ಮೈಸೂರು: 100 ಕ್ಕೆ | ₹690 |

**ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)**

| | |
|---|---|
| ಆರ್‌ಎಸ್‌ಎಸ್-4 | ₹179.50 |
| ಆರ್‌ಎಸ್‌ಎಸ್-5 | ₹174.50 |
| ಗುಡ್ ಲಾಟ್ | ₹162.50 |

**ರಾಮನಗರ ರೇಷ್ಮೆಗೂಡು**

| | |
|---|---|
| ಮಿಶ್ರತಳಿ(ಸಿ.ಬಿ) | ₹633-761 |
| ದ್ವಿತಳಿ (ಬಿ.ವಿ) | ₹511-910 |

**ಮುದ್ರೆಮನೆ ಕಾಫಿ**

| | |
|---|---|
| ಎಪಿ | ₹26900 |
| ಎಸಿ | ₹14840 |
| ಆರ್‌ಪಿ | ₹16500 |
| ಆರ್‌ಸಿ | ₹9300 |

**ಮುಂಬೈ ಖಾದ್ಯ ತೈಲ (ಆವರಣದಲ್ಲಿ ಕಳೆದ ವಹಿವಾಟಿನ ದರ)** (10 ಕೆ.ಜಿಗೆ)

| | |
|---|---|
| ಶೇಂಗಾ (ರಿಫೈನ್ಡ್) | ₹1570 (1570) |
| ಸೋಯಾ (ರಿಫೈನ್ಡ್) | ₹1265 (1275) |
| ಸೂರ್ಯಕಾಂತಿ (ರಿಫೈನ್ಡ್) | ₹1480 (1485) |
| ಪಾಮೋಲಿನ್ | ₹1240 (1245) |

**ಅಡಿಕೆ ಧಾರಣೆ**

| | |
|---|---|
| **ಕಾರ್ಕಳ** | |
| ಹೊಸತು | 25000-41500 |
| ಹಳತು | 32500-52000 |
| **ಕುಮಟಾ** | |
| ಚಾಲಿ | 42999-47199 |
| ಚಿಪ್ಪು | 26099-35099 |
| ಕೋಕ | 12569-30009 |
| ಫ್ಯಾಕ್ಟರಿ | 10189-24629 |
| ಹೊಸಚಾಲಿ | 34029-39097 |
| **ಸಿದ್ದಾಪುರ** | |
| ಬಿಳಿಗೋಟು | 29108-35899 |
| ಚಾಲಿ | 41899-47509 |
| ಕೋಕ | 20669-29609 |
| ಹೊಸಚಾಲಿ | 28700-36288 |
| ಕೆಂಪುಗೋಟು | 30112-33089 |
| ರಾಶಿ | 43599-53599 |
| ತಟ್ಟಿಬೆಟ್ಟೆ | 32100-46299 |
| **ಶಿರಸಿ** | |
| ಬೆಟ್ಟೆ | 41699-53099 |
| ಬಿಳಿಗೋಟು | 25999-37718 |
| ಚಾಲಿ | 42109-48781 |
| ಕೆಂಪುಗೋಟು | 16018-35699 |
| ರಾಶಿ | 52518-56999 |
| **ಯಲ್ಲಾಪುರ** | |
| ಅಪಿ | 66669-76715 |
| ಬಿಳಿಗೋಟು | 14099-35899 |
| ಕೋಕ | 12899-28999 |
| ಹಳೆಚಾಲಿ | 34799-48101 |
| ಹೊಸಚಾಲಿ | 32699-39699 |
| ಕೆಂಪುಗೋಟು | 15112-37311 |
| ರಾಶಿ | 48119-65475 |
| ತಟ್ಟಿಬೆಟ್ಟೆ | 38010-528969 |

# ನೇರ ತೆರಿಗೆ ಸಂಗ್ರಹ ಹೆಚ್ಚಳ

## ₹17.04 ಲಕ್ಷ ಕೋಟಿ ವರಮಾನ ಸಂಗ್ರಹ: ಮರುಪಾವತಿಯು ಶೇ 14ರಷ್ಟು ಇಳಿಕೆ



ನವದೆಹಲಿ (ಪಿಟಿಐ): ಪ್ರಸಕ್ತ ಆರ್ಥಿಕ ವರ್ಷದ ಏಪ್ರಿಲ್ 1ರಿಂದ ಡಿಸೆಂಬರ್ 17ರವರೆಗೆ ನಿವ್ವಳ ನೇರ ತೆರಿಗೆ ಸಂಗ್ರಹವು ₹17.04 ಲಕ್ಷ ಕೋಟಿಯಷ್ಟಾಗಿದೆ ಎಂದು ಕೇಂದ್ರ ನೇರ ತೆರಿಗೆಗಳ ಮಂಡಳಿಯ (ಸಿಬಿಡಿಟಿ) ಅಂಕಿ–ಅಂಶಗಳು ಶುಕ್ರವಾರ ತಿಳಿಸಿವೆ.

ಕಳೆದ ಆರ್ಥಿಕ ವರ್ಷದ ಇದೇ ಅವಧಿಗೆ ಹೋಲಿಸಿದರೆ ನೇರ ತೆರಿಗೆ ಸಂಗ್ರಹ ಪ್ರಮಾಣದಲ್ಲಿ ಶೇ 8ರಷ್ಟು ಏರಿಕೆಯಾಗಿದೆ ಎಂದು ತಿಳಿಸಿದೆ.

ಮರುಪಾವತಿಯು ಮಂದಗೊಂಡಿರುವುದು ಮತ್ತು ಕಾರ್ಪೊರೇಟ್‌ಗಳಿಂದ ಮುಂಗಡ ತೆರಿಗೆ ಸಂಗ್ರಹದ ಪ್ರಮಾಣದಲ್ಲಿ ಏರಿಕೆಯಾಗಿರುವುದು ತೆರಿಗೆ ಸಂಗ್ರಹ ಹೆಚ್ಚಳಕ್ಕೆ ಕಾರಣ ಎಂದು ತಿಳಿಸಿದೆ.

ನಿವ್ವಳ ಕಾರ್ಪೊರೇಟ್ ತೆರಿಗೆ ಸಂಗ್ರಹದಲ್ಲಿ ಶೇ 10.54ರಷ್ಟು ಹೆಚ್ಚಳವಾಗಿ, ₹8.17 ಲಕ್ಷ ಕೋಟಿಯಾಗಿದೆ. ವೈಯಕ್ತಿಕ ಆದಾಯ ತೆರಿಗೆಯನ್ನು ಒಳಗೊಂಡಿರುವ ಕಾರ್ಪೊರೇಟ್‌ಯೇತರ ತೆರಿಗೆ ಸಂಗ್ರಹವು ₹8.47 ಲಕ್ಷ ಕೋಟಿಯಾಗಿದ್ದು, ಶೇ 6.37ರಷ್ಟು ಏರಿಕೆ ಕಂಡಿದೆ. ಷೇರು ವಹಿವಾಟು ತೆರಿಗೆ (ಎಸ್‌ಟಿಟಿ) ಸಂಗ್ರಹವು ₹40,195 ಕೋಟಿಯಾಗಿದೆ.

ಕಳೆದ ವರ್ಷಕ್ಕೆ ಹೋಲಿಸಿದರೆ ಈ ಬಾರಿ ಮರುಪಾವತಿಯು (ರೀಫಂಡ್) ಶೇ 14ರಷ್ಟು ಇಳಿದಿದ್ದು, ₹2.97 ಲಕ್ಷ ಕೋಟಿಯಾಗಿದೆ. ಮರುಪಾವತಿಯನ್ನು ಸರಿಹೊಂದಿಸುವ ಮೊದಲು ಒಟ್ಟು ನೇರ ತೆರಿಗೆ ಸಂಗ್ರಹವು ಶೇ 4.16ರಷ್ಟು ಏರಿಕೆಯಾಗಿ, ₹20.01 ಲಕ್ಷ ಕೋಟಿ ದಾಟಿದೆ.

ಪ್ರಸಕ್ತ ಆರ್ಥಿಕ ವರ್ಷದಲ್ಲಿ ಕೇಂದ್ರ ಸರ್ಕಾರವು, ನೇರ ತೆರಿಗೆ ಮೂಲಕ ₹25.20 ಲಕ್ಷ ಕೋಟಿ ಸಂಗ್ರಹಿಸಲು ಗುರಿ ಹೊಂದಿದೆ. ಇದು ಕಳೆದ ಆರ್ಥಿಕ ವರ್ಷಕ್ಕೆ ಹೋಲಿಸಿದರೆ ಶೇ 12.7ರಷ್ಟು ಹೆಚ್ಚಳ. ಷೇರು ವಹಿವಾಟು ತೆರಿಗೆ ಮೂಲಕ ₹78 ಸಾವಿರ ಕೋಟಿ ಸಂಗ್ರಹಿಸುವ ಗುರಿಯನ್ನು ಸರ್ಕಾರ ಹೊಂದಿದೆ.

'ಕಾರ್ಪೊರೇಟ್ ತೆರಿಗೆ ಸಂಗ್ರಹದಲ್ಲಿ ಹೆಚ್ಚಳವಾಗಿರುವುದು ಕಾರ್ಪೊರೇಟ್ ಕಂಪನಿಗಳ ಸದೃಢ ಗಳಿಕೆಯನ್ನು ಸೂಚಿಸುತ್ತಿದೆ' ಎಂದು ಡೆಲಾಯ್ಟ್ ಇಂಡಿಯಾ ಪಾಲುದಾರ ರೋಹಿಂಟನ್ ಸಿಧ್ವಾ ಹೇಳಿದ್ದಾರೆ. ಮರುಪಾವತಿ ಸಂಬಂಧಿಸಿದ ಪ್ರಕರಣಗಳ ಹೆಚ್ಚಿನ ಪರಿಶೀಲನೆಯಿಂದಾಗಿ ಮರುಪಾವತಿ ವಿತರಣೆಯಲ್ಲಿ ಇಳಿಕೆ ಕಂಡು ಬಂದಿದೆ ಎಂದು ಹೇಳಿದ್ದಾರೆ.

### ವಿದೇಶಿ ವಿನಿಮಯ ಸಂಗ್ರಹ ಏರಿಕೆ

ಮುಂಬೈ (ಪಿಟಿಐ): ಡಿಸೆಂಬರ್ 12ಕ್ಕೆ ಕೊನೆಗೊಂಡ ವಾರದಲ್ಲಿ ದೇಶದ ವಿದೇಶಿ ವಿನಿಮಯ ಮೀಸಲು ಸಂಗ್ರಹದ ಪ್ರಮಾಣ ₹15,144 ಕೋಟಿಯಷ್ಟು ಹೆಚ್ಚಳವಾಗಿದೆ ಎಂದು ಆರ್‌ಬಿಐ ಶುಕ್ರವಾರ ತಿಳಿಸಿದೆ.

ಪ್ರಸ್ತುತ ಒಟ್ಟು ಮೀಸಲು ಸಂಗ್ರಹ ₹61.77 ಲಕ್ಷ ಕೋಟಿಯಾಗಿದೆ ಎಂದು ತಿಳಿಸಿದೆ.

ವಿದೇಶಿ ಕರೆನ್ಸಿಗಳ ಸಂಪತ್ತಿನ ಮೌಲ್ಯ ₹8,122 ಕೋಟಿಯಷ್ಟು ಹೆಚ್ಚಳವಾಗಿದ್ದು, ₹50 ಲಕ್ಷ ಕೋಟಿಯಾಗಿದೆ. ಚಿನ್ನದ ಮೀಸಲು ಸಂಗ್ರಹದಲ್ಲಿ ₹6,795 ಕೋಟಿ ಏರಿಕೆಯಾಗಿದ್ದು, ₹9.65 ಲಕ್ಷ ಕೋಟಿಯಾಗಿದೆ. ಸ್ಪೆಷಲ್ ಡ್ರಾಯಿಂಗ್ ರೈಟ್ಸ್ (ಎಸ್‌ಡಿಆರ್) ₹1.68 ಲಕ್ಷ ಕೋಟಿ ಆಗಿದೆ. ಅಂತರರಾಷ್ಟ್ರೀಯ ಹಣಕಾಸು ನಿಧಿಯಲ್ಲಿ ಭಾರತದ ಪಾಲು ₹42,007 ಕೋಟಿಯಾಗಿದೆ ಎಂದು ತಿಳಿಸಿದೆ.

## ಸುದ್ದಿ 2 ನಿಮಿಷ

### ರೂಪಾಯಿ 53 ಪೈಸೆ ಜಿಗಿತ

ನವದೆಹಲಿ/ ಮುಂಬೈ (ಪಿಟಿಐ): ಕರೆನ್ಸಿ ವಿನಿಮಯ ಮಾರುಕಟ್ಟೆಯಲ್ಲಿ ಶುಕ್ರವಾರ ನಡೆದ ವಹಿವಾಟಿನಲ್ಲಿ ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯವು 53 ಪೈಸೆಯಷ್ಟು ಏರಿಕೆ ಆಗಿದೆ.

ವಹಿವಾಟಿನ ಅಂತ್ಯದ ವೇಳೆಗೆ ರೂಪಾಯಿ ಮೌಲ್ಯವು ₹89.67 ಆಗಿದೆ. ದೇಶದ ಷೇರುಪೇಟೆ ಸೂಚ್ಯಂಕಗಳ ಏರಿಕೆ, ವಿದೇಶಿ ಬಂಡವಾಳದ ಒಳಹರಿವು ಮತ್ತು ಕಚ್ಚಾ ತೈಲ ದರದ ಇಳಿಕೆಯು ರೂಪಾಯಿ ಮೌಲ್ಯ ಹೆಚ್ಚಳಕ್ಕೆ ಕಾರಣವಾಗಿದೆ ಎಂದು ಮಾರುಕಟ್ಟೆ ತಜ್ಞರು ಹೇಳಿದ್ದಾರೆ.

ಗುರುವಾರದ ವಹಿವಾಟಿನ ಅಂತ್ಯದ ವೇಳೆಗೆ ರೂಪಾಯಿ ಮೌಲ್ಯ ₹90.20 ಇತ್ತು.

**ಸೆನ್ಸೆಕ್ಸ್ 447 ಅಂಶ ಏರಿಕೆ:** ವಿದೇಶಿ ಬಂಡವಾಳ ಒಳಹರಿವಿನಿಂದ ದೇಶದ ಷೇರುಪೇಟೆ ಸೂಚ್ಯಂಕಗಳು ಶುಕ್ರವಾರದ ವಹಿವಾಟಿನಲ್ಲಿ ಏರಿಕೆ ಕಂಡಿವೆ.

ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 447 ಅಂಶ ಏರಿಕೆಯಾಗಿ, 84,929ಕ್ಕೆ ವಹಿವಾಟು ಅಂತ್ಯಗೊಂಡಿದೆ. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 150 ಅಂಶ ಹೆಚ್ಚಳವಾಗಿ, 25,966ಕ್ಕೆ ಕೊನೆಗೊಂಡಿದೆ.

ಭಾರತ್ ಎಲೆಕ್ಟ್ರಾನಿಕ್ಸ್, ಪವರ್ ಗ್ರಿಡ್, ಟಾಟಾ ಮೋಟರ್ಸ್ ಪ್ಯಾಸೆಂಜರ್ ವೆಹಿಕಲ್ಸ್, ಏಷ್ಯನ್ ಪೇಂಟ್ಸ್, ರಿಲಯನ್ಸ್ ಇಂಡಸ್ಟ್ರೀಸ್ ಮತ್ತು ಬಜಾಜ್ ಫಿನ್‌ಸರ್ವ್ ಷೇರಿನ ಮೌಲ್ಯದಲ್ಲಿ ಏರಿಕೆ ಆಗಿದೆ.

ಎಚ್‌ಸಿಎಲ್ ಟೆಕ್, ಕೋಟಕ್ ಮಹೀಂದ್ರ ಬ್ಯಾಂಕ್, ಐಸಿಐಸಿಐ ಬ್ಯಾಂಕ್ ಮತ್ತು ಸನ್‌ಫಾರ್ಮಾ ಷೇರಿನ ಮೌಲ್ಯದಲ್ಲಿ ಇಳಿಕೆ ಆಗಿದೆ. ಏಷ್ಯಾದ ಮಾರುಕಟ್ಟೆಯಲ್ಲಿ ದಕ್ಷಿಣ ಕೊರಿಯಾ, ಜಪಾನ್, ಶಾಂಘೈ ಮತ್ತು ಹಾಂಗ್‌ಕಾಂಗ್ ಷೇರಿನ ಮೌಲ್ಯದಲ್ಲಿ ಇಳಿಕೆ ಆಗಿದೆ.



ಜಾಗತಿಕ ಮಾರುಕಟ್ಟೆಯಲ್ಲಿ ಬ್ರೆಂಟ್ ಕಚ್ಚಾ ತೈಲ ದರವು ಶ 0.40ರಷ್ಟು ಇಳಿದಿದೆ. ಪ್ರತೀ ಬ್ಯಾರಲ್ ದರವು 59.58 ಡಾಲರ್ ಆಗಿದೆ.

ವಿದೇಶಿ ಸಾಂಸ್ಥಿಕ ಹೂಡಿಕೆದಾರರು ಗುರುವಾರದ ವಹಿವಾಟಿನಲ್ಲಿ ₹595 ಕೋಟಿ ಮತ್ತು ದೇಶೀಯ ಸಾಂಸ್ಥಿಕ ಹೂಡಿಕೆದಾರರು ₹2,700 ಕೋಟಿ ಮೌಲ್ಯದ ಷೇರುಗಳನ್ನು ಖರೀದಿ ಮಾಡಿದ್ದಾರೆ.

### ಶ್ರೀರಾಮ್ ಫೈನಾನ್ಸ್‌ನ ಶೇ 20ರಷ್ಟು ಷೇರು ಮಾರಾಟ

ನವದೆಹಲಿ (ಪಿಟಿಐ): ಜಪಾನ್‌ನ ಮಿತ್ಸುಬಿಷಿ ಯುಎಫ್‌ಜೆ ಫೈನಾನ್ಶಿಯಲ್ ಸಮೂಹವು (ಎಂಯುಎಫ್‌ಜಿ) ಶ್ರೀರಾಮ್ ಫೈನಾನ್ಸ್ ಲಿಮಿಟೆಡ್‌ನಲ್ಲಿರುವ ಶೇ 20ರಷ್ಟು ಷೇರನ್ನು ಸ್ವಾಧೀನಪಡಿಸಿಕೊಳ್ಳಲಿದೆ. ಇದು ಹಣಕಾಸಿನ ಮೌಲ್ಯದಲ್ಲಿ ₹39,618 ಕೋಟಿ ಆಗಿದೆ.

ಈ ಹೂಡಿಕೆಯು ಇದುವರೆಗಿನ ದೇಶದ ಹಣಕಾಸು ವಲಯದಲ್ಲಿ ಅತಿದೊಡ್ಡದಾದ ಗಡಿಯಾಚೆಗಿನ ವಹಿವಾಟಾಗಿದೆ ಎಂದು ಶ್ರೀರಾಮ್ ಫೈನಾನ್ಸ್ ತಿಳಿಸಿದೆ.

ಶ್ರೀರಾಮ್ ಫೈನಾನ್ಸ್‌ನ ಆಡಳಿತ ಮಂಡಳಿಯು ಎಂಯುಎಫ್‌ಜಿ ಬ್ಯಾಂಕ್‌ಗೆ ಶೇ 20ರಷ್ಟು ಈಕ್ವಿಟಿ ಷೇರುಗಳನ್ನು ಮಾರಾಟ ಮಾಡಲು ಅನುಮೋದನೆ ನೀಡಿದೆ ಎಂದು ತಿಳಿಸಿದೆ.

ಈ ಒಪ್ಪಂದವು ಹಣಕಾಸು ಸೇವೆಗಳ ಕ್ಷೇತ್ರದಲ್ಲಿ ಅತಿದೊಡ್ಡ ಎಫ್‌ಡಿಐ ಹರಿವಿಗೆ ಕಾರಣವಾಗಲಿದೆ ಎಂದು ತಿಳಿಸಿದೆ.

**ಮುಂಬೈ ಧಾರಣೆ (ಶೇಂಗಾ)**

| 19-12-2025 | |
|---|---|
| ಜಾವಾ 70/80(ಹೊಸ) | 10700-10800 |
| ಜಾವಾ 80/90(ಹೊಸ) | 10000-10100 |
| ದಪ್ಪ ಮಧ್ಯಪ್ರದೇಶ (ಹೊಸ) | 7700-7800 |
| ದಪ್ಪ ಗುಜರಾತ್ (ಹೊಸ) | 9000-9100 |
| **ಶೇಂಗಾ ಎಣ್ಣೆ (10 ಕೆಜಿಗೆ)** | |
| ಕಚ್ಚಾ (ತೆರಿಗೆ ಬಿಟ್ಟು) | 1580 (1580) |
| ಒಂದು ವಾರದ ಡೆಲಿವರಿ | 1575 (1575) |
| ಪಾಮ್ ವಾರದ ಡೆಲಿವರಿ | 1238 (1243) |
| ಸೂರ್ಯಕಾಂತಿ ಎಣ್ಣೆ ಕಚ್ಚಾ | 1415 (1425) |
| **ಚಿನ್ನ-ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)** | |
| ಅಪರಂಜಿ ಚಿನ್ನ 10 ಗ್ರಾಂ | 1,31,350 (1,32,300) |
| ಬೆಳ್ಳಿ ಕೆ.ಜಿಗೆ | 2,00,100 (2,01,300) |

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

**ಕೊಬ್ಬರಿ ಧಾರಣೆ** (ಕ್ವಿಂಟಲ್‌ಗೆ)

| | |
|---|---|
| ಅರಸೀಕೆರೆ | ₹19000-19000 |
| ತುಮಕೂರು | ₹18500-21500 |



### ಸೆಕೆಂಡ್ ಹ್ಯಾಂಡ್ ಕಾರುಗಳ ಹರಾಜು ಇಂದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಏರ್‌ಪೋರ್ಟ್ ರಸ್ತೆಯಲ್ಲಿನ ಗಿಗಾ ಕೆಫೆ ಬಳಿ ಡಿಸೆಂಬರ್ 20ರಂದು ಮೆಗಾ ಸೆಕೆಂಡ್ ಹ್ಯಾಂಡ್ ಕಾರುಗಳ ಹರಾಜನ್ನು ಮಾರುತಿ ಸುಜುಕಿ ಟ್ರೂ ವ್ಯಾಲ್ಯೂ ಆಯೋಜಿಸಿದೆ.

ಈ ಹರಾಜಿನಲ್ಲಿ 150ಕ್ಕೂ ಅಧಿಕ ಸೆಕೆಂಡ್ ಹ್ಯಾಂಡ್ ಕಾರುಗಳು ಮಾರಾಟಕ್ಕಿವೆ. ಮಾರುತಿ ಸುಜುಕಿ ಇಂಡಿಯಾ ಲಿಮಿಟೆಡ್‌ನ (ಎಂಎಸ್‌ಐಎಲ್) ಡೀಲರ್‌ಗಳಿಂದ ಪಾರದರ್ಶಕ ಹರಾಜು ನಡೆಯಲಿದೆ. ಈ ಹರಾಜಿನಲ್ಲಿ ಅತ್ಯುತ್ತಮ ಬೆಲೆಗೆ ವಾಹನಗಳು ದೊರೆಯಲಿವೆ. ವರ್ಷಾಂತ್ಯದ ಸ್ಟಾಕ್ ಕ್ಲಿಯರೆನ್ಸ್ ಡೀಲ್‌ಗಳು ಇವೆ. ಮಾರುತಿ ಮತ್ತು ಬೇರೆ ಬ್ರ್ಯಾಂಡ್ ಕಾರುಗಳು ಸಹ ಇರಲಿವೆ ಎಂದು ಟ್ರೂ ವ್ಯಾಲ್ಯೂ ತಿಳಿಸಿದೆ.

**ಈರುಳ್ಳಿ ಧಾರಣೆ** ಬೆಂಗಳೂರು (ಕ್ವಿಂಟಲ್‌ಗೆ)

| | |
|---|---|
| ದೊಡ್ಡ | ₹1400-2800 |
| ಮಧ್ಯಮ | ₹1000-1400 |
| ಸಣ್ಣ | ₹200-1000 |

### 50 ಲಕ್ಷ ಯುವಜನರಿಗೆ ಕೌಶಲ ತರಬೇತಿ: ಐಬಿಎಂ

ನವದೆಹಲಿ (ಪಿಟಿಐ): 2030ರ ವೇಳೆಗೆ ಕೃತಕ ಬುದ್ಧಿಮತ್ತೆ, ಸೈಬರ್ ಭದ್ರತೆ ಮತ್ತು ಕ್ವಾಂಟಮ್ ಕಂಪ್ಯೂಟಿಂಗ್ ಸೇರಿದಂತೆ ವಿವಿಧ ತಂತ್ರಜ್ಞಾನದ ಕೌಶಲ ತರಬೇತಿಯನ್ನು ದೇಶದ 50 ಲಕ್ಷ ಯುವಜನರಿಗೆ ನೀಡಲು ನಿರ್ಧರಿಸಲಾಗಿದೆ ಎಂದು ಅಮೆರಿಕದ ತಂತ್ರಜ್ಞಾನ ಸಂಸ್ಥೆ ಐಬಿಎಂ ಶುಕ್ರವಾರ ಹೇಳಿದೆ.

'ಐಬಿಎಂ ಸ್ಕಿಲ್ಸ್‌ಬಿಲ್ಡ್' ಕಾರ್ಯಕ್ರಮವು, ಭವಿಷ್ಯಕ್ಕೆ ಸಿದ್ಧವಾದ ಸಿಬ್ಬಂದಿಯನ್ನು ಸೃಷ್ಟಿಸುವ ಗುರಿ ಹೊಂದಿದೆ. ವಿದ್ಯಾರ್ಥಿಗಳು ಮತ್ತು ಹಿರಿಯ ವಯಸ್ಕರಿಗೆ ಡಿಜಿಟಲ್ ಕೌಶಲ ತರಬೇತಿ ನೀಡಲು ಉದ್ದೇಶಿಸಲಾಗಿದೆ ಎಂದು ತಿಳಿಸಿದೆ.

ಈ ಕಾರ್ಯಕ್ರಮದ ಅಂಗವಾಗಿ ಐಬಿಎಂ, ಶಾಲೆಗಳು, ವಿಶ್ವವಿದ್ಯಾಲಯಗಳಲ್ಲಿ ಈ ತರಬೇತಿಯನ್ನು ನೀಡಲಾಗುವುದು. ಕಂಪನಿಯು ಅಖಿಲ ಭಾರತ ತಾಂತ್ರಿಕ ಶಿಕ್ಷಣ ಮಂಡಳಿ (ಎಐಸಿಟಿಇ) ಜೊತೆ ಪಾಲುದಾರಿಕೆ ಮಾಡಿಕೊಂಡು ವಿವಿಧ ಕಾರ್ಯಕ್ರಮ ನಡೆಸಲಿದೆ ಎಂದು ತಿಳಿಸಿದೆ.

2030ರ ವೇಳೆಗೆ ವಿಶ್ವದಾದ್ಯಂತ 3 ಕೋಟಿ ಜನರಿಗೆ ತರಬೇತಿ ನೀಡುವ ಗುರಿಯನ್ನು ಐಬಿಎಂ ಹೊಂದಿದೆ.

### ಕೇಂದ್ರ ಕೃಷಿ ಸಚಿವರಿಗೆ ಎಚ್‌. ಡಿ. ದೇವೇಗೌಡ ಮನವಿ

## ಹುಣಸೆ, ಹಲಸು, ನೇರಳೆಗೆ ಮಂಡಳಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಹುಣಸೆ, ಹಲಸು ಮತ್ತು ನೇರಳೆ ಮುಂತಾದ ಪೌಷ್ಟಿಕಾಂಶಯುಕ್ತ ಹಣ್ಣಿನ ಬೆಳೆಗಳಿಗಾಗಿ ಪ್ರತ್ಯೇಕವಾದ ರಾಷ್ಟ್ರೀಯ ಮಂಡಳಿ ಸ್ಥಾಪಿಸಬೇಕು ಎಂದು ರಾಜ್ಯಸಭಾ ಸದಸ್ಯ ಎಚ್‌.ಡಿ. ದೇವೇಗೌಡರು ಕೇಂದ್ರ ಕೃಷಿ ಮತ್ತು ರೈತ ಕಲ್ಯಾಣ ಸಚಿವ ಶಿವರಾಜ್ ಸಿಂಗ್ ಚೌಹಾಣ್ ಅವರಲ್ಲಿ ಮನವಿ ಮಾಡಿದ್ದಾರೆ.

ಸಂಸತ್ ಭವನದಲ್ಲಿ ಕೇಂದ್ರದ ಬೃಹತ್ ಕೈಗಾರಿಕೆ ಮತ್ತು ಉಕ್ಕು ಸಚಿವ ಎಚ್‌.ಡಿ. ಕುಮಾರಸ್ವಾಮಿ ಅವರೊಂದಿಗೆ ಕೃಷಿ ಸಚಿವರನ್ನು ಶುಕ್ರವಾರ ಭೇಟಿಯಾದ ಮಾಜಿ ಪ್ರಧಾನಿ ತಮ್ಮ ಪ್ರಸ್ತಾವ ಕುರಿತ ಪತ್ರ ನೀಡಿದರು.

ಹುಣಸೆ ಹಣ್ಣನ್ನು ದೇಶದಾದ್ಯಂತ ವ್ಯಾಪಕವಾಗಿ ಬೆಳೆಯಲಾಗುತ್ತದೆ. ಮಧ್ಯ, ಪೂರ್ವ ಮತ್ತು ದಕ್ಷಿಣ ಭಾರತದಲ್ಲಿ ದೊಡ್ಡ ಪ್ರಮಾಣದಲ್ಲಿ ಬೆಳೆಯಲಾಗುತ್ತದೆ. ಆದರೆ ಹಲಸು ಮತ್ತು ನೇರಳೆಗಳನ್ನು ಪ್ರಧಾನವಾಗಿ ಭಾರತದ ದಕ್ಷಿಣ, ಮಧ್ಯ ಮತ್ತು ಪೂರ್ವ ರಾಜ್ಯಗಳಲ್ಲಿ ಬೆಳೆಯಲಾಗುತ್ತದೆ.



ಶಿಡ್ಲಘಟ್ಟದಿಂದ ತರಿಸಿದ್ದ ಹಲಸನ್ನು ದೇವೇಗೌಡರು ಶಿವರಾಜ್ ಸಿಂಗ್ ಚೌಹಾಣ್ ಅವರಿಗೆ ಉಡುಗೊರೆಯಾಗಿ ನೀಡಿದರು. ಎಚ್‌.ಡಿ.ಕುಮಾರಸ್ವಾಮಿ ಚಿತ್ರದಲ್ಲಿದ್ದಾರೆ

ಭಾರತವು ಈ ಹಣ್ಣುಗಳ ಅತಿದೊಡ್ಡ ಉತ್ಪಾದಕ ರಾಷ್ಟ್ರವಾಗಿದೆ. ಏಷ್ಯಾದ ಕೆಲ ದೇಶಗಳು ಮತ್ತು ಆಫ್ರಿಕಾದ ದೇಶಗಳಲ್ಲಿ ಸಣ್ಣ ಪ್ರಮಾಣದಲ್ಲಿ ಈ ಕೃಷಿ ಕಂಡುಬರುತ್ತದೆ ಎಂದು ಅವರು ಪತ್ರದಲ್ಲಿ ಉಲ್ಲೇಖಿಸಿದ್ದಾರೆ.

ಈ ಹಣ್ಣುಗಳು ಮತ್ತು ಅವುಗಳ ಉಪ ಉತ್ಪನ್ನಗಳು ಔಷಧೀಯ ಕೈಗಾರಿಕೆಗಳಿಂದ ಬೇಡಿಕೆ ಸೇರಿದಂತೆ ದೇಶೀಯ ಮತ್ತು ರಫ್ತು ಮಾರುಕಟ್ಟೆಗಳಲ್ಲಿ ಹೆಚ್ಚಿನ ಬೇಡಿಕೆಯನ್ನು ಹೊಂದಿವೆ. ಈ ಬೆಳೆಗಳು ಹೆಚ್ಚಿನ ಆದಾಯ ಗಳಿಸುವ, 'ಡಾಲರ್ ಗಳಿಸುವ' ಬೆಳೆಗಳಾಗಿವೆ. ಅಲ್ಲದೆ, ಇದು ರಾಷ್ಟ್ರೀಯ ಆರ್ಥಿಕತೆಗೆ ಕೊಡುಗೆ ನೀಡುತ್ತದೆ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ದೊಡ್ಡ ಉದ್ಯೋಗಾವಕಾಶಗಳನ್ನು ಸೃಷ್ಟಿಸುತ್ತದೆ ಎಂದು ಅವರು ಹೇಳಿದ್ದಾರೆ.

### ₹1 ಲಕ್ಷ ಕೋಟಿ ಹೂಡಿಕೆ: ಜೀತ್ ಅದಾನಿ

ಮುಂಬೈ (ಪಿಟಿಐ): ಮುಂದಿನ ಐದು ವರ್ಷದಲ್ಲಿ ವಿಮಾನನಿಲ್ದಾಣ ವ್ಯವಹಾರದಲ್ಲಿ ₹1 ಲಕ್ಷ ಕೋಟಿ ಹೂಡಿಕೆ ಮಾಡಲು ಅದಾನಿ ಸಮೂಹ ಯೋಜಿಸಿದೆ.

ದೇಶದ ವಿಮಾನಯಾನ ಉದ್ಯಮವು ಸುಸ್ಥಿರ ಬೆಳವಣಿಗೆ ಕಾಣುತ್ತಿದ್ದು, ವಾರ್ಷಿಕ ಶೇ 15ರಿಂದ ಶೇ 16ರಷ್ಟು ಪ್ರಗತಿ ಕಾಣುವ ನಿರೀಕ್ಷೆ ಇದೆ ಎಂದು ಅದಾನಿ ಏರ್‌ಪೋರ್ಟ್ಸ್‌ನ ನಿರ್ದೇಶಕ ಜೀತ್ ಅದಾನಿ ಹೇಳಿದ್ದಾರೆ.

ಡಿಸೆಂಬರ್ 25ರಿಂದ ನವಿ ಮುಂಬೈನ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಿಂದ ವಾಣಿಜ್ಯ ಸೇವೆ ಆರಂಭವಾಗಲಿದೆ. ಈ ವಿಮಾನ ನಿಲ್ದಾಣವನ್ನು ಅದಾನಿ ಸಮೂಹವು ಅಭಿವೃದ್ಧಿಪಡಿಸಿದ್ದು, ಶೇ 74ರಷ್ಟು ಪಾಲು ಹೊಂದಿದೆ ಎಂದು ಹೇಳಿದ್ದಾರೆ.

ಮುಂಬೈನಲ್ಲಿರುವ ಎರಡು ವಿಮಾನ ನಿಲ್ದಾಣಗಳಲ್ಲದೆ, ಅದಾನಿ ಸಮೂಹವು ಅಹಮದಾಬಾದ್, ಲಖನೌ, ಗುವಾಹಟಿ, ತಿರುವನಂತಪುರ, ಜೈಪುರ ಮತ್ತು ಮಂಗಳೂರಿನಲ್ಲಿರುವ ವಿಮಾನ ನಿಲ್ದಾಣಗಳನ್ನು ನಿರ್ವಹಣೆ ಮಾಡುತ್ತಿದೆ.



**ಸುಧಾ ಓದಿರಿ**

### ಅರ್ಜಿ ಶುಲ್ಕ ಇಳಿಕೆ

ನವದೆಹಲಿ (ಪಿಟಿಐ): 2026–27ನೇ ಸಾಲಿನ ಸ್ನಾತಕ ಪದವಿ ಮತ್ತು ಸ್ನಾತಕೋತ್ತರ ಪದವಿಯ ವಿವಿಧ ಕೋರ್ಸ್‌ಗಳಿಗೆ ನಡೆಸುವ ಪ್ರವೇಶ ಪರೀಕ್ಷೆಯ ಅರ್ಜಿ ಶುಲ್ಕವನ್ನು ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಫ್ಯಾಶನ್ ಟೆಕ್ನಾಲಜಿ (ಎನ್‌ಐಎಫ್‌ಟಿ) ಕಡಿಮೆ ಮಾಡಿದೆ ಎಂದು ಕೇಂದ್ರ ಜವಳಿ ಸಚಿವಾಲಯ ಶುಕ್ರವಾರ ತಿಳಿಸಿದೆ.

ಈ ಮೊದಲು ಸಾಮಾನ್ಯ, ಒಬಿಸಿ (ಎನ್‌ಸಿಎಲ್) ಮತ್ತು ಇಡಬ್ಲ್ಯುಎಸ್ ವರ್ಗದ ವಿದ್ಯಾರ್ಥಿಗಳಿಗೆ ಅರ್ಜಿ ಶುಲ್ಕ ₹3 ಸಾವಿರವಿತ್ತು. ಅದನ್ನು ಈಗ ₹2 ಸಾವಿರಕ್ಕೆ ಇಳಿಸಿದೆ. ಎಸ್‌ಸಿ, ಎಸ್‌ಟಿ ಮತ್ತು ಪಿಡಬ್ಲ್ಯುಡಿ ಅಭ್ಯರ್ಥಿಗಳ ಶುಲ್ಕವನ್ನು ₹1,500ರಿಂದ ₹500ಕ್ಕೆ ಇಳಿಸಿದೆ.

ಪ್ರವೇಶ ಪರೀಕ್ಷೆಗೆ ಅರ್ಜಿ ಸಲ್ಲಿಸಲು ಜನವರಿ 6 ಕೊನೆಯ ದಿನವಾಗಿದೆ. ದಂಡದೊಂದಿಗೆ ಜನವರಿ 7ರಿಂದ 10ರ ವರೆಗೆ ಅರ್ಜಿ ಸಲ್ಲಿಸಲು ಅವಕಾಶವಿದೆ. ಫೆಬ್ರುವರಿ 8ರಂದು ಪರೀಕ್ಷೆ ನಡೆಯಲಿದೆ ಎಂದು ತಿಳಿಸಿದೆ.

### 2026ರಲ್ಲಿ ಬಜೆಟ್ ಮಂಡನೆ ಭಾನುವಾರ?



ನವದೆಹಲಿ (ಪಿಟಿಐ): 2017ರಿಂದಲೂ ಪ್ರತಿವರ್ಷ ಫೆಬ್ರುವರಿ 1ರಂದು ಕೇಂದ್ರ ಬಜೆಟ್ (ಆಯವ್ಯಯ) ಮಂಡನೆ ಮಾಡಲಾಗುತ್ತಿದೆ. ಇದೇ ಸಂಪ್ರದಾಯ 2026ರಲ್ಲೂ ಮುಂದುವರಿದರೆ ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ ಅವರು ಈ ಬಾರಿ ಫೆಬ್ರುವರಿ 1ರ ಭಾನುವಾರದಂದು ಬಜೆಟ್ ಮಂಡಿಸಬೇಕಾಗುತ್ತದೆ.

ಇದಕ್ಕೆ ಸಂಬಂಧಿಸಿದಂತೆ ಸಂಸದೀಯ ವ್ಯವಹಾರಗಳ ಸಚಿವ ಕಿರಣ್ ರಿಜಿಜು ಅವರನ್ನು ಮಾಧ್ಯಮಗಳು ಪ್ರಶ್ನಿಸಿವೆ. ಪ್ರತಿಕ್ರಿಯಿಸಿರುವ ಸಚಿವ, 'ಸಂಸದೀಯ ವ್ಯವಹಾರಗಳ ಸಂಪುಟ ಸಮಿತಿಯು ಈ ಸಂಬಂಧಿಸಿದ ನಿರ್ಧಾರವನ್ನು ಸೂಕ್ತ ಸಮಯದಲ್ಲಿ ತೆಗೆದುಕೊಳ್ಳಲಿದೆ' ಎಂದಿದ್ದಾರೆ.

ಮತ್ತೊಂದೆಡೆ, ಅಧಿಕಾರಿಯೊಬ್ಬರು ಈ ಬಗ್ಗೆ ಪ್ರತಿಕ್ರಿಯಿಸಿ, 'ಬಜೆಟ್ ಮಂಡನೆಗೆ ನಮಗೆ ನಿಗದಿತವಾದ ದಿನವಿದೆ. ಭಾನುವಾರ ಎಂಬ ಪರಿಕಲ್ಪನೆಯನ್ನು ಬ್ರಿಟಿಷರು ತಂದಿದ್ದು' ಎಂದಿದ್ದಾರೆ. ಹೀಗಾಗಿ ಫೆ.1ರ ಭಾನುವಾರವೇ ಬಜೆಟ್ ಮಂಡನೆ ಆಗಬಹುದು ಎಂಬ ನಿರೀಕ್ಷೆಯೂ ಇದೆ.

2017ಕ್ಕೂ ಮುಂಚೆ ಫೆಬ್ರುವರಿಯ ಕೊನೆಯ ದಿನದಂದು ಬಜೆಟ್ ಮಂಡಿಸಲಾಗುತ್ತಿತ್ತು. ಆದರೆ, ಹೊಸ ಆರ್ಥಿಕ ವರ್ಷದ ಏಪ್ರಿಲ್‌1ರಿಂದ ಬಜೆಟ್ ಅನುಷ್ಠಾನವಾಗಲಿ ಎಂಬ ಉದ್ದೇಶಕ್ಕಾಗಿ 2017ರಲ್ಲಿ ಅಂದಿನ ವಿತ್ತ ಸಚಿವರಾಗಿದ್ದ ಅರುಣ್ ಜೇಟ್ಲಿ ಅವರು ಫೆಬ್ರುವರಿ 1ರಂದು ಬಜೆಟ್ ಮಂಡನೆ ಮಾಡುವ ಸಂಪ್ರದಾಯ ಆರಂಭಿಸಿದರು. ಇದರಿಂದ ಮಾರ್ಚ್ ಅಂತ್ಯದೊಳಗೆ ಬಜೆಟ್‌ಗೆ ಸಂಸತ್ತಿನ ಅನುಮೋದನೆ ಸಿಗುವಂತಾಗಿತ್ತು.

### ರಕ್ಷಣಾ ನೀತಿ ಮಸೂದೆಗೆ ಟ್ರಂಪ್ ಅಂಕಿತ

ನ್ಯೂಯಾರ್ಕ್/ ವಾಷಿಂಗ್ಟನ್ (ಪಿಟಿಐ): ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ವಾರ್ಷಿಕ ರಕ್ಷಣಾ ನೀತಿ ಮಸೂದೆಗೆ ಸಹಿ ಹಾಕಿದ್ದು, ಇದು ಕಾಯ್ದೆಯಾಗಿ ಜಾರಿಗೆ ಬರಲಿದೆ.

ಇಂಡೊ-ಪೆಸಿಫಿಕ್ ಪ್ರದೇಶದ ಮುಕ್ತ ವಾತಾವರಣಕ್ಕೆ ಬದ್ಧವಾದ ಉದ್ದೇಶವನ್ನು ವ್ಯಕ್ತಪಡಿಸಲು ಮತ್ತು ಚೀನಾ ಒಡ್ಡುವ ಸವಾಲುಗಳನ್ನು ಪರಿಹರಿಸಲು ಭಾರತದೊಂದಿಗೆ ಅಮೆರಿಕದ ಸಂಬಂಧವನ್ನು ವಿಸ್ತರಿಸುವ ಗುರಿಯನ್ನು ಈ ಮಸೂದೆ ಹೊಂದಿದೆ.

2026ನೇ ಹಣಕಾಸು ವರ್ಷದ ರಾಷ್ಟ್ರೀಯ ರಕ್ಷಣಾ ಅಧಿಕಾರ ಕಾಯ್ದೆಗೆ ಸಹಿ ಮಾಡಲಾಗಿದೆ. ಈ ಕಾಯ್ದೆಯು ಯುದ್ಧ ಇಲಾಖೆ, ಇಂಧನ ಇಲಾಖೆಯ ರಾಷ್ಟ್ರೀಯ ಭದ್ರತಾ ಕಾರ್ಯಕ್ರಮಗಳು, ವಿದೇಶಾಂಗ ಇಲಾಖೆ, ಗೃಹ ಭದ್ರತಾ ಇಲಾಖೆ, ಗುಪ್ತಚರ ಮತ್ತು ಇತರ ಕಾರ್ಯನಿರ್ವಾಹಕ ಇಲಾಖೆಗಳು ಹಾಗೂ ಏಜೆನ್ಸಿಗಳಿಗೆ ಹಣಕಾಸು ವಿನಿಯೋಗಕ್ಕೆ ಅಧಿಕಾರ ನೀಡುತ್ತದೆ.

## ಬಾಂಗ್ಲಾದೇಶ: ಮತ್ತೊಮ್ಮೆ ಉದ್ವಿಗ್ನ

ಒಂದನೇ ಪುಟದಿಂದ...



ಶರೀಫ್ ಉಸ್ಮಾನ್ ಹಾದಿ

ಹಾದಿ ಅವರು 'ಇನ್‌ಕ್ವಿಲಾಬ್ ಮಂಚ್' ಸಂಘಟನೆಯ ವಕ್ತಾರರಾಗಿದ್ದರು. ಮಾಜಿ ಪ್ರಧಾನಿ ಶೇಖ್ ಹಸೀನಾ ಮತ್ತು ಭಾರತವನ್ನು ತೀವ್ರವಾಗಿ ಟೀಕಿಸುತ್ತಿದ್ದರು ಮತ್ತು ಹೋರಾಟಗಳನ್ನು ಆಯೋಜಿಸುತ್ತಿದ್ದರು. 'ಭಾರತದ ಪ್ರಾಬಲ್ಯದ ವಿರುದ್ಧದ ಹೋರಾಟದಲ್ಲಿ, ಕ್ರಾಂತಿಕಾರಿ ಉಸ್ಮಾನ್ ಹಾದಿ ಅವರನ್ನು ಆ ದೇವರು ಹುತಾತ್ಮ ಎಂದು ಒಪ್ಪಿಕೊಂಡಿದ್ದಾರೆ' ಎಂದು ಗುರುವಾರ ರಾತ್ರಿ ಈ ಸಂಘಟನೆಯು ಪೋಸ್ಟ್ ಹಂಚಿಕೊಂಡಿತ್ತು.

'ಒಂದೊಮ್ಮೆ ಹತ್ಯೆ ಮಾಡಿದವರು ಭಾರತಕ್ಕೆ ಓಡಿ ಹೋಗಿದ್ದರೆ, ಭಾರತ ಸರ್ಕಾರದೊಂದಿಗೆ ಮಾತನಾಡಿ, ಆರೋಪಿಗಳನ್ನು ವಾಪಸು ಕರೆತಂದು ಬಂಧಿಸಲೇಬೇಕು' ಎಂದು ಸಂಘಟನೆ ಒತ್ತಾಯಿಸಿದೆ. 'ದೇಶದ ಚಟುವಟಿಕೆಗಳೇ ನಿಂತು ಹೋಗಲಿ, ನಮಗೆ ನ್ಯಾಯ ಬೇಕು. ಆದ್ದರಿಂದ ನಾವೆಲ್ಲರೂ ಒಟ್ಟಾಗಬೇಕು' ಎಂದೂ ಅದು ಹೇಳಿತ್ತು.



ಹಾದಿ ಅವರ ಸಾವಿನ ಸುದ್ದಿ ತಿಳಿಯುತ್ತಿದ್ದಂತೆಯೇ ಪ್ರತಿಭಟನಕಾರರು ಢಾಕಾದ ಶಾಹಬಾಗ್ ಸ್ಕ್ವೇರ್‌ನಲ್ಲಿ ಗುರುವಾರ ರಾತ್ರಿ ಜಮಾಯಿಸಿದ್ದರು —ಎಎಫ್‌ಪಿ ಚಿತ್ರ

ಗುಂಡಿಕ್ಕಿದ ಪ್ರಕರಣದ ಮುಖ್ಯ ಶಂಕಿತ ಫೈಸಲ್ ಕರೀಮ್ ಮಸೂದ್ ಮತ್ತು ಆತನ ಪೋಷಕರು, ಹೆಂಡತಿ ಮತ್ತು ಸ್ನೇಹಿತೆಯನ್ನು ಪೊಲೀಸರು ಬಂಧಿಸಿದ್ದಾರೆ. ಹಾದಿ ಅವರ ಸಾವಿನ ಕಾರಣ ಶನಿವಾರ ಮಧ್ಯಾಹ್ನದ ವರೆಗೆ ಶೋಕಾಚರಣೆ ಘೋಷಿಸಲಾಗಿದೆ.

### ಭಾರತ ವಿರೋಧಿ ಘೋಷಣೆ

- ಹಿಂದೂ ದೇವರುಗಳನ್ನು ನಿಂದಿಸಿ, ದೀಪು ಚಂದ್ರ ದಾಸ್ ಎಂಬ ವ್ಯಕ್ತಿಯ ಮೇಲೆ ಗುಂಪು ಹಲ್ಲೆ ನಡೆಸಲಾಗಿದೆ. ಬಳಿಕ, ಆತನ ದೇಹವನ್ನು ಮರಕ್ಕೆ ನೇತುಹಾಕಿ, ಬೆಂಕಿ ಹಚ್ಚಿರುವ ಘಟನೆ ಮೈಮೆನ್‌ಶಿಂಘೋ ನಗರದಲ್ಲಿ ಗುರುವಾರ ರಾತ್ರಿ ನಡೆದಿದೆ. ಮುಖ್ಯ ಸಲಹೆಗಾರ ಯೂನುಸ್ ಅವರು ಈ ಹಿಂಸಾಚಾರವನ್ನು ತೀವ್ರವಾಗಿ ಖಂಡಿಸಿದ್ದಾರೆ.
- ಚಟ್ಟೋಗ್ರಾಮದಲ್ಲಿರುವ ಭಾರತದ ಸಹಾಯಕ ಹೈಕಮಿಷನ್ ಅವರ ಕಚೇರಿ ಎದುರು ನೂರಾರು ಸಂಖ್ಯೆಯಲ್ಲಿ ಶುಕ್ರವಾರ ಜಮಾಯಿಸಿದ್ದ ಪ್ರತಿಭಟನಕಾರರು, ಕಲ್ಲು ತೂರಾಟ ನಡೆಸಿದರು. ಆದರೆ, ಕಚೇರಿಗೆ ಯಾವುದೇ ಹಾನಿಯಾಗಲಿಲ್ಲ
- ಶುಕ್ರವಾರ ಇಡೀ ದಿನ ದೇಶದ ವಿವಿಧ ಭಾಗಗಳಲ್ಲಿ ಪ್ರತಿಭಟನೆಗಳು ನಡೆದವು. ಎಲ್ಲ ಕಡೆಯಲ್ಲಿಯೂ ಭಾರತ ವಿರೋಧಿ ಘೋಷಣೆಗಳನ್ನು ಕೂಗಲಾಯಿತು. ಹಾದಿ ಅವರನ್ನು ಹತ್ಯೆ ಮಾಡಿದವರು ವಾಪಸು ಬರುವವರೆಗೂ ಭಾರತದ ಹೈಕಮಿಷನ್ ಕಚೇರಿಯನ್ನು ಬಂದ್ ಮಾಡುವಂತೆ ಒತ್ತಾಯಿಸಲಾಯಿತು.
- ಹಾದಿ ಪರ ಪ್ರತಿಭಟನಕಾರರು ಢಾಕಾದಲ್ಲಿರುವ ಭಾರತದ ಹೈಕಮಿಷನ್ ಕಚೇರಿ ಎದುರು ಬುಧವಾರ ಪ್ರತಿಭಟನೆ ನಡೆಸಿದ್ದರು

### 'ಸಮರ್ಪಕ ನಿರ್ವಹಣೆ ಅಗತ್ಯ'

ಭಾರತದ ವಿದೇಶಾಂಗ ಸಚಿವಾಲಯದ ಸಂಸತ್ತಿನ ಸ್ಥಾಯಿ ಸಮಿತಿಯು 'ಭಾರತ–ಬಾಂಗ್ಲಾದೇಶ ಸಂಬಂಧದ ಭವಿಷ್ಯ' ಎಂಬ ಹೆಸರಿನ ವರದಿಯನ್ನು ಸಂಸತ್ತಿನಲ್ಲಿ ಮಂಡಿಸಿದೆ. ಕಾಂಗ್ರೆಸ್ ಸಂಸದ ಶಶಿ ತರೂರ್ ಅವರು ಸಮಿತಿಯ ಮುಖ್ಯಸ್ಥರಾಗಿದ್ದಾರೆ. ವರದಿಯಲ್ಲಿರುವ ಮುಖ್ಯ ಅಂಶಗಳು ಹೀಗಿವೆ:

- ಬಾಂಗ್ಲಾದಲ್ಲಿ ಪರಿಸ್ಥಿತಿಯು ಸಂಕೀರ್ಣವಾಗಿದೆ. ಚುನಾವಣೆ ನಡೆಯುವ ಬಗ್ಗೆ ಅನಿಶ್ಚಿತತೆ ಮೂಡಿದೆ. ಅಲ್ಪಸಂಖ್ಯಾತರ ಮೇಲಿನ ದಾಳಿ ಕುರಿತು ಕಳವಳ ವ್ಯಕ್ತಪಡಿಸುತ್ತಲೇ ಅಲ್ಲಿನ ಮಧ್ಯಂತರ ಸರ್ಕಾರದ ಜೊತೆ ಭಾರತವು ನಿರಂತರ ಸಂಪರ್ಕ ಮಾಡುತ್ತಿದೆ
- ಅವಾಮಿ ಲೀಗ್ ಪಕ್ಷದ ಪ್ರಾಬಲ್ಯ ತಗ್ಗಿದಾಗಿನಿಂದಲೂ ಹಲವು ಘಟನೆಗಳು ನಡೆಯುತ್ತಿವೆ. ಯುವ ಸಮೂಹದಲ್ಲಿ ರಾಷ್ಟ್ರೀಯತೆ ಪರಿಕಲ್ಪನೆಯು ಉದಯವಾಗಿದೆ. ಇಸ್ಲಾಮಿಕ್ ಮೂಲಭೂತವಾದವು ಪ್ರವೇಶ ಪಡೆದಿದೆ. ಚೀನಾ, ಪಾಕಿಸ್ತಾನದ ಪ್ರಭಾವ ಹೆಚ್ಚಳವಾಗಿದೆ. ಭಾರತವು ಈ ಎಲ್ಲವನ್ನು ತಕ್ಷಣವೇ ಸಮರ್ಪಕವಾಗಿ ನಿಭಾಯಿಸದೇ ಇದ್ದರೆ, ಬಾಂಗ್ಲಾವನ್ನು ನಾವು ಕಳೆದುಕೊಳ್ಳಲಿದ್ದೇವೆ

## ಸೈಬರ್ ವಂಚನೆಗೆ 'ಸ್ಫೋಟ'ದ ನಂಟಿನ ಕರೆ

ಒಂದನೇ ಪುಟದಿಂದ...

ಈ ಪ್ರಕರಣದ ಸಂಬಂಧ ದಕ್ಷಿಣ ವಿಭಾಗದ ಸೈಬರ್ ಅಪರಾಧ ಠಾಣೆಯ ಪೊಲೀಸರು, ಮಾಹಿತಿ ತಂತ್ರಜ್ಞಾನ ಕಾಯ್ದೆ ಹಾಗೂ ಬಿಎನ್‌ಎಸ್ ಅಡಿ ಪ್ರಕರಣ ದಾಖಲಿಸಿಕೊಂಡು ತನಿಖೆ ಚುರುಕುಗೊಳಿಸಿದ್ದಾರೆ.

'ಡಿ.1ರ ಮಧ್ಯಾಹ್ನ 1.20ರ ಸುಮಾರಿಗೆ ಯುವಕನಿಗೆ ವಂಚಕನೊಬ್ಬ ಕರೆ ಮಾಡಿದ್ದ. ಭಯೋತ್ಪಾದನಾ ನಿಗ್ರಹ ದಳದ ಸಹಾಯವಾಣಿಯಿಂದ (ಎಟಿಎಸ್) ಕರೆ ಮಾಡುತ್ತಿರುವುದಾಗಿ ಹೇಳಿದ್ದ. ದೆಹಲಿಯ ಕೆಂಪುಕೋಟೆಯ ಬಳಿ ಆಗಿರುವ ಬಾಂಬ್ ಸ್ಫೋಟ ಪ್ರಕರಣದಲ್ಲಿ ನಿಮ್ಮ ಸಿಮ್ ಬಳಕೆ ಆಗಿದೆಯೇ ಎಂದು ಪ್ರಶ್ನಿಸಿದ್ದ. ಆಗ ಭಯಪಟ್ಟುಕೊಂಡಿದ್ದ ದೂರುದಾರ, ಇಲ್ಲ ಎಂಬುದಾಗಿ ಉತ್ತರಿಸಿದ್ದರು. ಪ್ರಕರಣದಲ್ಲಿ ನಿಮ್ಮ ಪಾತ್ರ ಇಲ್ಲ ಎನ್ನುವುದೇ ಆಗಿದ್ದರೆ ಪ್ರಮಾಣ ಪತ್ರ ನೀಡಲಾಗುವುದು. ದೂರು ನೀಡಬೇಕೆಂದು ಹೇಳಿದ್ದ. ಅದಾದ ಮೇಲೆ ಕರೆಯನ್ನು ಬೇರೆ ವ್ಯಕ್ತಿಗೆ ವರ್ಗಾವಣೆ ಮಾಡಿದ್ದ. ಕರೆ ಸ್ವೀಕರಿಸಿದ್ದ ವ್ಯಕ್ತಿ, ತಕ್ಷಣವೇ ದೆಹಲಿಗೆ ಬರುವಂತೆ ಸೂಚಿಸಿದ್ದ. ದೆಹಲಿಗೆ ಬರಲು ಸಾಧ್ಯವಿಲ್ಲ ಎಂದಾಗ, ರಾಷ್ಟ್ರೀಯ ತನಿಖಾ ದಳದ (ಎನ್‌ಐಎ) ಅಧಿಕಾರಿಯೊಬ್ಬರು ವಿಡಿಯೊ ಕರೆ ಮಾಡುತ್ತಾರೆ ಎಂಬುದಾಗಿ ಬೆದರಿಸಿದ್ದ' ಎಂದು ಮೂಲಗಳು 'ಪ್ರಜಾವಾಣಿ'ಗೆ ತಿಳಿಸಿವೆ.

### ಭಯವೇ ವಂಚಕರಿಗೆ ಉಪಾಯ

'ಸಾರ್ವಜನಿಕರಲ್ಲಿ ಭಯ ಹುಟ್ಟಿಸುವ ತಂತ್ರಗಳನ್ನೇ ವಂಚಕರು ಹೆಚ್ಚು ಬಳಸುತ್ತಿದ್ದಾರೆ. ಸ್ಫೋಟ ಹಾಗೂ ಅಕ್ರಮ ಹಣ ವರ್ಗಾವಣೆಯ ಹೆಸರು ಪ್ರಸ್ತಾಪಿಸುತ್ತಿದ್ದಾರೆ. ಇದರಿಂದ ನಾಗರಿಕರು ಸಹ ಭಯದಿಂದ ಸ್ವವಿವರ ಹೇಳಿ ಮೋಸಕ್ಕೆ ಒಳಗಾಗುತ್ತಿದ್ದಾರೆ' ಎಂದು ಪೊಲೀಸರು ಹೇಳಿದರು.

## 'ಉತ್ತರ'ದ ಅಭಿವೃದ್ಧಿಗೆ ಬದ್ಧ

ಒಂದನೇ ಪುಟದಿಂದ...

'ಕಿತ್ತೂರು ಕರ್ನಾಟಕ ಅಭಿವೃದ್ಧಿಗೆ ₹ 500 ಕೋಟಿ ಒದಗಿಸಬೇಕೆಂದು ಎಲ್ಲ ಪಕ್ಷದವರು ಮನವಿ ಮಾಡಿದ್ದಾರೆ. ಗೋವಿಂದರಾವ್ ವರದಿ ಬಂದ ನಂತರ ಈ ಬಗ್ಗೆಯೂ ಪರಿಶೀಲಿಸಲಾಗುವುದು' ಎಂದರು.

**ಮುಂದಿನ ಬಜೆಟ್‌ನಲ್ಲಿ ಹಣ:** 'ಕೃಷ್ಣಾ ಮೇಲ್ದಂಡೆ ಯೋಜನೆಯ ಮೂರನೇ ಹಂತ ಅನುಷ್ಠಾನಕ್ಕೆ ಅಗತ್ಯವಾದ 75 ಸಾವಿರ ಎಕರೆ ಭೂಸ್ವಾಧೀನವನ್ನು ಒಂದೇ ಬಾರಿಗೆ ಮಾಡಲು ಬಜೆಟ್‌ನಲ್ಲಿ ಹಣ ಒದಗಿಸುತ್ತೇವೆ' ಎಂದು ಮುಖ್ಯಮಂತ್ರಿ ಹೇಳಿದರು.

ಮುಖ್ಯಮಂತ್ರಿ ತಮ್ಮ ಉತ್ತರದಲ್ಲಿ ಉತ್ತರ ಕರ್ನಾಟಕಕ್ಕೆ ಯಾವುದೇ ಹೊಸ ಯೋಜನೆಗಳು ಅಥವಾ ಅನುದಾನ ಘೋಷಣೆ ಮಾಡಿಲ್ಲವೆಂದು ವಿರೋಧ ಪಕ್ಷದ ಸದಸ್ಯರು ಆಕ್ರೋಶ ವ್ಯಕ್ತಪಡಿಸಿದರು. ವಿರೋಧ ಪಕ್ಷದ ನಾಯಕ ಆರ್. ಅಶೋಕ, 'ಕೇಂದ್ರದಲ್ಲಿ ಕಾಂಗ್ರೆಸ್ ಸರ್ಕಾರ ಮತ್ತು ಬಿಜೆಪಿ ಸರ್ಕಾರಗಳು ರಾಜ್ಯಕ್ಕೆ ನೀಡಿರುವ ಕೊಡುಗೆಗಳ ಕುರಿತು ಶ್ವೇತಪತ್ರ ಪ್ರಕಟಿಸಿ' ಎಂದು ಸವಾಲು ಹಾಕಿದರು.

### ಶ್ವೇತಪತ್ರಕ್ಕೆ ಸಿದ್ಧ

'ನಮ್ಮ ಸರ್ಕಾರ ಉತ್ತರ ಕರ್ನಾಟಕಕ್ಕೆ ಏನೂ ಕೊಟ್ಟಿಲ್ಲ' ಎಂದು ಅಶೋಕ, ವಿಜಯೇಂದ್ರ ಸೇರಿದಂತೆ ಬಿಜೆಪಿ ಹಾಗೂ ಜೆಡಿಎಸ್ ಸದಸ್ಯರು ಹೇಳಿದ್ದಾರೆ. ಅಶೋಕ ಅವರು ಶ್ವೇತಪತ್ರದ ಬೇಡಿಕೆ ಇಟ್ಟಿದ್ದಾರೆ. ನಾವು ತಯಾರಿದ್ದೇವೆ. 2006ರಿಂದಲೂ ನೀವೇನು ಮಾಡಿದ್ದೀರಿ, ನಾವೇನು ಮಾಡಿದ್ದೇವೆ ಎಂಬುದನ್ನೂ ಹೇಳುತ್ತೇವೆ' ಎಂದು ಸಿದ್ದರಾಮಯ್ಯ ಹೇಳಿದರು.

### ಗ್ಯಾರಂಟಿಯಿಂದ ತಲಾ ಆದಾಯ ಹೆಚ್ಚಳ

'ತಲಾ ಆದಾಯದಲ್ಲಿ ಕಲಬುರಗಿ ಅತ್ಯಂತ ಹಿಂದುಳಿದಿದೆ. ಕಲ್ಯಾಣ ಕರ್ನಾಟಕದ ಆರು ಜಿಲ್ಲೆಗಳಲ್ಲಿ ಹಾಲು ಉತ್ಪಾದನೆ ಕಡಿಮೆ ಇರುವುದು ತಲಾ ಆದಾಯದಲ್ಲಿ ಹಿಂದುಳಿಯಲು ಒಂದು ಕಾರಣ ಎಂದು ಸಿದ್ದರಾಮಯ್ಯ ಹೇಳಿದರು.

ತಲಾ ಆದಾಯದ ಜಿಲ್ಲಾವಾರು ಪಟ್ಟಿಯನ್ನು ಸದನದ ಮುಂದಿಟ್ಟ ಅವರು, 'ಎಲ್ಲ ಧರ್ಮದ, ಪಕ್ಷದ ಬಡವರು ಗ್ಯಾರಂಟಿ ಯೋಜನೆಗಳ ಲಾಭ ಪಡೆಯುತ್ತಿದ್ದಾರೆ. ಕರ್ನಾಟಕ ಇದರಿಂದಾಗಿಯೇ ದೇಶದಲ್ಲಿ ತಲಾ ಆದಾಯದಲ್ಲಿ ನಂಬರ್ ಒನ್ ಸ್ಥಾನದಲ್ಲಿದೆ. ಸಾಕ್ಷರತೆ ಪ್ರಮಾಣ ಶೇ 76 ರಷ್ಟಿದ್ದರೂ ಜಾತಿ ವ್ಯವಸ್ಥೆ ಹೋಗಿಲ್ಲ. ವೈದ್ಯರೂ ಕೂಡ ಹಣೆಬರಹ, ಕರ್ಮ ಸಿದ್ಧಾಂತದಲ್ಲಿ ನಂಬಿಕೆ ಇಡುತ್ತಾರೆ. ನಮ್ಮಲ್ಲಿ ಜಾತಿ ವ್ಯವಸ್ಥೆಯ ಕಾರಣದಿಂದ ಗುಲಾಮಗಿರಿಯ ಮನಸ್ಥಿತಿ ಮನೆ ಮಾಡಿಕೊಂಡಿದೆ. ಇದಕ್ಕಾಗಿಯೇ ಗ್ಯಾರಂಟಿ ಯೋಜನೆಗಳನ್ನು ಜಾರಿಗೆ ತರಲಾಗಿದೆ' ಎಂದರು.

### 'ನೀವು ಮಾಡಿದ್ದೇನು?'

ರಾಜ್ಯಕ್ಕೆ ಕೇಂದ್ರದ ಬಿಜೆಪಿ ಸರ್ಕಾರಗಳು ಮಾಡಿದ ಅನ್ಯಾಯಗಳ ಪಟ್ಟಿ ನೀಡಿ ವಿರೋಧ ಪಕ್ಷ ಶಾಸಕರನ್ನು ತರಾಟೆಗೆ ತೆಗೆದುಕೊಂಡ ಸಿದ್ದರಾಮಯ್ಯ, 'ಕಲ್ಯಾಣ ಕರ್ನಾಟಕದ ಜನರ ಅಭಿವೃದ್ಧಿಯ ವೇಗಕ್ಕೆ 371ಜೆ ಮೂಲಕ ಚಾಲನೆ ನೀಡಿದ್ದು ನಾವು. ನೀವೇನು ಮಾಡಿದ್ದೀರಿ. ದಾಖಲೆ ಕೊಡಿ' ಎಂದು ಬಿಜೆಪಿ ಸದಸ್ಯರನ್ನು ಪ್ರಶ್ನಿಸಿದರು.

# ಬಲರಾಮನ ಮೊದಲ ಹಾಡು



ವಿನೋದ್ ಪ್ರಭಾಕರ್, ಪ್ರಿಯಾ

ವಿನೋದ್ ಪ್ರಭಾಕರ್ ನಾಯಕನಾಗಿ ನಟಿಸಿರುವ 'ಬಲರಾಮನ ದಿನಗಳು' ಚಿತ್ರದ 'ಶುರು ಶುರು' ಹಾಡು ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ. ಕೆ.ಎಂ. ಚೈತನ್ಯ ನಿರ್ದೇಶನದ ಚಿತ್ರ ಚಿತ್ರೀಕರಣ ಮುಗಿಸಿ ಪೋಸ್ಟ್ ಪ್ರೊಡಕ್ಷನ್ ಹಂತದಲ್ಲಿದೆ.

ಹಾಡಿಗೆ ಜಯಂತ್ ಕಾಯ್ಕಿಣಿ ಸಾಹಿತ್ಯವಿದ್ದು, ಸಂಜಿತ್ ಹೆಗಡೆ, ಪುಣ್ಯ ಧ್ವನಿಯಾಗಿದ್ದಾರೆ. ಸಂತೋಷ್ ನಾರಾಯಣ್ ಸಂಗೀತವಿದೆ. 80ರ ದಶಕದ ಗ್ಯಾಂಗ್‌ಸ್ಟರ್ ಕಥೆಯಲ್ಲಿ ವಿನೋದ್ ಪ್ರಭಾಕರ್‌ಗೆ ಪ್ರಿಯಾ ಆನಂದ್ ಜೋಡಿಯಾಗಿದ್ದಾರೆ. ಇಬ್ಬರಿಬ್ಬರ ನಡುವಿನ ಪ್ರೇಮ ಪಯಣ ಈ ಹಾಡಿನಲ್ಲಿದೆ.

'ಆ ದಿನಗಳು' ಚಿತ್ರದ ಎರಡನೇ ಭಾಗವಲ್ಲ. ಅದರ ಇನ್ನೊಂದು ಕಥೆ. ಇದೊಂದು ಕಾಲ್ಪನಿಕ ಕಥೆ. ಸಂತೋಷ್ ಅವರ 'ಜಿಗರ್ ಥಂಡ' ಚಿತ್ರ ನೋಡಿದ್ದೆ. ಅದರಲ್ಲಿ ಅವರ ಸಂಗೀತ ತುಂಬ ಭಿನ್ನವಾಗಿತ್ತು. ಹೀಗಾಗಿ ಅವರನ್ನು ನಮ್ಮ ಸಿನಿಮಾಗೆ ಕರೆತಂದ್ವಿ. ಹಾಡನ್ನು ಪ್ರತ್ಯೇಕವಾಗಿ ಚಿತ್ರೀಕರಿಸಿಲ್ಲ. ಚಿತ್ರೀಕರಣದ ನಡುವೆ ಅವಕಾಶ ಸಿಕ್ಕಾಗೆಲ್ಲ ಈ ಹಾಡಿನ ದೃಶ್ಯಗಳನ್ನು ಚಿತ್ರೀಕರಿಸಿದ್ದೇವೆ. ನಿರ್ಮಾಪಕರು 'ಆ ದಿನಗಳು' ರೀತಿಯದ್ದೇ ಸಿನಿಮಾ ಮಾಡಬೇಕೆಂದು ಕೇಳಿದರು. ಹಾಗಾಗಿ ಆ ಸಿನಿಮಾದ್ದೇ ಪಾತ್ರಗಳು ಇಲ್ಲೂ ಮುಂದುವರೆದಿದ್ದು, ಅತುಲ್ ಕುಲಕರ್ಣಿ, ಶರತ್ ಲೋಹಿತಾಶ್ವ, ಆಶೀಶ್ ವಿದ್ಯಾರ್ಥಿ ಹಾಗೂ ಬಿಗ್‌ಬಾಸ್ ಖ್ಯಾತಿಯ ವಿನಯ್ ಗೌಡ ಸೇರಿ ಹಲವು ಪ್ರತಿಭಾನ್ವಿತ ಕಲಾವಿದರು ಚಿತ್ರದಲ್ಲಿದ್ದಾರೆ. ಒಳ್ಳೆಯ ಸಿನಿಮಾಗಳು ಗೆಲ್ಲಬೇಕು. ಆಗ ನಿರ್ಮಾಪಕರು ಇನ್ನಷ್ಟು ಉತ್ತಮ ಸಿನಿಮಾಗಳನ್ನು ಮಾಡಬಹುದು' ಎಂದರು ನಿರ್ದೇಶಕ.

'ಈ ಚಿತ್ರದ ಆಡಿಯೊ ನನ್ನ ವೃತ್ತಿ ಜೀವನದಲ್ಲಿಯೇ ದೊಡ್ಡ ಮೊತ್ತಕ್ಕೆ ಖರೀದಿಯಾಗಿದೆ. ನಾವು ಸಿನಿಮಾ ಬಗ್ಗೆ ಬಿಲ್ಡಪ್ ಕೊಡುವುದಿಲ್ಲ. ಸಿನಿಮಾ ಬಗ್ಗೆ ಜನ ಮಾತನಾಡುತ್ತಾರೆ. 'ಮಾದೇವ' ಒಂದು ರೀತಿಯ ಸಿನಿಮಾವಾಗಿತ್ತು. 'ಬಲರಾಮನ ದಿನಗಳು' ಕ್ಲಾಸ್ ಕಲ್ಟ್ ಸಿನಿಮಾ. ನಿರ್ದೇಶಕರು ಈ ಸಿನಿಮಾವನ್ನು ವಿಭಿನ್ನವಾಗಿ ಕಟ್ಟಿಕೊಟ್ಟಿದ್ದಾರೆ. ಸಂಗೀತ ನಿರ್ದೇಶಕ ಈ ಚಿತ್ರದ ಮುಖ್ಯ ಪಿಲ್ಲರ್. ಹಾಡುಗಳು ಸೊಗಸಾಗಿವೆ' ಎಂದು ವಿನೋದ್ ಪ್ರಭಾಕರ್ ಹೇಳಿದರು.

ಪದ್ಮಾವತಿ ಫಿಲ್ಮ್ಸ್ ಬ್ಯಾನರ್ ಅಡಿಯಲ್ಲಿ ಪದ್ಮಾವತಿ ಜಯರಾಂ ಹಾಗೂ ಶ್ರೇಯಸ್ ಚಿತ್ರಕ್ಕೆ ಬಂಡವಾಳ ಹೂಡಿದ್ದಾರೆ. ವೇಣು ಛಾಯಾಚಿತ್ರಗ್ರಹಣವಿದೆ.

# 'ನನಗೂ ನಿನಗೂ' ಹಾಡು ಬಿಡುಗಡೆ

**ಬಹುತೇಕ ಹೊಸಬರಿಂದಲೇ** ಕೂಡಿರುವ '2 + ' ಚಿತ್ರದ 'ನನಗೂ ನಿನಗೂ' ಹಾಡು ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ. ಚಿತ್ರಕ್ಕೆ ಅಶೋಕ್ ರಾಯ್ ನಿರ್ದೇಶನವಿದೆ.

ಹಾಡಿಗೆ ಅಭಿಮನ್ ರಾಯ್ ಸಂಗೀತ ನಿರ್ದೇಶನವಿದ್ದು, 34 ಭಾಷೆಗಳಲ್ಲಿ ಬಿಡುಗಡೆಗೊಂಡಿದೆ. ಹಲವು ಪ್ರಸಿದ್ಧ ಗಾಯಕರು ದನಿಯಾಗಿದ್ದಾರೆ. ಚಿತ್ರಕ್ಕೆ ಅಭಿಮನ್ ರಾಯ್ ಅವರೇ ಮೊದಲ ಬಾರಿಗೆ ಕಥೆ, ಚಿತ್ರಕಥೆ ಬರೆದಿದ್ದಾರೆ.

'ನಾನು ಈ ಸಾಹಸಕ್ಕೆ ಕೈಹಾಕಲು ಲಹರಿ ವೇಲು ಸ್ಫೂರ್ತಿ. ಆರಂಭದಲ್ಲಿ ಈ ಹಾಡನ್ನು ನಾಲ್ಕು ಭಾಷೆಗಳಲ್ಲಿ ಮಾತ್ರವೇ ಮಾಡಿದ್ದೆವು. ಹಾಡು ಕೇಳಿದ ವೇಲು ಅವರು ಬೇರೆ ಬೇರೆ ಭಾಷೆಗಳಲ್ಲಿ ಮಾಡುವಂತೆ ಹೇಳಿದರು. ಕನ್ನಡದಲ್ಲೇ ಉತ್ತರ ಕನ್ನಡ, ದಕ್ಷಿಣ ಕನ್ನಡ, ಉತ್ತರ ಕರ್ನಾಟಕ, ಕೊಡವ, ಬ್ಯಾರಿ, ಕುಂದಾಪುರ, ಮಂಡ್ಯ, ಕೊಂಕಣಿ, ತುಳು ಸೇರಿದಂತೆ ಎಂಟು ಶೈಲಿಯಿದೆ. ಉಳಿದಂತೆ ತಮಿಳು, ತೆಲುಗು, ಮಲಯಾಳ ಸೇರಿದಂತೆ ವಿದೇಶಿ ಭಾಷೆಗಳಲ್ಲಿ ಹಾಡು ಬಿಡುಗಡೆಗೊಂಡಿದೆ' ಎಂದರು ಅಭಿಮನ್.

'ಚಿತ್ರದಲ್ಲಿ ಒಟ್ಟು ಐದು ಹಾಡುಗಳಿದ್ದು, ಈಗಾಗಲೇ ಶೇಕಡ 60ರಷ್ಟು ಚಿತ್ರೀಕರಣ ಮುಗಿದಿದೆ. ಮಾರ್ಚ್ ಅಥವಾ ಏಪ್ರಿಲ್ ವೇಳೆಗೆ ಚಿತ್ರ ಬಿಡುಗಡೆ ಮಾಡುವ ಯೋಜನೆಯಿದೆ. ಒಂದೇ ಸಿನಿಮಾದಲ್ಲಿ ಎರಡು ಕಥೆ ಇದ್ದು, ಮಧ್ಯಂತರ ವಿರಾಮಕ್ಕೂ ಮೊದಲು ಒಂದು ಕಥೆ, ಆನಂತರ ಮತ್ತೊಂದು ಕಥೆ ನಡೆಯುತ್ತದೆ. ಹೀಗಾಗಿ '2 + ' ಎಂಬ ಶೀರ್ಷಿಕೆ ಇಟ್ಟಿದ್ದೇವೆ' ಎಂದರು ನಿರ್ದೇಶಕ.



ಗಣ್ಯರೊಂದಿಗೆ ಚಿತ್ರತಂಡ

# 'ಸಹನಾ ಸಹನಾ...' ಎಂದ ಪ್ರಭಾಸ್



**ನಟ ಪ್ರಭಾಸ್** ನಟನೆಯ ಹೊಸ ಸಿನಿಮಾ 'ದಿ ರಾಜಾ ಸಾಬ್' ಜ.9ರಂದು ತೆರೆಕಾಣುತ್ತಿದ್ದು, ಸಿನಿಮಾದ 'ಸಹನಾ ಸಹನಾ..' ಎಂಬ ಹಾಡು ಇತ್ತೀಚೆಗೆ ಬಿಡುಗಡೆಯಾಯಿತು.

ಹಾಡಿನ ಕುರಿತು ಮಾತನಾಡಿರುವ ಚಿತ್ರದ ಸಂಗೀತ ನಿರ್ದೇಶಕ ಥಮನ್ ಎಸ್., 'ಚಿತ್ರದ ಹಾಡುಗಳು ಅದ್ಭುತವಾಗಿ ಬಂದಿವೆ. ಚಿತ್ರದಲ್ಲಿ ಪ್ರಭಾಸ್ ಅವರ ಡಾನ್ಸ್ ಮತ್ತು ಸ್ಟೈಲ್ ಅಭಿಮಾನಿಗಳಿಗೆ ಹಬ್ಬವಾಗಲಿದೆ' ಎಂದಿದ್ದಾರೆ.

ಆ್ಯಕ್ಷನ್ ಅವತಾರದಲ್ಲಿಯೇ ತೆರೆಗಳಲ್ಲಿ ಮಿಂಚಿರುವ ಪ್ರಭಾಸ್, ಇದೇ ಮೊದಲ ಬಾರಿಗೆ ಹಾರರ್ ಜಾನರ್ ಸಿನಿಮಾದಲ್ಲಿ ಕಾಣಿಸಿಕೊಳ್ಳಲಿದ್ದಾರೆ. ಪೀಪಲ್ ಮೀಡಿಯಾ ಫ್ಯಾಕ್ಟರಿ ಬ್ಯಾನರ್ ಅಡಿಯಲ್ಲಿ ಟಿ.ಜಿ. ವಿಶ್ವಪ್ರಸಾದ್ ನಿರ್ಮಾಣದಲ್ಲಿ ಈ ಚಿತ್ರ ಮೂಡಿಬಂದಿದೆ. ಮಾರುತಿ ನಿರ್ದೇಶನದ ಈ ಚಿತ್ರದ ಪ್ರಿರಿಲೀಸ್ ಕಾರ್ಯಕ್ರಮವನ್ನು ಹೈದರಾಬಾದ್‌ನಲ್ಲಿ ಅದ್ದೂರಿಯಾಗಿ ಆಯೋಜಿಸಲು ಚಿತ್ರತಂಡ ನಿರ್ಧರಿಸಿದೆ. ಜನವರಿ 8 ರಂದು ಚಿತ್ರದ ಪ್ರೀಮಿಯರ್ ಶೋಗಳು ಪ್ರಾರಂಭವಾಗಲಿವೆ.

ಚಿತ್ರದಲ್ಲಿ ಪ್ರಭಾಸ್‌ಗೆ ಜೊತೆಯಾಗಿ ಮಾಳವಿಕಾ ಮೋಹನನ್, ನಿಧಿ ಅಗರ್ವಾಲ್ ಮತ್ತು ರಿದ್ಧಿ ಕುಮಾರ್ ನಟಿಸಿದ್ದಾರೆ. ಬಿಗ್ ಬಜೆಟ್‌ನ ಈ ಚಿತ್ರಕ್ಕೆ ಕಾರ್ತಿಕ್ ಪಲನಿ ಛಾಯಾಚಿತ್ರಗ್ರಹಣವಿದೆ. ತೆಲುಗು, ಹಿಂದಿ, ತಮಿಳು, ಕನ್ನಡ ಮತ್ತು ಮಲಯಾಳ ಭಾಷೆಗಳಲ್ಲಿ ಈ ಚಿತ್ರ ರಿಲೀಸ್ ಆಗಲಿದೆ.

## ಕಾಲಿವುಡ್‌ಗೆ ಹೆಜ್ಜೆ ಇಟ್ಟ ವಿರೇನ್



ವಿರೇನ್

**ಕನ್ನಡ ಚಿತ್ರಗಳಲ್ಲಿ** ನಟಿಸಿರುವ ನಟ ವಿರೇನ್ ಕೇಶವ್ ಕಾಲಿವುಡ್‌ಗೆ ಹೆಜ್ಜೆ ಇಟ್ಟಿದ್ದಾರೆ. 'ಯುವನ್ ರಾಬಿನ್‌ಹುಡ್' ಎಂಬ ತಮಿಳು ಸಿನಿಮಾದಲ್ಲಿ ವಿರೇನ್ ಮುಖ್ಯಭೂಮಿಕೆಯಲ್ಲಿದ್ದಾರೆ.

ಶಿವಮೊಗ್ಗದ ವಿರೇನ್ 'ಕಾಕ್ಟೇಲ್' ಸಿನಿಮಾ ಮೂಲಕ ಚಿತ್ರರಂಗಕ್ಕೆ ಕಾಲಿಟ್ಟವರು. ಪುನೀತ್ ರಾಜ್‌ಕುಮಾರ್ ಅಭಿನಯದ 'ಯುವರತ್ನ'ದಲ್ಲಿ ಸಣ್ಣದೊಂದು ಪಾತ್ರದಲ್ಲಿ ಕಾಣಿಸಿಕೊಂಡಿದ್ದರು. ಸದ್ಯ ಪ್ಯಾಶನ್ ಮೂವೀ ಮೇಕರ್ಸ್ ಅಡಿಯಲ್ಲಿ ಸಂತೋಷ್ ಕುಮಾರ್ ನಿರ್ದೇಶನ ಮಾಡುತ್ತಿರುವ 'ಯುವನ್ ರಾಬಿನ್‌ಹುಡ್' ತಮಿಳು ಚಿತ್ರದಲ್ಲಿ ತಲ್ಲೀನರಾಗಿದ್ದಾರೆ. ಜೊತೆಗೆ 'ಬಸ್ರಿಕಟ್ಟೆ' ಸಿನಿಮಾ ನಿರ್ದೇಶನ ಮಾಡಿದ್ದ ವೈಭವ್ ಅವರ ಹೊಸ ಸಿನಿಮಾದಲ್ಲೂ ವಿರೇನ್ ಅಭಿನಯಿಸಲಿದ್ದಾರೆ. ಪ್ರೊಡಕ್ಷನ್ ನಂ.1 ಹೆಸರಿನಲ್ಲಿ ಈ ಚಿತ್ರದ ಪ್ರಿ ಪ್ರೊಡಕ್ಷನ್ ಕೆಲಸಗಳು ಶುರುವಾಗಿದೆ.

### ವಿಶ್ವ ಟೆನಿಸ್ ಲೀಗ್: ಈಗಲ್ಸ್‌ಗೆ ಮೂರನೇ ಜಯ

# ಶ್ರೀವಲ್ಲಿ, ನಾಗಲ್ ಮಿಂಚು

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಭಾರತದ ತಾರೆಗಳಾದ ಸುಮಿತ್ ನಾಗಲ್, ಶ್ರೀವಲ್ಲಿ ಭಮಿಡಿಪಾಟಿ ಅವರು ವಿಶ್ವ ಟೆನಿಸ್ ಲೀಗ್‌ನ ಮೂರನೇ ದಿನವಾದ ಶುಕ್ರವಾರ ಉತ್ತಮ ಆಟದ ಪ್ರದರ್ಶನದಿಂದ ಗಮನ ಸೆಳೆದರು. ಈಗಲ್ಸ್ ತಂಡ ದಿನದ ಮೊದಲ ಪಂದ್ಯದಲ್ಲಿ 22–12 ರಿಂದ ಹಾಕ್ಸ್ ತಂಡವನ್ನು ಸೋಲಿಸಿತು. ಮೂರನೇ ಗೆಲುವಿನೊಡನೆ ಫೈನಲ್ ಸ್ಥಾನ ಬಹುತೇಕ ಖಚಿತಪಡಿಸಿಕೊಂಡಿತು.

ಮೂರು ಪಂದ್ಯಗಳಿಂದ ಈಗಲ್ಸ್ 65 ಅಂಕಗಳನ್ನು ಪಡೆದಿದೆ. ಕಬ್ಬನ್‌ಪಾರ್ಕ್‌ನ ಎಸ್.ಎಂ.ಕೃಷ್ಣ ಟೆನಿಸ್ ಕ್ರೀಡಾಂಗಣದಲ್ಲಿ ಫೈನಲ್ ಪಂದ್ಯ ಶನಿವಾರ ನಡೆಯಲಿದೆ. ಐಕಾನಿಕ್ ಸ್ಪೋರ್ಟ್ಸ್ ಅಂಡ್ ಇವೆಂಟ್ಸ್ ಈ ಲೀಗ್ ಆಯೋಜಿಸಿದೆ.

ಮೊದಲು ನಡೆದ ಮಿಶ್ರ ಡಬಲ್ಸ್‌ನಲ್ಲಿ 'ಟೆನಿಸ್‌ನ ದಂಪತಿ' ಜೋಡಿ ಉಕ್ರೇನಿನ ಎಲಿನಾ ಸ್ವಿಟೋಲಿನಾ – ಫ್ರಾನ್ಸ್‌ನ ಗೇಲ್ ಮಾನ್ಫಿಲ್ಸ್ 'ಎದುರಾಳಿ'ಗಳಾದರು. ಹಾಕ್ಸ್ ತಂಡಕ್ಕೆ ಆಡಿದ ಯುಕಿ ಭಾಂಬ್ರಿ– ಸ್ವಿಟೋಲಿನಾ 6–4 ರಿಂದ ಈಗಲ್ಸ್ ತಂಡದ ಮಾನ್ಫಿಲ್ಸ್ –ಶ್ರೀವಲ್ಲಿ ಭಮಿಡಿಪಾಟಿ ಜೋಡಿಯನ್ನು ಮಣಿಸಿದರು.

ಈಗಲ್ಸ್ ಪರ ಪುರುಷರ ಸಿಂಗಲ್ಸ್ ಆಡಿದ 28 ವರ್ಷ ವಯಸ್ಸಿನ ನಾಗಲ್ 6–1 ರಿಂದ ವಿಂಬಲ್ಡನ್ ಫೈನಲಿಸ್ಟ್ ಡೆನಿಸ್ ಶಪೊವಲೋವ್ ಅವರನ್ನು ಸೋಲಿಸಿ ಗಮನ ಸೆಳೆದರಲ್ಲದೇ ಈಗಲ್ಸ್‌ಗೆ ಮುನ್ನಡೆ ಗಳಿಸಿಕೊಟ್ಟರು. ಮಹಿಳಾ ಸಿಂಗಲ್ಸ್‌ನಲ್ಲಿ ಶ್ರೀವಲ್ಲಿ ಭಮಿಟಿಪಾಟಿ 6–2 ರಿಂದ ಹಾಕ್ಸ್‌ನ ಮಾಯಾ ರಾಜೇಶ್ವರನ್ ರೇವತಿ ಅವರನ್ನು ಸೋಲಿಸಿ ತಂಡದ ಮುನ್ನಡೆ ಹೆಚ್ಚಿಸಿದರು.

ಮಹಿಳಾ ಡಬಲ್ಸ್‌ನಲ್ಲಿ ಶ್ರೀವಲ್ಲಿ– ಪೌಲಾ ಬಡೋಸಾ ಜೋಡಿ 6–3 ರಿಂದ ಮಾಯಾ ರಾಜೇಶ್ವರನ್ ರೇವತಿ– ಸ್ವಿಟೋಲಿನಾ ಜೋಡಿಯನ್ನು ಸೋಲಿಸಿ ಈಗಲ್ಸ್ ಫೈನಲ್ ಹಾದಿ ಬಲಗೊಳಿಸಿದರು. ದುಬೈನಲ್ಲಿ ನೆಲೆಸಿರುವ ಸ್ಪೇನ್‌ನ ಆಟಗಾರ್ತಿ ಬಡೋಸಾ, ಈ ವೇಳೆ ಮಾತನಾಡಿ 'ಶ್ರೀವಲ್ಲಿ ಭಾರತದ ಭವಿಷ್ಯದ ತಾರೆ' ಎಂದು ಶ್ಲಾಘಿಸಿದರು.



ಸಿಂಗಲ್ಸ್‌ನಲ್ಲಿ ಜಯಗಳಿಸಿದ ಈಗಲ್ಸ್ ತಂಡದ ಶ್ರೀವಲ್ಲಿ ಭಟಮಿಪಾಟಿ



ಡಬಲ್ಸ್‌ನಲ್ಲಿ ಎದುರಾಳಿಗಳಾಗಿ ಆಡಿದ ನಂತರ ಗೇಲ್ ಮಾನ್ಫಿಲ್ಸ್ (ಎಡಗಡೆ) ಅವರು ಪತ್ನಿ ಎಲಿನಾ ಸ್ವಿಟೋಲಿನಾ ಅವರನ್ನು ಚುಂಬಿಸಿ ಅಭಿನಂದಿಸಿದರು. ಸ್ವಿಟೋಲಿನಾ ಈ ಪಂದ್ಯದಲ್ಲಿ ಯುಕಿ ಭಾಂಬ್ರಿ ಜೊತೆ ಆಡಿ ಜಯಗಳಿಸಿದರು ಚಿತ್ರಗಳು: ಜನಾರ್ದನ ಬಿ.ಕೆ.

## ಕ್ರಿಕೆಟ್: ಕರ್ನಾಟಕಕ್ಕೆ ಮಣಿದ ಪಂಜಾಬ್



ವಂದಿತಾ

**ಬೆಂಗಳೂರು:** ಲೆಗ್ ಸ್ಪಿನ್ನರ್ ವಂದಿತಾ ಕೆ. ರಾವ್ (17ಕ್ಕೆ 6) ಅವರ ಮೋಡಿಯ ನೆರವಿನಿಂದ ಕರ್ನಾಟಕ ತಂಡವು ಶುಕ್ರವಾರ ಬಿಸಿಸಿಐ 19 ವರ್ಷದೊಳಗಿನವ ಮಹಿಳೆಯರ ಏಕದಿನ ಕ್ರಿಕೆಟ್ ಟ್ರೋಫಿಯ ಪಂದ್ಯದಲ್ಲಿ 104 ರನ್‌ಗಳಿಂದ ಪಂಜಾಬ್ ತಂಡವನ್ನು ಮಣಿಸಿತು.

ಹೈದರಾಬಾದ್‌ನ ರಾಜೀವಗಾಂಧಿ ಅಂತರರಾಷ್ಟ್ರೀಯ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ಕರ್ನಾಟಕ ತಂಡವು ಕಾರ್ಣಿಕಾ ಕಾರ್ತಿಕ್ (55;92ಎ) ಅವರ ಅರ್ಧಶತಕದ ನೆರವಿನಿಂದ 50 ಓವರ್‌ಗಳಲ್ಲಿ 9 ವಿಕೆಟ್‌ಗೆ 199 ರನ್ ಗಳಿಸಿತು.

ಸಾಧಾರಣ ಮೊತ್ತದ ಗುರಿ ಪಡೆದ ಪಂಜಾಬ್ ತಂಡವು ವಂದಿತಾ ದಾಳಿಗೆ ಕುಸಿಯಿತು. 28.3 ಓವರ್‌ಗಳಲ್ಲಿ 95 ರನ್ ಗಳಿಸಿ ಹೋರಾಟವನ್ನು ಮುಗಿಸಿತು. **ಸಂಕ್ಷಿಪ್ತ ಸ್ಕೋರ್:** ಕರ್ನಾಟಕ: 50 ಓವರ್‌ಗಳಲ್ಲಿ 9 ವಿಕೆಟ್‌ಗೆ 199 (ಶ್ರೇಯಾ ಎಸ್.ಚವಾಣ್ 45, ಕಾರ್ಣಿಕಾ ಕಾರ್ತಿಕ್ 55, ವಂದಿತಾ ಕೆ.ರಾವ್ 32; ಹರ್ಮನ್ 32ಕ್ಕೆ 4, ಎಲೀಸ್ 17ಕ್ಕೆ 3). ಪಂಜಾಬ್: 28.3 ಓವರ್‌ಗಳಲ್ಲಿ 95 (ವೇದಾ ವರ್ಷಿಣಿ 15ಕ್ಕೆ 2, ವಂದಿತಾ ಕೆ.ರಾವ್ 17ಕ್ಕೆ 6). ಫಲಿತಾಂಶ: ಕರ್ನಾಟಕಕ್ಕೆ 104 ರನ್‌ಗಳ ಜಯ.

## ಚಳಿಗಾಲದ ಬೆಂಗಳೂರು ರೇಸ್ ರದ್ದು

**ಬೆಂಗಳೂರು:** ಬೆಂಗಳೂರು ಟರ್ಫ್ ಕ್ಲಬ್ (ಬಿಟಿಸಿ) ನಲ್ಲಿ ಬೀಡುಬಿಟ್ಟಿರುವ ಕೆಲವು ಕುದುರೆಗಳಿಗೆ ಗ್ಲ್ಯಾಂಡರ್ಸ್ ರೋಗದ ಸೋಂಕು ದೃಢಪಟ್ಟ ಕಾರಣ ಚಳಿಗಾಲದ ಉಳಿದ ರೇಸ್‌ಗಳನ್ನು ರದ್ದು ಮಾಡಲಾಗಿದೆ ಎಂದು ಬಿಟಿಸಿ ಶುಕ್ರವಾರ ತಿಳಿಸಿದೆ.

ಬಿಟಿಸಿ ಆವರಣವನ್ನು ಗ್ಲ್ಯಾಂಡರ್ಸ್ ಕೇಂದ್ರೀಕೃತ ಪ್ರದೇಶವೆಂದು ಸರ್ಕಾರ ಗುರುತಿಸಿದೆ. ಇಲ್ಲಿನ ಸುತ್ತಮುತ್ತ 2 ಕಿಲೋ ಮೀಟರ್ ವ್ಯಾಪ್ತಿಯಲ್ಲಿ ಕುದುರೆ, ಕತ್ತೆ, ಹೇಸರಗತ್ತೆಗಳ ಚಲನವಲನ, ಮನರಂಜನೆ, ಮೆರವಣಿಗೆ ನಿರ್ಬಂಧಿಸಿ ಆದೇಶ ಹೊರಡಿಸಿದೆ. ಗ್ಲ್ಯಾಂಡರ್ಸ್ ಸೋಂಕು ತಡೆಗಟ್ಟಲು ಮುನ್ನೆಚರಿಕೆ ಕ್ರಮವಾಗಿ ಇದೇ ತಿಂಗಳ 5, 11, 12 ಮತ್ತು 19ರಂದು ನಿಗದಿಯಾಗಿದ್ದ ರೇಸ್‌ಗಳನ್ನೂ ಬಿಟಿಸಿ ರದ್ದುಮಾಡಿತ್ತು.

## ಜೇವಿತ್, ಯಹನಾಗೆ ಸಿಂಗಲ್ಸ್ ಪ್ರಶಸ್ತಿ

**ಬೆಂಗಳೂರು:** ಕರ್ನಾಟಕದ ಆಟಗಾರರಾದ ಎಸ್.ಜೇವಿತ್ ಹಾಗೂ ಯಹನಾ ಅರೋರಾ ಅವರು ಶುಕ್ರವಾರ ಮುಕ್ತಾಯಗೊಂಡ ಸಿಆರ್‌ಎಸ್ ಟ್ರಸ್ಟ್ ಎಐಟಿಎ 16 ವರ್ಷದೊಳಗಿನವರ ಚಾಂಪಿಯನ್‌ಷಿಪ್ ಸರಣಿಯ ಟೆನಿಸ್ ಟೂರ್ನಿಯಲ್ಲಿ ಕ್ರಮವಾಗಿ ಬಾಲಕ ಮತ್ತು ಬಾಲಕಿಯರ ಸಿಂಗಲ್ಸ್ ಪ್ರಶಸ್ತಿ ಗೆದ್ದುಕೊಂಡರು.

ಎರಡನೇ ಶ್ರೇಯಾಂಕದ ಆಟಗಾರ ಜೇವಿತ್ ಫೈನಲ್‌ನಲ್ಲಿ 6–4, 6–0ಯಿಂದ ತನೀಶ್ ಡಿ. ಅವರನ್ನು ನೇರ ಸೆಟ್‌ಗಳಲ್ಲಿ ಮಣಿಸಿದರು. ನಾಲ್ಕನೇ ಶ್ರೇಯಾಂಕದ ಯಹಾನ 4–6, 6–2, 6–2ರಿಂದ ಖುಷಿ ಬಿ. ಅವರನ್ನು ಮಣಿಸಿದರು.

## ಜ.5ರಿಂದ ಬೀಚ್ ಕೀಡಾಕೂಟ



ಮನ್ಸುಖ್ ಮಾಂಡವೀಯ

**ನವದೆಹಲಿ (ಪಿಟಿಐ):** ಎರಡನೇ ಆವೃತ್ತಿಯ ಖೇಲೊ ಇಂಡಿಯಾ ಬೀಚ್ ಕ್ರೀಡಾಕೂಟ ಜನವರಿ 5ರಿಂದ 10ರವರೆಗೆ ದಿಯುವಿನ ಬ್ಲೂ ಫ್ಲ್ಯಾಗ್ ಘೋಘ್ಲಾ ಬೀಚ್‌ನಲ್ಲಿ ನಡೆಯಲಿದೆ ಎಂದು ಕ್ರೀಡಾ ಸಚಿವ ಮನ್ಸುಖ್ ಮಾಂಡವೀಯ ಶುಕ್ರವಾರ ತಿಳಿಸಿದರು.

ಈ ಕೂಟದ ಮೂಲಕ ಖೇಲೊ ಇಂಡಿಯಾ ವಾರ್ಷಿಕ ಸ್ಪರ್ಧಾತ್ಮಕ ಕ್ಯಾಲೆಂಡರ್‌ಗೆ ಔಪಚಾರಿಕ ಚಾಲನೆ ಸಿಗಲಿದೆ. ವಿವಿಧ ರಾಜ್ಯಗಳಿಂದ ಮತ್ತು ಕೇಂದ್ರಾಡಳಿತ ಪ್ರದೇಶಗಳಿಂದ 800ಕ್ಕೂ ಹೆಚ್ಚು ಕ್ರೀಡಾಪಟುಗಳು ಭಾಗವಹಿಸುವ ನಿರೀಕ್ಷೆಯಿದೆ. 250ಕ್ಕೂ ಹೆಚ್ಚು ಸಹಾಯಕ ಸಿಬ್ಬಂದಿ, 200ಕ್ಕೂ ಹೆಚ್ಚು ತಾಂತ್ರಿಕ ಅಧಿಕಾರಿಗಳು ಕೂಟಕ್ಕೆ ಸಹಕಾರ ನೀಡುವರು ಎಂದು ಮಾಂಡವೀಯ ಇಲ್ಲಿ ನಡೆದ ಸಂವಾದದಲ್ಲಿ ಹೇಳಿದರು.

ಕ್ರೀಡಾಕೂಟದಲ್ಲಿ ಬೀಚ್ ಸಾಕರ್, ಬೀಚ್ ವಾಲಿಬಾಲ್, ಬೀಚ್ ಸೆಪಕ್ ಟಕ್ರಾ, ಬೀಚ್ ಕಬಡ್ಡಿ, ಪೆಂಕಾಕ್ ಸಿಲಾಟ್ ಮತ್ತು ಓಪನ್ ವಾಟರ್ ಸ್ವಿಮ್ಮಿಂಗ್ ಸ್ಪರ್ಧೆಗಳ ಜೊತೆಗೆ ಪ್ರದರ್ಶನ ಕ್ರೀಡೆಗಳಾದ ಮಲ್ಲಕಂಬ ಮತ್ತು ಹಗ್ಗಜಗ್ಗಾಟ ಪಂದ್ಯಾಟಗಳು ಇರಲಿವೆ.

# ಪಾಂಡ್ಯ–ತಿಲಕ್ ಅಬ್ಬರ: ವರುಣ್ ಕೈಚಳಕ

## 3–1ರಿಂದ ಟಿ20 ಸರಣಿ ಗೆದ್ದ ಭಾರತ ತಂಡ
## ಡಿಕಾಕ್ ಅರ್ಧಶತಕ • ದ.ಆಫ್ರಿಕಾಕ್ಕೆ ನಿರಾಸೆ

**ಅಹಮದಾಬಾದ್ (ಪಿಟಿಐ):** ಹಾರ್ದಿಕ್ ಪಾಂಡ್ಯ ಮತ್ತು ತಿಲಕ್ ವರ್ಮಾ ಅವರ ಬೀಸಾಟದ ಬಳಿಕ ವರುಣ್ ಚಕ್ರವರ್ತಿ ಅವರ ಅಮೋಘ ಬೌಲಿಂಗ್ ದಾಳಿಯ ನೆರವಿನಿಂದ ಭಾರತ ತಂಡವು ಶುಕ್ರವಾರ ಐದನೇ ಹಾಗೂ ಅಂತಿಮ ಟಿ20 ಪಂದ್ಯದಲ್ಲಿ ದಕ್ಷಿಣ ಆಫ್ರಿಕಾ ತಂಡವನ್ನು 30 ರನ್‌ಗಳಿಂದ ಮಣಿಸಿತು. ಇದರೊಂದಿಗೆ ಆತಿಥೇಯರು 3–1ರಿಂದ ಸರಣಿಯನ್ನು ಗೆದ್ದುಕೊಂಡರು.

ಪಾಂಡ್ಯ (63;25ಎ, 4x5, 6x5) ಟಿ20 ಅಂತರ ರಾಷ್ಟ್ರೀಯ ಪಂದ್ಯದಲ್ಲಿ ಭಾರತದ ಪರ ಎರಡನೇ ಶರವೇಗದ ಅರ್ಧಶತಕ ಗಳಿಸಿದರು. ಪಾಂಡ್ಯ ಮತ್ತು ತಿಲಕ್ (73;42, 4x10, 6x1) ಬ್ಯಾಟಿಂಗ್ ಬಲದಿಂದ ಭಾರತ 5 ವಿಕೆಟ್‌ಗೆ 231 ರನ್‌ಗಳ ಬೃಹತ್ ಮೊತ್ತ ಕಲೆಹಾಕಿತು. ಗುರಿ ಬೆನ್ನಟ್ಟಿದ ದಕ್ಷಿಣ ಆಫ್ರಿಕಾ ಬಳಗವನ್ನು ಕಟ್ಟಿ ಹಾಕುವಲ್ಲಿ ವರುಣ್ (53ಕ್ಕೆ4) ಮತ್ತು ಜಸ್‌ಪ್ರೀತ್ ಬೂಮ್ರಾ (17ಕ್ಕೆ2) ಪ್ರಮುಖ ಪಾತ್ರವಹಿಸಿದರು. ಹೀಗಾಗಿ, ಹರಿಣಗಳ ಪಡೆ ಎಂಟು ವಿಕೆಟ್‌ಗೆ 201 ರನ್ ಗಳಿಸಿ ಹೋರಾಟವನ್ನು ಮುಗಿಸಿತು.


ಅರ್ಧಶತಕ ದಾಖಲಿಸಿದ ತಿಲಕ್ ವರ್ಮಾ

ಕ್ವಿಂಟನ್ ಡಿಕಾಕ್ (65, 35ಎ, 4x9, 6x3) ಮತ್ತು ರೀಜಾ ಹೆನ್ರಿಕ್ಸ್ (13) ಉತ್ತಮ ಆರಂಭ ಒದಗಿಸಿದರು. ಮೊದಲ ವಿಕೆಟ್ ಜೊತೆಯಾಟದಲ್ಲಿ 69 ರನ್ ಸೇರಿಸಿದರು. ಅರ್ಷದೀಪ್ ಸಿಂಗ್, ಹಾರ್ದಿಕ್ ಸೇರಿದಂತೆ ಭಾರತದ ಬೌಲರ್‌ಗಳನ್ನು ಡಿಕಾಕ್ ದಂಡಿಸಿದರು. ಅವರ ಅಬ್ಬರದ ಆಟದಿಂದಾಗಿ ತಂಡವು 10 ಓವರ್‌ಗಳಲ್ಲಿ ಒಂದು ವಿಕೆಟ್‌ಗೆ 118 ರನ್ ಗಳಿಸಿ ಗೆಲುವಿನ ಹಾದಿಯಲ್ಲಿತ್ತು. ಆದರೆ, ಬೂಮ್ರಾ ಬೌಲಿಂಗ್‌ನಲ್ಲಿ ಡಿಕಾಕ್ 'ಕ್ಯಾಚ್ ಅಂಡ್ ಬೌಲ್ಡ್' ಆಗುವುದರೊಂದಿಗೆ ಪಂದ್ಯದ ಮೇಲೆ ಭಾರತ ಮತ್ತೆ ಹಿಡಿತ ಸಾಧಿಸಿತು.


ದಕ್ಷಿಣ ಆಫ್ರಿಕಾ ವಿರುದ್ಧ ಸರಣಿ ಗೆದ್ದ ಭಾರತ ತಂಡದ ಆಟಗಾರರು ಟ್ರೋಫಿಯೊಂದಿಗೆ ಸಂಭ್ರಮಿಸಿದರು — ಪಿಟಿಐ ಚಿತ್ರಗಳು

ನಂತರದಲ್ಲಿ ವರುಣ್ ಸ್ಪಿನ್ ದಾಳಿಗೆ ನಿಯಮಿತವಾಗಿ ವಿಕೆಟ್‌ಗಳು ಉರುಳಿದವು. ಡೆವಾಲ್ಡ್ ಬ್ರೆವಿಸ್ (31; 17ಎ) ಹೊರತುಪಡಿಸಿ ಉಳಿದವರು ಹೆಚ್ಚಿನ ಹೋರಾಟ ತೋರಲಿಲ್ಲ. ಅರ್ಷದೀಪ್, ಪಾಂಡ್ಯ ತಲಾ ಒಂದು ವಿಕೆಟ್ ಕಬಳಿಸಿದರು.

**ಪಾಂಡ್ಯ–ತಿಲಕ್ ಬೀಸಾಟ:** ಟಾಸ್ ಸೋತು ಬ್ಯಾಟಿಂಗ್‌ಗೆ ಇಳಿದ ಭಾರತ ತಂಡಕ್ಕೆ ಸಂಜು ಸ್ಯಾಮ್ಸನ್ (37;22ಎ) ಮತ್ತು ಅಭಿಷೇಕ್ ಶರ್ಮಾ (34;21ಎ) ಮೊದಲ ವಿಕೆಟ್‌ಗೆ 63 ರನ್ ಸೇರಿಸಿ ಉತ್ತಮ ಆರಂಭ ಒದಗಿಸಿದರು. ಉಪನಾಯಕ ಶುಭಮನ್ ಗಿಲ್ ಗಾಯಾಳಾದ ಕಾರಣ ಅವಕಾಶ ಪಡೆದ ಸ್ಯಾಮ್ಸನ್ ನಿರಾಸೆ ಮೂಡಿಸಲಿಲ್ಲ. ಮುಂಬೈನಲ್ಲಿ ಆಯ್ಕೆ ಸಮಿತಿ ಶನಿವಾರ ತಂಡ ಪ್ರಕಟಿಸುವ ವೇಳೆ ತಾವೂ ಆಕಾಂಕ್ಷಿ ಎನ್ನುವುದನ್ನು ಸಮರ್ಥಿಸುವಂತೆ ಆಡಿದರು.

ನಾಯಕ ಸೂರ್ಯಕುಮಾರ್ (5) ಅವರ ವೈಫಲ್ಯ ಈ ಪಂದ್ಯದಲ್ಲೂ ಮುಂದುವರಿಯಿತು.

ಭಾರತದ ರನ್‌ವೇಗ ಸ್ವಲ್ಪ ಕಡಿಮೆ ಯಾಗುತ್ತಿದೆ ಎನ್ನುವಷ್ಟರಲ್ಲಿ ತಿಲಕ್ ಜೊತೆಗೂಡಿದ ಪಾಂಡ್ಯ ಎದುರಾಳಿ ದಾಳಿ ಪುಡಿಗಟ್ಟಿ ಐದನೇ ವಿಕೆಟ್‌ಗೆ ಕೇವಲ 44 ಎಸೆತಗಳಲ್ಲಿ 105 ರನ್ ಸೇರಿಸಿದರು. ತಿಲಕ್ ತಮ್ಮ ಬತ್ತಳಿಕೆಯಿಂದ ವೈವಿಧ್ಯಮಯ ಹೊಡೆತಗಳನ್ನು ಪ್ರಯೋಗಿಸಿದರು.

ಪಾಂಡ್ಯ ಅವರ ಮಿಂಚಿನ ಆಟದಲ್ಲಿ ಐದು ಸಿಕ್ಸರ್ ಮತ್ತು ಅಷ್ಟೇ ಬೌಂಡರಿ ಗಳಿದ್ದವು. ಅವರು 50 ರನ್‌ಗಳನ್ನು ಕೇವಲ 16 ಎಸೆತಗಳಲ್ಲಿ ದಾಟಿದರು. ದಿಗ್ಗಜ ಆಲ್‌ರೌಂಡರ್ ಯುವರಾಜ್ ಸಿಂಗ್ 2007ರಲ್ಲಿ ಇಂಗ್ಲೆಂಡ್ ವಿರುದ್ಧ ಕಿಂಗ್ಸ್‌ಮೀಡ್‌ನಲ್ಲಿ ನಡೆದ ಪಂದ್ಯದಲ್ಲಿ ಕೇವಲ 12 ಎಸೆತಗಳಲ್ಲಿ ಅರ್ಧ ಶತಕ ಗಳಿಸಿದ್ದು, ದಾಖಲೆಯಾಗಿ ಉಳಿದಿದೆ.

**ಸಂಕ್ಷಿಪ್ತ ಸ್ಕೋರು:** ಭಾರತ: 20 ಓವರುಗಳಲ್ಲಿ 5ಕ್ಕೆ 231 (ಸಂಜು ಸ್ಯಾಮ್ಸನ್ 37, ಅಭಿಷೇಕ್ ಶರ್ಮಾ 34, ತಿಲಕ್ ವರ್ಮಾ 73, ಹಾರ್ದಿಕ್ ಪಾಂಡ್ಯ 63; ಕಾರ್ಬಿನ್ ಬಾಷ್ 44ಕ್ಕೆ2). ದಕ್ಷಿಣ ಆಫ್ರಿಕಾ: 20 ಓವರ್‌ಗಳಲ್ಲಿ 8 ವಿಕೆಟ್‌ಗೆ 201 (ಕ್ವಿಂಟನ್ ಡಿಕಾಕ್ 65, ಡೆವಾಲ್ಡ್ ಬ್ರೆವಿಸ್ 31; ಜಸ್‌ಪ್ರೀತ್ ಬೂಮ್ರಾ 17ಕ್ಕೆ 2, ವರುಣ್ ಚಕ್ರವರ್ತಿ 53ಕ್ಕೆ 4)
**ಪಂದ್ಯದ ಆಟಗಾರ:** ಹಾರ್ದಿಕ್ ಪಾಂಡ್ಯ
**ಸರಣಿಯ ಆಟಗಾರ:** ವರುಣ್ ಚಕ್ರವರ್ತಿ (10 ವಿಕೆಟ್‌ಗಳು)

## ನಾಯಕನಾಗಿ ಸೂರ್ಯ ಪಾಲಿಗೆ ಕೊನೆಯ ಟೂರ್ನಿ?
# ಟಿ20 ವಿಶ್ವಕಪ್: ಅಚ್ಚರಿಯ ಸಾಧ್ಯತೆ ಕ್ಷೀಣ

**ಮುಂಬೈ (ಪಿಟಿಐ):** ನಾಯಕ ಸೂರ್ಯಕುಮಾರ್ ಯಾದವ್ ಮತ್ತು ಉಪ ನಾಯಕ ಶುಭಮನ್ ಗಿಲ್ ಅವರು ಇತ್ತೀಚಿನ ಪಂದ್ಯಗಳಲ್ಲಿ ಲಯದಲ್ಲಿ ಇಲ್ಲದಿರುವುದು ಕಳವಳಕ್ಕೆ ಕಾರಣವಾಗಿದೆಯೇನೊ ನಿಜ. ಆದರೆ ಮುಂದಿನ ಫೆಬ್ರುವರಿ–ಮಾರ್ಚ್‌ನಲ್ಲಿ ನಡೆಯಲಿರುವ ಐಸಿಸಿ ಟಿ20 ವಿಶ್ವಕಪ್‌ಗೆ ರಾಷ್ಟ್ರೀಯ ಆಯ್ಕೆಗಾರರು ಶನಿವಾರ ಇಲ್ಲಿ ತಂಡ ಪ್ರಕಟಿಸುವಾಗ ಅಚ್ಚರಿಯ ಬದಲಾವಣೆಗಳನ್ನು ಮಾಡುವ ಸಾಧ್ಯತೆ ಕ್ಷೀಣ.

ಭಾರತ ಮತ್ತು ಶ್ರೀಲಂಕಾ ಜಂಟಿ ಆತಿಥ್ಯದಲ್ಲಿ ಫೆಬ್ರುವರಿ 7ರಂದು ವಿಶ್ವಕಪ್ ಆರಂಭವಾಗಲಿದೆ. ಅದಕ್ಕೆ ಮೊದಲು ತಂಡದಲ್ಲಿ ಯಾವುದೇ ಆಟಗಾರರನ್ನು ಬದಲಾಯಿಸುವ ಅವಕಾಶ ಬಿಸಿಸಿಐಗೆ ಇದೆ. ಈ ವರ್ಷದ ಆರಂಭದಲ್ಲಿ ಚಾಂಪಿಯನ್ಸ್ ಟ್ರೋಫಿ ಟೂರ್ನಿಗೆ ಮೊದಲು, ದುಬೈನ ನಿಧಾನಗತಿಯ ಟ್ರ್ಯಾಕ್ ಗಮನದಲ್ಲಿರಿಸಿ, ಯಶಸ್ವಿ ಜೈಸ್ವಾಲ್ ಬದಲು ಕೊನೆಗಳಿಗೆಯಲ್ಲಿ ವರುಣ್ ಚಕ್ರವರ್ತಿ ಅವರಿಗೆ ಅವಕಾಶ ನೀಡಲಾಗಿತ್ತು.

ಬಿಸಿಸಿಐನಿಂದ ಅಧಿಕೃತವಾಗಿ ಯಾರೂ ಹೇಳಿಕೆ ನೀಡದೇ ಇದ್ದರೂ, ಈ ಐಸಿಸಿ ಟೂರ್ನಿಯು ಸೂರ್ಯಕುಮಾರ್ ಯಾದವ್ ಅವರಿಗೆ ಟಿ20 ತಂಡದ ನಾಯಕನಾಗಿ ಕೊನೆಯದಾಗುವ ಸಾಧ್ಯತೆ ನಿಚ್ಚಳವಾಗಿದೆ. ಈಗಾಗಲೇ ಸೂರ್ಯ ಅವರಿಗೆ 35 ವರ್ಷ ಆಗಿದ್ದು, ಒಂದು ವರ್ಷದಿಂದ ಅವರು ಫಾರ್ಮ್‌ನಲ್ಲಿ ಬೇರೆ ಇಲ್ಲ. 14 ತಿಂಗಳಲ್ಲಿ 24 ಪಂದ್ಯಗಳನ್ನು ಆಡಿರುವ ಸೂರ್ಯ ನಾಯಕನಾಗಿರುವ ಕಾರಣಕ್ಕಾಗಿಯಷ್ಟೇ ತಂಡದಲ್ಲಿ ಉಳಿದುಕೊಂಡಿದ್ದಾರೆ.

ಆಯ್ಕೆ ಸಮಿತಿಯು, ನ್ಯೂಜಿಲೆಂಡ್ ವಿರುದ್ಧ ಟಿ20 ಸರಣಿಗೂ ಭಾರತ ತಂಡವನ್ನು ಆಯ್ಕೆ ಮಾಡಲಿದೆ. ಆದರೆ ವಿಶ್ವಕಪ್ ತಂಡವನ್ನೇ ಈ ಸರಣಿಗೂ ಉಳಿಸಿಕೊಳ್ಳುವ ಸಾಧ್ಯತೆ ಹೆಚ್ಚು.

ಸತತವಾಗಿ ವಿಫಲರಾಗುತ್ತಿರುವ ಗಿಲ್ ಸೇರಿದಂತೆ ಸದ್ಯ ಯಾವುದೇ ಆಟಗಾರ ತಂಡದಿಂದ ಸ್ಥಾನ ಕಳೆದುಕೊಳ್ಳುವ ಸಾಧ್ಯತೆಯಿಲ್ಲ. ವಿಶ್ವಕಪ್‌ಗೆ ಜೈಸ್ವಾಲ್ ಅಗತ್ಯ ಬೀಳಲಿದೆಯೇ ಎಂಬುದನ್ನು ಪರೀಕ್ಷಿಸಲಿಕ್ಕಾಗಿ ಅವರನ್ನು ನ್ಯೂಜಿಲೆಂಡ್ ಸರಣಿಗೆ ಪರಿಗಣಿಸುತ್ತಾರೆಯೇ ಎಂಬುದನ್ನು ಕಾದುನೋಡಬೇಕಾಗಿದೆ.

ಗಿಲ್ ಅವರ ವೈಫಲ್ಯ ಸೂರ್ಯಕುಮಾರ್ ಅವರಿಗೆ ಒಂದು ರೀತಿ ನೆರವಾಗಿದೆ. ಗಿಲ್ ಅವರನ್ನು ಎಲ್ಲ ಮಾದರಿಗೆ ನಾಯಕನಾಗಬಲ್ಲ ಆಟಗಾರ ಎಂದು ಬಿಂಬಿಸಲಾಗಿದೆ. ಈಗಾಗಲೇ ಟೆಸ್ಟ್ ಮತ್ತು ಏಕದಿನ ಮಾದರಿಗೆ ಗಿಲ್ ನಾಯಕರಾಗಿದ್ದಾರೆ.


ಭಾರತ ಟಿ20 ತಂಡದ ನಾಯಕ ಸೂರ್ಯಕುಮಾರ್ ಯಾದವ್ — ಎಎಫ್‌ಪಿ ಚಿತ್ರ

ಲಯದಲ್ಲಿರುವ ಜೈಸ್ವಾಲ್ ಹೆಸರು ಸಮಿತಿ ಸಭೆಯಲ್ಲಿ ಮುನ್ನೆಲೆಗೆ ಬರುವ ನಿರೀಕ್ಷೆ ತಳ್ಳಿಹಾಕುವಂತಿಲ್ಲ. ಅವರು ಗಿಲ್ ಮತ್ತು ಸ್ಯಾಮ್ಸನ್ ಅವರಿಗೆ ಹೋಲಿಸಿದರೆ, ಚುಟುಕು ಮಾದರಿಗೆ ಒಗ್ಗಬಲ್ಲ ಬಹೂಪಯೋಗಿ ಆಟಗಾರ. ಆದರೆ ಸ್ಯಾಮ್ಸನ್ ಎರಡನೇ ಕೀಪರ್ ಆಗಿರುವ ಕಾರಣ (ಮೊದಲ ಆಯ್ಕೆಯ ಕೀಪರ್ ಜಿತೇಶ್ ಶರ್ಮಾ) ಮತ್ತು ಗಿಲ್ ಅವರನ್ನು ಉಪನಾಯಕರಾಗಿ ನೇಮಕ ಮಾಡಿರುವ ಕಾರಣ ಜೈಸ್ವಾಲ್ ಅವರಿಗೆ 15ರಲ್ಲಿ ಸ್ಥಾನ ಸಿಗುವ ಸಾಧ್ಯತೆ ಕಡಿಮೆ.

ಈಗ ಇರುವ ತಂಡದ ಸಣ್ಣ ದೌರ್ಬಲ್ಯದ ಇನ್ನೊಂದು ಕೊಂಡಿ ಎಂದರೆ ವಾಷಿಂಗ್ಟನ್ ಸುಂದರ್. ಆಲ್‌ರೌಂಡರ್ ಆಗಿದ್ದರೂ ಅವರು ಆಡಿರುವ 57 ಟಿ20 ಪಂದ್ಯಗಳಲ್ಲಿ ಒಂದರಲ್ಲೂ ಈ ಮಾದರಿಗೆ ಅಗತ್ಯವಿರುವ ಸ್ಫೋಟಕ ಆಟವಾಡಿಲ್ಲ.

**ಸಂಭವನೀಯ ತಂಡ:** ಸೂರ್ಯಕುಮಾರ್ ಯಾದವ್ (ನಾಯಕ), ಶುಭಮನ್ ಗಿಲ್ (ಉಪನಾಯಕ), ಅಭಿಷೇಕ್ ಶರ್ಮಾ, ತಿಲಕ್ ವರ್ಮಾ, ಹಾರ್ದಿಕ್ ಪಾಂಡ್ಯ, ಶಿವಂ ದುಬೆ, ಜಿತೇಶ್ ಶರ್ಮಾ (ವಿಕೆಟ್ ಕೀಪರ್), ಅಕ್ಷರ್ ಪಟೇಲ್, ಜಸ್‌ಪ್ರೀತ್ ಬೂಮ್ರಾ, ಅರ್ಷದೀಪ್ ಸಿಂಗ್, ವರುಣ್ ಚಕ್ರವರ್ತಿ, ಕುಲದೀಪ್ ಯಾದವ್, ಹರ್ಷಿತ್ ರಾಣಾ, ಸಂಜು ಸ್ಯಾಮ್ಸನ್ (ವಿಕೆಟ್ ಕೀಪರ್), ವಾಷಿಂಗ್ಟನ್ ಸುಂದರ್.

**ಸಂಭನವೀಯ ಸ್ಟ್ಯಾಂಡ್‌ಬೈಸ್:** ಯಶಸ್ವಿ ಜೈಸ್ವಾಲ್, ರಿಂಕು ಸಿಂಗ್, ರಯಾನ್ ಪರಾಗ್, ಶಾಬಾಜ್ ಅಹ್ಮದ್/ ನಿತೀಶ್ ಕುಮಾರ್ ರೆಡ್ಡಿ, ಪ್ರಸಿದ್ಧ ಕೃಷ್ಣ.

# ಫೈನಲ್‌ಗೆ ಭಾರತ, ಪಾಕಿಸ್ತಾನ

## ಯೂತ್ ಏಷ್ಯಾ ಕಪ್ ಟಿ20 ಕ್ರಿಕೆಟ್: ಶ್ರೀಲಂಕಾಕ್ಕೆ ಸೋಲು

**ದುಬೈ (ಪಿಟಿಐ):** ಉಪನಾಯಕ ವಿಹಾನ್ ಮಲ್ಹೋತ್ರಾ (ಔಟಾಗದೇ 61;45ಎ) ಮತ್ತು ಆ್ಯರನ್ ಜಾರ್ಜ್ (ಔಟಾಗದೇ 58;49ಎ) ಅವರ ಅರ್ಧಶತಕಗಳ ನೆರವಿನಿಂದ ಭಾರತ 19 ವರ್ಷದೊಳಗಿನವರ ತಂಡವು ಯೂತ್ ಏಷ್ಯಾ ಕಪ್ ಟಿ20 ಕ್ರಿಕೆಟ್ ಟೂರ್ನಿಯಲ್ಲಿ ಫೈನಲ್ ಪ್ರವೇಶಿಸಿತು. ಭಾನುವಾರ ಪ್ರಶಸ್ತಿ ಸುತ್ತಿನ ಹಣಾಹಣಿಯಲ್ಲಿ ಪಾಕಿಸ್ತಾನ ತಂಡವನ್ನು ಎದುರಿಸಲಿದೆ.

ಶುಕ್ರವಾರ ನಡೆದ ಸೆಮಿಫೈನಲ್‌ನಲ್ಲಿ ಆಯುಷ್ ಮ್ಹಾತ್ರೆ ನಾಯಕತ್ವದ ಭಾರತ ತಂಡವು 8 ವಿಕೆಟ್‌ಗಳಿಂದ ಶ್ರೀಲಂಕಾ ತಂಡವನ್ನು ಸೋಲಿಸಿ, 10ನೇ ಬಾರಿ ಫೈನಲ್ ಪ್ರವೇಶಿಸಿತು. ಮತ್ತೊಂದು ಸೆಮಿಫೈನಲ್‌ನಲ್ಲಿ ಪಾಕಿಸ್ತಾನ ತಂಡ ಎಂಟು ವಿಕೆಟ್‌ಗಳಿಂದ ಬಾಂಗ್ಲಾದೇಶ ವಿರುದ್ಧ ಜಯಿಸಿತು.

11 ವರ್ಷಗಳ ನಂತರ ಫೈನಲ್‌ನಲ್ಲಿ ಭಾರತ ಮತ್ತು ಪಾಕ್ ಮುಖಾಮುಖಿಯಾಗಲಿವೆ. 2014ರಲ್ಲಿ ನಡೆದ ಫೈನಲ್‌ನಲ್ಲಿ ಭಾರತ ತಂಡವು ಪಾಕಿಸ್ತಾನವನ್ನು ಮಣಿಸಿತ್ತು. ಅಂದಿನ ತಂಡದಲ್ಲಿ ಶ್ರೇಯಸ್ ಅಯ್ಯರ್, ಸರ್ಫರಾಜ್ ಖಾನ್, ಸಂಜು ಸ್ಯಾಮ್ಸನ್ ಮತ್ತು ಕುಲದೀಪ್ ಯಾದವ್ ಇದ್ದರು. ಭಾರತ ಒಟ್ಟು ಎಂಟು ಬಾರಿ ಪ್ರಶಸ್ತಿ ಗೆದ್ದಿದೆ.

ಟಾಸ್ ಗೆದ್ದ ಭಾರತ ಫೀಲ್ಡಿಂಗ್ ಆಯ್ದುಕೊಂಡಿತು. ಚಾಮಿಕಾ ಹೀನಟಿಗಲ (42;38ಎ) ಅವರ ಬ್ಯಾಟಿಂಗ್ ಬಲದಿಂದ ಲಂಕಾ ಪಡೆ 20 ಓವರ್‌ಗಳಲ್ಲಿ 8 ವಿಕೆಟ್‌ಗೆ 138 ರನ್ ಗಳಿಸಿತು. ನಾಯಕ ವಿಮತ್ ದಿನಸಾರ (32) ಮತ್ತು ಸೇಥ್ಮಿಕಾ ಸೆನೆವಿರತ್ನೆ (30) ಹೊರತುಪಡಿಸಿ ಉಳಿದವರು ನಿರಾಸೆ ಮೂಡಿಸಿದರು. ಭಾರತದ ಹೆನಿಲ್ ಪಟೇಲ್ ಮತ್ತು ಕನಿಷ್ಕ್ ಚೌಹಾನ್ ತಲಾ ಎರಡು ವಿಕೆಟ್ ಪಡೆದರು.

ಸಾಧಾರಣ ಮೊತ್ತದ ಗುರಿಯನ್ನು ಬೆನ್ನಟ್ಟಿದ ಭಾರತ 25 ರನ್ ಗಳಿಸುವಷ್ಟರಲ್ಲಿ ಆರಂಭಿಕ ಆಟಗಾರರಾದ ಆಯುಷ್ (7) ಮತ್ತು ವೈಭವ್ ಸೂರ್ಯವಂಶಿ (9) ಅವರನ್ನು ಕಳೆದುಕೊಂಡಿತು. ಈ ಎರಡು ವಿಕೆಟ್‌ಗಳು ರಸಿತ್ ನಿಮ್ಸಾರ ಪಾಲಾದವು. ಐಪಿಎಲ್ ಮಿನಿ ಹರಾಜಿನಲ್ಲಿ ಆರ್‌ಸಿಬಿ ಪಾಲಾದ ವಿಹಾನ್ ಮತ್ತು ಆ್ಯರನ್ ನಂತರದಲ್ಲಿ ಎಚ್ಚರಿಕೆಯ ಆಟವಾಡಿದರು. ಮುರಿಯದ ಮೂರನೇ ವಿಕೆಟ್‌ಗೆ ವಿಕೆಟ್‌ಗೆ 114 (87ಎ) ರನ್ ಸೇರಿಸಿ ತಂಡವನ್ನು ಗೆಲುವಿನ ದಡ ಸೇರಿಸಿದರು. ಭಾರತ ಇನ್ನೂ 12 ಎಸೆತಗಳು ಬಾಕಿ ಇರುವಂತೆ 2 ವಿಕೆಟ್‌ಗೆ 139 ರನ್ ಗಳಿಸಿತು.


ಭಾರತ ತಂಡದ ವಿಹಾನ್ ಮಲ್ಹೋತ್ರಾ ಮತ್ತು ಆ್ಯರನ್ ಜಾರ್ಜ್ ಜೊತೆಯಾಟ — ಎಕ್ಸ್ ಚಿತ್ರ

**ಸಂಕ್ಷಿಪ್ತ ಸ್ಕೋರ್:** ಶ್ರೀಲಂಕಾ: 20 ಓವರ್‌ಗಳಲ್ಲಿ 8 ವಿಕೆಟ್‌ಗೆ 138 (ವಿಮತ್ ದಿನಸಾರ 32, ಚಾಮಿಕಾ ಹೀನಟಿಗಲ 42, ಸೇಥ್ಮಿಕಾ ಸೆನೆವಿರತ್ನೆ 30; ಹೆನಿಲ್ ಪಟೇಲ್ 31ಕ್ಕೆ 2, ಕನಿಷ್ಕ್ ಚೌಹಾನ್ 36ಕ್ಕೆ 2). ಭಾರತ: 18 ಓವರ್‌ಗಳಲ್ಲಿ 2 ವಿಕೆಟ್‌ಗೆ 139 (ಆ್ಯರನ್ ಜಾರ್ಜ್ ಔಟಾಗದೇ 58, ವಿಹಾನ್ ಮಲ್ಹೋತ್ರಾ ಔಟಾಗದೇ 61; ರಸಿತ್ ನಿಮ್ಸಾರ 31ಕ್ಕೆ 2). ಪಂದ್ಯದ ಆಟಗಾರ: ವಿಹಾನ್ ಮಲ್ಹೋತ್ರಾ

# ನಾಕೌಟ್‌ಗೆ ಸಾತ್ವಿಕ್–ಚಿರಾಗ್

**ಹಾಂಗ್‌ಝೌ (ಪಿಟಿಐ):** ಯಶಸ್ಸಿನ ಓಟ ಮುಂದುವರಿಸಿದ ಭಾರತದ ಅಗ್ರ ಡಬಲ್ಸ್ ಆಟಗಾರರಾದ ಸಾತ್ವಿಕ್‌ಸಾಯಿರಾಜ್ ರಣಕಿರೆಡ್ಡಿ– ಚಿರಾಗ್ ಶೆಟ್ಟಿ ಅವರು ಹಿನ್ನಡೆಯಿಂದ ಚೇತರಿಸಿ ತಮ್ಮ ಬದ್ಧ ಎದುರಾಳಿ ಆ್ಯರನ್ ಚಿಯಾ– ಸೊಹ್ ವೂಯಿ ಯಿಕ್ ಅವರನ್ನು ಸೋಲಿಸಿ ಬಿಡಬ್ಲ್ಯುಎಫ್ ಬ್ಯಾಡ್ಮಿಂಟನ್ ವಿಶ್ವ ಟೂರ್ ಫೈನಲ್ಸ್‌ನಲ್ಲಿ ಶುಕ್ರವಾರ ನಾಕೌಟ್ ಹಂತಕ್ಕೆ ದಾಪುಗಾಲಿಟ್ಟರು.

'ಬಿ' ಗುಂಪಿನ ಈ ಕೊನೆಯ ಪಂದ್ಯದಲ್ಲಿ ಎರಡನೇ ಶ್ರೇಯಾಂಕದ ಸಾತ್ವಿಕ್– ಚಿರಾಗ್ ಜೋಡಿ 17–21, 21–18, 21–15 ರಿಂದ ಮಲೇಷ್ಯಾ ಜೋಡಿಯ ಹೋರಾಟವನ್ನು ಬದಿಗೊತ್ತಿತು. 70 ನಿಮಿಷಗಳಲ್ಲಿ ಗೆಲ್ಲುವ ಮೂಲಕ ವರ್ಷಾಂತ್ಯದ ಈ ಟೂರ್ನಿಯಲ್ಲಿ ಪುರುಷರ ಡಬಲ್ಸ್ ಸೆಮಿಫೈನಲ್ ತಲುಪಿದ ಭಾರತದ ಮೊದಲ ಜೋಡಿ ಎಂಬ ಹೆಗ್ಗಳಿಕೆ ಇವರಿಬ್ಬರದಾಯಿತು. ಮಲೇಷ್ಯಾ ಆಟಗಾರರ ಎದುರು ಇವರಿಬ್ಬರ ಮುಖಾಮುಖಿ 5–11 ಆಗಿತ್ತು. ಈ ಪಂದ್ಯಕ್ಕಿಳಿಯುವ ಮೊದಲು ಒಂದು ಗೇಮ್ ಗೆದ್ದರೂ ಭಾರತದ ಜೋಡಿಗೆ ಸೆಮಿಫೈನಲ್ ಪ್ರವೇಶ ಖಾತರಿಯಾಗುತಿತ್ತು.

ವರ್ಷದ ಕೊನೆಯಲ್ಲಿ ನಡೆಯುವ ಈ ಟೂರ್ ಫೈನಲ್‌ನಲ್ಲಿ ಈ ಹಿಂದೆ ಭಾರತ ವಿರಳವಾಗಿ ಯಶಸ್ಸು ಗಳಿಸಿದೆ. ಪಿ.ವಿ.ಸಿಂಧು 2018ರಲ್ಲಿ ಮಹಿಳಾ ಸಿಂಗಲ್ಸ್ ಚಾಂಪಿಯನ್ ಆಗಿದ್ದರು. ಸೈನಾ ನೆಹ್ವಾಲ್ 2011ರಲ್ಲಿ ಫೈನಲ್ ತಲುಪಿದ್ದರು. 2009ರಲ್ಲಿ ಜ್ವಾಲಾ ಗುಟ್ಟಾ–ವಿ.ಡಿಜು ಮಿಶ್ರಡಬಲ್ಸ್‌ನಲ್ಲಿ ಫೈನಲ್ ಪ್ರವೇಶಿಸಿದ್ದರು.

# ಅಥರ್ವಗೆ ಐದು ವಿಕೆಟ್ ಗೊಂಚಲು

**ಬೆಂಗಳೂರು:** ಬಲಗೈ ಸ್ಪಿನ್ನರ್ ಅಥರ್ವ ಎಸ್. ದೇಶಪಾಂಡೆ ಅವರ 5 ವಿಕೆಟ್ ಗೊಂಚಲಿನ ನೆರವಿನಿಂದ ಕರ್ನಾಟಕ ತಂಡವು ವಿಜಯ್ ಮರ್ಚಂಟ್ ಟ್ರೋಫಿ (16 ವರ್ಷದೊಳಗಿನವರ) ಎಲೀಟ್ ಕ್ರಿಕೆಟ್ ಟೂರ್ನಿಯ ಪಂದ್ಯದಲ್ಲಿ ಬರೋಡಾ ತಂಡವನ್ನು 177 ರನ್‌ಗಳಿಗೆ ಕಟ್ಟಿಹಾಕಿತು. ಅದರೊಂದಿಗೆ, ಮೊದಲ ಇನಿಂಗ್ಸ್‌ನಲ್ಲಿ 57 ರನ್‌ಗಳ ಅಮೂಲ್ಯ ಮುನ್ನಡೆ ಪಡೆಯಿತು.

ರಾಯಪುರದಲ್ಲಿ ನಡೆಯುತ್ತಿರುವ ಪಂದ್ಯದಲ್ಲಿ ಶುಕ್ರವಾರ 9 ವಿಕೆಟ್‌ಗೆ 225 ರನ್‌ಗಳೊಂದಿಗೆ ಆಟ ಮುಂದುವರಿಸಿದ ರಾಜ್ಯ ತಂಡವು ಆರಂಭದಲ್ಲಿಯೇ ವಿಕೆಟ್ ಕಳೆದುಕೊಂಡಿತು. ಬಳಿಕ, ಇನಿಂಗ್ಸ್ ಆರಂಭಿಸಿದ ಬರೋಡಾ ತಂಡವು ಅಥರ್ವ (45ಕ್ಕೆ5) ಅವರ ಪರಿಣಾಮಕಾರಿ ಬೌಲಿಂಗ್ ಎದುರು 73 ಓವರ್‌ಗಳಲ್ಲಿ ಆಲೌಟ್ ಆಯಿತು.

ಬರೋಡಾ ತಂಡದ ಪರ ನಾಯಕ ತಿಲಕ್ ಪಟೇಲ್ (57; 113ಎ, 4x3, 6x1) ಹೊರತುಪಡಿಸಿ, ಉಳಿದ್ಯಾವ ಬ್ಯಾಟರ್‌ಗಳೂ ಪ್ರತಿರೋಧ ತೋರಲಿಲ್ಲ.

**ಸಂಕ್ಷಿಪ್ತ ಸ್ಕೋರು:** ಮೊದಲ ಇನಿಂಗ್ಸ್: ಕರ್ನಾಟಕ: 91.3 ಓವರ್‌ಗಳಲ್ಲಿ 234 (ಸಮರ್ಥ್ ಎಂ. ಕುಲಕರ್ಣಿ ಔಟಾಗದೇ 19, ಪ್ರಣವ್ ಕೆ. 36ಕ್ಕೆ3). ಬರೋಡಾ: 73 ಓವರ್‌ಗಳಲ್ಲಿ 177 (ತಿಲಕ್ ಪಟೇಲ್ 57; ಅಥರ್ವ ಎಸ್. ದೇಶಪಾಂಡೆ 45ಕ್ಕೆ5, ಆರೂಷ್ ಜೈನ್ 25ಕ್ಕೆ2, ಸುವಿಕ್ ಗಿಲ್ 22ಕ್ಕೆ2). ಎರಡನೇ ಇನಿಂಗ್ಸ್: ಕರ್ನಾಟಕ: 5 ಓವರ್‌ಗಳಲ್ಲಿ 1 ವಿಕೆಟ್‌ಗೆ 6 (ಪ್ರಣವ್ ಕೆ. 5ಕ್ಕೆ1).

# ರೋಚಕ ಡ್ರಾ ಸಾಧಿಸಿದ ಮಹಾರಾಷ್ಟ್ರ

**ಮೈಸೂರು:** ಕರ್ನಾಟಕ ಮತ್ತು ಮಹಾರಾಷ್ಟ್ರ ನಡುವಣ ಕೂಚ್ ಬಿಹಾರ್ ಟ್ರೋಫಿ 19 ವರ್ಷದೊಳಗಿನವರ ಕ್ರಿಕೆಟ್ ಟೂರ್ನಿಯ ಲೀಗ್ ಪಂದ್ಯವು ರೋಚಕ ಡ್ರಾ ಆಯಿತು. ಕರ್ನಾಟಕಕ್ಕೆ ಕೇವಲ ಎರಡು ರನ್‌ಗಳಿಂದ ಗೆಲುವು ಕೈತಪ್ಪಿತು.

ಇಲ್ಲಿನ ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಕ್ರೀಡಾಂಗಣದಲ್ಲಿ ಪಂದ್ಯದ ಕಡೆಯ ದಿನವಾದ ಶುಕ್ರವಾರ 2ನೇ ಇನಿಂಗ್ಸ್ ಮುಂದುವರಿಸಿದ ಮಹಾರಾಷ್ಟ್ರ ತಂಡವು ಅರ್ಕಮ್ ಸಯ್ಯದ್ ಅರ್ಧಶತಕ (ಔಟಾಗದೇ 69) ಬಲದಿಂದ 72 ಓವರ್‌ಗಳಲ್ಲಿ 7ಕ್ಕೆ 239 ರನ್‌ಗಳಿಗೆ ಡಿಕ್ಲೇರ್ ಮಾಡಿಕೊಂಡಿತು. 224 ರನ್‌ಗಳ ಗೆಲುವಿನ ಗುರಿ ಬೆನ್ನಟ್ಟಿದ ಆತಿಥೇಯ ಬಳಗಕ್ಕೆ ಅನ್ವಯ್ ದ್ರಾವಿಡ್ (57) ನಾಯಕನ ಆಟವಾಡಿ ಆಸರೆಯಾದರು. ಅವರಿಗೆ ಮಣಿಕಾಂತ್ ಶಿವಾನಂದ್ (47), ವರುಣ್ ಪಟೇಲ್ (41) ಹಾಗೂ ಆದೇಶ್ ಅರಸ್ (37) ನೆರವಾದರು. ಗೆಲುವಿನ ಸಮೀಪದಲ್ಲಿದ್ದ ಕರ್ನಾಟಕ ತಂಡವನ್ನು ಬೌಲಿಂಗ್‌ನಲ್ಲೂ ಅರ್ಕಮ್ ಸಯ್ಯದ್ ಕಾಡಿದರು. 33ಕ್ಕೆ 4 ವಿಕೆಟ್ ಉರುಳಿಸಿದ್ದಲ್ಲದೇ ಗೆಲುವಿನ ಲೆಕ್ಕಾಚಾರವನ್ನು ಬದಲಿಸಿದರು.


ಅನ್ವಯ್

210ಕ್ಕೆ 7 ವಿಕೆಟ್ ಕಳೆದುಕೊಂಡು ಸೋಲಿನ ಭೀತಿಯಲ್ಲಿದ್ದ ಕರ್ನಾಟಕ ತಂಡವನ್ನು ವೈಭವ್ ಶರ್ಮಾ, ಧ್ಯಾನ್ ಹಿರೇಮಠ ವಿಕೆಟ್ ಬೀಳದಂತೆ ಕಾಯ್ದರಲ್ಲದೇ, ಗೆಲುವಿನ ಸಮೀಪ ತಂದರು. ಆದರೆ 2 ರನ್ ಬಾಕಿ ಇರುವಂತೆ ನಿಗದಿ ಓವರುಗಳು ಮುಗಿದ ಕಾರಣ ಪಂದ್ಯ ಡ್ರಾ ಆಯಿತು.

**ಸಂಕ್ಷಿಪ್ತ ಸ್ಕೋರ್:** ಮೊದಲ ಇನಿಂಗ್ಸ್: ಮಹಾರಾಷ್ಟ್ರ: 94.2 ಓವರ್‌ಗಳಲ್ಲಿ 304; ಕರ್ನಾಟಕ: 104 ಓವರ್‌ಗಳಲ್ಲಿ 320. 2ನೇ ಇನಿಂಗ್ಸ್: ಮಹಾರಾಷ್ಟ್ರ: 72 ಓವರ್‌ಗಳಲ್ಲಿ 7ಕ್ಕೆ239 (ಅರ್ಕಮ್ ಸಯ್ಯದ್ ಔಟಾಗದೇ 69; ಈಸಾ ಹಕೀಮ್ ಪುತ್ತಿಗೆ 42ಕ್ಕೆ 4). ಕರ್ನಾಟಕ: 82 ಓವರ್‌ಗಳಲ್ಲಿ 7ಕ್ಕೆ 221 (ಅನ್ವಯ್ ದ್ರಾವಿಡ್ 57; ಅರ್ಕಮ್ ಸಯ್ಯದ್ 33ಕ್ಕೆ 4, ಸ್ವಶಿಕ್ ಜಗತಾಪ್ 33ಕ್ಕೆ 2).

# ಹೆಡ್ ಶತಕ, ಒತ್ತಡದಲ್ಲಿ ಇಂಗ್ಲೆಂಡ್

**ಅಡಿಲೇಡ್ (ಎಎಫ್‌ಪಿ):** ಆಕ್ರಮಣಕಾರಿ ಆಟಗಾರ ಟ್ರಾವಿಸ್ ಹೆಡ್ ಅಡಿಲೇಡ್‌ನಲ್ಲಿ ಸತತ ನಾಲ್ಕನೇ ಟೆಸ್ಟ್ ಶತಕ ಬಾರಿಸಿದರು. ಇದರಿಂದ ಆಸ್ಟ್ರೇಲಿಯಾ ತಂಡವು ಆ್ಯಷಸ್ ಸರಣಿಯ ಮೂರನೇ ಟೆಸ್ಟ್ ಪಂದ್ಯದ ಮೂರನೇ ದಿನವಾದ ಶುಕ್ರವಾರ ಆಟ ಮುಗಿದಾಗ ಇಂಗ್ಲೆಂಡ್ ವಿರುದ್ಧ ಒಟ್ಟು 356 ರನ್ ಮುನ್ನಡೆ ಸಾಧಿಸಿದ್ದು ಹಿಡಿತ ಬಿಗಿಗೊಳಿಸಿದೆ.

ಆತಿಥೇಯ ತಂಡ ಆ್ಯಷಸ್ ಟ್ರೋಫಿಯನ್ನು ಅನ್ನು ತನ್ನಲ್ಲೇ ಉಳಿಸಿಕೊಳ್ಳುವ ಹಾದಿಯಲ್ಲಿದೆ. ಆಸ್ಟ್ರೇಲಿಯಾ ಎರಡನೇ ಇನಿಂಗ್ಸ್‌ನಲ್ಲಿ 4 ವಿಕೆಟ್‌ಗೆ 271 ರನ್ ಗಳಿಸಿದ್ದು, ಆರಂಭ ಆಟಗಾರ ಟ್ರಾವಿಸ್ ಹೆಡ್ ಅಜೇಯ 142 ರನ್ ಗಳಿಸಿದ್ದಾರೆ. ಮೊದಲ ಇನಿಂಗ್ಸ್‌ನಲ್ಲಿ ಶತಕ ಬಾರಿಸಿದ್ದ ಅಲೆಕ್ಸ್ ಕ್ಯಾರಿ ಔಟಾಗದೇ 52 ರನ್ ಗಳಿಸಿದ್ದಾರೆ. ಹೆಡ್ ಅವರಿಗೆ ಇದು 11ನೇ ಟೆಸ್ಟ್ ಶತಕ.

ಈ ಪಂದ್ಯ ಇಂಗ್ಲೆಂಡ್ ಕೈತಪ್ಪಿದಂತೆ ಕಾಣುತ್ತಿದೆ. ಈ ಮೈದಾನದಲ್ಲಿ 316 ರನ್ ಇದುವರೆಗಿನ ಅತ್ಯಧಿಕ ರನ್ ಚೇಸ್ ಆಗಿದೆ. ಆಸ್ಟ್ರೇಲಿಯಾ 1902ರಲ್ಲಿ ಇಂಗ್ಲೆಂಡ್ ವಿರುದ್ಧ ಈ ಮೊತ್ತ ಗಳಿಸಿ ಜಯ ಸಾಧಿಸಿತ್ತು.


ಟ್ರಾವಿಸ್ ಹೆಡ್ ಶತಕ ಸಂಭ್ರಮ

ಇದಕ್ಕೆ ಮೊದಲು, ಆಸ್ಟ್ರೇಲಿಯಾದ 371 ರನ್‌ಗಳಿಗೆ ಉತ್ತರವಾಗಿ ಗುರುವಾರ 8 ವಿಕೆಟ್‌ಗೆ 213 ರನ್ ಗಳಿಸಿದ್ದ ಇಂಗ್ಲೆಂಡ್ ಮೊದಲ ಇನಿಂಗ್ಸ್‌ನಲ್ಲಿ 286 ರನ್‌ಗಳಿಗೆ ಆಲೌಟ್ ಆಯಿತು.

**ಸ್ಕೋರುಗಳು:** ಆಸ್ಟ್ರೇಲಿಯಾ: 371 ಮತ್ತು 66 ಓವರುಗಳಲ್ಲಿ 4 ವಿಕೆಟ್‌ಗೆ 271 (ಟ್ರಾವಿಸ್ ಹೆಡ್ ಔಟಾಗದೇ 142, ಅಲೆಕ್ಸ್ ಕ್ಯಾರಿ ಔಟಾಗದೇ 52; ಜೋಶ್ ಟಂಗ್ 59ಕ್ಕೆ2); ಇಂಗ್ಲೆಂಡ್: 87.2 ಓವರುಗಳಲ್ಲಿ 286 (ಬೆನ್ ಸ್ಟೋಕ್ಸ್ 83, ಜೋಫ್ರಾ ಆರ್ಚರ್ 51; ಪ್ಯಾಟ್ ಕಮಿನ್ಸ್ 69ಕ್ಕೆ3, ಸ್ಕಾಟ್ ಬೋಲ್ಯಾಂಡ್ 45ಕ್ಕೆ3, ನಥಾನ್ ಲಯನ್ 70ಕ್ಕೆ2)

ಪ್ರಜಾವಾಣಿ ಶನಿವಾರ • ಡಿಸೆಂಬರ್ 20, 2025

# ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ


email: dhclassifieds@deccanherald.co.in

ಜಾಹೀರಾತುಗಳಿಗಾಗಿ ಸಂಪರ್ಕಿಸಿ: 080-45557160/ 162/ 163/ 164/ 9845114560 / 9731810277/ 9886213331












ಪ್ರಜಾವಾಣಿ

# ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331

## REAL ESTATE SELLING

### Sites

#### Banashankari

**BANASHANKARI 6TH STAGE**- BDA- AVAILABLE/ WANTED 20x30, 30x40 40x60, 50x80 SITES. BRINDAVAN ASSOCIATES- 9980863245/ 9945333993

**BANASHANKARI 6TH** Stage 7th Block BDA 30x40 E/F Site For Sale 14500/- P.Sqft Owner- 9900115519

#### Hesaraghatta

**1280 SQFT.** Site SALE, HESARAGATTA, ROAD AGB Layout ATTACH, Site No. 12, NORTH FACING. 9986313708

#### Hebbal

**HEBBAL 30X35** House Sale, Ground 1 BHK, Two Carparking, 1st 2 BHK, 2nd 2 BHK 9845623970/ 9739400838

#### Kempegowda Layout

**NADAPRABHU KEMPEGOWDA** LAYOUT BDA SITES SELLING/ BUYING 20x30, 30x40, 40x60, 50x80. Genuine Buyers Call: 9632146784, 9731162167.

***DIRECT OWNER*** 30x40 BDA Site Sale, KEMPEGWODA LAYOUT 5th 'L' SECTOR,near Mysore Road. Rs.8100/-. 9632966556

**KEMPEGOWDA LAYOUT,** Commercial/ Residential BDA Site for Sale 20x30, 30x40, 40x60, 50x80. Contact Kumar 9945119449

**BDA SITE** South facing, measuring 50x80, 1st K Sector, 60 ft Double Road (Commercial), Connects Business Corridor, Kempegowda Layout, Site Sale. 13000/- psqft. +919353534340.

#### Multiple Locations

**SITES SALE** Sadhashivnagar, Manyata, Jakkur, BTM Jayanagar Commercial, Residential 45x60, 50x80, 60x90, 80x120, 200x200. 9845004307.

#### Nagarabhavi

**"40X65 SEMI_COMMERCIAL** West-facing site_sale at Vinayaka_Layout opposite Park behind_Swathi Hotel just`10`minutes drive`to Metro. 9880031654"

#### Out-Station

**PENUKONDA NEAR** KIA Car-Factory Madakasira Highway 50X100 (2-SITES) ResiConverted, Gated Community, 499/- PSft 8310681025

#### R T Nagar

**R.T.NAGAR HMT** LAYOUT 40X60 Site Close to CBI MAIN ROAD Excellent Location, For-Sale Call: 9986281337

**R.T.NAGAR 40X60** BDA Site Excellent Location With 2 Floor Old Building For Sale Call: 7829203369

#### RMV

**DOLLARS COLONY** RMV 2nd Stage 50X90 West Facing, Old House BDA Excellent Location For-Sale Call:7829203369

#### Vijayanagar

**SITE FOR SALE 60x90 RPC LAYOUT VIJAYANAGAR**
SALE: 60X90 West Facing
Only Genuine Buyers Contact:
6363250343
9845038343

**SITE FOR SALE:** 60X90 WEST FACING WOC ROAD RPC LAYOUT ONLY GENUINE BUYERS: 6363250343/ 9845038343

#### Vishweshwariah Layout

**30 x 40 BDA Site for Sale**
East facing, 30 ft/rd, Rs 13500/- per sq/ft Negotiable, Vishweshwaraiah Layout, near Kengeri Metro Station.
Contact:
9916826976

***DIRECT OWNER*** 30x40 CORNER SIDE BDA Site Sale,40ft Road, VISHWESHWARAIAH LAYOUT. Rs.11000/-. 9742681666, 9886634578

**BUYING/ SELLING** 20x30, 30x40, 40x60, 50x80 BDA Sites VISHVESHWARAIAH LAYOUT, KEMPEGOWDA LAYOUT, Contact: 9035470616

**30X40 SITE** For Sale VVS 2nd Block, West Facing, 11300/ Sqft, Slightly Negotiable. Komghatta 7892059756

### House

#### BTM Layout

**HOUSE AND** Site for sale 30×40,40×60 East &North Facing For sale BTM 2nd Stage 9945377119 /9844099557

#### Kengeri

**HOUSE FOR** SALE 30x40 dimension, 2 bhk fully furnished 30/3, K Gollahalli, Kengeri, Bangalore South, 99 lakhs, slightly negotiable. CALL : 98451 95504

#### Nagarabhavi

**SALE DUPLEX** built-up 2300sft, Site 758sft, East, Furnished NGEF Layout, Mallathahalli, 60ft road Adjacent 9901552147

#### Nelamangala

**SALE SITE** 9120 sqft, Buildup Area 18000 sqft, Total 10 Houses Near Thomas School. 9845527196.

#### Vishweshwariah Layout

**FOR SALE** Luxurious G+2 House Vishweshwariah Layout 5th Block 40x60 Plot 5cr Negotiable Owner: 7676175045

### Agricultural Land Converted

#### Magadi Road

***MAGADI ROAD*** TAVAREKERE, OPPOSITE SALAR PURIYA SATTVA LAYOUT 10-ACRE CONVERTION LAND FOR SALE. Contact:9845059407

### Commercial Land

#### Nelamangala

**BANGALORE-SOLUR HIGHWAY** 2 acres 17 guntas Commercial Land for SALE. Genuine Buyers CONTACT: 9845780996

### Commerical

#### Sarjapur Road

**FOR SALE:** Sarjapur Road Near RGA Tech Park Furnished 47 PG ROOMS 6.60Crs. JP.NAGAR 4BHK Furnished HOUSE on 40X60. 8Crs. Interested Buyers Call: 9148911131/ 9343728200.

#### Vijayanagar

**450-SQFT COMMERCIAL** Office Space_Floor Wise For Sale Opposite to Vijayanagar Metro Station Contact: 7676900174 9945569909

### Flat

#### Nagarabhavi

**FLATS FOR-SALE** @ Nagarabhavi Chandra Layout 2_&_3BHK Ready to Move In_Good Location Call:9538472420 9845066608

#### Uttarahalli

**4BHK NEW** FLATS SALE Ready to Move, A_Khatha, E-swathu, Carparking_Lift Vaasthu, Maruthi_Layout. Rs.1.10.Cr. 9945224058 6363181276.

### Industrial & Factory

#### Yeshwanthpur

**INDUSTRIAL SUBURB,** commercial premises consisting of basement, ground, first, second floor each measuring 3500sft with 40HP power and lift. Vaastu complaint for rent. Rate 40 per'sft. Call: 9535479091, 9611044455

### Villas/Bunglows

#### Kanakapura Road

**SALE 30X50** CORNER Brand-New_3BHK Duplex-Villa Gated Community @_Nanda Prakruthi E-katha Off_Kanakapura Road Near`Nice`Road Rs.1.89cr Negotiable Call:9901011122 9845064043

## REAL ESTATE BUYING

### Joint Development

#### South

**JOINT DEVELOPMENT** Invester Required with Shortime Good Returns, (Buy Back Secured) SouthBangalore, Multiple Location: 8892731813

### Sites

#### Anjanapura

**WANTED BDA** SITES ANJANAPURA JP-NAGAR 8TH & 9TH PHASE ROYAL PARK BCC LAYOUT CONTACT: 9880776950

#### Banashankari

**BDA SITES** WANTED ARKAVATHY ANJANAPURA BANASHANKARI 6TH STAGE VISHWESHWARAIAH KEMPEGOWDA ANY BDA LAYOUT: 9845062822/ 8660751654

## RENTAL PROPERTIES

### Accommodation Available

#### Commercial

**PRIME COMMERCIAL** 4,000_Sqft. CORNER PROPERTY AVAILABLE FOR RENT/LEASE @ RAJARAJESHWARI NAGAR JAYANNA_CIRCLE. Contact: 8147618891.

**SHOWROOMS FOR** RENT available at Brookefield Kundalahalli adjacent to Brigade Tech Park, BSNL office main road circle.900 sqft and 700 sqft. Suitable for showrooms and shops. 1st floor of Indian Overseas Bank commercial building. Shared bathrooms available. Contact: 8310818291

#### Flats

**RENTAL RESIDENTIAL-** J.P.Nagar 24th Main, 1670 sft 3 bhk flat car parking lift South facing, veg preferred. 9884958743

## BUILDERS ESSENTIAL

### Water Proofing

**LEAKAGE... LEAKAGE...** Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

## JOB OPPORTUNITIES

### Hospital & Medical Jobs

**WANTED NURSE,** LAB TECHNICIAN (DMLT), MARKETING EXECUTIVE. KRISHNA LABS, BSK 3rd stage, Bangalore. Phone: 9980179502/ 9740272756 krishnalabs2025@gmail.com

## ಕ್ಲಾಸಿಫೈಡ್ಸ್ WEEKEND CORNER




VAARAHI CONSTRUCTIONS
For Booking Contact : 78921 99941 70191 96747
Project Address : Near Rajarajeswari Medical College, Good Earth Malhar Villas Road, Opp: Challagatta Metro Station, Mysore Rd, Blr-60

Mega THE AIRPORT TAXI
ಚಾಲಕರಿಂದ ಮಾಲಿಕರಾಗುವ
ಸುವರ್ಣ ಅವಕಾಶ




ಚಾಲಕರಿಂದ ಮಾಲಿಕರಾಗಲು ಅತ್ಯುತ್ತಮ ಅವಕಾಶಗಳೊಂದಿಗೆ, ಪೆಟ್ರೋಲ್ ಮತ್ತು ಸಿ.ಎನ್.ಜಿ ಆಳವಡಿತ ಹೊಚ್ಚ ಹೊಸ ಟಯೋಟ ಹೈರೈಡರ್ ಕಾರನ್ನು ಸ್ವಂತ ಮಾಡಿಕೊಳ್ಳುವ ಸುವರ್ಣ ಅವಕಾಶ.

1) ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಿಂದ 24 /7 ಗ್ರಾಹಕರ ಸೇವೆ
2) ಡಬಲ್ ಡ್ರೈವರ್‌ಗೆ ಅವಕಾಶ
3) 24 /7 ಏರ್‌ಪೋರ್ಟ್ ಆರ್.ಎಫ್.ಐ.ಡಿ ಕಾರ್ಡ ಸೌಲಭ್ಯ
4) ಬೆಂಗಳೂರು ನಗರದಿಂದ ಏರ್‌ಪೋರ್ಟ್‌ಗೆ ರಿಟರ್ನ್‌ಟ್ರಿಪ್ ಅವಕಾಶ
5) 24 /7 ಕಾಲ್‌ಸೆಂಟರ್ ಸೌಲಭ್ಯ

ಕಾರ್ ಬುಕಿಂಗ್ ಮಾಡಿಕೊಳ್ಳಲು ಈ ಕೂಡಲೇ ಸಂಪರ್ಕಿಸಿ
ಮೊದಲು ಬಂದವರಿಗೆ ಮೊದಲ ಆದ್ಯತೆ ಕೂಡಲೇ ಸಂಪರ್ಕಿಸಿ

ಅಮರ್ ಬಾಬು 7019530368 | ಜಯಕುಮಾರ್ 9900221021 | ಪ್ರದೀಪ್ 9632411024 | ಆನಂದ್ 9972790713

ಬೆಂಗಳೂರು ಮೆಗಾ ಕ್ಯಾಬ್ಸ್ ಪ್ರೈವೇಟ್ ಲಿಮಿಟೆಡ್, ಕಂಟ್ರಿ ಕ್ಲಬ್ ಮುಂಭಾಗ, ಬಾಗಲೂರು ಮುಖ್ಯ ರಸ್ತೆ, ಯಲಹಂಕ, ಬೆಂಗಳೂರು-560064

## PERSONAL

### Change of Name

**CHANGE OF NAME**
I, Lucy D'Souza W/o James Victor D'Souza, R/at No. 547/18, 15th Cross, 15th Main, A-Block, Sahakaranagar, Bangalore-560092, have changed my name to **LUCY FERNANDES** vide affidavit dated 03.12.2025 before notary L.B. Anusuyamma, Bangalore. Henceforth I shall be called **LUCY FERNANDES** only

**KHB Sites in Bangalore**
Electronic City, Bommasandra, Jigani, Bannerghatta Road
Land Owner Share
Prime Location, Fully Developed Layout, Ready for Registration Plots
SBI & Nationalised Bank Loan Available
Call: 70260 13388




**CHANGE OF NAME**
I, SUBA. P (DOB: 22-05-1980) W/o Mr. Harikrishnan. K, R/o: # 6/2, 5th Cross, Chitra Layout, Attur, Yelahanka New Town, Bengaluru, Karnataka-560064, have changed my name from **SUBA. P to SUBHA HARIKRISHNAN** Vide Affidavit dated: 19-12-2025, sworn to before Notary Public G.P. CHAYA, Bengaluru

**CHANGE OF NAME**
I, Prabhakar Reddy, Prabhakar Reddy P and P Prabhakar Reddy, residing at No. 71, Ajantha House, Chowdeshwari Street, Marathahalli, Bangalore-560037, declare that the above names pertain to me only & henceforth I shall be known as **P PRABHAKAR REDDY** vide affidavit dated 19.12.2025 before notary L Gopalakrishna, Bangalore.

**CHANGE OF NAME**
I, SAHAYA MARY FERNANDES, residing at No. G-4, 16th Cross, Gupta Building, Ejipura, Viveknagar Post, Bengaluru - 560047, have changed my name to **SAHAYA MARY** vide affidavit dated 19.12.2025 before notary Harisha G Bengaluru. Henceforth I shall be called **SAHAYA MARY** only.


**CHANGE OF NAME**
I, SYEDA ASHRAF UNNISA & SYDA ASHRAF UNNISA, W/o Mohammed Afzal Shariff, residing at No.52/A, 9th Cross, Jamia Masjid Road, Ilyas Nagar, Bengaluru - 560078, declare that the above names pertain to me only. Henceforth I shall be known as **SYEDA ASHRAF UNNISA**, vide affidavit 18.12.2025 before notary L. Puttaraju, Bengaluru

**CAUTION NOTICE**
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331

ಪ್ರತಿಯೊಬ್ಬರಿಗೂ ಉಪಯುಕ್ತ

ಪ್ರಜಾವಾಣಿ ಕ್ಲಾಸಿಫೈಡ್ಸ್



ಪ್ರಜಾವಾಣಿ
# ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331